ಜಾನಪದ ವಿಶ್ವವಿದ್ಯಾನಿಲಯ

ಇಂದಿನ ಕನಸು ನಾಳಿನ ನನಸು

ಸಂಪಾದಕರು
ಡಾ. ಅಂಬಳಿಕೆ ಹಿರಿಯಣ್ಣ



ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ
2/106, 3ನೇ ಮಹಡಿ, 17ನೇ ಕ್ರಾಸ್, ಮಾಗಡಿ ಕಾರ್ಡ್ ರೋಡ್
ವಿಜಯನಗರ, ಬೆಂಗಳೂರು - 560040

ಜನಪ್ರಿಯ ಮಾಲೆ – ೧

ಜಾನಪದ ವಿಶ್ವವಿದ್ಯಾನಿಲಯ

ಇಂದಿನ ಕನಸು ನಾಳಿನ ನನಸು

ಸಂಪಾದಕರು

ಡಾ. ಅಂಬಳಿಕೆ ಹಿರಿಯಣ್ಣ

ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ
ಬೆಂಗಳೂರು

Jaanapada Vishwavidyaanilaya

Indina Kanasu Naalina Nanasu

[FOLKLORE UNIVERSITY

Today's Dream and Tomorrow's Reality]

Editor

Dr. Ambalike Hiriyanna

Published by

Dr. Ambalike Hiriyanna

Special Officer

Karnataka Folklore University

Bangalore – 560 040

Pages: xxvii + ೨೨೧

Price : 100/-

First Impression: 2011

ಮುಖಪುಟ : ನಾರಾಯಣ್

ಅಕ್ಷರ ಸಂಯೋಜನೆ

ಸಂದೀಪ್ ಬಿ.ಆರ್., ವಿಮೋಚನ ಹಳಿಂಗಳ

ಪುಸ್ತಕ ದೊರೆಯುವ ಸ್ಥಳ

ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಬೆಂಗಳೂರು ಕಚೇರಿ

ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡ ರಸ್ತೆ, ಮಾಗಡಿ ಕಾರ್ಡ್ ರಸ್ತೆ

ವಿಜಯನಗರ, ಬೆಂಗಳೂರು – ೫೬೦ ೦೪೦

ದೂರವಾಣಿ: ೦೮೦–೨೩೫೦೪೮೮೦, ಫ್ಯಾಕ್ಸ್: ೦೮೦–೨೩೫೦೪೮೮೦

ಮುದ್ರಣ

ಸ್ನೇಹಾ ಪ್ರಿಂಟರ್ಸ್

ನಂ. ೧೧೪, ೪ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ

ಅತ್ತಿಗುಪ್ಪೆ, ವಿಜಯನಗರ ೨ನೇ ಹಂತ

ಬೆಂಗಳೂರು - ೫೬೦ ೧೦೪. ಫೋ : ೨೩೩೯೨೮೧೪

ಅಭಿನಂದನೆ

ಜಾನಪದದಲ್ಲಿ ಪೂರ್ಣವಿಶ್ವಾಸವಿರುವ, ಅದೇ ಬದುಕಾಗಿರುವ, ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಕಾರಣರಾಗಿರುವ ಶ್ರೀ ಗೊ.ರು. ಚನ್ನಬಸಪ್ಪನವರು ಅಭಿನಂದನೀಯರು. ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿರುವ ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು, ಅವರ ಸರ್ಕಾರವನ್ನು ಭಾರತದ ಎಲ್ಲ ಜಾನಪದ ವಿದ್ವಾಂಸರ ಪರವಾಗಿ ಅತ್ಯಂತ ಹರ್ಷದಿಂದ ಅಭಿನಂದಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಸ್ಥಾಪಿಸಿದಷ್ಟು ವಿಶ್ವವಿದ್ಯಾನಿಲಯಗಳನ್ನು ದೇಶದ ಯಾವ ರಾಜ್ಯದಲ್ಲಿಯೂ ಸ್ಥಾಪಿಸಿಲ್ಲ. ಇದೀಗ ಜಗತ್ತಿನಲ್ಲಿಯೇ ಮೊದಲ ಬಾರಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪಿಸಲು ಅವರು ಹೊರಟಿರುವುದು ಶ್ಲಾಘನೀಯ.

– **ನಾಡೋಜ ದೇಜಗೌ**

ಅರಿಕೆ

ಕರ್ನಾಟಕ ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಈ ಸಂಪತ್ತಿನ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧನೆಗೈಯುವ ಕಾರ್ಯವನ್ನು ಕೈಗೊಳ್ಳುವುದಾಕ್ಕಾಗಿ, ಅನಂತ ವೈವಿಧ್ಯದ ಕರ್ನಾಟಕ ಜಾನಪದದ ಸಂಗ್ರಹ, ಸಂಪಾದನೆ, ಪ್ರಕಟಣೆ, ಕಲಿಕೆ, ಪ್ರಾತ್ಯಕ್ಷಿಕೆ, ಪ್ರಯೋಗ–ಪ್ರದರ್ಶನ ಕಾರ್ಯಗಳು ಪ್ರಮಾಣಬದ್ಧವಾಗಿ, ವಿಸ್ತೃತವಾಗಿ ಹಾಗೂ ಕ್ರಮಬದ್ಧವಾಗಿ ನಡೆಯುವ ಉದ್ದೇಶಕ್ಕಾಗಿ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಅಗತ್ಯವಿತ್ತು. ಸಮಗ್ರ ಪರಿವೀಕ್ಷಣೆ, ದಾಖಲೀಕರಣದ ಜೊತೆಯಲ್ಲಿ ನಾಡಿನ ಹತ್ತೂ ಸಮಸ್ತರ ಅಪ್ರತಿಮ ಕಲಾಪ್ರತಿಭೆ ಹಾಗೂ ಕೌಶಲವನ್ನು ತೆರೆದಿಡುವ ಪಾರಂಪರಿಕ ಕಲೆಗಳ ಪರಿಶೋಧನ ಕಾರ್ಯ ತ್ವರಿತವಾಗಿ ಆಗಬೇಕಾಗಿದೆ. ಬಹು ಭಾಷಿಕ ಮತ್ತು ಬಹು ಸಂಸ್ಕೃತಿಗಳ ಈ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳದ ಸ್ಥಳೀಯ ಜ್ಞಾನ ಸಂಪತ್ತು ಅಗಾಧವಾಗಿದೆ. ಇಂತಹ ಸಂದರ್ಭದಲ್ಲಿ ನೆಲದ ಸಂಸ್ಕೃತಿಯನ್ನು ಬದುಕುತ್ತಿರುವ ನಾಡಿನ ಸಮಸ್ತರ ಒಲವು, ನಿರೀಕ್ಷೆ ಅಪಾರವಾದುದೇ ಆಗಿದೆ.

ನಾಡಿನ ಜನತೆಯ ನರನಾಡಿಯನ್ನು ಬಲ್ಲವರಾಗಿದ್ದ ಗ್ರಾಮೀಣ ಬದುಕು ಹಸನಾಗಬೇಕು ಎಂದು ಹಂಬಲಿಸಿದ್ದ ಆಗಿನ ಗ್ರಾಮೀಣಾಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್‌ರ ಸೂಚನೆಯ ಮೇರೆಗೆ ಜಾನಪದ ಪ್ರಾಧ್ಯಾಪಕ ದಿ. ಜೀ. ಶಂ. ಪರಮಶಿವಯ್ಯನವರು ೧೯೮೮ರಲ್ಲಿ ಜಾನಪದ ಸಂಗತಿಗಳ ಸಂರಕ್ಷಣೆ ಹಾಗೂ ಸಂವರ್ಧನೆ ಹೇಗೆ ಎಂಬ ವಿಚಾರಗಳನ್ನೊಳಗೊಂಡ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದುಂಟು. ಆ ಪ್ರಸ್ತಾವನೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಆವಶ್ಯಕತೆಯನ್ನು ಮೊದಲ ಬಾರಿಗೆ ಮಂಡಿಸಿದ್ದುಂಟು. ೧೯೮೮ರಲ್ಲಿ ಜೀಶಂಪ ಕಂಡ ಕನಸು ಶ್ರೀ ಗೊ.ರು. ಚನ್ನಬಸಪ್ಪನವರ ಮುಂದಾಳತ್ವದಲ್ಲಿ ದೇಜಗೌ, ಚಂದ್ರಶೇಖರ ಕಂಬಾರ, ಜಿ. ನಾರಾಯಣ, ಟಿ. ಕೆಂಪಹನುಮಯ್ಯ, ಮುಖ್ಯಮಂತ್ರಿ ಚಂದ್ರು, ಡಿ. ಲಿಂಗಯ್ಯ

ಇನ್ನು ಮುಂತಾದವರ ಪ್ರಯತ್ನದಿಂದ ನನಸಾಗುವ ದಾರಿಯಲ್ಲಿದೆ ಎಂಬುದು ಸಂತೋಷದ ಸಂಗತಿ.

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಜಾನಪದ ಸಂರಕ್ಷಣೆ, ಸಂವರ್ಧನೆ ಹಾಗೂ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿದ್ವಾಂಸರು ತಳೆದ ಆಸ್ಥೆ-ಆಸಕ್ತಿ ಹಾಗೂ ಕರ್ನಾಟಕದಲ್ಲಿ ನಡೆಯುತ್ತ ಬಂದಿರುವ ಜಾನಪದ ಸಂಬಂಧವಾದ ಚಟುವಟಿಕೆಗಳನ್ನು ನಿಕಟವಾಗಿ ಬಲ್ಲ ಶ್ರೀ ಗೊ.ರು. ಚನ್ನಬಸಪ್ಪನವರು ಜಾನಪದಕ್ಕೇ ಮೀಸಲಾದ ವಿಶ್ವವಿದ್ಯಾನಿಲಯವೊಂದು ಜರೂರಾಗಿ ಸ್ಥಾಪನೆಯಾಗಬೇಕಾದ ಅಗತ್ಯವನ್ನು ಮನಗಂಡು ಸರ್ಕಾರಕ್ಕೆ ಅಧಿಕೃತವಾದ ಪ್ರಸ್ತಾವನೆಯೊಂದನ್ನು ಸಲ್ಲಿಸಲು ನಿರ್ಧರಿಸಿದರು. ನಾಡಿನ ಜಾನಪದ ತಜ್ಞರು ಆಗಾಗ ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳಿಗೆ ಸ್ಪಷ್ಟ ರೂಪಕೊಡಲು ಯತ್ನಿಸಿ ದಿನಾಂಕ:೧೮.೦೫.೨೦೦೯ ರಂದು ಒಂದು ವಿವರವಾದ ಪ್ರಸ್ತಾವನೆಯನ್ನು ಅವರು ಸರ್ಕಾರಕ್ಕೆ ಸಲ್ಲಿಸಿದರು. ಜೊತೆಗೆ ದಿನಾಂಕ:೨೩.೦೭.೨೦೦೯ ರಂದು ಕರ್ನಾಟಕ ಜಾನಪದ ಅಕಾಡೆಮಿಯ ಆಶ್ರಯದಲ್ಲಿ ಕರ್ನಾಟಕ ಜಾನಪದ ತಜ್ಞರ ಸಭೆಯೊಂದನ್ನು ಆಯೋಜಿಸಿ ವಿಶ್ವವಿದ್ಯಾನಿಲಯದ ಅಗತ್ಯದ ಬಗೆಗೆ ಗಂಭೀರ ಸಮಾಲೋಚನೆ ನಡೆಸಿದರು. ವಿಶ್ವದಲ್ಲೇ ಪ್ರಥಮ ಎನಿಸಿದ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆ ಜರೂರಾಗಿ ಅಗತ್ಯವಾಗಿ ಆಗಬೇಕು ಎಂದು ಸಭೆ ಒಕ್ಕೊರಲಿನಿಂದ ಒಂದು ಸಾಲಿನ ನಿರ್ಣಯವನ್ನು ಅಂಗೀಕರಿಸಿತು. ಸಭೆಯ ನಿರ್ಣಯಕ್ಕೆ ಸ್ಪಂದಿಸಿದ ಆಗಿನ ಉನ್ನತ ಶಿಕ್ಷಣ ಸಚಿವ ಶ್ರೀ ಅರವಿಂದ ಲಿಂಬಾವಳಿ ಅವರು ವಿಶ್ವವಿದ್ಯಾನಿಲಯ ಸ್ಥಾಪನೆಯ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿ ನಾಡಿನ ೬೦ ಮಂದಿ ಜಾನಪದ ತಜ್ಞರನ್ನು ಸಮಾಲೋಚನೆಗಾಗಿ ಬೆಂಗಳೂರಿಗೆ ಆಹ್ವಾನಿಸಿದರು. ಈ ಸಭೆ ದಿನಾಂಕ: ೨೨.೧೨.೨೦೦೯ ರಂದು ವಿಕಾಸ ಸೌಧದಲ್ಲಿ ಜರುಗಿತು. ಸಭೆಯಲ್ಲಿ ವ್ಯಕ್ತಗೊಂಡ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಸಭೆಯ ನಿರ್ಣಯಗಳನ್ನು ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆಗೆ ಅವರು ತಂದರು.

ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪ ಅವರು ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ನಿರ್ಧಾರವನ್ನು ೨೦೧೦ ರ ಸೆಪ್ಟೆಂಬರ್ ೨೬ ರಂದು ಸಾರ್ವಜನಿಕವಾಗಿ ಸಭೆಯೊಂದರಲ್ಲಿ ಪ್ರಕಟಿಸಿದರು. ಹುಟ್ಟಿನಿಂದ ಕೃಷಿಕರೂ ಗ್ರಾಮವಾಸಿಗಳೂ ಆದ ಶ್ರೀ ಯಡಿಯೂರಪ್ಪನವರು ಗ್ರಾಮೀಣ ಸಂಸ್ಕೃತಿ ಬಗೆಗೆ ಅಪಾರ ಕಳಕಳಿ ಉಳ್ಳವರು. ವಿಶ್ವವಿದ್ಯಾನಿಲಯ ಸ್ಥಾಪನ ಸಂಬಂಧವಾದ ಚಟುವಟಿಕೆಗಳಿಗೆ

ಕೂಡಲೆ ಚಾಲನೆ ಒದಗಿಸಲು ದಿನಾಂಕ: ೨೮.೦೯.೨೦೧೦ ರಂದು ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನಾ ಘೋಷಣೆಯೊಂದಿಗೆ ವಿಶೇಷಾಧಿಕಾರಿಯನ್ನೂ ನೇಮಿಸಿದರು.

ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯಾಗಿ ದಿನಾಂಕ : ೨೯.೦೯.೨೦೧೦ರಂದು ಕರ್ತವ್ಯವನ್ನು ವಹಿಸಿಕೊಂಡ ನಾನು ವಿಶ್ವವಿದ್ಯಾನಿಲಯದ ರೂಪುರೇಷೆ ಸಿದ್ಧಪಡಿಸಲು ನಾಡಿನ ಶಿಕ್ಷಣವೇತ್ತರು, ಕಲಾವಿದರು, ಜಾನಪದ ತಜ್ಞರು, ಸಮಾಜ ಸೇವಾ ಪ್ರಮುಖರು, ಕಾರ್ಯಕ್ರಮ ಸಂಘಟಕರು, ಸಂಸ್ಕೃತಿ ಚಿಂತಕರು, ವಿಶ್ರಾಂತ ಕುಲಪತಿಗಳು, ಸರ್ಕಾರದ ವಿವಿಧ ಇಲಾಖೆಯ ಕಾರ್ಯದರ್ಶಿಗಳನ್ನು ಭೇಟಿ ಮಾಡಬೇಕಾಯಿತು. ಪ್ರಪಂಚದಲ್ಲೇ ಮೊಟ್ಟ ಮೊದಲ ಬಾರಿಗೆ ಜಾನಪದ ವಿಶ್ವವಿದ್ಯಾನಿಲಯವೊಂದು ಸ್ಥಾಪನೆಯಾಗುತ್ತಿರುವುದರಿಂದ ಅದಕ್ಕೆ ಯಾವುದೇ ಪೂರ್ವ ಮಾದರಿಗಳಿಲ್ಲದಿರುವುದರಿಂದ ಎಲ್ಲ ಹಿರಿಯರ ಮತ್ತು ತಜ್ಞರ ಕನಸುಗಳನ್ನು ಲಿಖಿತವಾಗಿ ಹಾಗೂ ನೇರ ಸಂದರ್ಶನದ ಮೂಲಕ ದೊರಕಿಸಿಕೊಳ್ಳಲಾಯಿತು. ಆ ಎಲ್ಲವನ್ನೂ ಈ ಸಂಪುಟದಲ್ಲಿ ದಾಖಲಿಸಿದೆ. ಭಾಗ – ೧ ರಲ್ಲಿ ಸಂಚಯಿಸಿರುವ ಅಭಿಪ್ರಾಯಗಳು ವಿಶ್ವವಿದ್ಯಾನಿಲಯದ ಕೋರಿಕೆಯ ಮೇರೆಗೆ ಲಿಖಿತವಾಗಿ ಸ್ವೀಕೃತವಾದವು. ಭಾಗ – ೨ ರಲ್ಲಿ ಸೇರಿರುವ ಅಭಿಪ್ರಾಯಗಳು ನೇರ ಸಂದರ್ಶನದಿಂದ ದೊರಕಿಸಿಕೊಂಡವಾಗಿವೆ.

ವಿಶ್ವವಿದ್ಯಾನಿಲಯ ರೂಪು ತಾಳಬೇಕಾದ ಬಗೆಗೆ, ವಿಶ್ವವಿದ್ಯಾನಿಲಯವು ಜರೂರಾಗಿ ಕೈಗೆತ್ತಿಗೊಳ್ಳಬೇಕಾಗಿರುವ ಯೋಜನೆಗಳ ಬಗೆಗೆ, ಅವುಗಳನ್ನು ಆಗುಮಾಡಿಕೊಡುವ ಸಂಪನ್ಮೂಲ ವ್ಯಕ್ತಿಗಳ ಬಗೆಗೆ, ಹಾಗೂ ಯೋಜನೆಗಳನ್ನು ಕಾರ್ಯಗತಗೊಳಿಸುವ ವಿಧಾನಗಳ ಬಗೆಗೆ ಸ್ಪಷ್ಟ ಅರಿವು ಹೊಂದಲು ತಜ್ಞರ ಅಭಿಪ್ರಾಯಗಳನ್ನು ಯಥಾವತ್ತಾಗಿ ಈ ರೂಪದಲ್ಲಿ ಈ ಪ್ರಮಾಣದಲ್ಲಿ ಇಲ್ಲಿ ಪ್ರಕಟಿಸಲಾಗುತ್ತಿದೆ. ಜಾನಪದದ ಮೇಲಿನ ಪ್ರೀತಿಯಿಂದ, ಜನಪದ ಬದುಕು ಮತ್ತು ಸಂಸ್ಕೃತಿಯ ಮೇಲಿನ ಕಳಕಳಿಯಿಂದ, ಅಪ್ಪಟ ಶೈಕ್ಷಣಿಕ ಆಸಕ್ತಿಯಿಂದ, ಪರಂಪರಾಜ್ಞಾನ ಮುಂದಿನ ಪೀಳಿಗೆಗೆ ಸುಗಮವಾಗಿ ಹಸ್ತಾಂತರವಾಗಬೇಕೆಂಬ ಅಭಿಲಾಷೆಯಿಂದ ತಜ್ಞರು ನಮಗೆ ಉಪಯುಕ್ತ ಸಲಹೆ–ಸೂಚನೆಗಳನ್ನು ನೀಡಿ ವಿಶ್ವವಿದ್ಯಾನಿಲಯವು ಕ್ರಮಿಸಬೇಕಾದ ದಾರಿ ಯಾವುದು ಎಂಬುದನ್ನು ನಿರ್ದೇಶಿಸಿದ್ದಾರೆ. ಇಂಥ ಉಪಯುಕ್ತ ಕಾರ್ಯ ಮಾಡಿ ಉಪಕರಿಸಿದ ಎಲ್ಲರಿಗೂ ಜಾನಪದ ವಿಶ್ವವಿದ್ಯಾನಿಲಯದ ಕೃತಜ್ಞತೆಗಳು ಸಲ್ಲುತ್ತವೆ.

– **ಅಂಬಳಿಕೆ ಹಿರಿಯಣ್ಣ**

ಕರ್ನಾಟಕ ಜಾನಪದ ಅಕಾಡೆಮಿ

ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಪ್ರಸ್ತಾವನೆ – ೧

ದಿನಾಂಕ : ೧೮.೦೫.೨೦೦೯

ಶ್ರೀ ಬಿ. ಎಸ್. ಯಡಿಯೂರಪ್ಪ ಅವರು
ಸನ್ಮಾನ್ಯ ಮುಖ್ಯಮಂತ್ರಿಗಳು
ವಿಧಾನಸೌಧ, ಕರ್ನಾಟಕ ಸರ್ಕಾರ,
ಬೆಂಗಳೂರು – ೫೬೦ ೦೦೧

ಮಾನ್ಯರೆ,

ವಿಷಯ : ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವ ಕುರಿತು.

* * *

ವಿಶ್ವದ ಯಾವುದೇ ರಾಷ್ಟ್ರ ಅಥವಾ ಪ್ರದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯ ಮೂಲ ಬೇರು ಜಾನಪದವೆಂಬುದನ್ನು ತಮಗೆ ಬೇರೆ ಹೇಳಬೇಕಾಗಿಲ್ಲ.

ನಮ್ಮ ಗ್ರಾಮೀಣ ಮತ್ತು ಗುಡ್ಡಗಾಡಿನ ಜನಸಮುದಾಯದ ಭಾಷೆ, ವೇಷ, ಆಚಾರ, ವಿಚಾರ, ವ್ಯವಹಾರ, ಪದ್ಧತಿ, ಪರಂಪರೆ, ಕಲೆ, ಕಸುಬು, ಹಬ್ಬ, ಹರಿದಿನ, ತೇರು, ಉತ್ಸವ, ನ್ಯಾಯ – ಮೊದಲಾಗಿ ಬದುಕಿನ ಸಮಸ್ತವೂ ಜಾನಪದದ ವ್ಯಾಪ್ತಿಗೆ ಬರುತ್ತವೆ.

ಈಗ ವಿಶ್ವಾದ್ಯಂತ ವಿದ್ವಾಂಸರು ಮತ್ತು ವಿಚಾರವಂತರು ಈ ಮೂಲ ಬೇರಿನ ಅಧ್ಯಯನ ಮತ್ತು ಸಂಶೋಧನೆಗಳ ಕಡೆಗೆ ಮುಖ ಮಾಡಿದ್ದಾರೆ. ಜಾನಪದ ಒಂದು ಬೃಹತ್ ನಿಧಿ. ಕಾಲದ ಬಿರುಗಾಳಿಗೆ ಸಿಕ್ಕಿ ಆ ಸಂಪತ್ತು ಕಣ್ಮರೆಯಾಗುತ್ತಿದೆ. ವಾಸ್ತವವಾಗಿ ಜಾನಪದ, ಶ್ರಮಜೀವಿಗಳ ಬದುಕಿಗೆ

ಸಂಬಂಧಿಸಿದ್ದು. ಇದರ ವ್ಯಾಪ್ತಿಯಲ್ಲಿ ರೈತರು, ಗೃಹ ಕಸುಬುದಾರರು, ಅಲೆಮಾರಿಗಳು, ಗುಡ್ಡಗಾಡಿನ ಜನ – ಹೀಗೆ ಬಹುತೇಕ ಜೀವನ ಮಟ್ಟದಲ್ಲಿ ಸೊರಗಿರುವವರೇ ಇದ್ದಾರೆ. ಅವರ ಬದುಕಿಗೆ ಸಮಾಧಾನ ಕೊಡುತ್ತಿದ್ದ ಜನಪದ ಕಲೆಗಳು ಕ್ರಮೇಣ ಅಳಿದು ಹೋಗುತ್ತಿವೆ.

ಈ ಮೌಲಿಕ ಸಂಪತ್ತಿನ ಸಂರಕ್ಷಣೆ, ಸಂಗ್ರಹ, ಅಧ್ಯಯನ, ಸಂಶೋಧನೆ, ಪ್ರಕಟಣೆ, ಪ್ರಸಾರ – ಇತ್ಯಾದಿಗಳ ಕೆಲಸ ಅತ್ಯಂತ ತುರ್ತಾಗಿ ಮತ್ತು ಅಷ್ಟೇ ವೈಜ್ಞಾನಿಕವಾಗಿ ನಡೆಸಬೇಕಾದ ಅಗತ್ಯವಿದೆ. ಈ ಅಗತ್ಯದ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾನಪದಕ್ಕೇ ಮೀಸಲಾದ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ತಾವು ನಿರ್ಧರಿಸಬೇಕೆಂದು ಕೋರುತ್ತೇನೆ.

ಜಾನಪದ ಕ್ಷೇತ್ರದಲ್ಲಿ ಬಹುಶಃ ಬೇರಾವ ರಾಜ್ಯದಲ್ಲೂ ನಡೆಯದಷ್ಟು ಕೆಲಸ ನಮ್ಮ ರಾಜ್ಯದಲ್ಲಿ ನಡೆಯುತ್ತಿದ್ದು, ತಾವು ಈಗ ಅಂತಹ ಜಾನಪದ ವಿಶ್ವವಿದ್ಯಾನಿಲಯವನ್ನು ರಾಜ್ಯದಲ್ಲಿ ಸ್ಥಾಪಿಸಿದರೆ, ಇಡೀ ರಾಷ್ಟ್ರದಲ್ಲೇ ಜನಸಾಮಾನ್ಯರ ಜಾನಪದಕ್ಕೆ ಸಂಬಂಧಿಸಿದ ವಿಶ್ವವಿದ್ಯಾನಿಲಯ ಸ್ಥಾಪಿಸಿದ ಪ್ರಥಮ ರಾಜ್ಯ ನಮ್ಮದಾಗುತ್ತದೆ.

ಇದೊಂದು ಮಹತ್ವದ ಮತ್ತು ಪೂರ್ಣವಾಗಿ ಜನಪರವಾದ ಕಾರ್ಯ. ಆದ್ದರಿಂದ ತಾವು ಈ ಬಗೆಗೆ ಪರಿಶೀಲನೆ ನಡೆಸಿ, ವರದಿ ಮಾಡಲು, ಆದಷ್ಟು ಬೇಗ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಬೇಕಾಗಿ ವಿನಂತಿಸುತ್ತೇನೆ.

ಪರಿಕಲ್ಪಿತ ಜಾನಪದ ವಿಶ್ವವಿದ್ಯಾನಿಲಯದ ರಚನೆಗೆ ಸಂಬಂಧಿಸಿದಂತೆ ಕರ್ನಾಟಕ ಜಾನಪದ ಅಕಾಡೆಮಿ ಎಲ್ಲ ಮಾಹಿತಿ ಮತ್ತು ಸಹಕಾರ ನೀಡಲು ಸಿದ್ಧವಿದೆ. ತಾವು ದಯವಿಟ್ಟು ಈ ಬಗೆಗೆ ಸೂಕ್ತವಾದ ಕ್ರಮಕೈಗೊಂಡು ಇಡೀ ರಾಷ್ಟ್ರದಲ್ಲೇ ಪ್ರಥಮ ದಾಖಲೆ ಸ್ಥಾಪಿಸಬೇಕೆಂದು ಪ್ರಾರ್ಥಿಸುತ್ತೇನೆ.

ತಮ್ಮ ವಿಶ್ವಾಸಿ,
ಸಹಿ /–
(ಗೊ.ರು.ಚನ್ನಬಸಪ್ಪ)
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ

ಪ್ರತಿ: ಶ್ರೀ ಅರವಿಂದ ಲಿಂಬಾವಳಿ, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ೫೬೦ ೦೦೧

ಕರ್ನಾಟಕ ಜಾನಪದ ಅಕಾಡೆಮಿ

ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಪ್ರಸ್ತಾವನೆ – ೨

ದಿನಾಂಕ:೧೪.೦೭.೨೦೦೯

ಶ್ರೀ ಬಿ. ಎಸ್. ಯಡಿಯೂರಪ್ಪ ಅವರು
ಸನ್ಮಾನ್ಯ ಮುಖ್ಯಮಂತ್ರಿಗಳು
ವಿಧಾನಸೌಧ, ಕರ್ನಾಟಕ ಸರ್ಕಾರ,
ಬೆಂಗಳೂರು – ೫೬೦ ೦೦೧

ಮಾನ್ಯರೆ,

ವಿಷಯ: ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆ ಕುರಿತು.

ಉಲ್ಲೇಖ: ಅಕಾಡೆಮಿಯ ಪತ್ರ ಸಂ.ಅರಿಕಾ/ ಕಜಾಅ / ೨೦೦೯–೧೦/ ದಿನಾಂಕ:೧೮.೦೫.೨೦೦೯.

* * *

ನಾಡಿನ ಭಾಷೆ ಮತ್ತು ಸಂಸ್ಕೃತಿಗಳ ಮೂಲ ಸೆಲೆಯಾಗಿರುವ ಮತ್ತು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಆಯಾಮಗಳ ದೃಷ್ಟಿಯಿಂದಲೂ ವಿಸ್ತಾರ ವ್ಯಾಪ್ತಿಯಿರುವ ಜಾನಪದದ ಅಧ್ಯಯನ, ಸಂಶೋಧನೆ, ಪ್ರಕಟಣೆ, ಪ್ರಸಾರ ಇತ್ಯಾದಿ ಶೈಕ್ಷಣಿಕ ಮಹತ್ವದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಜನಸಮುದಾಯದಲ್ಲಿ ಜೀವನ ವಿಶ್ವಾಸವನ್ನು ತುಂಬಲು ಜಾನಪದಕ್ಕೇ ಮೀಸಲಾದ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಬೇಕೆಂದು ನಮ್ಮ ಅಕಾಡೆಮಿಯ ವತಿಯಿಂದ ಉಲ್ಲೇಖಿತ ಪತ್ರದ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು.

ದಿನಾಂಕ: ೧೯.೦೬.೨೦೦೯ ರಂದು ಕೂಡಲಸಂಗಮ ಕ್ಷೇತ್ರದಲ್ಲಿ ನಡೆದ ಅಕಾಡೆಮಿಯ ೨೦೦೮ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತಾವು 'ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ' ಸ್ಥಾಪನೆಯ ಬಗೆಗೆ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸುವುದಾಗಿ ಘೋಷಿಸಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಬಯಸುತ್ತೇನೆ.

ಭಾರತದಲ್ಲೇ, ಪ್ರಪ್ರಥಮವೆನಿಸಲಿರುವ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಯ ಸಂಗತಿ ಜಾನಪದದ ಉಸಿರಾದ ಕೋಟ್ಯಂತರ ಸಂಖ್ಯೆಯಲ್ಲಿರುವ ಗ್ರಾಮೀಣ ಕೃಷಿಕರು, ಕೃಷಿಕಾರ್ಮಿಕರು, ಗುಡ್ಡಗಾಡಿನ ಜನರು, ಅದರಲ್ಲೂ ಜನಪದ ಸಾಹಿತ್ಯ-ಸಂಸ್ಕೃತಿಗಳ ಪ್ರತೀಕವಾಗಿರುವ ದಲಿತರು, ಶ್ರಮಜೀವಿಗಳು ಮತ್ತು ಅಲೆಮಾರಿ ಜನಸಮುದಾಯಕ್ಕೆ ಅತ್ಯಂತ ಹರ್ಷವುಂಟು ಮಾಡಿದೆ. ಜಾನಪದ ಕ್ಷೇತ್ರದಲ್ಲಿ ಕಳೆದ ನಾಲ್ಕೈದು ದಶಕಗಳಿಂದ ಕೆಲಸ ಮಾಡುತ್ತಿರುವ ನಾಡಿನ ಜಾನಪದ ತಜ್ಞರೆಲ್ಲರೂ, ಈ ಪ್ರಸ್ತಾವನೆಯನ್ನು ಸ್ವಾಗತಿಸಿ, ಅದು ಬೇಗ ಕಾರ್ಯಗತಗೊಳ್ಳಬೇಕೆಂದು ಆಶಿಸಿದ್ದಾರೆ.

ಅಕಾಡೆಮಿಯು ಪ್ರಸ್ತಾಪಿಸಿರುವ ಜಾನಪದ ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿ ಎಷ್ಟು ವಿಸ್ತಾರವಾದದ್ದು ಮತ್ತು ಸಾಮಾನ್ಯ ಜನಜೀವನ ಸಂಬಂಧದ್ದು ಎನ್ನುವುದಕ್ಕೆ ಕೆಳಕಂಡ ಕೆಲವು ಅಂಶಗಳನ್ನು ತಾವು ಗಮನಿಸಬಹುದು:

- ಮಾನವಶಾಸ್ತ್ರ, ಜನಾಂಗೀಯ ಸಂಸ್ಕೃತಿ, ಸಮಾಜಶಾಸ್ತ್ರಗಳೊಂದಿಗೆ ತೌಲನಿಕ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಗಳನ್ನು ವೈಜ್ಞಾನಿಕ ನೆಲೆಯಲ್ಲಿ ನಡೆಸುವುದು.
- ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನ್ಯಾಯವಾದ ಮನ್ನಣೆ ದೊರಕಬೇಕಾಗಿರುವ ಉಪಸಂಸ್ಕೃತಿಗಳ ಚಾರಿತ್ರಿಕ, ಸಾಮಾಜಿಕ, ಆರ್ಥಿಕ ಅಧ್ಯಯನ ಮತ್ತು ದಾಖಲೀಕರಣ ನಡೆಸುವುದು.
- ಜಾನಪದಕ್ಕೆ ಸಂಬಂಧಿಸಿದ ಸಮಗ್ರ ಅಧ್ಯಯನ ಮಾದರಿಗಳನ್ನು ರೂಪಿಸಿ ಅವುಗಳಿಗೆ ಅನುಗುಣವಾಗಿ ಶಾಸ್ತ್ರೀಯ ಅಧ್ಯಯನ ನಡೆಸುವುದು.
- ಜಾಗತೀಕರಣದ ಸನ್ನಿವೇಶದಲ್ಲಿ ಜನಪದರ ಜೀವನ ಸಂಸ್ಕೃತಿ, ಕಲೆ, ಕಸುಬು, ಆರ್ಥಿಕ ಸ್ಥಿತಿಗತಿಗಳ ಬಗೆಗೆ ವ್ಯವಸ್ಥಿತ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸಿ ಅಗತ್ಯ ಸಂರಕ್ಷಣಾ ಕ್ರಮಗಳನ್ನು ರೂಪಿಸುವುದು.

- ಜನಪದರ ಮಾತು–ಕತೆ, ಊಟ–ಉಪಚಾರ, ವೇಷ–ಭೂಷಣ, ಹಾಡು–ಕುಣಿತ, ಪದ್ಧತಿ–ಪರಂಪರೆ, ಆಚಾರ–ವ್ಯವಹಾರ, ತೇರು–ಜಾತ್ರೆ, ದೇವರು–ದುಡಿಮೆ ಇತ್ಯಾದಿ ಅವರ ಜೀವನದ ಸಮಸ್ತ ಚಟುವಟಿಕೆಗಳಲ್ಲಿರುವ ಸಾರ್ವಕಾಲಿಕ ಮೌಲ್ಯಗಳನ್ನು ಕಂಡುಕೊಳ್ಳುವುದು.
- ಕಾಲದ ಅವಸರದಲ್ಲಿ ಕಣ್ಮರೆಯಾಗುತ್ತಿರುವ ಗ್ರಾಮೀಣ ಮತ್ತು ಗುಡ್ಡಗಾಡು ಜನರ ದೈವಾರಾಧನೆ ಹಾಗೂ ಮನರಂಜನೆಯ ಕ್ರೀಡೆ ಹಾಗೂ ಕಲಾ ಪ್ರಕಾರಗಳನ್ನು ಸಂರಕ್ಷಿಸುವುದು; ಸಾಕ್ಷ್ಯಚಿತ್ರಗಳನ್ನು ನಿರ್ಮಿಸುವುದು.
- ಸಹಸ್ರ ಸಹಸ್ರ ಸಂಖ್ಯೆಯಲ್ಲಿರುವ ಜನಪದ ಕಲಾವಿದರ ಕಲಾ ಪರಿಣತಿಯನ್ನು ಬಳಸಿಕೊಂಡು ಹೊಸ ತಲೆಮಾರಿಗೆ ಜನಪದ ಕಲೆಗಳಲ್ಲಿ ತರಬೇತಿ ನೀಡುವುದು; ಶಾಲಾ ಕಾಲೇಜು ಪಠ್ಯಗಳಲ್ಲಿ ಜಾನಪದ ವಿಷಯಗಳನ್ನು ಅಳವಡಿಸುವುದು.
- ಪಾರಂಪರಿಕ ಗ್ರಾಮುಕಸುಬುಗಳನ್ನು ಆಧುನಿಕ ಪರಿಸರಕ್ಕೆ ಸಮರ್ಥವಾಗುವಂತೆ ಪುನರ್‌ಸಜ್ಜುಗೊಳಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು.
- ನಾಡಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ಆಕರವಾಗುವ, ಜಾನಪದಕ್ಕೆ ಸಂಬಂಧಿಸಿದ ಸಮಸ್ತ ಸಾಧನ–ಸಾಮಗ್ರಿಗಳ ಬೃಹತ್ ವಸ್ತುಸಂಗ್ರಹಾಲಯವೊಂದನ್ನು ಸ್ಥಾಪಿಸುವುದು.
- ಜಾನಪದದ ಬಹುಮುಖಿ ಅಧ್ಯಯನಕ್ಕೆ ಅಗತ್ಯವಾದ ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣ ನೀಡುವುದು; ಪರೀಕ್ಷೆಗಳನ್ನು ನಡೆಸುವುದು.
- ಜಾನಪದಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯ, ಸಂಶೋಧನೆ, ಪ್ರಕಟಣೆ, ಪ್ರಸಾರ ಕಾರ್ಯಗಳನ್ನು ಕ್ರಮಬದ್ಧವಾಗಿ ನಡೆಸುವುದು; ಜಾನಪದ ವಿಶ್ವಕೋಶ ಮತ್ತು ನಿಘಂಟುಗಳನ್ನು ಪ್ರಕಟಿಸುವುದು.
- ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಹಿರಿಯರಿಗೆ ಗೌರವ ಮನ್ನಣೆ ನೀಡುವುದು ಮತ್ತು ಅಧ್ಯಯನಾಸಕ್ತರಿಗೆ ಶಿಷ್ಯವೇತನ ನೀಡುವುದು.
- ಜಿಲ್ಲೆ, ರಾಜ್ಯ ಮತ್ತು ಅಂತಾರಾಷ್ಟ್ರೀಯ ಜಾನಪದ ವಿನಿಮಯ ಕಾರ್ಯವನ್ನು ನಡೆಸುವುದು.

- ಜಾನಪದಕ್ಕೆ ಸಂಬಂಧಿಸಿದ ಸಭೆ, ಸಮ್ಮೇಳನಗಳು, ಚಿಂತನಗೋಷ್ಠಿಗಳು, ಚರ್ಚೆ, ಸಂವಾದ ಕಾರ್ಯಕ್ರಮಗಳನ್ನು ಸಂಘಟಿಸುವುದು.
- ಉಳಿದ ಸಾಮಾನ್ಯ ಶಿಕ್ಷಣದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿರುವ ಭಾಷೆ, ಸಾಹಿತ್ಯ, ಕಲೆ, ಇತಿಹಾಸ, ಸಮಾಜಶಾಸ್ತ್ರ, ಸಮಾಜಕಾರ್ಯ ಮತ್ತಿತರ ಮಾನವಿಕಶಾಸ್ತ್ರ ವಿಭಾಗಗಳಿಗೆ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.
- ಕೇವಲ ಶೈಕ್ಷಣಿಕ ಕೇಂದ್ರವಾಗದೆ, ಜಾನಪದದ ಅನ್ವೇಷಕ ಹಾಗೂ ಆನ್ವಯಿಕ ಕೇಂದ್ರವಾಗಿ ಜನಪದರ ನೇರ ಪಾಲುದಾರಿಕೆಯೊಂದಿಗೆ ಕೆಲಸ ಮಾಡುವುದು.

ಹೀಗೆ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಸಮಗ್ರ ಸಂರಕ್ಷಣೆ ಮತ್ತು ಸಂವರ್ಧನೆಯ ಕಾರ್ಯನಿರ್ವಹಣೆಗೆ ಯೋಜಿತ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಕೆಳಗೆ ಕಂಡ ವಿಭಾಗಗಳಿರುತ್ತವೆ:

- ಸಂಪರ್ಕ
- ಕ್ಷೇತ್ರಕಾರ್ಯ
- ದಾಖಲೀಕರಣ
- ಪ್ರಕಟಣೆ
- ಪ್ರಸಾರ
- ಕಲೆ
- ಕ್ರೀಡೆ
- ಶಿಕ್ಷಣ
- ತರಬೇತಿ
- ವಿಶ್ವಕೋಶ
- ನಿಘಂಟು
- ಪಠ್ಯಸಿದ್ಧತೆ
- ಅಧ್ಯಯನ
- ಸಂಶೋಧನ

- ವಸ್ತು ಸಂಗ್ರಹಾಲಯ
- ಆದಿವಾಸಿ
- ಭಾಷಾ ವಿಜ್ಞಾನ
- ಅನುವಾದ
- ಗ್ರಂಥಾಲಯ
- ಪ್ರದರ್ಶನ
- ಪ್ರಾತ್ಯಕ್ಷಿಕೆ
- ಕರಕುಶಲ ಕಲೆ
- ಕೃಷಿ
- ವೈದ್ಯ
- ಕಲಾವಿದರ ಕ್ಷೇಮ
- ವಿನಿಮಯ
- ತೌಲನಿಕ ಅಧ್ಯಯನ
- ಮಾಹಿತಿ
- ಚಿತ್ರ-ಶಿಲ್ಪ
- ನಿಯತಕಾಲಿಕೆ

ಮೇಲೆ ಹೇಳಿರುವಂತೆ ಜಾನಪದ ವಿಶ್ವವಿದ್ಯಾನಿಲಯ ಒಂದು ವಿಶೇಷ ಪರಿಕಲ್ಪನೆಯಾಗಿದ್ದು, ಇದರ ಸ್ಥಾಪನೆ ಇಡೀ ಭಾರತದಲ್ಲೇ ಪ್ರಪ್ರಥಮ ದಾಖಲೆಯಾಗುತ್ತದೆ. ನಮ್ಮ ಕರ್ನಾಟಕ ರಾಜ್ಯ ಆ ಮೊದಲ ಕೀರ್ತಿಯನ್ನು ಪಡೆಯುವಂತಾಗಲೆಂಬುದೇ ಜಾನಪದ ಅಕಾಡೆಮಿಯ ಆಶಯ. ಬಹುಶಃ ಈ ವಿಶ್ವವಿದ್ಯಾನಿಲಯ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಮಾಡಿರುವ ವಿಶ್ವದ ಅನೇಕ ರಾಷ್ಟ್ರಗಳ ಗಮನ ಸೆಳೆಯುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಾಸ್ತವವಾಗಿ, ಇಂತಹುದೊಂದು ವಿಶ್ವವಿದ್ಯಾನಿಲಯದ ಸ್ಥಾಪನೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಬಹು ಮುಖ್ಯ ಭಾಗವಾದ ಜನಪದರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಗತ್ಯದ ಪೂರೈಕೆಯಾಗುತ್ತದೆ.

ಈ ಪ್ರಸ್ತಾವನೆಯ ಪ್ರಕೃತವನ್ನು ತಾವು ಗಂಭೀರವಾಗಿ ಪರಿಗಣಿಸಿ, ಆದಷ್ಟು ಬೇಗ 'ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ' ವನ್ನು ಸ್ಥಾಪಿಸಲು

ನಿರ್ಧಾರ ಕೈಗೊಳ್ಳಬೇಕೆಂದು ಕೋರುತ್ತೇನೆ. ಈ ಯೋಜನೆಗೆ ಚಾಲನೆಕೊಡಲು ತಾವು ತಕ್ಷಣವೇ ಇದಕ್ಕಾಗಿ ಓರ್ವ ವಿಶೇಷಾಧಿಕಾರಿಯನ್ನು ನೇಮಕಮಾಡಿ, ಅವರು ನಿರ್ದಿಷ್ಟ ಅವಧಿಯಲ್ಲಿ ಅಗತ್ಯ ವರದಿ ಸಲ್ಲಿಸುವಂತೆ ಸೂಚನೆ ನೀಡುವಿರೆಂದು ಆಶಿಸುತ್ತೇನೆ.

ಪ್ರಸ್ತಾಪಿತ ಜಾನಪದ ವಿಶ್ವವಿದ್ಯಾನಿಲಯ ಈ ಸಲದ ಆಗಸ್ಟ್ ೧೫ರ ಒಂದು ಸ್ಮರಣೀಯ ಕೊಡುಗೆಯಾಗಿ ಕರ್ನಾಟಕಕ್ಕೆ ದೊರೆಯುವುದೆಂದು ನಮ್ಮ ಅಕಾಡೆಮಿ ನಿರೀಕ್ಷಿಸಿದೆ. ಯೋಜಿತ ಜಾನಪದ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಮೇಲೆ ಕೇಂದ್ರ ವಿಶ್ವವಿದ್ಯಾನಿಲಯ, ಧನಸಹಾಯ ಆಯೋಗ, ಯೂನಿಸೆಫ್, ಫೋರ್ಡ್ ಫೌಂಡೇಷನ್ – ಇತ್ಯಾದಿ ರಾಷ್ಟ್ರೀಯ ಹಾಗೂ ಜಾಗತಿಕ ಸಂಸ್ಥೆಗಳಿಂದ ನೆರವು ಪಡೆಯಲು ಸಾಕಷ್ಟು ಅವಕಾಶವಿದೆ.

ಯೋಜಿತ ವಿಶ್ವವಿದ್ಯಾನಿಲಯವು ಅಸ್ತಿತ್ವಕ್ಕೆ ಬರಲು ಅಗತ್ಯವೆನಿಸುವ ಎಲ್ಲ ಸಲಹೆ–ಸಹಕಾರಗಳನ್ನು ನೀಡಲು ಕರ್ನಾಟಕ ಜಾನಪದ ಅಕಾಡೆಮಿ ಸಿದ್ಧವಿದೆ ಎಂದು ತಿಳಿಸುತ್ತಾ ಸರ್ಕಾರದ ನಿರ್ಧಾರಕ್ಕಾಗಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ತಮ್ಮ ವಿಶ್ವಾಸಿ,
ಸಹಿ /–
(ಗೊ.ರು.ಚನ್ನಬಸಪ್ಪ)
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

ಉನ್ನತ ಶಿಕ್ಷಣ ಸಚಿವರು ಆಯೋಜಿಸಿದ ಸಮಾಲೋಚನ ಸಭೆಯ ನಿರ್ಣಯಗಳು

ಟಿಪ್ಪಣಿ

ಕರ್ನಾಟಕದಲ್ಲಿ ಪ್ರಸ್ತುತ ಸಾಮಾನ್ಯ ಶಿಕ್ಷಣದ ಏಳು ವಿಶ್ವವಿದ್ಯಾನಿಲಯಗಳಿವೆ. ತಾಂತ್ರಿಕ, ಕೃಷಿ, ಪಶುವೈದ್ಯ, ವೈದ್ಯಕೀಯಕ್ಕೆ ಸಂಬಂಧಿಸಿದಂತೆ ತಲಾ ಒಂದೊಂದು ವಿಶ್ವವಿದ್ಯಾನಿಲಯಗಳಿವೆ. ಈಗ ತೋಟಗಾರಿಕೆ, ಸಂಸ್ಕೃತ, ಸಂಗೀತ ಕ್ಷೇತ್ರಗಳಿಗೆ ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವ ಪ್ರಕ್ರಿಯೆ ನಡೆದಿದೆ. ಜೊತೆಗೆ ಇನ್ನೂ ಎರಡು ವಿಶ್ವವಿದ್ಯಾಲಯಗಳ ಸ್ಥಾಪನೆಯ ಪರ್ಯಾಲೋಚನೆಯೂ ನಡೆದಿರುವಂತೆ ಕಾಣುತ್ತದೆ.

ಈಗ ನಾವು ಹೊಸದೊಂದು ವಿಶ್ವವಿದ್ಯಾನಿಲಯ ಸ್ಥಾಪನೆಯ ಅಗತ್ಯ ಕುರಿತು ವಿಚಾರ ವಿನಿಮಯ ನಡೆಸಲು ಇಲ್ಲಿ ಸೇರಿದ್ದೇವೆ. ಇದಕ್ಕೆ ಪ್ರಬಲವಾದ ಕಾರಣವೆಂದರೆ, ಈಗ ಇರುವ ಮತ್ತು ಹೊಸದಾಗಿ ಬರುವ ಯಾವ ವಿಶ್ವವಿದ್ಯಾನಿಲಯಕ್ಕೂ ಇಲ್ಲದಷ್ಟು ಅಧ್ಯಯನಾವಕಾಶ ಮತ್ತು ಕಾರ್ಯವ್ಯಾಪ್ತಿ ಇರುವ ಈ ನೆಲದ ಬದುಕಿನ ಜಾನಪದಕ್ಕೆ ಸಂಬಂಧಿಸಿದಂತೆ ಒಂದು ವಿಶ್ವವಿದ್ಯಾನಿಲಯ ಇಲ್ಲದಿರುವುದು.

ಜಾನಪದವು ಒಳಗೊಂಡಿರುವ ಮತ್ತು ಒಳಗೊಳ್ಳಬಹುದಾದ ಅಧ್ಯಯನ ಸಾಧ್ಯತೆಗಳನ್ನು, ಸಂರಕ್ಷಣೆ–ಸಂವರ್ಧನೆ–ಸಂಶೋಧನಾ ಅಗತ್ಯಗಳನ್ನು ನಾಡಿನ ಅನೇಕ ಜಾನಪದ ವಿದ್ವಾಂಸರು, ಆಸಕ್ತರು ಮತ್ತು ವಿಶೇಷವಾಗಿ ಕರ್ನಾಟಕ ಜಾನಪದ ಅಕಾಡೆಮಿಯು ಗುರುತಿಸಿದ್ದು, ಜಾನಪದ ವಿಶ್ವವಿದ್ಯಾನಿಲಯವೊಂದರ ಅಗತ್ಯವನ್ನು ಮನಗಾಣಲಾಗಿದೆ.

ಉಳಿದ ವಿಶ್ವವಿದ್ಯಾನಿಲಯಗಳಿಗೆ ತಮ್ಮದೇ ಆದ ನಿರ್ದಿಷ್ಟ ಶೈಕ್ಷಣಿಕ ಬದು–ಬಾಂದುಗಳಿವೆ. ಆದರೆ, ನಮ್ಮ ನಾಡಿನ ಸುಮಾರು ಇಪ್ಪತ್ತಾರು ಸಾವಿರಕ್ಕೂ

ಹೆಚ್ಚಿನ ಹಳ್ಳಿಗಳು ಮತ್ತು ಹಟ್ಟಿಗಳಲ್ಲಿನ ಕೋಟ್ಯಂತರ ಸಂಖ್ಯೆಯ ಜನಸಾಮಾನ್ಯರಿಗೆ ಸಂಬಂಧಿಸಿದಂತೆ ಚಾರಿತ್ರಿಕ, ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಆಯಾಮಗಳ ಬಗೆಗೆ ವೈಜ್ಞಾನಿಕವಾದ ಅಧ್ಯಯನ ಮತ್ತಿತರ ಕೆಲಸಗಳು ನಡೆಯದಿರುವುದನ್ನು ಮತ್ತು ಜಾಗತೀಕರಣ, ನಗರೀಕರಣ, ಉದಾರೀಕರಣ, ಆಧುನೀಕರಣ, ಕೈಗಾರಿಕೀಕರಣಗಳ ಅಬ್ಬರದಲ್ಲಿ ಗ್ರಾಮೀಣ ಮತ್ತು ಗುಡ್ಡಗಾಡಿನ ಜನರ ಮೂಲ ಬದುಕೇ ಹದಗೆಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಇಂದಿನ ಸಂದಿಗ್ಧ ಸನ್ನಿವೇಶದಲ್ಲಿ ನಮ್ಮ ಜಾನಪದದ ನೆಲೆಯನ್ನು, ಸತ್ವವನ್ನು, ಮೌಲ್ಯವನ್ನು ಹೊಸ ತಲೆಮಾರಿಗೆ ಅರ್ಥಮಾಡಿಕೊಟ್ಟು, ಅದನ್ನು ಹೊಸ ಬದುಕಿಗೆ ಹೊಂದಿಸುವ ಪ್ರಯತ್ನ ತುರ್ತಾಗಿ ನಡೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯು ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯ ಬಗೆಗೆ ರಾಜ್ಯ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿದೆ. ಇತ್ತೀಚೆಗೆ ಕೂಡಲಸಂಗಮ ಕ್ಷೇತ್ರದಲ್ಲಿ ನಡೆದ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲುಗೊಂಡಿದ್ದ ರಾಜ್ಯದ ಮುಖ್ಯಮಂತ್ರಿಯವರು ಈ ಬಗೆಗೆ ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುವುದಾಗಿ ಘೋಷಿಸಿದ್ದಾರೆ.

ಅಕಾಡೆಮಿಯು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯೋಜಿತ ಜಾನಪದ ವಿಶ್ವವಿದ್ಯಾನಿಲಯದ ಅಗತ್ಯ ಮತ್ತು ಕಾರ್ಯವ್ಯಾಪ್ತಿಗಳನ್ನು ತಿಳಿಸಿ, ಅಂತಹ ಒಂದು ವಿಶ್ವವಿದ್ಯಾನಿಲಯು ಇಡೀ ಭಾರತದಲ್ಲೇ ಮೊಟ್ಟಮೊದಲನೆಯದಾಗುತ್ತದೆಂದೂ, ಅದು ಜಾನಪದದ ಸೆಲೆಯಾಗಿರುವ ಗ್ರಾಮೀಣ ರೈತರು, ರೈತಕಾರ್ಮಿಕರು, ದಲಿತರು, ಅಲೆಮಾರಿಗಳು, ಗುಡ್ಡಗಾಡಿನ ಜನರು ಹಾಗೂ ಎಲ್ಲ ಶ್ರಮಜೀವಿಗಳ ಬದುಕು ಮತ್ತು ಸಂಸ್ಕೃತಿಗಳಿಗೆ ಕೊಟ್ಟ ಮನ್ನಣೆಯಾಗುತ್ತದೆಂದೂ ಹೇಳಲಾಗಿದೆ.

- ಮಾನವಶಾಸ್ತ್ರ, ಜನಾಂಗೀಯ ಅಧ್ಯಯನಶಾಸ್ತ್ರ, ಸಮಾಜಶಾಸ್ತ್ರ, ಮನಃಶ್ಶಾಸ್ತ್ರ ಇತ್ಯಾದಿ ಶಾಸ್ತ್ರಗಳೊಂದಿಗೆ ಅಂತರ್‌ಶಿಸ್ತೀಯ ಅಧ್ಯಯನ ನಡೆಸಲು,
- ಪರಂಪರಾಗತ ಜನಪದ ಕಲೆಗಳ ಸಂರಕ್ಷಣೆ ಹಾಗೂ ತರಬೇತಿಗೆ ಅವಕಾಶ ಕಲ್ಪಿಸಲು,
- ಕಣ್ಮರೆಯಾಗುತ್ತಿರುವ ಜಾನಪದ ವಸ್ತು–ಸಾಮಗ್ರಿಗಳ ಸಂಗ್ರಹಾಲಯ ಸ್ಥಾಪಿಸಲು,

- ಶಾಸ್ತ್ರೀಯ ಜಾನಪದ ನಿಘಂಟು ಮತ್ತು ಜಾನಪದ ವಿಶ್ವಕೋಶ ನಿರ್ಮಿಸಲು,
- ಜನಪದರ ಹಬ್ಬ, ತೇರು, ಉತ್ಸವ, ಪದ್ಧತಿ–ಪರಂಪರೆಗಳಲ್ಲಿರುವ ಸಾಂಸ್ಕೃತಿಕ ಮಹತ್ವವನ್ನು ಕಂಡುಕೊಳ್ಳಲು,
- ಸಂವಹನ ಮಾಧ್ಯಮವಾಗಿ ಜನಪದ ಪ್ರದರ್ಶನ ಕಲೆಗಳನ್ನು ಬಳಸಿಕೊಳ್ಳಲು,
- ಪರಂಪರೆಯ ಕೃಷಿ ಪದ್ಧತಿಯ ವೈಜ್ಞಾನಿಕ ಮೌಲ್ಯಗಳನ್ನು ಗುರುತಿಸಲು,
- ಕನ್ನಡ ನೆಲದ ಜಾನಪದದ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳನ್ನು ಇತರ ಭಾಷೆಗಳ ಜಗತ್ತಿಗೆ ತೋರಿಸಲು,
- ಅಪಾರ ಪ್ರಮಾಣದಲ್ಲಿರವ ಜನಪದ ಕಲಾವಿದರ ಕಲಾಪರಿಣತಿಯನ್ನು ಬಳಸಿಕೊಳ್ಳಲು,
- ಜನಪದ ಆಹಾರ–ವೈದ್ಯಗಳ ವೈಜ್ಞಾನಿಕ ಅಂಶಗಳನ್ನು ಕಂಡುಕೊಳ್ಳಲು,
- ಗ್ರಾಮೀಣ ಕರಕುಶಲ ಕಲೆಗಳನ್ನು ಪುನರುಜ್ಜೀವನಗೊಳಿಸಲು,
- ಜನಪದ ಸಾಹಿತ್ಯ, ಸಂಗೀತ, ನೃತ್ಯ, ಕ್ರೀಡೆ, ಚಿತ್ರಕಲೆ ಇತ್ಯಾದಿಗಳನ್ನು ಸಮರ್ಥವಾಗಿ ಇಂದಿನ ಕಾಲಮಾನದೊಡನೆ ಸಮನ್ವಯಗೊಳಿಸಲು,
- ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಅವರ ನೆಲದ ಸಂಸ್ಕೃತಿಯನ್ನು ಪರಿಚಯಿಸಲಿಕ್ಕಾಗಿ ಪಠ್ಯವಿಷಯಗಳನ್ನು ರೂಪಿಸಲು,
- ಜನಪದ ರಂಗಭೂಮಿಯನ್ನು ಉಳಿಸಲು,
- ನಾಡಿನ ಪ್ರತಿಯೊಂದು ಹಳ್ಳಿ ಮತ್ತು ಗುಡ್ಡದ ಹಾಡಿಗಳ ಬಗೆಗೆ ಸಮಗ್ರ ಮಾಹಿತಿ ಸಂಗ್ರಹ ಮಾಡಿ ವಿಶ್ಲೇಷಣೆ ನಡೆಸಲು,
- ಜಾನಪದದ ಬಗೆಗೆ ಶಿಕ್ಷಣ ನೀಡಿ ಸರ್ಟಿಫಿಕೇಟ್, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಕೋರ್ಸ್ ನಡೆಸಲು
- ಜಾನಪದ ಅಧ್ಯಯನಾಸಕ್ತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಿ ಉತ್ತೇಜಿಸಲು,

- ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳನ್ನು ನಡೆಸಲು - ಹೀಗೆ ಅನಂತ ಮುಖದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮಹತ್ವದ ಕಾರ್ಯಚಟುವಟಿಕೆಗಳಿಗಾಗಿ ಜಾನಪದಕ್ಕೇ ಮೀಸಲಾದ ವಿಶ್ವವಿದ್ಯಾನಿಲಯವೊಂದರ ಅಗತ್ಯವಿದೆ.

ಈ ಅಗತ್ಯವನ್ನು ರಾಜ್ಯ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುವುದು ಈ ಸಮಾಲೋಚನಾ ಸಭೆಯ ಆಶಯವಾಗಿದೆ. ಇಲ್ಲಿ ಬರುವ ಸಲಹೆ-ಸೂಚನೆಗಳು ಜಾನಪದ ಅಕಾಡೆಮಿ ಆಶಿಸಿರುವ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಸರ್ಕಾರಕ್ಕೆ ಸಮರ್ಥನೆ ಒದಗಿಸುವುದೆಂದು ನಿರೀಕ್ಷಿಸಲಾಗಿದೆ.

ಈ ಸಭೆಯ ಇಂಗಿತವನ್ನು ಅಕಾಡೆಮಿಯು ಒಂದು ನಿರ್ಣಯದ ರೂಪದಲ್ಲಿ ರಾಜ್ಯ ಸರ್ಕಾರದ ಗಮನಕ್ಕೆ ತರುತ್ತದೆ.

ಒಟ್ಟಾರೆ ಯೋಜಿತ ಜಾನಪದ ವಿಶ್ವವಿದ್ಯಾನಿಲಯವು -

- ಕನ್ನಡ ಜನಪದರ ಸಂಕೇತವಾಗಿ
- ಕನ್ನಡ ಸಂಸ್ಕೃತಿಯ ಪ್ರತೀಕವಾಗಿ
- ನೆಲ-ಜಲ ಬದುಕಿನ ಪ್ರಾತಿನಿಧಿಕವಾಗಿ
- ಎಲ್ಲ ವಿಶ್ವವಿದ್ಯಾನಿಲಯಗಳ ಸಂಪರ್ಕ ಮತ್ತು ಮೂಲಕೇಂದ್ರವಾಗಿ
- ಬೌದ್ಧಿಕ ಮತ್ತು ಪ್ರಾಯೋಗಿಕ ಕ್ಷೇತ್ರವಾಗಿ
- ಕಲಾ ಪ್ರದರ್ಶನ, ಸಂಗ್ರಹ, ಸಂಶೋಧನಾ ಕೇಂದ್ರವಾಗಿ
- ಬೋಧನೆ, ಅಧ್ಯಯನಾಂಗ, ಪ್ರಸಾರಾಂಗ, ಪರೀಕ್ಷಾಂಗ, ಪ್ರದರ್ಶನಾಂಗ, ಪ್ರಕಟಣ ಕೇಂದ್ರವಾಗಿ
- ಗ್ರಾಮ-ನಗರ-ರಾಜ್ಯ-ದೇಶ-ವಿದೇಶೀ ಜ್ಞಾನದ ದೇಶೀ ಕೇಂದ್ರವಾಗಿ
- ಸೈದ್ಧಾಂತಿಕ, ಆನ್ವಯಿಕ ಜ್ಞಾನ ಶಿಸ್ತಿನ ಕೇಂದ್ರವಾಗಿ
- ಮಾನವ ಸಂಪನ್ಮೂಲ ನಿರ್ವಹಣೆಗೆ ಮಾರ್ಗದರ್ಶಕವಾಗಿ
- ದಾಖಲೀಕರಣ, ವಿಶ್ಲೇಷಣೆ, ಪ್ರಸ್ತುತತೆಗಳ ಕೇಂದ್ರವಾಗಿ

- ಸಂಸ್ಕೃತಿ ವಿನಿಮಯ ಕೇಂದ್ರವಾಗಿ
- ಸಾಹಿತ್ಯೇತರ ಕಲೆಗಳ ಕೇಂದ್ರವಾಗಿ
- ಆರ್ಥಿಕ ನೆಲೆಗಳ ಹಾಗೂ ಔದ್ಯೋಗಿಕ ಸಂಪನ್ಮೂಲ ನಿರ್ವಹಣೆ ಮತ್ತು ಕ್ರೋಡೀಕರಣ ಕೇಂದ್ರವಾಗಿ
- ಜನಾಂಗೀಯ ಅಧ್ಯಯನ ಸಾಧ್ಯತೆ, ಮಾನವಿಕ ಅಧ್ಯಯನ ಸಾಧ್ಯತೆ ಹಾಗೂ ಸಾಮಾಜಿಕ ಅಧ್ಯಯನ ಸಾಧ್ಯತೆಗಳ ಕೇಂದ್ರವಾಗಿ
- ಭಾಷಿಕ ವಿಶ್ಲೇಷಣಾ ಪ್ರಯೋಗಾಲಯವಾಗಿ
- ಶಿಷ್ಟ, ಜನಪದ ಸಾಹಿತ್ಯ, ಕಲೆಗಳ ತೌಲನಿಕ ಅಧ್ಯಯನ ಕೇಂದ್ರವಾಗಿ
- ಸ್ವಾಭಿಮಾನ–ಸಹನೆ–ಸಹಬಾಳ್ವೆಗಳ ಪ್ರೇರಕ ಕೇಂದ್ರವಾಗಿ
- ಖಾದಿ–ಗ್ರಾಮೋದ್ಯೋಗ ಒಳಗೊಂಡ ಕೇಂದ್ರವಾಗಿ
- ಪದವಿಗಾಗಿ ಪರೀಕ್ಷೆ ಎನ್ನುವಂತಾಗದೆ; ಸೈದ್ಧಾಂತಿಕ, ಪ್ರಾಯೋಗಿಕ ವಿಧಾನದ ಪಠ್ಯಕ್ರಮ ಮತ್ತು ಪರೀಕ್ಷೆಗಳ ಕೇಂದ್ರವಾಗಿ (೫೦ % ಸಿದ್ಧಾಂತ, ೫೦ % ಪ್ರದರ್ಶನ)
- ದಕ್ಷಿಣ ಭಾರತದ ಸಾಂಸ್ಕೃತಿಕ ಕೇಂದ್ರವಾಗಿ
- ವಸ್ತು ಸಂಗ್ರಹಾಲಯ, ಕ್ರೀಡಾಂಗಣ, ಅಂಗಸಾಧನ ಕೇಂದ್ರ, ಆರ್ಕೈವ್ಸ್ ಕೇಂದ್ರ, ರಂಗಭೂಮಿಯಾಗಿ
- ಫೆಲೋಶಿಪ್ ಮತ್ತು ಉನ್ನತ ಅಧ್ಯಯನಗಳ ಸಾಧ್ಯತೆಯ ಕೇಂದ್ರವಾಗಿ
- ಅಂತಾರಾಷ್ಟ್ರೀಯ ಸಂಬಂಧಗಳ ಕೇಂದ್ರವಾಗಿ
- ಪ್ರಾಥಮಿಕ / ಪ್ರೌಢ, ಪದವಿಪೂರ್ವ, ಸ್ನಾತಕ, ಸ್ನಾತಕೋತ್ತರ ಪಠ್ಯಕ್ರಮದ ಆಯೋಜಕ ಮತ್ತು ಕಲಿಕಾಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ.

ಒಟ್ಟಾರೆಯಾಗಿ ಮೇಲ್ಕಂಡ ಟಿಪ್ಪಣಿಯನ್ನು ಕ್ರೋಡೀಕರಿಸಿ ಕೆಳಕಂಡ ನಿರ್ಣಯಗಳನ್ನು ಅಕಾಡೆಮಿಯ ರಿಜಿಸ್ಟ್ರಾರ್ ಸಭೆಗೆ ತಿಳಿಸಿದರು. ಈ ನಿರ್ಣಯವನ್ನು ಸಭೆ ಒಮ್ಮತದಿಂದ ಒಪ್ಪಿತು.

ನಿರ್ಣಯಗಳು

ಕರ್ನಾಟಕ ಜಾನಪದ ಸಂಪತ್ತು ಈಗಾಗಲೇ ಅಂತಾರಾಷ್ಟ್ರೀಯ ವಿದ್ವಾಂಸರ ಅಧ್ಯಯನಕ್ಕೆ ಒಳಪಟ್ಟಿದೆ. ಆದರೆ ಜಾನಪದ ಅಧ್ಯಯನಕ್ಕೆ ಬೇಕಾದ ವಿಶಾಲ ತಳಹದಿ ಮತ್ತು ಆಯಾಮ ಒದಗಿಸಲು, ವಿಸ್ತೃತ ಜನಪದದ ಬದುಕಿನ ಗ್ರಹಿಕೆ ಮತ್ತು ಅಭಿವ್ಯಕ್ತಿ ಆಗಬೇಕಿದೆ. ನಾಡಿನ ಸಂಸ್ಕೃತಿ ಮತ್ತು ಜನತೆಯ ಆಶೋತ್ತರಗಳ ಪ್ರತೀಕವಾಗಿ ಪೂರ್ಣ ಸಜ್ಜಿತವಾದ ಒಂದು ಶೈಕ್ಷಣಿಕ ಸಂಸ್ಥೆಯ ಅಗತ್ಯವಿದೆ.

ಬಹುಸಂಖ್ಯಾತರಾದ ದಲಿತರು, ಶ್ರಮಿಕರು, ರೈತರು, ಗ್ರಾಮೀಣ–ಗುಡ್ಡಗಾಡು ಬದುಕಿನ ಎಲ್ಲ ಚಹರೆಗಳ ದಾಖಲು, ಸಂಗ್ರಹ, ವಿಶ್ಲೇಷಣೆಯೊಂದಿಗೆ ಕನ್ನಡ ಸಂಸ್ಕೃತಿಯ ಜನಾಂಗೀಯ, ಮಾನವಿಕ, ಸಾಮಾಜಿಕ ಅಧ್ಯಯನ ಕೇಂದ್ರವಾಗಿ ದಕ್ಷಿಣ ಭಾರತದ ಸಾಂಸ್ಕೃತಿಕ ಕೇಂದ್ರವಾಗಿ ಆ ಸಂಸ್ಥೆ ರೂಪು ತಳೆಯಬೇಕು.

ಜಾನಪದ ಕುರಿತಂತೆ ಸಂರಕ್ಷಣೆ, ಸಂವರ್ಧನೆ, ಸಂಶೋಧನೆ, ಬೋಧನೆ, ಪ್ರಕಟಣೆ, ಪ್ರದರ್ಶನ – ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾರತದಲ್ಲಿಯೇ ಪ್ರಥಮವೆನಿಸುವ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಈ ಸಭೆ ಕರ್ನಾಟಕ ಸರ್ಕಾರವನ್ನು ಒತ್ತಾಯಿಸುತ್ತದೆ.

ಪರಿವಿಡಿ

ಭಾಗ – ೧

ಭಾಗ – ೨

ಸುಂದರ ಪ್ರಾಕೃತಿಕ ಆವರಣದಲ್ಲಿ ರೂಪುಗೊಳ್ಳಲಿ

– ಲಿಂಗದೇವರು ಹಳೇಮನೆ

ಜನಪದ ಕಲಾವಿದರನ್ನು ನಿಕೃಷ್ಟ ಸ್ಥಿತಿಯಲ್ಲಿಟ್ಟುಕೊಂಡು ವಿಶ್ವವಿದ್ಯಾನಿಲಯವನ್ನು ಬೆಳೆಸೋಕೆ ಆಗುವುದಿಲ್ಲ. ಆರ್ಥಿಕವಾಗಿ ಸಾಮಾಜಿಕವಾಗಿ ಸದೃಢವಾಗಿದ್ದರೆ ಮಾತ್ರ ಹೆಮ್ಮೆಯ ಕಲೆಗಳಾಗಿ ತಮ್ಮ ಕಲೆಗಳನ್ನು ಉಳಿಸೋಕೆ ಪ್ರಯತ್ನ ಮಾಡುತ್ತಾರೆ. ಯೂರೋಪಿನಲ್ಲಿ ಬುಡಕಟ್ಟು ಜನರು ಯಾವ ಕೀಳರಿಮೆಯೂ ಇಲ್ಲದೆ ಕಲೆಗಳನ್ನು ಪ್ರದರ್ಶಿಸುತ್ತಾರೆ. ಶಾಲಾ ಕಾಲೇಜು ಮಕ್ಕಳು ರಂಗದ ಕುಣಿತ, ಪಟಾಕುಣಿತ ಕುಣಿಯುವುದರಲ್ಲಿ ಆಸಕ್ತಿ ತೋರಿಸಿದರೆ ಅಂಥವರನ್ನು ಉತ್ತೇಜಿಸಬೇಕು. ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಜಾನಪದ ಅಧ್ಯಯನ ವಿಭಾಗಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡು ಒಂದೇ ಬಗೆಯ ಕೆಲಸ ಮಾಡುವುದರಿಂದ ನಕಲು (Duplicate) ಆಗದಂತೆ ಅವರಿಗೂ ಮಾರ್ಗದರ್ಶನ ನೀಡುವುದು ಅಗತ್ಯ.

ಅತಿಥಿ ಕಲಾವಿದರಿಗೆ ಉತ್ತಮ ಸಂಭಾವನೆ ಕೊಡಬೇಕಾದುದು ಅಪೇಕ್ಷಣೀಯ. ಅಲೆಮಾರಿಗಳು, ಆಧುನಿಕ ಅಲೆಮಾರಿಗಳ ಬಗೆಗೆ ಅಧ್ಯಯನ ನಡೆಸಬೇಕು. ಕಲೆಯ ಸ್ವರೂಪ ಸ್ವಭಾವಕ್ಕನುಗುಣವಾಗಿ ಅದನ್ನು ಪುನಶ್ಚೇತನಗೊಳಿಸಲು ತರಬೇತಿ ಶಿಬಿರ ನಡೆಸಬೇಕು.

ಕಲೆಗಳನ್ನು ಆಧುನಿಕ ರೀತಿಯಲ್ಲಿ ಬೆಳೆಸಲು ಸಾಧ್ಯವೇ? ನೋಡಬೇಕು. ಇಲ್ಲಿ ಲಭ್ಯವಾಗುವ ಕಲಾಕೌಶಲ (Artefacts)ಗಳನ್ನಿಟ್ಟುಕೊಂಡು ಚರಿತ್ರೆಯನ್ನು ಪುನಾರಚಿಸಲು (Reconstruct) ಯತ್ನಿಸಬೇಕು. ಕರ್ನಾಟಕಕಷ್ಟೇ ಸೀಮಿತಗೊಳಿಸದೆ ಲೋಕದೃಷ್ಟಿ (Worldview) ಇಟ್ಟುಕೊಂಡು ಕಲೆಗಳ ಅಧ್ಯಯನ ನಡೆಸಬೇಕು. ಜಾನಪದಕ್ಕೆ ಸ್ಥಳೀಯ ಎಲ್ಲೆ (Space bound) ಇಲ್ಲ. ಸಾರ್ವತ್ರಿಕ ಆಶಯ (Universal Motif) ಗಳನ್ನು ಲಕ್ಷಿಸಬೇಕು. ಸ್ಥಳೀಯ ವರ್ಣನೆ (Local description) ಗಳನ್ನು ನಿರ್ಲಕ್ಷಿಸಬೇಕಾಗಿಲ್ಲ. ಸಾರ್ವತ್ರಿಕ ಲಕ್ಷಣ (Universal character) ವನ್ನು ಸಂಬದ್ಧಗೊಳಿಸಿ ಪರಿಶೀಲಿಸಬೇಕು.

ಇಟ್ಟುಕೊಂಡು ಕಲೆಗಳನ್ನು ಕಲಿಸುವ ಏರ್ಪಾಡು ಮಾಡಬೇಕು. ಸಂಪನ್ಮೂಲ ವ್ಯಕ್ತಿಗಳು ಮೂಲ ಕಲಾವಿದರು ಕಲೆಗಳನ್ನು ಕಲಿಸುವ – ಪ್ರಯೋಗಿಸುವ ಕ್ರಮ ನೋಡಿ ಪಠ್ಯಕ್ರಮ ರೂಪಿಸಬೇಕು. ಸಿದ್ಧಾಂತ ರೂಪಿಸಿ (Theory build up) ಪಠ್ಯ ರೂಪಿಸಬೇಕು. ಜಾತ್ರೆಗಳ ಅಧ್ಯಯನಕ್ಕೆ ಆದ್ಯತೆ ಇರಲಿ.

ಕರ್ನಾಟಕದ ಎಲ್ಲ ಜಾತ್ರೆಗಳ ದಾಖಲೀಕರಣ (Documentation) ಆಗಬೇಕಾಗಿದೆ. ಪರಂಪರೆ ಮತ್ತು ಪ್ರದರ್ಶನ ವಿವರಗಳೊಂದಿಗೆ ಈ ದಾಖಲೀಕರಣ ಆಗಬೇಕು. ಜಾತ್ರೆಗಳ ಕುರಿತ ಸಂಪುಟಗಳನ್ನು ಹೊರ ತರಬೇಕು. ಕರ್ನಾಟಕದ ಪ್ರಮುಖ ಕಲೆಗಳನ್ನು ಗುರುತಿಸಿ ಇಂದಿಗೂ ಬದುಕಿರುವ ಎಲ್ಲಾ ಕಲಾವಿದರ ಪಟ್ಟಿ ವಿಶ್ವವಿದ್ಯಾನಿಲಯದಲ್ಲಿ ಇರಬೇಕು. ಅವರೆಲ್ಲ ವಿಶ್ವವಿದ್ಯಾನಿಲಯಕ್ಕೆ ಬರುವಂತಾಗಬೇಕು. ಅವರೇ ಎಲ್ಲ ಕಲೆಗಳ ಸಂಸ್ಕೃತಿಗಳ ದಾತಾರರು. ಅವುಗಳಲ್ಲಿ ಮುಖ್ಯವಾದುದನ್ನು ಕಲಿಸುವಂತಾಗಬೇಕು.

- ಸಾಂಪ್ರದಾಯಿಕ ಕೃಷಿ, ದೇಸೀ ಕೃಷಿ ಜ್ಞಾನ ಪರಂಪರೆ ಕಣ್ಮರೆಯಾಗುತ್ತಿದೆ.
- ದೇಸೀ ಏಕ ಅಲ್ಲ; ಅದು ಅನೇಕ.

ಪ್ರತಿ ಹತ್ತು ಕಿ.ಮೀ. ಆಚೆಗೆ ಅದು ಭಿನ್ನವಾಗಿರುತ್ತದೆ. ವ್ಯವಸಾಯ ಪದ್ಧತಿಯೇ ಬೇರೆಯಾಗಿರುತ್ತದೆ. ಈ ಕೆಳಕಂಡಂತೆ ವಿಂಗಡಿಸಿಕೊಳ್ಳಬಹುದು –

- ಮಲೆನಾಡು ಕೃಷಿ ಪದ್ಧತಿ
- ಅರೆ ಮಲೆನಾಡು ಕೃಷಿ ಪದ್ಧತಿ
- ಬಯಲು ಸೀಮೆ ಕೃಷಿ ಪದ್ಧತಿ
- ಬೆಂಗಾಡು ಸೀಮೆ ಕೃಷಿ ಪದ್ಧತಿ
- ನೀರಾವರಿ ಆಶ್ರಯ ಹಾಗೂ ಬಯಲು ಪ್ರದೇಶದ ಕೃಷಿ ಪದ್ಧತಿ

ಉದಾಹರಣೆಗೆ: ಬೆಂಗಾಡು ಸೀಮೆಯ ಆರ್ಕ, ನವಣೆ, ಕೊರ್ಲೆ, ಜಡೆ, ದುಂಡು ನವಣೆ – ಮೂಲ ತಳಿಗಳು ಸಂಪೂರ್ಣ ನಾಶವಾಗಿವೆ.

ಮೂಲ ತಳಿಗಳನ್ನು ಬಿಟ್ಟಿದ್ದರಿಂದ ಸಾಂಪ್ರದಾಯಿಕ ವ್ಯವಸಾಯ ಕಣ್ಮರೆಯಾಗಿದೆ.

ವಿಶ್ವವಿದ್ಯಾನಿಲಯಕ್ಕೊಂದು ಡ್ರೆಸ್‌ಕೋಡ್ ಇರಲಿ

- ಏರ್ಯ ಲಕ್ಷ್ಮೀನಾರಾಯಣ ಆಳ್ವ

ಶ್ರೀ ಅಂಬಳಿಕೆ ಹಿರಿಯಣ್ಣನವರಿಗೆ,

ಸಪ್ರೇಮ ವಂದನೆಗಳು. ನಿಮ್ಮ ಪತ್ರ ೦೪.೧೧.೨೦೧೦. ದೇಶದಲ್ಲೇ ಪ್ರಪ್ರಥಮವಾಗಿ ಪ್ರಾರಂಭವಾಗಲಿರುವ ಜಾನಪದ ವಿಶ್ವವಿದ್ಯಾನಿಲಯಕ್ಕೆ ನನಗೆ ಅನಿಸಿದ ಅನಿಸಿಕೆಗಳನ್ನು ಬರೆದು ಕಳುಹಿಸುವಂತೆ ತಿಳಿಸಿದ್ದೀರಿ.

ನಾನು ಜಾನಪದದಲ್ಲಿ "ತಜ್ಞ" ಅಲ್ಲ. ಆದರೂ ಜನಪದ ಕಲಾಪ್ರಕಾರಗಳ ನಡುವೆ ಹುಟ್ಟಿ ಬೆಳೆದಿದ್ದೇನೆ. ಅವುಗಳನ್ನು ಕಂಡು ಸಂತೋಷಪಟ್ಟಿದ್ದೇನೆ. ಕೆಲವು ಆರಾಧನಾ ರೂಪದ ಕಲೆಗಳಿಗೆ ಮನೆಯಂಗಳದಲ್ಲೇ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾ ಬಂದಿದ್ದೇನೆ.

ನನಗೆ ಅನಿಸಿದ ಕೆಲವು ವಿಚಾರಗಳನ್ನು ಬರೆದು ಈ ಕಾಗದದ ಜೊತೆ ಲಗ್ತೀಕರಿಸಿ ಕಳುಹಿಸಿಕೊಡುತ್ತಿದ್ದೇನೆ. ಈ ದಿನಗಳಲ್ಲಿ ನನ್ನ ವೈಯಕ್ತಿಕ ಕೆಲಸ ಕಾರ್ಯಗಳ ಒತ್ತಡದ ನಡುವೆ ಅವಸರವಾಗಿ ನನಗೆ ತೋಚಿದ ನಾಲ್ಕು ಮಾತು ಬರೆದು ಕಳುಹಿಸುತ್ತಿದ್ದೇನೆ.

ಜಾನಪದ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಕೆಲವು ಅನಿಸಿಕೆಗಳು

- ಭಾರತದಲ್ಲೇ ಮೊತ್ತಮೊದಲು ಪ್ರಾರಂಭವಾಗಲಿರುವ ವಿಶ್ವವಿದ್ಯಾನಿಲಯವಾದುದರಿಂದ ಕರ್ನಾಟಕದ ಮತ್ತು ಭಾರತದ ವಿವಿಧ ಪ್ರದೇಶಗಳ ಜಾನಪದ ಪರಿಕರಗಳ ದೊಡ್ಡ ಸಂಗ್ರಹಾಲಯ ಇರಬೇಕು. ಮೂಲ ಸಿಗದಿದ್ದಾಗ ಅವುಗಳ ಪ್ರತಿಕೃತಿಗಳನ್ನಾದರೂ ಮಾಡಿಸಿ ಇಡಬೇಕು. ಮತ್ತು ವಿಷಯಾನುಕ್ರಮವಾಗಿ ಅವುಗಳನ್ನು ಪ್ರಪ್ರತ್ಯೇಕವಾಗಿ ಜೋಡಿಸಿಡಬೇಕು. ಅದರ ಹತ್ತಿರ ಉಪಕರಣದ ಹೆಸರು, ಬಳಕೆಯ ಪ್ರದೇಶ, ಸಂದರ್ಭಗಳ ಸಂಕ್ಷಿಪ್ತ ಪರಿಚಯ ಇರಬೇಕು.

ಜನಪದ ವೈದ್ಯಕೀಯ ಪದ್ಧತಿ, ನಾಟಿವೈದ್ಯ, ಜಾಂಡೀಸ್ ಕುರಿತು ಡಿಗ್ರಿ ಕೋರ್ಸ್ ಆರಂಭಿಸುವುದು. ಅಡುಗೆ, ಉಡುಗೆ-ತೊಡುಗೆ ಕಲಿಸುವಂತಾಗಬೇಕು. ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸುವ ಅಗತ್ಯವಿದೆ. ವೀರಗಾಸೆ, ಡೊಳ್ಳು, ಕಂಸಾಳೆ ಕಲೆಗಳನ್ನು ಕಲಿಸುವಾಗ ಅಧ್ಯಾಪಕರ ಜೊತೆ ಮೂಲ ಕಲಾವಿದರನ್ನು ಸಂಪನ್ಮೂಲ ವ್ಯಕ್ತಿಯನ್ನಾಗಿ ಇಟ್ಟುಕೊಳ್ಳಬೇಕು. ಕಲೆಗಳಿಗೆ ಕಲಾವಿದರ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದರೆ, ಸ್ಥಾನಮಾನ, ಗೌರವ ನೀಡುವುದಾದರೆ ಶ್ರೋತೃಗಳು ಬಂದೇ ತೀರುತ್ತಾರೆ.

ಕಲೆಗಳನ್ನು ಉಳಿಸುವುದು - ಬೆಳೆಸುವುದು ಸಾಧ್ಯ - ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಕತೆ ಹೇಳುವುದು, ಒಗಟು ಒಡ್ಡುವುದು, ಕಂಸಾಳೆ ಮುಂತಾದ ಕಲೆಗಳನ್ನು ಕಲಿಸುವುದು. ಶಾಲಾ ಕಾಲೇಜು ಪಠ್ಯದಲ್ಲಿ ಕತೆ, ಒಗಟು, ಗೀತೆ, ಗಾದೆ, ಕಡ್ಡಾಯ ಆಗಬೇಕು.

ಔಷಧಿ ಪರಿಣಾಮಕಾರಿಯಾಗಿದ್ದರೆ ಅದರ ಮಾಹಿತಿಯನ್ನು ಮಕ್ಕಳಿಗೆ ವೈಜ್ಞಾನಿಕ ವಿಧಾನದಲ್ಲಿ ತಿಳಿಸುವುದು ಉಪಯುಕ್ತ. ಜನಪದ ಬಳಕೆದಾರರೂ ಸಿಗುತ್ತಾರೆ; ಶ್ರೋತೃಗಳೂ ಸಿಗುತ್ತಾರೆ.

ಕ್ಷೇತ್ರಕಾರ್ಯಕರ್ತರಿಗೆ ತರಬೇತಿ ನೀಡಬೇಕು. ಅವರು ಸಂಗ್ರಹಿಸಿ ತಂದ ಸಾಮಗ್ರಿಯನ್ನು ಸಂಗ್ರಾಹಕರ ಹೆಸರಿನಲ್ಲೇ ಪ್ರಕಟಿಸುವಾಗ ಸಂಯುಕ್ತವಾಗಿ ಗಾಯಕರ ಹೆಸರಿನಲ್ಲೂ ಪ್ರಕಟಿಸುವುದು ಯುಕ್ತ. ಗೌರವಧನ ಇಬ್ಬರಿಗೂ ಸಮಾನವಾಗಿ ವಿತರಣೆಯಾಗಬೇಕು.

- **ನಿಘಂಟು ಯೋಜನೆ,** ಪ್ರತಿ ತಾಲ್ಲೂಕಿಗೆ ನಾಲ್ಕು ಮಂದಿ ನೇಮಿಸಿ ಪರಿಷ್ಕರಣ ಕಾರ್ಯ ಕೈಗೊಳ್ಳಬೇಕು. ೧೦ ಸಂಪುಟಗಳನ್ನು ತರುವುದು.
- **ವಿಶ್ವಕೋಶ ಯೋಜನೆ,** ವ್ಯವಸ್ಥಿತವಾಗಿ ನಡೆಯಬೇಕು. ೧೦ ಸಂಪುಟಗಳಲ್ಲಿ ಹೊರ ಬರುವಂತಾಗಬೇಕು.
- ಸಾಮಗ್ರಿಯನ್ನು ಲಿಖಿತ ಮತ್ತು ಅಲಿಖಿತ ಮೂಲದಲ್ಲಿ ದೊರಕಿಸಿಕೊಳ್ಳಲು, ಸಾಕ್ಷ್ಯ ಚಿತ್ರ ನಿರ್ಮಿಸಲು -ಸ್ಟುಡಿಯೋ ನಿರ್ಮಾಣವಾಗಬೇಕು.
- ಮ್ಯೂಸಿಯಂ, ಆರ್ಕೈವ್ಸ್ ನಿರ್ಮಾಣ ಆಗಬೇಕು.
- ಕಲಿತು ಹಾಡುವವರು ಹವ್ಯಾಸಿ ಕಲಾವಿದರೇ ಹೊರತು ಮೂಲಗಾಯಕರಲ್ಲ.

ದಿನಾಂಕ:೦೮.೧೦.೨೦೧೦

ಮೂಲದ್ದೇ ಬೇರೆ ಬೇರೆ ರೂಪಗಳು. ಹಾಗೆಯೇ ಇದಕ್ಕೆ ಸಮನಾದ ಜನಪದ ಕಲೆಗಳು ಹೊರರಾಜ್ಯಗಳಲ್ಲೂ ಇವೆ. ತಮಿಳಿನ ತೆರುಕ್ಕೂತ್ತು, ಆಂಧ್ರದ ವೀಧಿನಾಟಕ, ಕೇರಳದ ಕಥಕ್ಕಳಿ – ಇವುಗಳನ್ನು ಪರಿಚಯಿಸುವ ವಸ್ತು, ಸಾಹಿತ್ಯ, ಪ್ರತಿಕೃತಿಗಳ ಸಂಗ್ರಹ ಮತ್ತು ಪ್ರದರ್ಶನ ಆಗಬೇಕು. ಹಾಗೆಯೇ ಉತ್ತರ ಪೂರ್ವೀ ಭಾರತದ ಮಿಜೋರಾಂ, ಮೇಘಾಲಯ – ಇತ್ಯಾದಿ ಪ್ರದೇಶಗಳ ಕೆಲವು ಜಾನಪದೀಯ ಕಲೆಗಳು ಕರ್ನಾಟಕದ ಕೆಲವು ಜನಪದ ಕಲೆಗಳಿಗೆ ಸಮೀಪವರ್ತಿಯಾಗಿವೆ. ಅವುಗಳ ವಿಡಿಯೋಕರಣದ ಮೂಲಕ ಸಂಗ್ರಹವೂ ಆಗಬೇಕು.

- ನಾವು ದೇಶದಲ್ಲೇ ಪ್ರಪ್ರಥಮ ವಿಶ್ವವಿದ್ಯಾನಿಲಯ ಕಟ್ಟುತ್ತಿರುವುದರಿಂದ ದಕ್ಷಿಣ ಪೂರ್ವೀ ಏಷ್ಯಾದ ಹಲವು ದೇಶಗಳಲ್ಲಿ ಅಲ್ಲದೆ ಭೂತಾನ, ಟಿಬೇಟ್, ಲಂಕಾಗಳಲ್ಲೂ ನಮಗೆ ಸಮೀಪವರ್ತಿಯಾದ ಕಲಾ ಪ್ರಕಾರಗಳಿವೆ. ಅವುಗಳ ಕುರಿತು ತಿಳಿವಳಿಕೆ ಮೂಡಿಸಬಲ್ಲ ಗ್ರಂಥ, ವಸ್ತುಗಳ ವಿಡಿಯೋ ಪ್ರತಿರೂಪಗಳನ್ನು ಸಂಗ್ರಹಿಸುವುದು ಯೋಗ್ಯ.

- ಎಲ್ಲಾ ಆಧುನಿಕ ಉಪಕರಣಗಳನ್ನೊಳಗೊಂಡ ಅತ್ಯುತ್ತಮ ಪ್ರದರ್ಶನ ಥಿಯೇಟರ್ ಮತ್ತು ಸ್ಕ್ರೀನ್ ಇತ್ಯಾದಿ ಇರಲೇಬೇಕು.

- ಜಾನಪದಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪ್ರಕಟವಾದ ಎಲ್ಲಾ ಪುಸ್ತಕಗಳು ಮತ್ತು ಅನ್ಯಭಾಷೆಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ಎಲ್ಲಾ ಪುಸ್ತಕಗಳ ದೊಡ್ಡ ಪ್ರಮಾಣದ ಗ್ರಂಥಾಲಯ ಇರಬೇಕು.

- ಇಂದು ಹೆಚ್ಚಿನ ಜನಪದ ಕಲೆಗಳನ್ನು ಅವುಗಳ ಮೂಲ ಆವರಣದಿಂದ ತೆಗೆದು ವೇದಿಕೆಯಲ್ಲಿ, ಪೇಟೆಪಟ್ಟಣಗಳಲ್ಲಿ ಪ್ರದರ್ಶಿಸುತ್ತಿದ್ದೇವೆ. ಆಗ ಆ ಕಲೆಗಳ ಮೂಲಸತ್ವ ಮತ್ತು ಸೌಂದರ್ಯದ ಬಹಳ ಅಂಶ ಇಲ್ಲವಾಗುತ್ತವೆ. ಉದಾಹರಣೆಗೆ : ಯಕ್ಷಗಾನ ಬಯಲಾಟ. ಅದು ಬಟ್ಟಂಬಯಲಿನಲ್ಲಿ ನಾಲ್ಕು ಕಂಬಗಳ ಮೇಲೆ ಹಾಕಿದ ಚಪ್ಪರದ ಕೆಳಗೆ ನಡೆಯುತ್ತಿದ್ದ ಕಲೆ. ಆಗ ನಮ್ಮ ನೋಟಕ್ಕೆ – ಕಲ್ಪನೆಗೆ – ಯಾವುದೇ ಅಡೆತಡೆ ಇರಲಿಲ್ಲ. ಆ ರಂಗಸ್ಥಳ ಸ್ವರ್ಗ, ಮರ್ತ್ಯ, ಪಾತಾಳಗಳಾಗಿ ಪರಿವರ್ತನೆಗೊಂಡಾಗ ನಮ್ಮ ಭಾವನೆಗೆ ಅಡ್ಡಿ ಬರುವ ಯಾವ ಅಂಶಗಳೂ ಅಲ್ಲಿರಲಿಲ್ಲ. ಪ್ರೇಕ್ಷಕನ ಕಲ್ಪನೆಗೆ ಸರಿಯಾಗಿ ಆ ಸಣ್ಣ ಸ್ಥಳ ಕಾಣಿಸಿಕೊಳ್ಳುತ್ತಿತ್ತು. ಪಾತ್ರಧಾರಿಗಳ

ಜನಪದ ಕಲೆಗಳು ಪುನಶ್ಚೇತನಗೊಳ್ಳಲಿ

– ಕಾಳೇಗೌಡ ನಾಗವಾರ

ಉತ್ತರ ಕನ್ನಡ - ಮಲೆನಾಡು - ಹಳೆ ಮೈಸೂರು ಸೇರುವ ಸ್ಥಳ ಮದಗ ಮಾಸೂರು / ಬನವಾಸಿ / ಹಾವೇರಿ / NH 4 ಗೆ ಹತ್ತಿರ ಇರುವೆಡೆ ತುಂಗಾಭದ್ರಾ ನದಿ ದಡದಲ್ಲಿ ಸ್ಥಾಪನೆಯಾದರೆ ಚೆನ್ನಾಗಿರುತ್ತದೆ. ಅರಣ್ಯದ ಆಜುಬಾಜಿನಲ್ಲಿ ಗಿಡಮರಗಳಿಗೆ ಧಕ್ಕೆಯಾಗದ ಹಾಗೆ ನಿರ್ಮಾಣವಾಗಬೇಕು. ನಾಲ್ಕೂ ವಿಭಾಗ ಕೇಂದ್ರಗಳಲ್ಲಿ ವಿಶ್ವವಿದ್ಯಾನಿಲಯ ಕೇಂದ್ರಗಳನ್ನು ತೆರೆಯಬೇಕು (ವಿಭಾಗೀಯ ಮಟ್ಟದಲ್ಲಿ ಸಭೆ ಜರುಗಿಸಿ ಸಂವಾದ ನಡೆಸುವುದು ಅಗತ್ಯ). ಬಯಲು ವಸ್ತು ಸಂಗ್ರಹಾಲಯ ನಿರ್ಮಾಣವಾಗಬೇಕು.

ಅಧ್ಯಯನ ಮತ್ತು ಸಂಶೋಧನೆಗೆ ಒತ್ತು ಇರಲಿ.

ವೈದ್ಯ ಪದ್ಧತಿ – ನಮ್ಮ ಪರಿಸ್ಥಿತಿಗನುಗುಣವಾಗಿ ಸಮಕಾಲೀನವಾಗಿ ಹವಾಮಾನಕ್ಕನುಗುಣವಾಗಿ ಯಾವುದು ಬೇಕೋ ಅದನ್ನು ಉಳಿಸಿಕೊಂಡು ಹೋಗಬೇಕು. ಕುರುಡಾಗಿ ಇರುವಂಥವನ್ನು ಕೈ ಬಿಡುವುದು.

ಜನಪದ ಸಂಗೀತ, ಜನಪದ ಚಿತ್ರಕಲೆ, ಜನಪದ ನೃತ್ಯಗಳ ಬಗ್ಗೆ ಕ್ಷೇತ್ರ ತಜ್ಞರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸುವುದು ಯುಕ್ತ. ಹಾಸನದ ಜಾದುಗಾರ ಶ್ರೀ ಸೈಯ್ಯದ್ ಹುಸೇನ್, ಚಿತ್ರಕಲಾವಿದರಾದ ಶ್ರೀ ಹಡಪದ, ಶ್ರೀ ಕೆ.ಟಿ. ಶಿವಪ್ರಸಾದ್– ಮಾಯಾಲೋಕದ ವಿಸ್ಮಯಗಳನ್ನು ಅಂತರಂಗದ ಕಣ್ಣುಗಳಿಂದ ನೋಡುವ ಪ್ರಯತ್ನ ಮಾಡಿದವರು. ಅಂಥವರ ಸಲಹೆಗಳನ್ನು ಗಮನಿಸುವುದು ಲೇಸು.

ಜನಪದ ಕಲೆಗಳನ್ನು ಪುನಶ್ಚೇತನಗೊಳಿಸಲು Repertory ತರಹ ಕಲೆಗಳನ್ನು ಕಲಿಸುವ ವ್ಯವಸ್ಥೆ ಆಗಬೇಕು. ಸಾಧಾರಣ ಸರ್ಕಾರಿ ನೌಕರನಿಗೆ ಲಭಿಸುವ ಎಲ್ಲ ಸವಲತ್ತುಗಳನ್ನು ಅವರಿಗೆ ಒದಗಿಸಬೇಕು.

ಕುಶಲಕರ್ಮಿಗಳ ಕೌಶಲ (Skills) ಬೆಳೆಸೋಕೆ – ಆಸಕ್ತಿ ಇರುವವರಿಗೆ ತರಪೇತು ಕೊಟ್ಟರೆ ಮತ್ತಷ್ಟು ಅಭಿವೃದ್ಧಿ ಆಗಬಹುದು.

ಅರಣ್ಯಾಧಿಕಾರಿ ಗಾ.ನಂ. ಶ್ರೀಕಂಠಯ್ಯ ನಾಟಿ ವೈದ್ಯ ಸಮ್ಮೇಳನ ನಡೆಸಿ ಗಿಡಮೂಲಿಕೆ ಕುರಿತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆ ಬಗೆಗೆ ಅವರನ್ನು ಸಂಪರ್ಕಿಸಬಹುದು.

ದಿನಾಂಕ:೦೭.೧೦.೨೦೧೦

ಜನಪದ ತಂತ್ರಜ್ಞಾನ ವಿಶೇಷ ಆದ್ಯತೆ ಪಡೆಯಲಿ

– ಎಂ.ಜಿ. ಬಿರಾದಾರ

ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ,

ನಿಮ್ಮ ಪತ್ರ ತಲುಪಿ ಎರಡು ದಿನವಾಯ್ತು. ಮೊದಲು ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು. ಜಾನಪದ ವಿಶ್ವವಿದ್ಯಾನಿಲಯಕ್ಕೆ ನೀವು ಕುಲಪತಿಗಳಾಗುವ ಸಂಗತಿ ನನಗೆ ಅಭಿಮಾನ, ಅತೀವ ಸಂತೋಷದ ಸಂಗತಿ. ಅದರ ಅಭಿವ್ಯಕ್ತಿಗೆ ಶಬ್ದಗಳು ಸವಕಳಿ ಎನ್ನಿಸಬಹುದು. ಕೊಡೋಣ.

ನಿಮ್ಮ ವಿನಂತಿಯ ಮೇರೆಗೆ ನನ್ನ ಹತ್ತಾರು ಗ್ರಂಥಗಳನ್ನು ಗ್ರಂಥಾಲಯಕ್ಕೆ ಕೊಡಬಲ್ಲೆ. ನನ್ನ ಗ್ರಂಥಾಲಯವನ್ನೇ ಒಂದೆರಡು ಕಾಲೇಜುಗಳಿಗೆ ಈಗಾಗಲೇ ಕೊಟ್ಟೂ ಆಗಿದೆ. ಅದೇನೇ ಇರಲಿ, ಆ ಪುಸ್ತಕಗಳನ್ನು ನನ್ನ ಖರ್ಚಿನಿಂದ ಕಳಿಸಲಾಗದು. ಯಾರ ಮುಖಾಂತರವಾದರೂ ನೀವೇ ಕೊಂಡೊಯ್ಯಬಹುದಾಗಿದೆ.

ಎರಡನೆಯದಾಗಿ, ಯೋಜಿತ ವಿಶ್ವವಿದ್ಯಾನಿಲಯದ ಸ್ವರೂಪ ಕುರಿತಂತೆ ಸಲಹೆ, ಸೂಚನೆ ಬಯಸಿದ್ದೀರಿ. ಇದು ಥಟ್ಟನೆ ನಿರ್ಧರಿಸುವ ಮಾತಲ್ಲ. ಅದು ನಿರಂತರವಾಗಿ, ಅಸಂಖ್ಯಾತ ತಜ್ಞರಿಂದ ನಡೆಯಬೇಕಾದ ಕ್ರಿಯೆ. ಬಹಳ ಕಠಿಣ ಕ್ರಿಯೆಯೂ ಅಹುದು.

ನಾನು 'ಪ್ರಜಾವಾಣಿ'ಯಲ್ಲಿ ಕೆಲವು ವಿಚಾರಗಳನ್ನು ನಾಲ್ಕಾರು ತಿಂಗಳ ಹಿಂದೆ ವ್ಯಕ್ತಪಡಿಸಿರುವೆ:

- ಮೊದಲನೆಯದಾಗಿ, ವಿಶ್ವವಿದ್ಯಾನಿಲಯವೆಂದೊಡನೆ ಅದು ನೀಡುವ ಪದವಿಗಳು ಪ್ರಯೋಜನಾತ್ಮಕ ಅಂದರೆ ಜ್ಞಾನದ ಜೊತೆಗೆ ಜೀವನಾಧಾರ ಉದ್ಯೋಗ ಒದಗಿಸುವ ಬಲವುಳ್ಳವಾಗಿರಬೇಕು. ಇದನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡು ಪಠ್ಯಕ್ರಮ ರೂಪುಗೊಳ್ಳಬೇಕು.

ವಿಶೇಷವಾಗಿ ಈ ಕೆಳಗಿನ ಮೂರು ವಿಭಾಗಗಳು ಅಸ್ತಿತ್ವಕ್ಕೆ ಬರಬೇಕು :

- ಭಾಷಾಂತರ ವಿಭಾಗ
- ನಿಘಂಟು ವಿಭಾಗ
- ವಿಶ್ವಕೋಶ ಯೋಜನೆ

ಡಿಪ್ಲೊಮಾ ಶಿಕ್ಷಣಗಳ(courses)ನ್ನು ಆರಂಭಿಸುವುದು ಯುಕ್ತ:

- ಹೊಲಿಗೆ, ಪಾರಂಪರಿಕ ಕಲೆ, ಆಹಾರ ತಂತ್ರಜ್ಞಾನ, ವಿಶೇಷ ರುಚಿ (Food Recipes) ಇತ್ಯಾದಿಗಳ ಡಿಪ್ಲೊಮಾ ಶಿಕ್ಷಣಗಳನ್ನು ಆರಂಭಿಸಬೇಕು. ಗೃಹಿಣಿಯರು ಮನೆಯಲ್ಲೇ ಇದ್ದುಕೊಂಡು ಕಲಿಯುವಂತಾಗಬೇಕು

ಅರೆಕಾಲಿಕ (Part time) ವಾಗಿ – ಸಂಗೀತ (Music) ಮತ್ತು ನೃತ್ಯ (Dance) ತರಗತಿಗಳನ್ನು ಆರಂಭಿಸಬೇಕು.

ಕನ್ನಡ, ಇಂಗ್ಲಿಷ್, ಚರಿತ್ರೆ ಮತ್ತು ಮನೋವಿಜ್ಞಾನ ವಿಷಯಗಳು ಕಲಿಕೆಯ ಮುಖ್ಯ ವಿಷಯಗಳಾಗಿದ್ದಾಗ ವಿಶೇಷ ಕಲಿಕೆ (Specialization) ಯಾಗಿ Folklore ಇರಲಿ.

ಎರಡನ್ನೂ ಅನುಸಂಧಾನ ಮಾಡಿ ಪದವಿ ಗಳಿಸಲು ಅವಕಾಶ ಇರಬೇಕು.

ದಿನಾಂಕ:೩೦.೦೯.೨೦೧೦

- ಕರ್ನಾಟಕ (ಭಾರತ)ದ ಹಲವಾರು ಬುಡಕಟ್ಟು ಜನಾಂಗಗಳ ಅಧ್ಯಯನ ನಡೆದು ಗುಣ-ದೋಷಗಳನ್ನು ಸಂಶೋಧಿಸಿ, ಅವರ ಬದುಕು ಆರ್ಥಿಕ ಸ್ವಾವಲಂಬನೆ, ಸಾಂಸ್ಕೃತಿಕ ಸಮೃದ್ಧಿಯತ್ತ ಸಾಗಲು ಅನುವು ಮಾಡುವ ದಾರಿಗಳನ್ನು ಸೃಷ್ಟಿಸಬೇಕು.
- ಜಾಗತೀಕರಣ, ಅನ್ಯ ಸಂಸ್ಕೃತಿಗಳ ಸುನಾಮಿಯಿಂದ ಪಾರಾಗಲು ಜನಪದ ಬದುಕಿನ ಕಳೆದುಹೋದ ಮೌಲ್ಯಗಳ ಪುನರ್ ವಿಮರ್ಶೆ ಆಗಬೇಕು. ಇಲ್ಲಿ ಅಧ್ಯಯನದಿಂದ ವಿದ್ಯಾರ್ಥಿಗಳಿಗೊಂದು ಹೊಸ ಮಾನವೀಯ ಬದುಕು ಪ್ರಾಪ್ತವಾಗಬೇಕು.
- ಜಿಲ್ಲಾವಾರು ಜನಪದ ವಸ್ತುಗಳ ಸಂಗ್ರಹ, ಅಧ್ಯಯನ, ಪ್ರಯೋಜನ, ತಂತ್ರಜ್ಞಾನದ ಹಿನ್ನೆಲೆಯಲ್ಲಿ ನಡೆಯಬೇಕು.
- ಜನಪದ ನಂಬಿಕೆ, ಆಚರಣೆಗಳಿಗೆ ವೈಜ್ಞಾನಿಕ ಕಾರಣಗಳನ್ನು ಹುಡುಕಬೇಕು.
- ಆಕಾಶ ಜಾನಪದ ಕುರಿತಂತೆ ವಿಶೇಷ ಅಧ್ಯಯನ - ಮತ್ತೆ ಬರೆವೆ. ಈಗಿಷ್ಟು ಸಾಕು.

ದಿನಾಂಕ:೨೪.೧೧.೨೦೧೦

ತೌಲನಿಕ ಜಾನಪದ ಅಧ್ಯಯನಕ್ಕೆ ಆದ್ಯತೆ ಇರಲಿ.

ಕನ್ನಡ ಸಾಹಿತ್ಯದ ಅಧ್ಯಯನ – ಸೌಂದರ್ಯ ಮೀಮಾಂಸೆ

ಭಾಷಾ ವೈಜ್ಞಾನಿಕ – ಉಪಭಾಷೆಗಳ ಅಧ್ಯಯನ

ಮಾನವಶಾಸ್ತ್ರ ಅಧ್ಯಯನ – ಜಾನಪದ

ಸಮಾಜಶಾಸ್ತ್ರ ಅಧ್ಯಯನ – ಜಾನಪದ

ಇತಿಹಾಸ ಅಧ್ಯಯನ – ಜಾನಪದ

ಮನೋವಿಜ್ಞಾನ ಅಧ್ಯಯನ – ಜಾನಪದ

ಸಂಸ್ಕೃತಿ ವಿಜ್ಞಾನ (Culturology) – ಜಾನಪದ

ದೇಶ್ಯ ಮೂಲವಾದ ಜ್ಞಾನ ಸಂಪತ್ತು (School of Indigenous Knowledge) – ಇದಕ್ಕೆ ಒತ್ತು ಇರಲಿ.

ಆಹಾರ ಪದ್ಧತಿ (Food habits)

ವೈದ್ಯ ಪದ್ಧತಿ (Medicine)

ಆಟೋಟ ವಿಧಾನಗಳು (Games)

ತಂತ್ರಜ್ಞಾನ (Technology)

ಕಲೆ ಮತ್ತು ವಾಸ್ತು ಶಿಲ್ಪ (Art & Architecture)

ನಿರ್ವಹಣ ವ್ಯವಸ್ಥೆ (Management)

ಆನ್ವಯಿಕ ಜಾನಪದ (Applied Folklore) ಅಧ್ಯಯನ ವಿಶೇಷವಾಗಿ ನಡೆಯುವಂತಿರಲಿ.

- ತೊಡುಗೆ, ಪ್ರಸಾದನಗಳು (Costume)
- ಫ್ಯಾಷನ್ ವಿನ್ಯಾಸ (Fashion Design)
- ಬೋಟಿಕ್ ಕಲೆ (Botique)
- ಗಣಕ ವಿಜ್ಞಾನ ವಿಭಾಗ (Department of Computer) ಪ್ರತ್ಯೇಕ ಇರಲಿ.

- ಜನಪದ ಸಾಹಿತ್ಯ ಸಂಗತಿಗಳ ಜೊತೆಗೇ, ಭೌತಿಕ ಸಂಗತಿ ಹಾಗೂ ಜನಪದ ಆಚರಣೆಗಳ ಮೂರ್ತ ಹಾಗೂ ಅಮೂರ್ತ ಸಂಗತಿಗಳ ದಾಖಲೆಯೆಡೆ ಮುತುವರ್ಜಿ ವಹಿಸುವುದು ಹಾಗೂ ಹತ್ತು ವರ್ಷಗಳಿಗೊಮ್ಮೆ ಪುನಃ ಪುನಃ ಕ್ಷೇತ್ರಕಾರ್ಯಮಾಡಿ ಬದಲಾವಣೆಯ ಸ್ವರೂಪವನ್ನು ಅರಿಯುವ ಏರ್ಪಾಡು ಮಾಡುವುದು.

- ಜಾಗತೀಕರಣ, ಉದಾರೀಕರಣ ಹಾವಳಿಯಿಂದ ತಪ್ಪಿಸಿಕೊಂಡು ದೇಸಿನೆಲೆಯಲ್ಲಿ ತನ್ನತನವನ್ನು ಉಳಿಸಿಕೊಳ್ಳಲು ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಲು, ನಮ್ಮ ಅಭಿಜಾತ ಸಾಹಿತ್ಯ, ಕಲೆ, ವಿಜ್ಞಾನಗಳ ತಳಪಾಯ ಭದ್ರತೆಗೆ ಜಾನಪದವನ್ನು ಹೇಗೆ ಅರ್ಥಪೂರ್ಣವಾಗಿ ಬಳಸಬಹುದೆನ್ನುವುದನ್ನು ಅರಿತುಕೊಳ್ಳಲು ಹಾಗೂ ನಮ್ಮ ರಾಷ್ಟ್ರೀಯ ಪ್ರಜ್ಞೆಯ ಜಾಗೃತಿಗೆ, ಸಾಂಸ್ಕೃತಿಕ ಪುನರುತ್ಥಾನಕ್ಕೆ ಜಾನಪದ ಬಳಕೆಯ ಸಾಧ್ಯತೆಯ ನೆಲೆಗಳನ್ನು ಕಂಡುಕೊಳ್ಳಲು ಜಾನಪದ ವಿಶ್ವವಿದ್ಯಾನಿಲಯ ಜಾನಪದ ಚಿಂತಕರ ಸಮಾವೇಶವನ್ನು ಕರೆದು ಮಾರ್ಗದರ್ಶಿಸೂತ್ರವನ್ನು ರಚಿಸುವುದು.

- ಜಾನಪದವನ್ನು ಸೈದ್ಧಾಂತಿಕವಾಗಿ ಜಾಗತಿಕ ನೆಲೆಯಲ್ಲಿ ಪ್ರತಿಷ್ಠಾಪಿಸುವ ಹೇತುವಿನಿಂದ ಜಾನಪದ ವಿಶ್ವವಿದ್ಯಾನಿಲಯ, ವಿದೇಶಿ ಸಿದ್ಧಾಂತಗಳನ್ನು ಅನಾಮತ್ತಾಗಿ ಸ್ವೀಕರಿಸದೆ ನಮ್ಮ ದೇಶೀಯ ವಾತಾವರಣಕ್ಕೆ ಅವು ಚೆನ್ನಾಗಿ ಅಳವಡುವಂತೆ ತೂಗಿ, ಅಳೆದು ಅಲ್ಲಿ ನಮ್ಮತನದ ಛಾಪು ಒತ್ತಿ, ನಮ್ಮ ಸಿದ್ಧಾಂತಗಳನ್ನು ರೂಪಿಸಿ ಅವುಗಳು ಇತರರಿಗೂ ಮಾದರಿಯಾಗುವಂತೆ ಆಚರಣೆಗೆ ತರಲು ಮುಂದಾಗುವುದು.

- ಜಾನಪದ ವಿಶ್ವವಿದ್ಯಾನಿಲಯ ಜಾನಪದವನ್ನು ಮಹಿಳಾವಾದಿ ನೆಲೆಯಲ್ಲಿ ನೋಡುವ, ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಅಭ್ಯಸಿಸುವ, ಅನ್ವಯಿಕ ದೃಷ್ಟಿಯಿಂದ ವಿಶ್ಲೇಷಿಸುವ, ಬಂಡಾಯ ನೆಲೆಗಳನ್ನು ಗುರುತಿಸುವ, ವಿಶ್ವ ಜಾನಪದಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನೂ ನೀಡುವ ಸ್ವೋಪಜ್ಞ ನೆಲೆಯನ್ನು ಕಂಡುಕೊಳ್ಳುವುದು.

- ಸಸ್ಯ, ಪ್ರಾಣಿ, ಮನುಷ್ಯ ಇವುಗಳ ಅಂತರ್ ಸಂಬಂಧವೃದ್ಧಿಗೆ ಅನುಕೂಲ ಕಲ್ಪಿಸುವ ಜೀವಕೇಂದ್ರಿತ ತತ್ವವನ್ನು ಪಾಲಿಸಿಕೊಂಡು ಬರುವಲ್ಲಿ ಜಾನಪದ ವಿಶ್ವವಿದ್ಯಾನಿಲಯ ಮುಂಚೂಣಿಯಲ್ಲಿ ನಿಲ್ಲಬೇಕು.

- ಮಂಡ್ಯ ಪಿ ಇ ಎಸ್ ಶಿಕ್ಷಣ ಸಂಸ್ಥೆಯಲ್ಲಿ ಕಳೆದ ೨೦ ವರ್ಷಗಳಿಂದ ಸ್ವತಂತ್ರ ಜಾನಪದ ಅಧ್ಯಯನ ವಿಭಾಗವಿದೆ.
- ಪ್ರದರ್ಶನಾತ್ಮಕ ಕಲೆಗಳ ಕಲಿಕೆಗಾಗಿ ಮಂಡ್ಯದ ಕೀಲಾರದಲ್ಲಿ ಒಂದು ವಿಶೇಷ ಕಲಿಕಾ ಕೇಂದ್ರ ಇದೆ.

ಜಾನಪದ ವಾಸ್ತವವಾಗಿ ಏಕ ವಿಷಯಕದ ಜ್ಞಾನಕ್ಷೇತ್ರವಲ್ಲ. ಮಾನವನ ಸಮಸ್ತ ಚಟುವಟಿಕೆಗಳನ್ನು ಒಳಗೊಳ್ಳುವ ದೇಸೀ ಜ್ಞಾನಪರಂಪರೆ. ಸಂಗೀತ, ಕುಣಿತ, ಸಾಹಿತ್ಯ, ವೈದ್ಯ, ಕ್ರೀಡೆ –ಇತ್ಯಾದಿ ಎಲ್ಲವೂ ಸಮಾವೇಶಗೊಂಡಿವೆ.

ಕಲೆಗಳು–ಕಲಾವಿದರ ಸಂರಕ್ಷಣೆ ದೃಷ್ಟಿಯಿಂದ ಜಾನಪದ ಮತ್ತು ಜನಪದ ಕಲೆಗಳ ವಿಶ್ವವಿದ್ಯಾನಿಲಯ ಎನ್ನಬಹುದು.

ಜಾನಪದ ಮತ್ತು ಜನಪದ ಜೀವನ (Folklore and Folklife) ಕ್ಕೆ ಪ್ರತ್ಯೇಕ ಗುರುತು (Entity) ಇಲ್ಲದಿರುವುದರಿಂದ ಹಾಗೆ ಕರೆಯುವುದು ಉಚಿತವಲ್ಲ.

ಕಲಿಕೆಯ ದೃಷ್ಟಿಯಿಂದ –ಇವತ್ತಿನ ಅಗತ್ಯಕ್ಕೆ ತಕ್ಕಂತೆ – ಕಲೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಬಹುದು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಕಲೆಗಳನ್ನು ಕನ್ನಡಿಗರಿಗೆ ಪರಿಚಯಿಸಬಹುದು. ದೇಸಿ ಕಲೆಗಳನ್ನು ವಿನಿಮಯ ಮಾಡಿಕೊಳ್ಳಬಹುದು.

ಬಯಲು ರಂಗಭೂಮಿ – Epic Theatre – 'ಕಲಾ ಗ್ರಾಮ' ಸೃಷ್ಟಿ ಮಾಡಬಹುದು. ಭಾರತದ ಎಲ್ಲ ಕಲೆಗಳನ್ನು ಪರಿಚಯಿಸಬಹುದು. ಇದರ ಮೂಲಕ ಭಾರತದ ಭಾವೈಕ್ಯತೆಯನ್ನು ಸೃಷ್ಟಿಸಬಹುದು; ಸಾಧಿಸಬಹುದು. ಆ ಮೂಲಕ ಇಡೀ ದೇಶದ ಸಂಸ್ಕೃತಿಯನ್ನು ಬಿಂಬಿಸಬಹುದು.

ಭಾರತೀಯ ಪ್ರಾಚ್ಯ ಶಾಸನ ಸರ್ವೇಕ್ಷಣ ಇಲಾಖೆ, ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣ ಇಲಾಖೆಯವರು ಸರ್ವೇಕ್ಷಣೆ ನಡೆಸಿರುವಂತೆ ಜಾನಪದ ಸರ್ವೇಕ್ಷಣ ಕಾರ್ಯ ನಡೆಸಬೇಕು. ಜಾನಪದದ ಎಲ್ಲ ಬಗೆ (item) ಗಳನ್ನು ದಾಖಲಿಸಿಕೊಳ್ಳಬೇಕು.

ದಿನಾಂಕ:೩೦.೦೯.೨೦೧೦

ಜನಪದ ನುಡಿಗಟ್ಟುಗಳ ಸಂಗ್ರಹ ಆಗಬೇಕು

– ಮಳಲಿ ವಸಂತಕುಮಾರ್

ಸನ್ಮಾನ್ಯರಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ನನ್ನ ನಮಸ್ಕಾರಗಳು. ತಾವು ಇರಿಸಿದ್ದ ಎರಡೂ ಪತ್ರಗಳನ್ನು ಓದಿದೆ. ಸಂತೋಷವಾಯಿತು. ಮೊದಲಿಗೆ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ ವಿಶೇಷಾಧಿಕಾರಿಯಾಗಿ ನೇಮಕಗೊಂಡ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸ್ವಯಂ ಶ್ರೇಷ್ಠ ಜಾನಪದ ವಿದ್ವಾಂಸರೂ, ಸಹೃದಯರೂ, ಸಂಸ್ಕೃತಿ ಸಂಪನ್ನರೂ ಆದ ತಾವು ಇಂತಹ ಒಂದು ಉನ್ನತ ಹುದ್ದೆಯನ್ನು ಅಲಂಕರಿಸಿದ್ದು ಔಚಿತ್ಯಪೂರ್ಣವಾಗಿದೆ. ಜಾನಪದ ವಿಶ್ವವಿದ್ಯಾನಿಲಯವನ್ನು ರೂಪಿಸುವುದು ತಮ್ಮ ಮುಂದಿರುವ ಸವಾಲಿನ ಕೆಲಸ. ಸದಾ ಕ್ರಿಯಾಶೀಲರಾದ ತಮಗೆ ಇದು ಕಷ್ಟಸಾಧ್ಯವೇನೂ ಅಲ್ಲ. ಇನ್ನು ಜಾನಪದ ವಿಶ್ವವಿದ್ಯಾನಿಲಯ ಬೆಳವಣಿಗೆ ಬಗ್ಗೆ ಸಲಹೆ ಕೇಳಿದ್ದೀರಿ. ಈಗ ಜಗತ್ತಿನಲ್ಲಿಯೇ Nordic Institute of Folklore ಒಂದು ಮಾದರಿ ಸಂಸ್ಥೆಯಾಗಿದೆ. ತಮಗೆ ತಿಳಿದಿರುವ ಹಾಗೆ ಪ್ರೊ. ಲೌರಿಹಾಂಕೊ ಅಂತಹವರು ವಿಶ್ವದ ವಿವಿಧ ದೇಶಗಳನ್ನು ಜಾನಪದದ ಶಾಸ್ತ್ರೀಯ ಅಧ್ಯಯನದ ತೆಕ್ಕೆಗೆ ಅಳವಡಿಸುವ ಪ್ರಯತ್ನ ಮಾಡಿದ್ದಾರೆ.

ಮುಖ್ಯವಾಗಿ ನಮ್ಮಲ್ಲಿ ಜಾನಪದ ಮಾಹಿತಿ ಸಂಗ್ರಹ ಅತ್ಯಗತ್ಯವಾಗಿ ಆಗಬೇಕಾಗಿದೆ. ಇದು ಪೂರ್ಣಪ್ರಮಾಣದ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ಜನಪದ ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಕಾರಗಳ ವಿಷಯ ಸಂಗ್ರಹ ವ್ಯಾಪಕ ಪ್ರಮಾಣದಲ್ಲಿ ಆಗಬೇಕಾಗಿದೆ. ಜಾನಪದ ಎಂ.ಎ. ಅಥವಾ ಕನ್ನಡ ಎಂ.ಎ. ಹಾಗೂ ಮಾನವಿಕ ಎಂ.ಎ. ಮಾಡಿದ ವ್ಯಕ್ತಿಗಳನ್ನು ರಾಜ್ಯಾದ್ಯಂತ ಸಂಗ್ರಹಣೆಯ ಕ್ಷೇತ್ರಕಾರ್ಯಕ್ಕೆ ನಿಯೋಜಿಸಬಹುದಾಗಿದೆ. ಅನಂತರ ದೊರೆತ ವಿಷಯಗಳ ಸಂಪಾದನೆ, ಸಂಶೋಧನೆ ಮತ್ತು ವೈಜ್ಞಾನಿಕ ವಿಶ್ಲೇಷಣೆಯ ಕಾರ್ಯವನ್ನು ಕೈಗೊಳ್ಳಬಹುದು.

- Central University Act ಹಾಗೂ State University Act – ಎರಡನ್ನೂ ಅಭ್ಯಸಿಸಬೇಕು. ದಾಖಲೆಗಾಗಿಯಾದರೂ ಮಾರ್ಗದರ್ಶಿಯಾಗಿ ಇಟ್ಟುಕೊಂಡು ವಿಧೇಯಕ ರಚನೆ ಮಾಡಬೇಕು.

ವಿಶ್ವವಿದ್ಯಾನಿಲಯಕ್ಕೆ ಸ್ಥಿರ ಮತ್ತು ಚರಾಸ್ತಿಗಳು (Assets) ಇರಬೇಕು.

- ಗ್ರಂಥಾಲಯ (Library)
- ಕಟ್ಟಡ (Building)
- ಸಿಬ್ಬಂದಿ (Statff)
- ಭೂಮಿ (Land)

೧೨B ಯಲ್ಲಿ ಪರಿಗಣನೆ ಮಾಡಲು ಇವುಗಳೆಲ್ಲಾ ಬೇಕೇ ಬೇಕು.

ಯುಜಿಸಿಯಿಂದ ಅನುದಾನ ಪಡೆಯಲು (ಅಧ್ಯಾಪಕರು) ೭೫ಕ್ಕಿಂತ ಹೆಚ್ಚಿದ್ದರೆ Unassigned Grants ಕನಿಷ್ಠ ೧೦ ಲಕ್ಷ ದೊರಕುವುದು. ಅಭಿವೃದ್ಧಿ ಅನುದಾನ (Development Grant) ಪ್ರತ್ಯೇಕ.

ವಿಶ್ವವಿದ್ಯಾನಿಲಯದ ರೂಪುರೇಷೆ ಸಿದ್ಧಪಡಿಸುವಾಗ ಪರಿನಿಯಮಗಳನ್ನು ರೂಪಿಸುವುದರೊಂದಿಗೆ ಆರ್ಥಿಕ ತೊಡಕುಗಳು (Financial implications) ಏನು, ಎಷ್ಟು ಎಂಬುದನ್ನು ಪರಿಶೀಲನೆ (workout) ಮಾಡಬೇಕು.

Recurring – Non recurring ಹಾಗೂ Plan – Non plan ಸ್ಪಷ್ಟವಾಗಬೇಕು.

ದಿನಾಂಕ: ೨೩.೧೦.೨೦೧೦

ಜಾನಪದ ವಿಶ್ವವಿದ್ಯಾನಿಲಯ : ನನ್ನ ಕನಸು

– ಎ.ವಿ. ನಾವಡ

ಬೇಗನೇ ಸಾಕಾರಗೊಳ್ಳಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯವು ಏಕಕಾಲಕ್ಕೆ ಸ್ಥಳೀಯವೂ ವಿಶ್ವಾತ್ಮಕವೂ ಆಗಬೇಕಾಗಿದೆ. ಜಾನಪದ ಎನ್ನುವುದು ಮಾನವ ಕಟ್ಟಿದ ವಸ್ತು ಸಂಸ್ಕೃತಿ, ಮೌಖಿಕ ಪರಂಪರೆ ಹಾಗೂ ಪಾರಂಪರಿಕ ನಡೆವಳಿಗಳನ್ನು ನೆಲಸಿದ ಕಾಲದ ಸಂದರ್ಭದಲ್ಲಿಟ್ಟು ಪರಿಶೀಲಿಸುವ ಶಾಸ್ತ್ರವೂ ಹೌದು. ಔಪಚಾರಿಕ ನೆಲೆಯಲ್ಲಿ ರೂಪುಗೊಂಡ/ ರೂಪುಗೊಳ್ಳುತ್ತಲೇ ಇರುವ ಜಾನಪದವನ್ನು ಒಂದು ಬಗೆಯ ಅಕೆಡೆಮಿಕ್ ಶಿಸ್ತಿಗೆ ಅಳವಡಿಸಿ ಆ ಶಾಸ್ತ್ರವನ್ನು, ಜ್ಞಾನಪರಂಪರೆಯನ್ನು ಮರುಪರಿಶೀಲಿಸುವ ಹಾಗೂ ಅದನ್ನು ಹುಟ್ಟು ಹಾಕುವ ಹುಟ್ಟುಗಾರರ ಬದುಕನ್ನು ಅರ್ಥೈಸುವ, ಜೊತೆಗೆ ಉತ್ತರಿಸುವ ಕೆಲಸವೂ ಆಗಬೇಕಾಗಿದೆ. ಜಾನಪದದ ಉತ್ಪಾದಕರನ್ನು ಮಾಹಿತಿದಾರರೆಂದೋ, ವಕ್ತೃಗಳೆಂದೋ ಪರಿಗಣಿಸಿ, ದೂರದಲ್ಲಿರಿಸಿ ನೋಡುವ ಅಧಿಕಾರೀಯ ಮನೋಧರ್ಮವನ್ನು ಕೈಬಿಟ್ಟು ಅವರನ್ನು ಸಹ ಸಂಶೋಧಕರೆಂದೂ, ಸೃಜನಶೀಲ ಕುಶಲಿಗಳೆಂದೂ ಪರಿಗಣಿಸುವ ಕಾಲ ಬರಬೇಕಾಗಿದೆ. ಅಕ್ಷರ ಸಾಹಿತಿಗಳು ತಮ್ಮ ರಚನೆಗಳಿಗೆ ಪಡೆಯುವ 'ಸ್ವಾಮ್ಯ' ವನ್ನು ಇವರು ಪಡೆವ ದಿನ ವಿಶ್ವವಿದ್ಯಾನಿಲಯದ ಪ್ರಯತ್ನದ ಫಲವಾಗಬೇಕು. ಜಾನಪದ ಸಂಪನ್ನಿಗರ ಬದುಕಿನ ಧಾರಣ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನ ವಿಶ್ವವಿದ್ಯಾನಿಲಯದಿಂದ ಆಗಬೇಕಾಗಿದೆ. ಜೊತೆಗೆ ಅವರ ಕೌಶಲವನ್ನು ಜಾತಿಯ ಕಟ್ಟಿಗೆ ಸೀಮಿತಗೊಳಿಸದೆ ತರಬೇತಿಯ ಮೂಲಕ ನಿರ್ಜಾತೀಕರಣ ಪ್ರಕ್ರಿಯೆಗೆ ಒಳಪಡಿಸುವ ಪ್ರಯತ್ನ ನಡೆಯಬೇಕು.

- ನಿಯೋಜಿತ ವಿಶ್ವವಿದ್ಯಾನಿಲಯ ಇತರೆ ಮಾಮೂಲಿ ವಿಶ್ವವಿದ್ಯಾನಿಲಯದಂತೆ ಒಂದು ಕೇಂದ್ರ ಸ್ಥಾನವನ್ನು ಹೊಂದಿದ್ದು ಅಲ್ಲಿ ಆಡಳಿತ ಪ್ರಮುಖರು, ಸಿಬ್ಬಂದಿಗಳು, ಪ್ರಾಧ್ಯಾಪಕರು ನೆಲೆಗೊಂಡು ರಾಜ್ಯಾದ್ಯಂತ ಹಬ್ಬಿಕೊಂಡಿರುವ ಕಲಾವಿದರನ್ನು, ಕಲಾಕುಶಲಿಗಳನ್ನು, ಜನಪದ ವೃತ್ತಿ ಪರಿಣತರನ್ನು ದೂರನಿಯಂತ್ರಣಕ್ಕೊಳಪಡಿಸುವ ವ್ಯವಸ್ಥೆ

ಆಡಳಿತ ನಿರ್ವಹಣೆ ಮಾಡುವಾಗ ಹೊಸ ಮಾದರಿಯನ್ನು ರೂಪಿಸಬೇಕಾಗುತ್ತದೆ. ನಮ್ಮದು ಬಹುಸಂಸ್ಕೃತಿ(Multiculture)ಗಳ ನಾಡು. ಆದುದರಿಂದ ನಾಲ್ಕೂ ವಿಭಾಗಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದು ಯುಕ್ತ. ಆ ಕೇಂದ್ರಗಳು ಕೇಂದ್ರ ಆಡಳಿತ ಕಛೇರಿಯ ನಿಯಂತ್ರಣದಲ್ಲಿ ಇರತಕ್ಕದ್ದು.

ಆರ್ಥಿಕ ಹೊರೆ ತಪ್ಪಿಸಿಕೊಳ್ಳಲು, ಆಡಳಿತ ನಿರ್ವಹಣೆಯ ತೊಡಕುಗಳನ್ನು ನಿವಾರಿಸಿಕೊಳ್ಳಲು Management Expert ಗಳ ಸಲಹೆ ಪಡೆಯುವುದು.

ಪ್ರಥಮವಾಗಿ ಧ್ಯೇಯೋದ್ದೇಶಗಳನ್ನು ಪಟ್ಟಿ ಮಾಡುವುದು. ಒಂದೇ ಕೇಂದ್ರದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸದೆ ನಾಲ್ಕೂ ವಿಭಾಗಗಳಲ್ಲಿ ತೆರೆದಿದ್ದೇ ಆದರೆ ಹಲವು ಅಧ್ಯಯನಗಳ ದೊಡ್ಡ ಜಾಲವನ್ನೇ ನಿರ್ಮಿಸಬಹುದು. ವರದಿ – ವ್ಯಾಪಕ ಸ್ವರೂಪದ್ದು ಹಾಗೂ ಧೋರಣಾತ್ಮಕ (Comprehensive and Perspective) ಆಗಿರಬೇಕು.

- ಪರಂಪರಾ ಜ್ಞಾನ ಶಿಸ್ತುಗಳು (Schools of Traditional Knowledge)
- ಕೃಷಿ, ತಂತ್ರಜ್ಞಾನ (ದೇಸಿ)
- ಜಲ ನಿರ್ವಹಣ ವ್ಯವಸ್ಥೆ (Water Management)
- ಸಾಮಾಜಿಕ ಸಮಸ್ಯೆಗಳ ನಿರ್ವಹಣೆ
- ರಾಷ್ಟ್ರೀಯ – ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ದೂರ ಮಾಡಿಕೊಳ್ಳಲು ಒಂದು ಅಂತಾರಾಷ್ಟ್ರೀಯ ಅಧ್ಯಯನ ಕೇಂದ್ರ ಸ್ಥಾಪಿಸುವುದು ಅಗತ್ಯ.

  ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಹಂಗಾಮಿ (adhoc) ಆಗಿರಬಾರದು. ಅಸ್ತಿತ್ವವೇ ಇರುವುದಿಲ್ಲ. ಪ್ರಸಾರಾಂಗದ ಸ್ವರೂಪವನ್ನು ಸ್ಪಷ್ಟವಾಗಿ ಹೇಳಬೇಕು. ಅಲ್ಲಿಯ ಉದ್ಯೋಗಿಗಳ ಸೇವಾ ವಿವರ – ನಿಯಮಗಳು ಸ್ಪಷ್ಟವಾಗಿರಬೇಕು. ಸಹಾಯಕ ನಿರ್ದೇಶಕ, ಉಪ ನಿರ್ದೇಶಕ, ನಿರ್ದೇಶಕ ಹುದ್ದೆಗಳು ಇರಬೇಕು. ಅದು ಒಂದು ಘಟಕ (Unit) ಆಗಿ ರೂಪುಗೊಳ್ಳಬೇಕು.
- Electronic Media ಹಾಗೂ Print Media – ಇವುಗಳಿಗೆ ಬೇರೆ ಬೇರೆ ಸಹಾಯಕ ನಿರ್ದೇಶಕರು ಇತ್ಯಾದಿ ಇರಬೇಕು.
- Production Unit ಹಾಗೂ Marketing Unit - ಈ ಎರಡೂ ಬೇರೆ ಬೇರೆ ಇರಬೇಕು.

ಕೃಷಿ ಸಲಕರಣೆಗಳ ಉತ್ಪಾದನೆ, ಗ್ರಾಮೀಣ ಅಡುಗೆ, ತಿಂಡಿ ತಿನಿಸುಗಳ ತಯಾರಿ, ಗ್ರಾಮೀಣ ಆಟೋಟಗಳ ತರಬೇತಿ ವ್ಯವಸ್ಥೆ, ಪ್ರದರ್ಶನ ಕಲೆಗಳು ಎಲ್ಲವೂ ಅಲ್ಲಿ ಜೀವಂತವಾಗಿರಬೇಕು, ಚಲನಶೀಲವಾಗಿರಬೇಕು. ಅದರೊಳಗೆ ಕಾರ್ಯನಿರತರಾಗಿರುವವರಿಗೆ ಉತ್ಪಾದನೆಗೆ ಬೇಕಾದ ಸವಲತ್ತುಗಳು, ಮೂಲ ಸಾಮಗ್ರಿಗಳು, ಮೂಲಭೂತ ಸೌಲಭ್ಯಗಳನ್ನು ವಿಶ್ವವಿದ್ಯಾನಿಲಯ ಒದಗಿಸಬೇಕು. ಅವರು ಉತ್ಪಾದಿಸಿದ ಸರಕುಗಳಿಗೆ ಮಾರುಕಟ್ಟೆಯನ್ನು ವಿಶ್ವವಿದ್ಯಾನಿಲಯ ಕಂಡುಕೊಳ್ಳಬೇಕು (ಮಂಗಳೂರಿನ ಅರೆಸರಕಾರಿ ಸಂಸ್ಥೆ ನಿರ್ಮಿಸಿದ 'ಪಿಲಿಕುಳ' ಸಾಂಸ್ಕೃತಿಕ ಕೇಂದ್ರ ಇದಕ್ಕೊಂದು ಮಾದರಿ).

- ವಿಶ್ವವಿದ್ಯಾನಿಲಯ ಪೂರ್ಣಪ್ರಮಾಣದಲ್ಲಿ ಕಾರ್ಯವೆಸಗುವ ಮುನ್ನ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗ ಹಾಗೂ ಪರಿಣತ ತಂಡವೊಂದು ವೈಜ್ಞಾನಿಕವಾಗಿ ಜಾನಪದ ಅಧ್ಯಯನ, ಪ್ರಸರಣಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಫಿನ್ಲೆಂಡಿನ ತುರ್ಕು ವಿಶ್ವವಿದ್ಯಾನಿಲಯ, ಫಿನ್ನಿಶ್ ಲಿಟರರಿ ಸೊಸೈಟಿ, ಭಾರತದ ಪೂರ್ವ ರಾಜ್ಯಗಳಲ್ಲಿನ ಬುಡಕಟ್ಟು ಅಧ್ಯಯನ ಕೇಂದ್ರವನ್ನು ಸಂದರ್ಶಿಸಿ ಅಲ್ಲಿನ ಚಟುವಟಿಕೆಗಳನ್ನು ಗಮನಿಸುವುದು ಅವಶ್ಯ.
- ವಿಶ್ವವಿದ್ಯಾನಿಲಯದ ಮೂಲಕ ಇಡಿಯ ಕರ್ನಾಟಕದ ಜನಪದ ಕಲೆಗಳ, ಆಚರಣೆಗಳ, ರಂಗಭೂಮಿಯ ಸರ್ವೇಕ್ಷಣೆ ನಡೆಸಿ ಜಿಲ್ಲಾವಾರು ಸಂಪುಟಗಳನ್ನು ಪ್ರಕಟಿಸಬಹುದು.
- ವಿವಿಧ ಬುಡಕಟ್ಟುಗಳನ್ನು (ಪ್ರಾತಿನಿಧಿಕವಾಗಿ) ಗುರುತಿಸಿ ಒಂದೊಂದು ಬುಡಕಟ್ಟಿನ ವಸತಿ, ಜೀವನ ವಿಧಾನವನ್ನು ಪ್ರತಿನಿಧಿಸುವ 'ಹಾಡಿ' ಗಳನ್ನು ವಿಶ್ವವಿದ್ಯಾನಿಲಯದ ಕೇಂದ್ರೀಯ ಸ್ಥಾನದಲ್ಲಿ ರೂಪಿಸಬೇಕು. ಅಲ್ಲಿ ಅವರು ತಮ್ಮ ಪಾರಂಪರಿಕ ಜೀವನ ವಿಧಾನವನ್ನು ಅನುಸರಿಸಬೇಕು. ಕೃತಕ ಸನ್ನಿವೇಶ ನಿರ್ಮಾಣವಾಗಬಾರದು. ಅಲ್ಲಿನ ವಾಸಿಗಳ ಬದುಕಿಗೆ ಬೇಕಾದ ಆಸರೆಯನ್ನು ವಿಶ್ವವಿದ್ಯಾನಿಲಯ ಒದಗಿಸಬೇಕು.
- ಪ್ರತಿಜಿಲ್ಲೆಗಳೂ ಗ್ರಾಮೀಣ ಪರಿಸರದ ಆಯ್ದ ಶಾಲೆಗಳಲ್ಲಿ ಜನಪದ ಆಟಗಳನ್ನು ಪ್ರೋತ್ಸಾಹಿಸುವುದಕ್ಕೆ ಸೂಕ್ತ ಏರ್ಪಾಟು ಮಾಡಬೇಕು. ಇಂತಹ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಿ ಅಂತರ್ ವಲಯ ಸ್ಪರ್ಧೆಯನ್ನು ಏರ್ಪಡಿಸಬೇಕು.

- ಗಿಡ ಮೂಲಿಕೆಗಳ ಅಧ್ಯಯನಕ್ಕೆ ವಿಶೇಷ ಲಕ್ಷ್ಯ ಕೊಡುವುದು ಯುಕ್ತ.
- ಕರ್ನಾಟಕ ಸಂಸ್ಕೃತಿ ಅಧ್ಯಯನ ನಡೆಸುವುದರಿಂದ ಕನ್ನಡ ಎಂ.ಎ. ಶಿಕ್ಷಣವೂ ಇದ್ದರೆ ತೊಂದರೆಯಿಲ್ಲ.

ದಿನಾಂಕ:೦೨.೧೧.೨೦೧೦

ಜಾನಪದ ವಿಶ್ವವಿದ್ಯಾನಿಲಯ ಅಗತ್ಯ ಏಕೆ ?

– ವೀರಣ್ಣ ದಂಡೆ

ಜಾನಪದ ಶಾಸ್ತ್ರ ಅಭ್ಯಾಸದ ಕ್ರಮೇಣ ಬೆಳವಣಿಗೆ:

ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ (೧೯೪೯) ಹೊಸದರಲ್ಲಿಯೇ ಡಾ. ಬಿ.ಎಸ್. ಗದ್ದಗಿಮಠ ಅವರಿಗೆ ಪಿಎಚ್.ಡಿ. ಸಂಶೋಧನೆಗೆ ಜನಪದ ಸಾಹಿತ್ಯದ ವಿಷಯವೊಂದನ್ನು ***(ಜಾನಪದ ಗೀತೆಗಳು)*** ಆರಿಸಿಕೊಳ್ಳುವ ಅವಕಾಶ ಕೊಟ್ಟದ್ದೇ ವಿಶ್ವವಿದ್ಯಾಲಯದ ಮಟ್ಟದಲ್ಲಿ ಜಾನಪದ ಶಾಸ್ತ್ರದ ಅಭ್ಯಾಸಕ್ಕೆ ನಾಂದಿಹಾಡಿದಂತಾಗಿದೆ. ಇದು ನಡೆದದ್ದು ಬಹುಶಃ ೧೯೫೧-೫೨ ಇರಬೇಕು ಎಂದು ಅಂದಾಜಿಸಬಹುದು. ಏಕೆಂದರೆ ೧೯೫೪ರಲ್ಲಿಯೇ ಅವರಿಗೆ ಪಿಎಚ್.ಡಿ. ಪದವಿ ದೊರೆತಿದೆ.

ನಂತರ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಎಂ.ಎ. ಪಠ್ಯಗಳಲ್ಲಿ ಜನಪದ ಸಾಹಿತ್ಯದ ನೂರಂಕಿನ ಒಂದು ಪತ್ರಿಕೆಯನ್ನು ಸೇರಿಸಿದ್ದೇ ಜಾನಪದ ಶಾಸ್ತ್ರದ ಅಧ್ಯಯನಕ್ಕೆ ಅಧಿಕೃತ ನಾಂದಿಯಾಯಿತು. ಮುಂದೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಜಾನಪದ ಶಾಸ್ತ್ರದ ಪ್ರತ್ಯೇಕ ವಿಭಾಗಗಳೂ ಪ್ರಾರಂಭವಾದವು.

೧೯೬೭ ರಲ್ಲಿ ತರೀಕೆರೆಯಲ್ಲಿ ಗೊ.ರು. ಚನ್ನಬಸಪ್ಪ ಮತ್ತವರ ಸ್ನೇಹಿತರ ಪ್ರಯತ್ನದಿಂದ ಬಹುದೊಡ್ಡ ಪ್ರಮಾಣದಲ್ಲಿ ಜಾನಪದ ಸಮಾವೇಶ ನಡೆಯಿತು. ಅದರ ಅಂಗವಾಗಿ ಕಲಾಮೇಳಗಳು, ವಿಚಾರ ಸಂಕಿರಣಗಳು ನಡೆದವು. ಸಾವಿರ ಪುಟಕ್ಕೂ ಹೆಚ್ಚಿನ ಒಂದು ದೊಡ್ಡ ಸ್ಮರಣಗ್ರಂಥ **'ಹೊನ್ನ ಬಿತ್ತೇವು ಹೊಲಕ್ಕೆಲ್ಲ'** ಪ್ರಕಟವಾಯಿತು. ಜಿ. ನಾರಾಯಣ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ೧೯೭೬ರಲ್ಲಿ, ಇಡೀ ಕರ್ನಾಟಕದ ತುಂಬ ಇರುವ ಜನಪದ ಕಲೆಗಳನ್ನು ಗುರುತಿಸುವ, ಕಲಾಪ್ರದರ್ಶನಗಳನ್ನು ಏರ್ಪಡಿಸುವ ಪ್ರಯತ್ನಗಳು ನಡೆದವು. ಅದರ ಫಲವಾಗಿ ***'ಕರ್ನಾಟಕ ಜನಪದ ಕಲೆಗಳು' (೧೯೭೭)*** ಎಂಬ

- ಅಡುಗೆ ವಿಷಯದಲ್ಲಿ ಆಳವಾದ ಅಧ್ಯಯನ ನಡೆಯಬೇಕು. ಬೇರಕೆಸೊಪ್ಪು ವೈದ್ಯದ ಹಿನ್ನೆಲೆಯಲ್ಲಿ ಪರಿಶೀಲನೆಗೆ ಗುರಿಯಾಗಬೇಕು. ವಿಶ್ವವಿದ್ಯಾನಿಲಯದ ಕಟ್ಟಡಗಳು ರಕ್ಷಣ ದೃಷ್ಟಿಯಿಂದಾದರೆ ಸಾಕು. ಹಳ್ಳಿಗಳ ತರಹ ಮನೆಗಳಿದ್ದರೆ ಸಾಕು. ಬಯಲು ಇರಬೇಕು. ಕಲಾವಿದರಿಗೆ ತರಪೇತಿ ಕೊಡಲು ಪ್ರಯೋಗ ಆಗಬೇಕು. ಕಲಾವಿದರು ಎಲ್ಲ ರೀತಿಯಲ್ಲೂ ಸಜ್ಜಾಗಿ ಬಂದು ಪ್ರದರ್ಶನ ನೀಡುವಂತಾಗಬೇಕು.
- ಕಲಾ ಪ್ರದರ್ಶನ ನೀಡುವಾಗ ಚಂದ್ರಾಕಾರವಾಗಿ ಬಳಸಬೇಕೆ? ಚಚ್ಚೌಕಾಕಾರವಾಗಿ ಬಳಸಬೇಕೆ? ತ್ರಿಕೋನಾಕಾರವಾಗಿ ನರ್ತಿಸಬೇಕೆ? ಪ್ರಸ್ತುತಗೊಳಿಸುವಾಗ ಅರ್ಧ ಚಂದ್ರಾಕೃತಿ ಮಾಡಿಕೊಂಡು ಪ್ರದರ್ಶಿಸಬೇಕೆ?
- ಕಲಾ ಪ್ರದರ್ಶನ ನೀಡುವಾಗ ಕಲಾವಿದರು ಶ್ರೋತೃಗಳಿಗೆ ಬೆನ್ನು ತೋರಿಸಬಾರದು. ವೃತ್ತಿಪರತೆ ರೂಢಿಯಾಗಲು ಪ್ರಯೋಗ ಮಾಡೋದು ಗೊತ್ತಿರಬೇಕು. ಸ್ಟೇಜ್ ಕವರ್ ಮಾಡೋದು ಗೊತ್ತಿರಬೇಕು.
- ರಷ್ಯನ್ ಬ್ಯಾಲೆಯನ್ನು ವೃತ್ತಾಕಾರದಲ್ಲಿ ತೋರಿಸುವಂತೆ ನಮ್ಮ ಕಲಾ ಪ್ರದರ್ಶನಗಳಲ್ಲಿ ವೇದಿಕೆ ಶಿಸ್ತನ್ನು ಪಾಲಿಸುವಂತಾಗಬೇಕು.
- ಕಲಾವಿದರು ಅಪ್ಪಿ ತಪ್ಪಿ ಮೈಕ್ ಹುಡುಕಿಕೊಂಡು ಹೋಗಬಾರದು. ಡೊಳ್ಳು, ಬೀಸು ಕಂಸಾಳೆ, ಕೋಲಾಟ ಆಡುವಾಗ ಸ್ಟೇಜನ್ನು ಸರಿಯಾಗಿ ಬಳಸಿಕೊಳ್ಳುವಂತಾಗಬೇಕು. ಹಚ್ಚೆ ಹುಯ್ಯುವಾಗ ಯೋಜಿತವಾದ ರೀತಿಯಲ್ಲಿ ಹಾಡಬೇಕು. ಕಲೆ, ಕರಕುಶಲಕಲೆಗಳಲ್ಲಿ ಕನಿಷ್ಠ ಮೂರು ತಿಂಗಳ ಶಿಕ್ಷಣ ನೀಡುವುದು.
- ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಬೇಕು. ತರಪೇತಿ ನೀಡಬೇಕು. ಕರಗ, ಪೂಜಾ ಕುಣಿತ, ರಂಗದ ಕುಣಿತ – ಎಲ್ಲೆಡೆ ಕಾಣಸಿಗುತ್ತವೆ.
- ರಂಗದ ಹೆಜ್ಜೆಗಳನ್ನು (Steps) ಹೇಳಿಕೊಟ್ಟರೆ ಎಲ್ಲರೂ ಕಲಿಯುತ್ತಾರೆ.
- ಹಗಲುವೇಷದವರು ಒಂದು–ಒಂದೂವರೆ ಗಂಟೆ ಕಾರ್ಯಕ್ರಮ ಕೊಡುವಂತಾಗಬೇಕು (ಬೌದ್ಧಮತಕ್ಕೆ ಹೋದ ದಲಿತರು ಸತ್ಯನಾರಾಯಣ ಪೂಜೆ ಮಾಡುತ್ತಾರೆ).
- ಕಲಾವಿದರ ಜೀವನಕ್ಕೆ ಮಾರ್ಗ ಹುಡುಕುವುದಾದರೆ ಅವರಿಗೆ ನಿರಂತರವಾಗಿ ತರಬೇತಿ ನೀಡುವ ಏರ್ಪಾಟು ಆಗಬೇಕು. ಈ ತರಬೇತಿ ಕನಿಷ್ಠ ಒಂದು ತಿಂಗಳು / ಮೂರು ತಿಂಗಳದ್ದಾಗಬೇಕು.

ದಿನಾಂಕ : ೨೦.೧೦.೨೦೧೦

ಹಾಡುಗಳ ಶಕ್ತಿ ಕನ್ನಡಕ್ಕೆ ದೊರೆಯಿತು. ಇಷ್ಟೆಲ್ಲ ಆಗಿ ಈಗ ಜಾನಪದ ವಿಶ್ವವಿದ್ಯಾನಿಲಯದ ಅವಶ್ಯಕತೆ ಅರಿಯುವಲ್ಲಿಗೆ ಬಂದು ನಿಂತಿದ್ದೇವೆ.

ಜಾನಪದ ವಿಶ್ವವಿದ್ಯಾನಿಲಯದ ಬೇಡಿಕೆ:

ಈಗ ಇಪ್ಪತ್ತು ವರ್ಷಗಳ ಹಿಂದಿನ ಮಾತು. ಪಂಚಾಯತರಾಜ್‌ಗಳ ಹೊಸ ಆಡಳಿತವನ್ನು ಜಾರಿಗೆ ತರಲು ಕಾರಣರಾದ ಆಗಿನ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ದಿ. ನಜೀರಸಾಹೇಬರ ವಿನಂತಿಯ ಮೇರೆಗೆ, ಕನ್ನಡದ ಮೊದಲ ಜಾನಪದ ಪ್ರಾಧ್ಯಾಪಕರಾದ ಡಾ. ಜೀ. ಶಂ. ಪರಮಶಿವಯ್ಯ ಅವರು ಜಾನಪದ ಸಂಗತಿಗಳ ಸಂವರ್ಧನೆ-ಸಂರಕ್ಷಣೆ ಹೇಗೆ ಎಂಬ ವಿಚಾರಗಳನ್ನೊಳಗೊಂಡ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿ, ೧೯೮೮ ರಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಆ ಬರಹದಲ್ಲಿ ಅವರು **'ಜಾನಪದ ವಿಶ್ವವಿದ್ಯಾನಿಲಯ'** ದ ಅವಶ್ಯಕತೆಯನ್ನೂ ಮಂಡಿಸುತ್ತಾರೆ. ಆ ಸಾಲುಗಳು ಹೀಗಿವೆ:

"ಜಾನಪದ ಸಂರಕ್ಷಣೆ ದೃಷ್ಟಿಯಿಂದ, ಸಂವರ್ಧನೆಯ ದೃಷ್ಟಿಯಿಂದ ವ್ಯಾಪಕವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕಾದ ಅಗತ್ಯ ಈಗ ತುಂಬ ಇದೆ. ಜಾನಪದದಂಥ ವ್ಯಾಪಕವಾದ ಕ್ಷೇತ್ರದಲ್ಲಿ ಸರಿಯಾದ ಸಂಶೋಧನೆ, ಅಧ್ಯಯನ ನಡೆಯಬೇಕಾದ ಬೇರೆ ಬೇರೆ ಇಲಾಖೆಗಳನ್ನೊಳಗೊಂಡ ಒಂದು **ವಿಶ್ವವಿದ್ಯಾನಿಲಯವನ್ನೇ ಸ್ಥಾಪಿಸಿ,** ಪ್ರಾಚೀನ ಮೌಖಿಕ ಜ್ಞಾನದ ಪ್ರಯೋಜನವನ್ನು ಪಡೆಯಬಹುದು" (ಜೀಶಂಪ, ೧೯೮೮).

ಇಪ್ಪತ್ತು ವರ್ಷಗಳ ಹಿಂದೆ ಕಂಡ ಜೀಶಂಪ ಅವರ ಕನಸು ಹಲವು ಹಿರಿಯರ ಪ್ರಯತ್ನದಿಂದ ನನಸಾಗುವ ದಾರಿಯಲ್ಲಿದೆ ಎಂಬುದು ಸಂತೋಷದ ಸಂಗತಿ.

ಲಿಖಿತ ಮೂಲದ ಶಿಸ್ತುಗಳ ಅಧ್ಯಯನದ ವಿಶ್ವವಿದ್ಯಾನಿಲಯಗಳು:

ಲಿಖಿತ ಮೂಲದ ಶಿಸ್ತುಗಳನ್ನೊಳಗೊಂಡ ಈಗಿನ ವಿಶ್ವವಿದ್ಯಾನಿಲಯಗಳು ಕೊಡುವ ಶಿಕ್ಷಣವು-ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಸಶಕ್ತವಾಗಿರುವ ಸಮುದಾಯಗಳು ಶಿಕ್ಷಣ ಪಡೆಯಲು ಹೆಚ್ಚು ಅನುಕೂಲಗಳನ್ನು ಒದಗಿಸುತ್ತ ಬಂದಿವೆ. ಹಾಗೆ ಸಶಕ್ತವಾಗಿರುವ ಸಮೂಹದಲ್ಲೂ ವಿಶೇಷವಾಗಿ ಗಂಡುಮಕ್ಕಳಿಗೆ ಮಾತ್ರ ಅವು ಹೆಚ್ಚು ಅನುಕೂಲತೆಗಳನ್ನು ಒದಗಿಸಿವೆ. **'ಜಾನಪದ ವಿಶ್ವವಿದ್ಯಾನಿಲಯ'** ವು ಈ

ಕಲೆಗಳು ಬೋಧಪ್ರದವಾಗಿರುವಂತೆ ನೋಡಿಕೊಳ್ಳಬೇಕು

– ಡಿ. ಲಿಂಗಯ್ಯ

- ವಿಶ್ವವಿದ್ಯಾನಿಲಯ ಮಧ್ಯಕರ್ನಾಟಕದಲ್ಲೇ ತಲೆ ಎತ್ತಲಿ – ಎಲ್ಲರಿಗೂ ಅನುಕೂಲ. ಕೋಲಾರದಲ್ಲಿ ಅಂತರ್ಜಲವೇ ಬತ್ತಿ ಹೋಗಿದೆ. ೮೦೦ ಅಡಿ ಆಳದಲ್ಲಿ ಬೋರ್‌ವೆಲ್ ವಿಫಲ. ವಿಸ್ತಾರವಾದ ಭೂ ಪ್ರದೇಶ ಬೇಕು. ವೈದ್ಯಕೀಯ ಗಿಡಗಳನ್ನು ಬೆಳೆಸಲು ಜಾಗಬೇಕು. ಕಲೆಗಳಿಗೆ ಪ್ರಕೃತಿಯ ಹಿನ್ನೆಲೆ ಇರಬೇಕು. ಪ್ರಯೋಗ–ಪ್ರದರ್ಶನಕ್ಕೆ ಆದ್ಯತೆ ಇರಲಿ. ಕಲೆಗಳು ಹೆಚ್ಚು ಬೋಧಪ್ರದ (Educative) ಆಗಿರುವಂತೆ ನೋಡಿಕೊಳ್ಳಬೇಕು.
- ಕಲಿಸುವುದರ ಮೂಲಕವೇ ಕಲೆಗಳನ್ನು ಉಳಿಸಬೇಕು. ಆಚರಣೆಗಳು (Rituals) ಮಾರ್ಪಾಟು ಹೊಂದಿರುವುದರಿಂದ ಹಿರಿಯ ಕಲಾವಿದರನ್ನು ಬಳಸಿಕೊಂಡು ಆಡಿಯೊ ವಿಡಿಯೊ ತಂತ್ರಜ್ಞಾನದ ಮೂಲಕ ಆಸಕ್ತರಿಗೆ ಕಲಿಸುವ ಏರ್ಪಾಟು ಆಗಬೇಕು.
- ರಂಗದ ಕುಣಿತವನ್ನು ಕಲಿಸಲು (ಪ್ರಾಯೋಗಿಕವಾಗಿ) ಯತ್ನಿಸಬಹುದು. ಮೂಲ ಧಾಟಿಗೆ ವಿಶೇಷ ಪ್ರಾಶಸ್ತ್ಯ ನೀಡಬೇಕು. ಜನಪ್ರಿಯ ಸಿನಿಮಾ ಧಾಟಿ (tune)ಗಳಿಗೆ ಹೆಚ್ಚಿನ ಒಲವು ಬೇಡ. ಭರತನಾಟ್ಯ ಹೇಗೆ ಭರತನಾಟ್ಯವೇ ಆಗಿರುವುದೊ ಅಂತೆಯೇ ಜನಪದ ಕಲೆಗಳು – ಕುಣಿತಗಳು. ಕರ್ನಾಟಕ ಸಂಗೀತ ಕರ್ನಾಟಕ ಚಿತ್ರಕಲೆಗಳಿರುವಂತೆಯೇ ಕರ್ನಾಟಕದ ಜನಪದ ಕಲೆ. ಲವಲವಿಕೆಯಾಗಿ ಪ್ರದರ್ಶನಗೊಳ್ಳುವಂತೆ, ಪ್ರಸ್ತುತಪಡಿಸುವಂತೆ ವಿವಿಧ ರಾಗ ಮಟ್ಟುಗಳಲ್ಲಿ ದೀರ್ಘ ಕಥಾನಕಗಳನ್ನು ಹಾಡಲು ಉತ್ತೇಜಿಸಬೇಕು. ಆಗ ಮಾತ್ರ ಮಾದೇಶ್ವರ, ಮಂಟೇಸ್ವಾಮಿ ಕಾವ್ಯಗಳು ಎಲ್ಲರ ಸ್ಮರಣೆಯಲ್ಲೂ ಉಳಿಯಲು ಸಾಧ್ಯ. ರಾಗಿಕಲ್ಲು – ಪುನರ್‌ಸೃಷ್ಟಿ ಕಷ್ಟ ಸಾಧ್ಯ. ಢಕ್ಕೆ ವಾದ್ಯವನ್ನು ೮–೧೦ ವಿಧ (type)ಗಳಲ್ಲಿ ನುಡಿಸಬಲ್ಲರು. ಆದರೆ ತ್ರಿಪದಿಯನ್ನು ಹೇಗೆ ಬೇಕಾದರೂ ಹಾಡಬಹುದು. ಮೂಲ ಧಾಟಿಯಲ್ಲಿ ಹಾಡುವಂತಾಗಬೇಕು.

ಬದುಕಿನ ಮೌಲ್ಯಗಳ ಸಂರಕ್ಷಣೆ:

ಇಂತಹ ಸಮಯದಲ್ಲಿ ನಮ್ಮ ಪೂರ್ವಜರ ಬದುಕಿನ ಮಾದರಿಗಳು, ಚಿಂತನೆಗಳು ನಮ್ಮ ಸಹಾಯಕ್ಕೆ ಬರುತ್ತವೆ. ಗ್ರಾಮಾಂತರ ಬದುಕಿನ ಪರಿಗಳನ್ನು ಅರಿಯುವ, ಆಯುವ ಮತ್ತು ಅಧ್ಯಯನಕ್ಕೆ ಅಳವಡಿಸುವ ಉದ್ದೇಶಗಳು ನಮಗೆ ಇಂದು ಮುಖ್ಯವೆನಿಸುತ್ತವೆ. ಭಾರತೀಯ ಸಂಸ್ಕೃತಿಯ ಅನನ್ಯತೆಯನ್ನು, ನಮ್ಮ ಪರಂಪರೆಯ ಜ್ಞಾನದ ಅರಿವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಲು, ಅವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಜಾನಪದ ಶಾಸ್ತ್ರಾಭ್ಯಾಸ ಅವಶ್ಯವೆನಿಸುತ್ತದೆ. **'ಜಾನಪದ ವಿಶ್ವವಿದ್ಯಾನಿಲಯ'** ದ ಸ್ಥಾಪನೆ ಅದಕ್ಕಾಗಿ ತುರ್ತೆನಿಸುತ್ತದೆ.

ಕೈಗಾರಿಕೆಯ ನೆಪದಲ್ಲಿ ದೇಸೀ ಉದ್ಯೋಗಗಳ ನಾಶ:

ನಾವೀಗ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಗುಂಗಿನಲ್ಲಿದ್ದೇವೆ. ಇವು ನಮ್ಮ ಬದುಕನ್ನೆಲ್ಲ ಹಾಳುಮಾಡುತ್ತಿವೆ ಎಂದು ಹಲಬುತ್ತಿದ್ದೇವೆ. ಆದರೆ ಭಾರತ ಸ್ವಾತಂತ್ರ್ಯದ ಜೊತೆಗೆ ಸೌಲಭ್ಯ ಮತ್ತು ಸುಧಾರಣೆಗಳ ಹೆಸರಿನಲ್ಲಿ ನಮ್ಮ ದೇಶಕ್ಕೆ ಕಾಲಿಟ್ಟದ್ದು ಕೈಗಾರಿಕಾ ಕ್ರಾಂತಿ ಹೆಸರಿನಲ್ಲಿ ಯಾಂತ್ರೀಕರಣ. ಯಾಂತ್ರೀಕರಣ ಪ್ರವೇಶಿಸಿ ಗ್ರಾಮೀಣ ಬದುಕಿಗೆ ಆಸರೆಯಾದ ಸ್ವಾವಲಂಬಿ ಉದ್ಯೋಗಗಳನ್ನು ಹಾಳು ಮಾಡಿತು. ಪರಾವಲಂಬಿಗಳಾಗುವಂತೆ ಮಾಡಿತು. ಇದರಿಂದಾಗಿ ನಮ್ಮ ಗ್ರಾಮಾಂತರ ಪ್ರದೇಶದ ಕಸುಬುದಾರರ, ಕುಶಲಕರ್ಮಿಗಳ ಸಂಸಾರಗಳು ದಿವಾಳಿ ಎದ್ದವು.

ಜಾನಪದ ವಿಶ್ವವಿದ್ಯಾನಿಲಯದ ಅಧ್ಯಯನ/ತರಬೇತಿ ವಿಭಾಗಗಳು ಹೇಗಿರಬೇಕು?

'ಜಾನಪದ ವಿಶ್ವವಿದ್ಯಾನಿಲಯ' ದಲ್ಲಿ ಗ್ರಾಮೀಣ ಬದುಕಿನ ಬಹುಮುಖ್ಯ ಸಂಗತಿಗಳ ಅಧ್ಯಯನ, ತರಬೇತಿ, ಕಲಿಕೆ, ಪ್ರಸಾರಗಳು ನಡೆಯುವಂತೆ ವ್ಯವಸ್ಥೆಯಾಗಬೇಕು. ಅಲ್ಲಿ ಶಿಕ್ಷಣ ಕೊಡಲು ಗ್ರಾಮೀಣ ಪ್ರತಿಭಾವಂತರಿಗೆ ನೇರವಾಗಿ ಅವಕಾಶಗಳನ್ನು ಒದಗಿಸಿಕೊಡಬೇಕು. ಆ ನಿಟ್ಟಿನಲ್ಲಿ ಇಲ್ಲಿ ಒಂದು ಸಾಮಾನ್ಯ ನೋಟಕ್ಕೆ ೪ ಭಾಗಗಳಲ್ಲಿ (ಫ್ಯಾಕಲ್ಟಿ-ನಿಕಾಯಗಳಲ್ಲಿ) ೩೧ ಅಧ್ಯಯನ/ತರಬೇತಿ ವಿಭಾಗಗಳನ್ನು ಗುರುತಿಸಿಕೊಂಡು, ಒಂದೊಂದು ವಿಭಾಗದಲ್ಲಿ ಏನೇನು ಸೇರಬೇಕು ಎಂದು ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದರಿಂದ ಜಾನಪದ ವಿಶ್ವವಿದ್ಯಾನಿಲಯದ ಒಂದು ಸಾಮಾನ್ಯ ಕಲ್ಪನೆ ಬರಲು ಸಾಧ್ಯವಾಗುತ್ತದೆ.

ಉಪಭಾಷೆಗಳ ಅಧ್ಯಯನಕ್ಕೆ ಅವಕಾಶವಿರಲಿ

– ಜಿ. ಎಚ್. ನಾಯಕ

- ಎಲ್ಲ ಸಾಧ್ಯತೆಗಳಲ್ಲಿ ಜಾನಪದವನ್ನು ಶೈಕ್ಷಣಿಕ (academic) ವಾಗಿ ಬೆಳೆಸಲು ನೋಡಬೇಕು.
- ನಿರ್ದಿಷ್ಟಗೊಳಿಸಿಕೊಂಡು ನಿರ್ದಿಷ್ಟ ಪ್ರಕಾರವನ್ನು ಅಧ್ಯಯನಕ್ಕೆ ಗುರಿ ಮಾಡಬೇಕು.
- ಕರಿ ಒಕ್ಕಲು, ಗಾಮೊಕ್ಕಲು, ಹಾಲಕ್ಕಿ, ಸಿದ್ದಿ, ಕಚ್ಚೆಗೌಳಿಗರು ಇವೇ ಮುಂತಾದ ಸಮೂಹಗಳ ಉಪಭಾಷಿಕ ಅಧ್ಯಯನಕ್ಕೆ ಆದ್ಯತೆ ಇರಲಿ.
- ವಿಶ್ವವಿದ್ಯಾನಿಲಯ ಮಧ್ಯ ಕರ್ನಾಟಕದಲ್ಲೇ ಸ್ಥಾಪನೆಯಾಗಲಿ.

ದಿನಾಂಕ:೧೪.೧೦.೨೦೧೦

೩. **ಕಂಬಾರಿಕೆ ವಿಭಾಗ :** ಕಬ್ಬಿಣದ ಕೆಲಸಗಳು ಇಲ್ಲಿ ಸೇರುತ್ತವೆ.

೪. **ಕುಂಬಾರಿಕೆ ವಿಭಾಗ :** ಮಣ್ಣನ್ನು ಬಳಸಿ ಮಾಡುವ ಕೆಲಸಗಳು ಇಲ್ಲಿ ಸೇರಬೇಕು. ಆಧುನಿಕ ಜೀವನ ಶೈಲಿಗೆ ಅನುಕೂಲಕರವಾದ ಮತ್ತು ಮನೆಯ ಅಲಂಕರಣಕ್ಕಾಗಿ ಮಣ್ಣಿನ ಪಾತ್ರೆಗಳನ್ನು ಬಳಸಬಹುದಾಗಿದೆ.

೫. **ಬಡಿಗತನ ವಿಭಾಗ :** ಕಟ್ಟಿಗೆ ಬಳಸಿ ಮಾಡುವ ಕೆಲಸಗಳು ಇಲ್ಲಿ ಸೇರಬೇಕು. ಈ ಉದ್ಯೋಗವಂತೂ ಇವತ್ತು ಭಾರೀ ಬೇಡಿಕೆಯಲ್ಲಿದೆ.

೬. **ಅಕ್ಕಸಾಲಿ ವಿಭಾಗ :** ಲೋಹದ ಕುಶಲಕರ್ಮ ಕೆಲಸಗಳು. ಇದು ಕೂಡ ಬೇಡಿಕೆಯ ಉದ್ಯೋಗವೇ ಆಗಿದೆ.

೭. **ಮೇದಾರಿಕೆ ವಿಭಾಗ :** ಬಿದಿರು ಮುಂತಾದ ಸಿಬಿಕೆಯಿಂದ ಬುಟ್ಟಿ, ಚಾಪೆ, ಮರ, ಬೀಸಣಿಕೆ ಇಂತಹ ಮನೆ ಬಳಕೆಯ ವಸ್ತುಗಳ ತಯಾರಿಕೆ ಮತ್ತು ಮಾರಾಟಗಳು ಇಲ್ಲಿ ಸೇರಬೇಕು. ಇವನ್ನು ಇವತ್ತಿಗೂ ಹೆಚ್ಚು ಪ್ರಚಾರಗೊಳಿಸಲು ಸಾಧ್ಯವಿದೆ.

೮. **ಚಮ್ಮಾರಿಕೆ ವಿಭಾಗ :** ಚರ್ಮದಿಂದ ವಸ್ತುಗಳ ತಯಾರಿಕೆ ಮತ್ತು ಮಾರಾಟ. ಇದು ಕೂಡ ಅಷ್ಟೇ ಬೇಡಿಕೆ ಇರುವ ವಿಭಾಗ.

೯. **ನೇಕಾರಿಕೆ ವಿಭಾಗ :** ಬಟ್ಟೆ, ಕಂಬಳಿಗಳನ್ನು ನೇಯುವ, ಬಣ್ಣ ಹಾಕುವ, ಮಾರಾಟದ ವ್ಯವಸ್ಥೆ ಇಲ್ಲಿ ಸೇರಬೇಕು.

೧೦. **ವೇಷ-ಭೂಷಣ ವಿಭಾಗ :** ಸಿಂಪಿಗನ ಕೆಲಸಗಳು ಇಲ್ಲಿ ಮುಖ್ಯ. ಫ್ಯಾಶನ್ ಡಿಸೈನ್ ಮತ್ತು ಹೊಲಿಗೆಗಳು- ವೇಷಭೂಷಣ, ಕೌದಿ, ಕುಂಚಿಗೆ-ಕುಲಾಯಿ ಮುಂತಾದವುಗಳ ತಯಾರಿಕೆ ಇಲ್ಲಿ ಸೇರಬೇಕು.

ನಿಕಾಯ-೨

ದೇಸೀ ವಿಜ್ಞಾನ ವಿಭಾಗಗಳು

ದೇಸೀ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ವೈದ್ಯಕೀಯ ಮತ್ತು ಆಹಾರ-ಪಾನೀಯ ಇವು ಜನಪದರ ವೈಜ್ಞಾನಿಕ ತಿಳಿವಳಿಕೆಗಳೆನಿಸುತ್ತವೆ. ಗ್ರಾಮೀಣ ಬದುಕಿನ ಅನುಭವದ ವೈಜ್ಞಾನಿಕ ಚಿಂತನೆಗಳು ಈ ವಿಷಯಗಳಲ್ಲಿ ಹುದುಗಿರುತ್ತವೆ. ಅನಾರೋಗ್ಯದಿಂದ ಕಾಪಾಡುವ ವೈದ್ಯಕೀಯದ ಅರಿವು, ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು ಹೋಗಲು ಅವಶ್ಯವಾದ ಆಹಾರ-

ಪ್ರತಿಯೊಂದಕ್ಕೂ ಆರ್ಥಿಕ ನೆರವು ನೀಡುವ ಸಂಸ್ಥೆಗಳನ್ನು (Funding Agency) ಅವಲಂಬಿಸುವುದು ಯುಕ್ತ.

ಕೈಗೊಳ್ಳಬೇಕಾದ ಯೋಜನೆಗಳು:

೧. ಗ್ರಂಥಸೂಚಿ (Bibliography) ತಯಾರಿಸುವುದು.

೨. ವಿನಿಮಯ ಕಾರ್ಯಕ್ರಮ (Exchange Programme) ನಡೆಸುವುದು. INGC, Heritage, RRC- ಉಡುಪಿ, ಧರ್ಮಸ್ಥಳ, ಜಾನಪದ ಲೋಕ, ಹೊನ್ನಾವರ ಸಂಸ್ಥೆಗಳೊಡನೆ links ಇಟ್ಟುಕೊಳ್ಳುವುದು.

೩. ವಿಶ್ವವಿದ್ಯಾನಿಲಯಗಳ ಜಾನಪದ ವಿಭಾಗಗಳೊಂದಿಗೆ ಸಂಬಂಧ ಸ್ಥಾಪಿಸುವುದು.

ಕನ್ನಡ, ಇಂಗ್ಲಿಷಿನಲ್ಲಿ ಸಿ.ಡಿ. ಮಾಡಬೇಕು. ಆಡಿಯೊ ಸಿ.ಡಿ. ಮಾಡುವುದು.

೪. ಜಾನಪದ ವಿಶ್ವವಿದ್ಯಾನಿಲಯದ Thesis ಗಳ Synopsis ಮತ್ತು Findings ಗಳನ್ನು ಮುದ್ರಿಸಿ ವಿತರಿಸಬೇಕು. ಮುಖ್ಯ ಪಠ್ಯಗಳನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿಸಬೇಕು.

ವರ್ಷಕ್ಕೊಂದು ಅಂತಾರಾಷ್ಟ್ರೀಯ ಕಮ್ಮಟ ಆಯೋಜಿಸುವುದು. ಭಾಗವಹಿಸುವವರಿಗೆ ವಾಸ್ತವ್ಯ ಮತ್ತು ಆಹಾರ ಒದಗಿಸಿದರೆ ಒಳ್ಳೆಯದು. ಕಮ್ಮಟ ಆಂಗ್ಲ ಭಾಷೆಯಲ್ಲಿ ಇದ್ದರೆ ಒಳ್ಳೆಯದು. ಪುನರುಕ್ತತೆಯನ್ನು ನಿವಾರಿಸಬೇಕು. ಬರೆಹಗಳನ್ನು ಸಂಪಾದಕ ಸಮಿತಿ ಪರಿಶೀಲನೆ (Committee Review) ಮಾಡಿದ ಅನಂತರವೇ ನಿಯತಕಾಲಿಕೆ (journal) ಗಳಲ್ಲಿ ಪ್ರಕಟಿಸಲು ಮುಂದಾಗಬೇಕು.

ದಿನಾಂಕ:೧೧.೧೦.೨೦೧೧

ಸಾಧ್ಯತೆ ಇದೆ. ಪ್ರಮುಖವಾದ ಹಾಡಿನ ಮತ್ತು ಕುಣಿತದ ಪ್ರಕಾರಗಳನ್ನು ಗುರುತಿಸಿ ಅವನ್ನು ಕಲಿಸುವ ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವೂ ಇದೆ.

ಹಾಗೆಯೇ ಪ್ರದರ್ಶನ ಕಲೆಗಳಲ್ಲಿ ಇರುವ ರಂಗ ಪ್ರಕಾರ ಮತ್ತು ಬೀದಿ ಪ್ರಕಾರಗಳನ್ನು ಇಂದು ಹೆಚ್ಚು ಪ್ರಚಾರಗೊಳಿಸಲಾಗುತ್ತಿದೆ. ಇದು ಗ್ರಾಮೀಣ ಭಾಗದ ಪ್ರತಿಭಾವಂತರಿಗೆ ಒಂದು ದೊಡ್ಡ ಅವಕಾಶ. ರಂಗ ಪ್ರಕಾರದ ಬಯಲಾಟಗಳನ್ನು, ಗೊಂಬೆಯಾಟಗಳನ್ನು ಆಧುನಿಕ ಬದುಕಿನ ಸಂಗತಿಗೆ ಒಗ್ಗಿಸಿಕೊಳ್ಳಲು ಸಾಧ್ಯವಿದೆ. ಅದಕ್ಕಾಗಿ ಮತ್ತೆ ಗ್ರಾಮೀಣ ಪ್ರತಿಭಾವಂತರಿಗೆ ಇಲ್ಲಿ ಅವಕಾಶಗಳು ದೊರೆಯುವಂತೆ ಆಗಬೇಕು.

೧. **ಚಿತ್ರಕಲಾ ವಿಭಾಗ :** ರಂಗೋಲಿ, ಹಚ್ಚೆ, ರೇಖಾಚಿತ್ರ ಕಲೆಗಳು, ಸಾಂಪ್ರದಾಯಿಕ ವಿಧಿಕ್ರಿಯಾಚರಣೆಗಳಲ್ಲಿ ಬಿಡಿಸುವ ಚಿತ್ರಗಳು–ಹೀಗೆ ಗ್ರಾಮೀಣ ಭಾಗದ ಬದುಕಿನಲ್ಲಿರುವ ಚಿತ್ರಕಲಾ ಮಾದರಿಗಳು ಇಲ್ಲಿ ಸೇರಬೇಕು.

೨. **ಸಂಗೀತ ವಿಭಾಗ:** ಹಾಡುಗಾರಿಕೆ ಮತ್ತು ವಾದ್ಯಗಾರಿಕೆಗಳು ಇಲ್ಲಿ ಸೇರಬೇಕು.

೩. **ನೃತ್ಯ–ಕುಣಿತ ವಿಭಾಗ:** ಗ್ರಾಮೀಣ ನೃತ್ಯ ಕಲೆಗಳನ್ನು ಗುರುತಿಸಿ, ಕಲಿಕೆ–ಬೋಧನೆಗಳು ಇಲ್ಲಿ ನಡೆಯಬೇಕು.

೪. **ಬಯಲಾಟ ವಿಭಾಗ:** ಉತ್ತರ ಕರ್ನಾಟಕದ ಬಯಲಾಟಗಳಾದ ದೊಡ್ಡಾಟ, ಸಣ್ಣಾಟ–ಪಾರಿಜಾತ, ಬೀದಿ ಬಯಲಾಟಗಳಲ್ಲದೆ, ದಕ್ಷಿಣ ಕರ್ನಾಟಕದ (ಹಳೆ ಮೈಸೂರು ಭಾಗದ) ಯಕ್ಷಗಾನ–ಬಯಲಾಟಗಳೂ ಇಲ್ಲಿ ಸೇರಬೇಕು. ಅಭಿನಯ, ನಿರ್ದೇಶನ, ರಂಗಪರಿಕರಗಳ ತಯಾರಿಕೆ ಇಲ್ಲಿ ಸೇರಬೇಕಾದುದು ಅವಶ್ಯ.

೫. **ಯಕ್ಷಗಾನ ವಿಭಾಗ :** ಕರಾವಳಿ ಭಾಗದ ಯಕ್ಷಗಾನ–ತಾಳಮದ್ದಳೆಗಳು ಮಾತ್ರ ಈ ವಿಭಾಗಕ್ಕೆ ಸೇರಬೇಕು. ಅಭಿನಯ, ನಿರ್ದೇಶನ, ರಂಗಪರಿಕರಗಳ ತಯಾರಿಕೆ ಇಲ್ಲಿ ಸೇರಬೇಕಾದುದು ಅವಶ್ಯ.

೬. **ಗೊಂಬೆಯಾಟಗಳ ವಿಭಾಗ :** ಎಲ್ಲ ಪ್ರಕಾರದ ಗೊಂಬೆಯಾಟಗಳೂ ಇಲ್ಲಿ ಸೇರಬೇಕು. ಗೊಂಬೆಗಳ ತಯಾರಿಕೆ ಮತ್ತು ಕಲಾ ಪ್ರದರ್ಶನಗಳೂ ಈ ಪಠ್ಯದಲ್ಲಿ ಸೇರುತ್ತವೆ.

೭. **ಪ್ರದರ್ಶನ ಕಲೆಗಳ ವಿಭಾಗ :** ಬೀದಿಯ ಮೇಲೆ ಪ್ರದರ್ಶನಗೊಳ್ಳುವ ವೃತ್ತಿ ಮತ್ತು ಹವ್ಯಾಸಿ ಕಲೆಗಳು.

ರಂಗ ಕಲೆಗಳು (Theatrical Arts), ಕುಣಿತ ಪ್ರಧಾನ ಕಲೆಗಳು (Non-Theatrical Arts), ಮೌಖಿಕ ಪರಂಪರೆ (Oral Tradition) ಮತ್ತು ಸಂಗೀತ (Music) - ಹೀಗೆ ಪ್ರತ್ಯೇಕ ನಿಕಾಯ (Faculty) ಗಳಿರಲಿ.

M.Phil , Ph.D. Courseಗಳನ್ನು ಯುಜಿಸಿ ನಿಯಮಾವಳಿಯನುಸಾರ ರೂಪಿಸಬೇಕು. ವಿದೇಶಿಯರಿಗೂ (Foreign Nationals) ಸಾದರಪಡಿಸಲು (Submission) ಅವಕಾಶವಿರಲಿ. ಮಹಾಪ್ರಬಂಧವನ್ನು ಸಾದರಪಡಿಸುವಾಗ ಮಾರ್ಗದರ್ಶಕರ (Guide) ಉಪಸ್ಥಿತಿ ಕಡ್ಡಾಯ. ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಂಶೋಧನ ವಿದ್ಯಾರ್ಥಿ ೧೦೦ ದಿನ ಇದ್ದರೆ ಮಾರ್ಗದರ್ಶಕರು ಕನಿಷ್ಠ ೩೦ ದಿನ ಇರಲೇಬೇಕು. ಮಾರ್ಗದರ್ಶಕರ ವಾಸ್ತವ್ಯಕ್ಕೆ ಅತಿಥಿ ಗೃಹದಲ್ಲಿ ಅನುಕೂಲ ಕಲ್ಪಿಸಬೇಕು.

ಸಂದರ್ಶಕ (Visiting) / ಅತಿಥಿ ಉಪನ್ಯಾಸಕರಾಗಿ (Guest Faculty) ಆಗಮಿಸುವ ಮೂಲ ಕಲಾವಿದರಿಗೆ ಜಾನಪದ ವಿಶ್ವವಿದ್ಯಾನಿಲಯ ಆವರಣದಲ್ಲಿ ಅನುಕೂಲ ಮಾಡಿಕೊಡಬೇಕು.

ಎಂ.ಫಿಲ್ , ಪಿಎಚ್. ಡಿ. ಸಂಶೋಧನ ವಿದ್ಯಾರ್ಥಿ ಕ್ಷೇತ್ರಕಾರ್ಯದ ದಾಖಲೀಕರಣ ಕಾರ್ಯದಲ್ಲಿ ತರಪೇತಿ ಹೊಂದಿದ್ದಕ್ಕೆ ಸರ್ಟಿಫಿಕೇಟ್ ಪಡೆದ ಅನಂತರವೇ ಪಿಎಚ್.ಡಿ. ನೋಂದಾವಣೆಗೆ ಅವಕಾಶ ಕಲ್ಪಿಸಿಕೊಡಬೇಕು. ನೋಂದಾವಣೆಯಾದ ಅನಂತರ ಸೈದ್ಧಾಂತಿಕ ವಿಚಾರಗಳ ಅರಿವಿಗೆ (Theoretical Foundation) ವ್ಯವಸ್ಥೆ ಮಾಡಬೇಕು. ವೈದ್ಯ ಪದ್ಧತಿ, ಕ್ರೀಡೆಕಲೆಗಳ ಅಧ್ಯಯನಕ್ಕೆ ಹೋದವರು Audio Video Recording ಮಾಡಿಕೊಂಡು ವರದಿ ಸಲ್ಲಿಸಿರಬೇಕು. ವಿಷಯದಲ್ಲಿ ತಜ್ಞರಾದವರಿಗೆ ಮಾತ್ರ ಮಾರ್ಗದರ್ಶನ ನೀಡಲು ಅವಕಾಶವಿರಬೇಕು.

- ಆಂಗ್ಲ ಮಾಧ್ಯಮದಲ್ಲಿ Kannada Folklore ಕುರಿತ ಸರ್ಟಿಫಿಕೇಟ್ (Certificate) ಮತ್ತು ಡಿಪ್ಲೊಮಾ ಶಿಕ್ಷಣ (Diploma Course) ಗಳನ್ನು ಆರಂಭಿಸಬೇಕು.
- ವರ್ಷದಲ್ಲಿ ಕನಿಷ್ಠ ಮೂರು ಸಾರಿ ಶಿಬಿರ (Workshop) ಗಳನ್ನು ಆಯೋಜಿಸಬೇಕು.
- ೨೪ ಗಂಟೆ ಕಾಲ ವಿದ್ಯುಚ್ಛಕ್ತಿ ಇರುವ ಕಂಪ್ಯೂಟರ್ ಕೇಂದ್ರ ತೆರೆಯಬೇಕು. ಗ್ರಾಮೀಣ ವ್ಯಕ್ತಿ ಕೂಡ ಕಂಪ್ಯೂಟರ್ ಬಳಸುವಂತಾಗಬೇಕು.

ಮಕ್ಕಳಿಗೆ ಮನೆಯಲ್ಲಿ ಶಿಶುಪ್ರಾಸಗಳನ್ನು, ಕಥೆಗಳನ್ನು ಹೇಳುತ್ತೇವೆ. ಶಾಲಾ ಪಠ್ಯಗಳಲ್ಲಿ ಬಹುಸುಲಭವಾಗಿ ಜನಪದ ಕತೆಗಳನ್ನು, ಉತ್ತಮ ಹಾಡುಗಳನ್ನು ಸೇರಿಸಬಹುದಾಗಿದೆ. ಕೆಲ ವರ್ಗಗಳ ಪಠ್ಯಗಳಲ್ಲಿ ಅಲ್ಲಲ್ಲಿ ಜನಪದ ಕಥೆ, ತ್ರಿಪದಿ ಮತ್ತು ಕಥನಕಾವ್ಯಗಳ ತುಣುಕುಗಳು ಕಾಣಸಿಗುತ್ತವೆ. ಅವುಗಳ ಪ್ರಮಾಣವನ್ನು ಹೆಚ್ಚಿಸಬಹುದು. ಜೊತೆಗೆ ಜನಪದ ಕಲೆಗಳ ಪರಿಚಯ, ಕಲಾವಿದರ ಪರಿಚಯ ಸೇರಿಸಬಹುದು. ಜನಪದ ಆಟಗಳನ್ನು ಮಕ್ಕಳಿಗೆ ಕಲಿಸಬಹುದು. ಪ್ರಾಯೋಗಿಕವಾಗಿ ಜನಪದ ಹಾಡುಗಳನ್ನು ಹೇಳಿಕೊಡುವ ವ್ಯವಸ್ಥೆಯನ್ನೂ ಮಾಡಬಹುದು.

ಪಂಚಾಯತಿಗಳ ಬಳಕೆ

ಪ್ರತಿ ಹಳ್ಳಿಯ ಗ್ರಾಮಪಂಚಾಯತಿಗಳನ್ನು ಜಾನಪದ ಸಂಗತಿಗಳ ಸಂಗ್ರಹ, ಪ್ರಚಾರ, ಸಂರಕ್ಷಣೆ ಈ ಮುಂತಾದ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಸಾಧ್ಯವಿದೆ. ಗ್ರಾಮಪಂಚಾಯತಿಯ ಕೆಳಗಡೆ ಒಬ್ಬ ಜಾನಪದ ಕ್ಷೇತ್ರಕಾರ್ಯ ಸಹಾಯಕನನ್ನು ಸರ್ಕಾರ ನೇಮಿಸುವ ಯೋಜನೆ ಹಾಕುವುದು ಅವಶ್ಯವಿದೆ. ಆತ ಗ್ರಾಮಗಳಲ್ಲಿ ಮೌಖಿಕ ಪರಂಪರೆಯು ಜ್ಞಾನದ ಬಗ್ಗೆ ಪ್ರಚಾರ ಮಾಡುವುದು, ಪ್ರತಿಭಾವಂತರನ್ನು ಗುರುತಿಸಿ ಸರ್ಕಾರದ– ವಿಶ್ವವಿದ್ಯಾನಿಲಯದ ಗಮನಕ್ಕೆ ತರುವುದು ಮತ್ತು ಗ್ರಾಮಪಂಚಾಯತಿಯ ಅಧೀನದಲ್ಲಿ ಒಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿ, ಅದನ್ನು ಬೆಳೆಸಿಕೊಂಡು, ಕಾಪಾಡಿಕೊಂಡು ಬರುವ ಕೆಲಸವನ್ನು ಮಾಡುವುದು ಅವನ ಕರ್ತವ್ಯಗಳಾಗಬೇಕು.

ಜಾನಪದ ವಸ್ತುಸಂಗ್ರಹಾಲಯಗಳು ಪ್ರತಿ ಗ್ರಾಮಪಂಚಾಯತಿ ಮಟ್ಟದಲ್ಲಿ ಇರಬೇಕು. ಇಲ್ಲಿ ಜನಪದ ಸಾಹಿತ್ಯ ಮತ್ತು ಮಾಹಿತಿಗಳ ಸಂಗ್ರಹ, ಗ್ರಾಮಗಳ ನಾನಾ ಕ್ಷೇತ್ರಗಳಲ್ಲಿ ಕಾಣುವ ಪ್ರತಿಭಾವಂತರನ್ನು ಗುರುತಿಸುವ, ಅವರ ಬಗೆಗೆ ಮಾಹಿತಿಗಳನ್ನು ಕಲೆಹಾಕುವ, ಅವುಗಳನ್ನು ಸಂಗ್ರಹಾಲಯಗಳಲ್ಲಿ ದಾಖಲಿಸಿ ಇಡುವ, ಅಗತ್ಯ ಬಿದ್ದಾಗ ಸರ್ಕಾರಕ್ಕೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಗತ್ಯ ಮಾಹಿತಿಗಳನ್ನು ದೊರಕಿಸುವ ಕೆಲಸವನ್ನು ಮಾಡಬೇಕು.

ತಾಲ್ಲೂಕಾ ಮತ್ತು ಜಿಲ್ಲಾಮಟ್ಟದ ಪಂಚಾಯತಿಗಳ ಅಧೀನದಲ್ಲೂ ಇಂತಹ ಸಂಗ್ರಹಾಲಯಗಳು ಪ್ರಾರಂಭವಾಗಬೇಕು. ಅಲ್ಲಿಯೂ ಸಿಬ್ಬಂದಿಯ ವ್ಯವಸ್ಥೆಯಾಗಬೇಕು. ಜಿಲ್ಲಾಮಟ್ಟದಲ್ಲಿ ಜಾನಪದಕ್ಕೆ ಸಂಬಂಧಿಸಿ ಎರಡು ಘಟಕಗಳು ಕೆಲಸ ಮಾಡಬೇಕು:

ಸಮಾಜೋ ಸಾಂಸ್ಕೃತಿಕ ಅಧ್ಯಯನ ನಡೆಯಲಿ

- ಎಂ. ಚಿದಾನಂದ ಮೂರ್ತಿ

ಹರಿಹರ ಅಥವಾ ಗದಗ – ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಯೋಗ್ಯವಾದ ಸ್ಥಳ. ರಾಯಚೂರು / ಕೊಡಗು ಪ್ರದೇಶ ಕೂಡ ಉತ್ತಮವಾದ ಜಾಗಗಳೇ. ಜಾನಪದ ವಿಶ್ವವಿದ್ಯಾನಿಲಯದಲ್ಲಿ ಬೋಧನಾಂಗ ಮತ್ತು ಸಂಶೋಧನಾಂಗಗಳನ್ನು ಹುಟ್ಟು ಹಾಕಿದರೆ ಇಲ್ಲಿ ಪಟ್ಟಿ ಮಾಡಿದ ನಿಕಾಯಗಳನ್ನು ಗಮನಿಸಬಹುದು –

- ಮೌಖಿಕ ಸಾಹಿತ್ಯ (Oral Literature)
- ಆಚರಣೆಗಳು, ನಂಬಿಕೆಗಳು, ನಿಷೇಧಗಳು, ಸಂಪ್ರದಾಯಗಳು
- ಮಾಟ ಮಂತ್ರ ಮೋಡಿ
- ರಂಗಭೂಮಿ ಕಲೆಗಳು
- ಜನಪದ ಕಲೆಗಳು
- ಕರಕುಶಲ ಕಲೆಗಳು
- ತೌಲನಿಕ ಅಧ್ಯಯನ (ಭಾಷಾಂತರ ವಿಭಾಗ ಕಡ್ಡಾಯ)
- ಸಮಾಜೊ – ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಆದ್ಯತೆ ಇರಲಿ.
- ವಾಸ್ತು – ಶಿಲ್ಪ ಅಧ್ಯಯನದ ಕಡೆಗೂ ಗಮನ ಹರಿಸಬೇಕು.
- ಸುಸಜ್ಜಿತ ಗ್ರಂಥಾಲಯ ನಿರ್ಮಾಣ ಆಗಬೇಕು.
- ಪ್ರಕಟಣಾಂಗ – ಪ್ರಸಾರಾಂಗ ಸಂಸ್ಥೆಗಳು ಮುಖ್ಯವಾಗುತ್ತವೆ.
- ಪ್ರಸಾರಾಂಗದ ವತಿಯಿಂದ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಬೇಕು.

ದಿನಾಂಕ: ೨೨.೧೦.೨೦೧೦

ಜಾನಪದದ ವ್ಯಾಪಾರೀಕರಣ ಆಗದಿರಲಿ

– ಶಾಲಿನಿ ರಘುನಾಥ

ಮಾನ್ಯರೆ,

ಈ ಹಿಂದೆ ಮಾನ್ಯ ಗೊ.ರು.ಚ ಅವರಿಗೆ ಕಳಿಸಿದ್ದ 'ಜಾನಪದ ವಿಶ್ವವಿದ್ಯಾನಿಲಯ–ಪರಿಕಲ್ಪನೆ' ವಿವರಗಳನ್ನು ನಿಮಗೀಗ ಮತ್ತೊಮ್ಮೆ ಕಳಿಸುತ್ತಿದ್ದೇನೆ. ವಿಶ್ವವಿದ್ಯಾನಿಲಯದ ಆರಂಭದ ಚಟುವಟಿಕೆಗಳೊಂದಿಗೆ ಮುಖ್ಯವಾಗಿ ಎರಡು ಕೆಲಸಗಳಿಗೆ ಹೆಚ್ಚಿನ ಗಮನವನ್ನು ನೀಡಬೇಕೆಂದು ನನ್ನ ಅನ್ನಿಸಿಕೆ:

- ಕರ್ನಾಟಕದ ಪ್ರತಿಯೊಂದು ಹಳ್ಳಿಯಲ್ಲೂ ಕ್ಷೇತ್ರಕಾರ್ಯವಾಗಬೇಕು. ಮತ್ತು ಮಾಹಿತಿಗಳ ಸಮಗ್ರ ದಾಖಲೀಕರಣವಾಗಬೇಕು.
- ಪ್ರಾಥಮಿಕ ಹಂತದಿಂದ ಹಿಡಿದು, ವಿಶ್ವವಿದ್ಯಾನಿಲಯದವರೆಗೆ ಜಾನಪದ ಬೋಧನೆಗೆ ಅವಕಾಶ ದೊರೆಯುವಂತೆ ಪ್ರಯತ್ನಿಸಬೇಕು. ಪ್ರಾಥಮಿಕ ಹಂತದಲ್ಲಿ ಜಾನಪದ ಅನೇಕ ವಿಷಯಗಳ ಬೋಧನೆಗೆ ಮಾಧ್ಯಮವಾಗುವಂತಾದರೆ ಒಳಿತು (ಜನಪದ ಹಾಡು, ಕುಣಿತ, ಆಟ ಇತ್ಯಾದಿ ಮಾಧ್ಯಮಗಳ ಮೂಲಕ).

ಜಾನಪದ ವಿಶ್ವವಿದ್ಯಾನಿಲಯ – ಪರಿಕಲ್ಪನೆ

- ಕರ್ನಾಟಕದ ಉಳಿದ ಎಲ್ಲ ವಿಶ್ವವಿದ್ಯಾನಿಲಯಗಳಿಗಿಂತ ಸ್ವರೂಪ ಮತ್ತು ಕಾರ್ಯವ್ಯಾಪ್ತಿಗಳಲ್ಲಿ ಇದು ಭಿನ್ನವಾದದ್ದು. ನಿಜ ಹೇಳಬೇಕೆಂದರೆ ಇತರ ಎಲ್ಲ ವಿಶ್ವವಿದ್ಯಾನಿಲಯಗಳಿಗಿಂತ ಮೊದಲು ಇದು ಅಸ್ತಿತ್ವಕ್ಕೆ ಬರಬೇಕಾಗಿತ್ತು.
- ಸಮಗ್ರ ಅಧ್ಯಯನದ ಮೂಲಕ ಸಮಷ್ಟಿ ಅಭಿವೃದ್ಧಿ ಇದರ ಗುರಿಯಾಗಬೇಕು. ಅಂದರೆ ಇದರಲ್ಲಿ ಮಾನವ ಜೀವನದ ಅಧ್ಯಯನವಷ್ಟೇ ಅಲ್ಲದೆ, ಪ್ರಾಣಿ ಪ್ರಪಂಚ, ಸಸ್ಯಪ್ರಪಂಚ, ಪರಿಸರ–ಇವುಗಳ ಸಂರಕ್ಷಣೆ,

ಹಿಂದುಳಿದವರು ನೆಲೆಸಿರುವೆಡೆಯಲ್ಲಿ ಸ್ಥಾಪನೆಯಾಗಲಿ

– ಎಚ್. ಜೆ. ಲಕ್ಕಪ್ಪಗೌಡ

ಆದಿವಾಸಿಗಳು, ಹಿಂದುಳಿದ ವರ್ಗಗಳು ನೆಲೆಸಿರುವೆಡೆಗಳಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿ.

ಚಾಮರಾಜನಗರದಲ್ಲಿ ಸ್ಥಾಪನೆ ಮಾಡುವುದಾದರೆ:

- ಮೂಲಭೂತ ಸೌಕರ್ಯದ ಕೊರತೆ ಇದೆ.
- ಆದರೆ ಹಿಂದುಳಿದ ಜನ / ವರ್ಗದ ಜನ ಇದ್ದಾರೆ.
- ಹಿಂದುಳಿದ ಪ್ರದೇಶ ಅದು.
- ಹಿಂದುಳಿದ ಜನರನ್ನು ಅಭಿವೃದ್ಧಿ ಪಥದಲ್ಲಿ ನಡೆಸಲು ವಿಶ್ವವಿದ್ಯಾನಿಲಯ ಆಗಬೇಕು.
- ಜನಪದ ಸಂಸ್ಕೃತಿಯನ್ನು ಉಳಿಸಲು–ಬೆಳೆಸಲು ವಿ.ವಿ. ಅಗತ್ಯ.
- ಈ ವಿಶ್ವವಿದ್ಯಾನಿಲಯಕ್ಕೆ ಕಲಿತವರೇ ಬರಬೇಕಾಗಿಲ್ಲ; ಪ್ರತಿಭೆ ಇರುವ ಯಾರು ಬೇಕಾದರೂ ಬರಬಹುದು.

ಆದ್ಯತೆಗಳು:

- ಮೊದಲು ಜಾನಪದ ಗ್ರಂಥಾಲಯ ಆಗಬೇಕು.
- ಮೊದಲ ಸ್ತರದಲ್ಲಿ ಸಂಗ್ರಹ, ವರ್ಗೀಕರಣ ಅನಂತರ ವಿವೇಚನೆ, ವಿಶ್ಲೇಷಣೆ ನಡೆಯಬೇಕು.
- ಭಾಷೆ ಸೊಗಡು ಕೆಡದಂತೆ ಮೂಲ ಸ್ವರೂಪದಲ್ಲೇ ಸಾಹಿತ್ಯವನ್ನು ದಾಖಲೀಕರಿಸಬೇಕು.
- ಜಾನಪದದ ವೈಜ್ಞಾನಿಕ ಅರಿವು ಇರುವವರು ತೊಡಗಿಸಿಕೊಳ್ಳುವಂತೆ ಆಯ್ಕೆ ಇರಬೇಕು.

ಅವಕಾಶ ಒದಗಿಸುವಂತಾಗಬೇಕು. ಇದರಿಂದ ಕಲೆ ಮತ್ತು ಕಲಾವಿದರ ಬೆಳವಣಿಗೆಯಾಗುತ್ತದೆ. ಮತ್ತು ಕಲಾವಿದರ ಸಾಮಾಜಿಕ ಆರ್ಥಿಕ ಸ್ಥಿತಿ-ಗತಿಯೂ ಸುಧಾರಿಸುತ್ತದೆ.

- ಜನಪದ ವೈದ್ಯಕ್ಕೆ ಸಂಬಂಧಿಸಿದಂತೆ ದಾಖಲೀಕರಣದೊಂದಿಗೆ ವೈದ್ಯಕೀಯ ದೃಢೀಕರಣ, ಪೇಟೆಂಟ್ ಮುಂತಾದವುಗಳನ್ನು ಕುರಿತು ಕೂಲಂಕಷ ವಿಚಾರಗಳಾಗುವುದು ಸೂಕ್ತ.

- ಪ್ರಸ್ತುತ ಜಾನಪದ ವಿಶ್ವವಿದ್ಯಾನಿಲಯ, ಅಂತಾರಾಷ್ಟ್ರೀಯ ಮಟ್ಟದ ಜಾನಪದ ಅಧ್ಯಯನ ಕೇಂದ್ರಗಳೊಂದಿಗೆ ಸಂಪರ್ಕ ಕಲ್ಪಿಸಿ ಜಾಗತಿಕ ಮಟ್ಟದಲ್ಲಿ ತೌಲನಿಕ ಅಧ್ಯಯನಗಳಿಗೆ, ವಿನಿಮಯ ಕಾರ್ಯಗಳಿಗೆ, ಜಂಟಿ ಅಧ್ಯಯನಗಳಿಗೆ ಸಹಾಯಕವಾಗಿ, ಸಂಪರ್ಕಸೇತುವೆಯಾಗಿ ಕಾರ್ಯನಿರ್ವಹಿಸಬೇಕು.

- ಭಾರತದಲ್ಲಿಯೇ ಜಾನಪದ ಅಧ್ಯಯನದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಇಲ್ಲಿ ನಡೆದ ಅಧ್ಯಯನಗಳು ಇತರ ರಾಜ್ಯ, ದೇಶದವರಿಗೆ ತಿಳಿಯಬೇಕು. ಅಲ್ಲಿಯ ಅಧ್ಯಯನಗಳು ಕನ್ನಡದವರಿಗೆ ಗೊತ್ತಾಗಬೇಕು. ಇದಕ್ಕಾಗಿ ಜಾನಪದ ಅನುವಾದದ ಕೆಲಸವನ್ನೂ ವಿಶ್ವವಿದ್ಯಾನಿಲಯ ಆದ್ಯತೆಯ ಮೇರೆಗೆ ಕೈಕೊಳ್ಳಬೇಕು.

- ಜಾನಪದ ಸಂಗ್ರಹ, ಪ್ರಕಟಣೆ ಅಧ್ಯಯನಗಳೊಂದಿಗೆ ಗ್ರಾಮಕೋಶಗಳು, ಸಾಂಸ್ಕೃತಿಕ ಪದಕೋಶಗಳು, ವಿಶ್ವಕೋಶಗಳು ಇತ್ಯಾದಿ ರಚನೆಯಾಗಬೇಕು. ಕೋಶಗಳ ರಚನೆ ಮತ್ತು ಅನುವಾದಗಳು ವಿಶ್ವವಿದ್ಯಾನಿಲಯದ ನಿರಂತರ ಚಟುವಟಿಕೆಗಳಲ್ಲಿ ಒಂದಾಗಿ ಪರಿಣಮಿಸಬೇಕು.

- ಜಾನಪದ ಎಲ್ಲ ಹಂತದಲ್ಲಿಯೂ ಬೋಧನೆಯ ವಿಷಯವಾಗುವಂತೆ ಗಮನವಹಿಸಬೇಕು. ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಿಗೆ ನೆಲದ ಸಂಸ್ಕೃತಿಯ ಪರಿಚಯ, ಅಭಿಮಾನ ಮೂಡಿಸುವ ಕಾರ್ಯವಾಗಬೇಕು. ಮುಂದೆ ಹಂತ ಹಂತವಾಗಿ ಪದವಿ ಪೂರ್ವ ಹಾಗೂ ಸ್ನಾತಕೋತ್ತರ ಶಿಕ್ಷಣದಲ್ಲಿ ಜಾನಪದ ಅಳವಡಿಕೆ, ಬೋಧನೆಯ ಸ್ವರೂಪ, ಪರಿಣಾಮ ಯಾವ ರೀತಿಯಾಗಿರಬೇಕೆಂಬುದನ್ನು ಗಂಭೀರವಾಗಿ ಹಾಗೂ ಕೂಲಂಕಷವಾಗಿ ವಿಚಾರಿಸಿ, ಅನುಷ್ಠಾನಕ್ಕೆ ತರುವ ಕೆಲಸವನ್ನೂ ತೀವ್ರವಾಗಿ ಮಾಡಬೇಕು.

ಪರಂಪರಾಜ್ಞಾನವನ್ನು ಸಂಗತಗೊಳಿಸುವುದು ಅಗತ್ಯ

– ಚಂದ್ರಶೇಖರ ಕಂಬಾರ

ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಸಂಬಂಧವಾಗಿ ಹಕ್ಕೊತ್ತಾಯ ಮಾಡಲು ಗೊ ರು ಚ ನೇತೃತ್ವದ ಬಣ (ಜಿ. ನಾರಾಯಣ, ದೇ ಜ ಗೌ, ಮುಖ್ಯಮಂತ್ರಿ ಚಂದ್ರು, ಡಿ.ಲಿಂಗಯ್ಯ ಮುಂತಾದವರು) ದಲ್ಲಿ ನಾನೂ ಇದ್ದೆ. ಈ ಎಲ್ಲ ಹಿರಿಯರ ಅಭಿಲಾಷೆಗೆ ನಾನು ಕೂಡ ಒತ್ತಾಸೆಯಾಗಿದ್ದೆ.

ಈಗ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಪ್ರಶ್ನೆ ಎಂದರೆ ಜಾನಪದವನ್ನು ಉಳಿಸುವುದು ಹೇಗೆ? ಏಕೆ? ಮತ್ತು ಅದನ್ನು ಬೆಳೆಸುವುದು ಹೇಗೆ? ಏಕೆ? ಈ ನಿಟ್ಟಿನಲ್ಲಿ ಅನೌಪಚಾರಿಕವಾಗಿ ತಜ್ಞರೊಡನೆ ಸಂವಾದ ನಡೆಸಬೇಕು. ಜಾನಪದದಲ್ಲಿ ಮುಖ್ಯವಾಗಿ ಮೌಖಿಕತೆ (Orality) ಗೆ ಒತ್ತು ಇರುವುದರಿಂದ ಅಕ್ಷರ ಕಲಿಕೆ ಬಂದಂದಿನಿಂದ ಮೌಖಿಕ ಸಾಹಿತ್ಯ ಪಾರಂಪರಿಕವಾಗಿ ಉಳಿದು ಬರುವುದು ಕಷ್ಟ. ದಲಿತರಲ್ಲಿ ಪ್ರಚಲಿತವಿರುವ ಸಾಹಿತ್ಯವನ್ನು ಉಳಿಸೋಕೆ ಯಾರು ಬಂದಾರು? ಜೋಗತೇರ ಹಾಡನ್ನು ಕೇಳಲು ಅವರ ಕುಟುಂಬದವರೇ ತಯಾರಿಲ್ಲ. ಬೇರೆಯವರು ಏಕೆ ಆಸ್ಥೆ ತೋರಿಸುತ್ತಾರೆ? ರಾಜಕಾರಣ– ರಾಜಕೀಯ ಭಾಷಣಗಳು, ಯಕ್ಷಗಾನದಲ್ಲಿ ಮೌಖಿಕತೆ ಪ್ರಜ್ವಲಿಸುವಂತೆ–ಇಂದಿಗೂ ಅವು ಚೈತನ್ಯದಾಯಕವಾಗಿದ್ದು ಚೇತೋಹಾರಿ ಪ್ರಯೋಗಗಳನ್ನು ನೀಡುವಂತೆ–ಕರ್ನಾಟಕದ ಇತರೆ ಯಾವ ಕಲೆಗಳು, ಸಂಸ್ಕೃತಿ ಸಜೀವವಾಗಿವೆ? ಜನರಿಂದ ಆಕರ್ಷಿತವಾಗಿವೆ? ಯಕ್ಷಗಾನ ಕಲೆಗೆ ಸಮಾಜದಲ್ಲಿ ಗೌರವ ಮನ್ನಣೆ ಇದೆ. ೧೦ ವರ್ಷಗಳಿಗೆ ಯಕ್ಷಗಾನ ತಂಡಗಳು (Troupes) ಮುಂದಾಗಿಯೇ book ಆಗಿವೆ. ಕಂಸಾಳೆ, ವೀರಗಾಸೆ, ಡೊಳ್ಳು ಕಲೆಗಳೇಕೆ ಯಕ್ಷಗಾನದಂತೆ ವೀಕ್ಷಕರನ್ನು ಆಕರ್ಷಿಸುತ್ತಿಲ್ಲ? ವಾಸ್ತವವಾಗಿ, ಉತ್ತರ ಕರ್ನಾಟಕದಲ್ಲಿ ಪ್ರಚುರವಾಗಿರುವ ಸಣ್ಣಾಟ, ದೊಡ್ಡಾಟ, ಗೊಂಬೆಯಾಟದ ಪ್ರದರ್ಶನಗಳನ್ನು ಮೊದಲಿಗೆ ಬ್ರಾಹ್ಮಣ ಸಮಾಜದವರು

ಸಾಹಸ ಮತ್ತು ಸಮರ ಕಲೆಗಳಿಗೆ ಮನ್ನಣೆ ಇರಲಿ

– ಹಾಸನ ರಘು

ಮಾನ್ಯರೇ,

ಕರ್ನಾಟಕ ಸರ್ಕಾರವು ಪ್ರಪಂಚದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿರುವುದು ಶ್ಲಾಘನೀಯ ವಿಚಾರ. ಈ ವಿಶ್ವವಿದ್ಯಾನಿಲಯಕ್ಕೆ ಜಾನಪದ ವಿದ್ವಾಂಸರು, ಪಂಡಿತರು, ಚಿಂತಕರು ಆದ ಘನತೆವೆತ್ತ ತಾವು ವಿಶೇಷಾಧಿಕಾರಿಗಳಾಗಿ ಕರ್ನಾಟಕ ಸರ್ಕಾರದಿಂದ ನೇಮಿತವಾಗಿರುವುದು ಸಂತಸ ತಂದಿದೆ. ತಮ್ಮನ್ನು ಅಭಿನಂದಿಸಲು ಸಂತೋಷವಾಗುತ್ತಿದೆ.

ಜಾನಪದ ವಿಶ್ವವಿದ್ಯಾನಿಲಯದ ರೂಪುರೇಷೆಗಳ ಬಗೆಗೆ ಚರ್ಚಿಸಲು ನನ್ನನ್ನು ಆಹ್ವಾನಿಸಿರುವುದು ಕರ್ನಾಟಕ ಜಾನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆಗಳು, ಸಮರ ಕಲೆಗಳು ಹಾಗೂ ಗ್ರಾಮೀಣ ಸಾಹಸ ಕ್ರೀಡೆಗಳನ್ನು ಪ್ರತಿನಿಧಿಸಲು ಅನುವು ಮಾಡಿಕೊಟ್ಟಿದೆ. ಅದಕ್ಕಾಗಿ ತಮಗೆ ಆಭಾರಿಯಾಗಿರುತ್ತೇನೆ. ತಾವು ದಿನಾಂಕ: ೧೦.೧೨.೨೦೧೦ ರಂದು ಕರೆದಿರುವ ಸಭೆಗೆ ನನ್ನ ಅನಾರೋಗ್ಯದ ನಿಮಿತ್ತ ಹಾಜರಾಗಲು ಸಾಧ್ಯವಾಗಿರುವುದಿಲ್ಲ. ಈ ಕೆಳಕಂಡ ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ:

ರಾಷ್ಟ್ರ ಮಟ್ಟದಲ್ಲಿ ಜನಪದ ಕಲೆಗಳ (ಲೋಕಕಲಾ) ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಯಾವುದೇ ಅಕಾಡೆಮಿ ಅಸ್ತಿತ್ವದಲ್ಲಿರುವುದಿಲ್ಲ. ಇದರ ಬಗ್ಗೆ ಯಾರೂ ಸಹ ಚಿಂತನೆ ನಡೆಸಿರುವುದಿಲ್ಲ. ಆದರೆ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ರಾಷ್ಟ್ರೀಯ ಮಟ್ಟದ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಅಡಿಪಾಯವಿಟ್ಟಿರುವುದು ಇತಿಹಾಸ ಸೃಷ್ಟಿಸಿದೆ.

ಕರ್ನಾಟಕವು ಹಲವಾರು ಜನಪದ ಕಲೆಗಳ ತವರೂರು. ಹಾಗೆಯೇ ಜಾನಪದ ಹಾಗೂ ಸಾಂಪ್ರದಾಯಿಕ ಸಾಹಸ ಮತ್ತು ಸಮರ ಕಲೆ ಹಾಗೂ ಗ್ರಾಮೀಣ ಸಾಹಸ ಕ್ರೀಡೆಗಳ ತಾಣ. ಈ ಎಲ್ಲಾ ಕಲೆಗಳು ಕರ್ನಾಟಕ

ವಿಶ್ವವಿದ್ಯಾನಿಲಯವನ್ನು ಹಿರೇ ಮೈಲಾರ / ಗೋಕಾಕ ಭಾಗದಲ್ಲಿ / ಇಂಡಿ–ಚಡಚಣ, ಅಜ್ಜಂಪುರ ಸಮೀಪ ಅಮೃತ್ ಮಹಲ್ ಕಾವಲ್ – ಹಣ್ಣೆ ಗುಡ್ಡದಲ್ಲಿ / ಬಸವಕಲ್ಯಾಣ / ಕೂಡಲಸಂಗಮದಲ್ಲಿ ಸ್ಥಾಪಿಸಬಹುದು. ವಿಶ್ವವಿದ್ಯಾನಿಲಯದ ಕಟ್ಟಡಗಳು Thatched Roofs ಗಳಿರುವಂತೆ ನೋಡಿಕೊಳ್ಳಬೇಕು. ಕ್ಯಾಂಪಸ್ಸಿನ ಕೇಂದ್ರ (Centre) ದಲ್ಲಿ ವಿಶಿಷ್ಟವಾದ ಗ್ರಾಮ (Typical Village) ಇರುವಂತೆ – ಮಕ್ಕಳು ಕಲಿಯುವಂತಿರಬೇಕು. ಪ್ರವಾಸಿ ಕೇಂದ್ರವಾಗಿ ಪರಿವರ್ತಿತವಾಗುವಂತೆ ಮಾಡಬೇಕು.

ದಿನಾಂಕ: ೦೮.೧೦.೨೦೧೦

- ಎದೆಯ ಮೇಲೆ ಚಪ್ಪಡಿ ಕಲ್ಲುಗಳನ್ನು ಹೊಡೆಸಿಕೊಳ್ಳುವುದು.
- ಎದೆಯ ಮೇಲೆ ರಾಗಿ ಗುಂಡು (ರೋಣ) ಉರುಳಿಸಿಕೊಳ್ಳುವುದು.
- ಹಲ್ಲು ಮತ್ತು ಮೀಸೆಯಿಂದ ಭಾರ ಎತ್ತುವುದು.
- ಹಲ್ಲಿನಿಂದ ಭಾರ ಎತ್ತಿ ಹಿಂದಕ್ಕೆ ಎಸೆಯುವುದು.
- ಹಲ್ಲಿನಿಂದ ವಾಹನವನ್ನು ಎಳೆಯುವುದು.
- ಅಶ್ವಾರೂಢ ಸಾಹಸ ಕಲೆ ಹಾಗೂ ಇತರ ವಿದ್ಯೆಗಳು.

ಆ. ಸಮರ ಕಲೆಗಳು:

- ವಜ್ರಮುಷ್ಟಿ ಕಾಳಗ.
- ಗದಾಯುದ್ಧ.
- ಮಲ್ಲಯುದ್ಧ.
- ದೃಷ್ಟಿಯುದ್ಧ.
- ಕತ್ತಿ ವರಸೆ.
- ಜಲಯುದ್ಧ.
- ದೊಣ್ಣೆ ವರಸೆ.
- ಚಡಿ ವರಸೆ.
- ಮಾನ್ ಕೊಂಬು ವರಸೆ.
- ಬಿಜಲಿ ವರಸೆ.
- ಬರ್ಜಿ ವರಸೆ.
- ಬಾಕು ವರಸೆ ಇತ್ಯಾದಿ ಕೈವರಸೆಗಳು.

ಇಂತಹ ಅನೇಕ ಜನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆಗಳ ಬಗ್ಗೆ ಗಮನವೇ ಇಲ್ಲವಾಗಿದೆ. ಸಂಸ್ಕೃತಿಯ ಭಾಗವೆಂದಾಗಲಿ ಕ್ರೀಡೆಯೆಂದಾಗಲಿ, ಪರಿಗಣಿಸದೆ ಯಾವ ಇಲಾಖೆಗಳ ಅಡಿಯಲ್ಲಿಯೂ ಇವುಗಳಿಗೆ ಆಶ್ರಯವಿಲ್ಲದಾಗಿದೆ. ಆದ್ದರಿಂದ ಇವುಗಳ ಕುರಿತು,

ಮತ್ತು ಸಮರ ಕಲೆಗಳು ಹಾಗೂ ಗ್ರಾಮೀಣ ಸಾಹಸ ಕ್ರೀಡೆಗಳನ್ನು ಉಳಿಸಿ ಬೆಳೆಸಬೇಕಾಗಿದ್ದು, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ ಈ ಕೆಳಕಂಡ ನಿಲುವುಗಳನ್ನು ತೆಗೆದುಕೊಳ್ಳಬೇಕಾಗಿದೆ:

- ತನ್ನ ಪಠ್ಯದಲ್ಲಿ ಈ ಕಲೆಗಳನ್ನು ಸೇರ್ಪಡಿಸುವುದು.
- ಕ್ಷೇತ್ರಕಾರ್ಯ ಸಂಶೋಧನೆ, ಅಧ್ಯಯನಕ್ಕೆ ಆದ್ಯತೆ ನೀಡುವುದು.
- ಈ ವಿಷಯ ಕುರಿತು ಪಠ್ಯವನ್ನು ಸಿದ್ಧಪಡಿಸುವುದು.
- ದೀರ್ಘಾವಧಿ ಕೋರ್ಸ್‌ಗಳನ್ನು ಪ್ರಾರಂಭಿಸುವುದು.
- ಅಲ್ಪಾವಧಿ ಕೋರ್ಸುಗಳನ್ನು ಪ್ರಾರಂಭಿಸುವುದು.
- ಪ್ರದರ್ಶನಕ್ಕೆ ಹೆಚ್ಚು ಒತ್ತುಕೊಡುವುದು.
- ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಸಾಂಸ್ಕೃತಿಕ ವಿನಿಯಮಕ್ಕೆ ಆದ್ಯತೆ ನೀಡುವುದು.
- ರಾಷ್ಟ್ರದ ಎಲ್ಲ ಜನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆಗಳ ಹಾಗೂ ಸಮರ ಕಲೆಗಳ ಅಂತರಶಿಸ್ತೀಯ ಅಧ್ಯಯನಕ್ಕೆ ಅವಕಾಶ ನೀಡುವುದು.

ದಯಮಾಡಿ ಈ ಎಲ್ಲಾ ವಿಚಾರಗಳ ಕುರಿತು ಮಂಥನ ನಡೆಸಿ ಈ ಎಲ್ಲಾ ವಿಚಾರಗಳಿಗೂ ಆದ್ಯತೆ ನೀಡುವುದರ ಮೂಲಕ ಜನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆ ಹಾಗೂ ಸಮರ ಕಲೆಗಳು ಮತ್ತು ಗ್ರಾಮೀಣ ಸಾಹಸ ಕ್ರೀಡೆಗಳಿಗೆ ಮಾನ್ಯತೆ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ದಿನಾಂಕ:೧೩.೧೨.೨೦೧೦

- ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಸ್ವತ್ತುಗಳನ್ನು ಪರಂಪರೆಯ ಸ್ವತ್ತುಗಳೆಂದು ಘೋಷಿಸಿ ಸಂರಕ್ಷಿಸುವ ರೀತಿಯಲ್ಲಿ ಜಾನಪದ ಪರಂಪರೆಯ ವಸ್ತು ವಿಶೇಷಗಳನ್ನು ಘೋಷಿಸಿ ಸಂರಕ್ಷಿಸಬೇಕು ಅದರ ಉಸ್ತುವಾರಿ ವಿಶ್ವವಿದ್ಯಾನಿಲಯಕ್ಕೆ ಬಿಡಬೇಕು.
- ನಮ್ಮ ಮೌಲಿಕ, ಮೌಖಿಕ ಮತ್ತು ಸಾಂಸ್ಕೃತಿಕ ಜಾನಪದ ಪರಂಪರೆಯನ್ನು ಸಂರಕ್ಷಿಸಿ ಕಾಪಾಡಲು ಜಾನಪದ ವಿಶ್ವವಿದ್ಯಾನಿಲಯ ಸಾರ್ವಜನಿಕರಲ್ಲಿ ಸಮೂಹ ಅರಿವು ಮೂಡಿಸುವತ್ತ ಚಿಂತನೆ ನಡೆಸಬೇಕು ಮತ್ತು ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಆದ್ದರಿಂದ ಘನತೆವೆತ್ತ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯವು ಜನಪದ ವೈದ್ಯಕ್ಕೆ ನಿರ್ದಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟು ಮೇಲೆ ಬರೆದ ಅನುಕೂಲತೆ ಕಲ್ಪಿಸಿಕೊಡುತ್ತ ಇದರ ಯೋಗಕ್ಷೇಮದತ್ತ ಗಮನ ಹರಿಸಬೇಕಾದದ್ದು ಅಗತ್ಯವಾಗಿದೆ.

ಆ. ಈ ಮೊದಲು ಜನಪದ ವೈದ್ಯದ ಸ್ಥಿತಿಗತಿಗಳ ಬಗ್ಗೆ ತಿಳಿಯುವುದು ಅವಶ್ಯವಾಗಿದೆ.

೧. ಜನಪದ ವೈದ್ಯ –ಯಾವುದು? ಅದರ ವ್ಯಾಪ್ತಿ ಯಾವುದು?

ಕೆಲವರು ತಿಳಿದಿರುವಂತೆ ಇದು ಆಯುರ್ವೇದವಲ್ಲ. ಅದರ ತಾಯಿ.

೨. ಆಯುರ್ವೇದ ಯಾವುದು? ಅದರ ವ್ಯಾಪ್ತಿ ಯಾವುದು?

ಸುಶ್ರುತ, ಚರಕಾದಿ ಋಷಿ ಮುನಿಗಳ ಕಾಲಘಟ್ಟಕ್ಕೆ ಸೀಮಿತವಾದ ಮತ್ತು ಆ ಕಾಲಕ್ಕೆ ಅಕ್ಷರ ರೂಪಕ್ಕಿಳಿದ ಜ್ಞಾನ ನಿಧಿ ಅದು.

೩. ಆಯುರ್ವೇದೋತ್ತರ ಆಯುರ್ವೇದ (ಮೂರನೆಯದು ಮುಂದುವರಿದ ಆಯುರ್ವೇದ; ಅಥವಾ ಪ್ರಾಚೀನ ಆಯುರ್ವೇದದ ವಿಶೇಷ ರೀತಿಯ ಮುಂದುವರಿದ ರೂಪ) ಯಾವುದು? ಅದರ ವ್ಯಾಪ್ತಿ ಯಾವುದು? ಆರ್.ಎಮ್.ಪಿ. ತರಬೇತು ಪಡೆದಿರುವ ಜನಪದ ವೈದ್ಯರಿಗೆ ಯಾವ ಸ್ಥಾನ ನೀಡಬೇಕು?

ಮೂರನೆಯದು ಚರಕ ಸುಶ್ರುತಾದಿ ಋಷಿ ಮುನಿಗಳ ಪ್ರಾಚೀನ ಆಯುರ್ವೇದ ಗ್ರಂಥಗಳ ಓದು ಅವುಗಳ ಟೀಕೆ ಟಿಪ್ಪಣಿ ವಿಮರ್ಶೆಗಳ ಅಧ್ಯಯನ, ಪ್ರಾತ್ಯಕ್ಷಿಕೆ, ಅನುಭವ, ಆ ಕುರಿತ ತರಬೇತಿ, ಮೂಲಿಕಾತಜ್ಞರ ನಾಡ ವೈದ್ಯರ ಮನೆಮದ್ದುಗಾರರ ಒಡನಾಟ ಇತ್ಯಾದಿಗಳಿಂದ ಪೂರ್ಣಗೊಂಡು ಪರಂಪರಾಗತ ವೈದ್ಯದ ಹೆಸರಿನಲ್ಲಿ ಪ್ರಚಾರದಲ್ಲಿರುವ 'ಜ್ಞಾನ'. ಇಲ್ಲಿ ಕಿವಿಯಿಂದ ಕಿವಿಗೆ ಸಾಗಿಬಂದ ಜನಪದ ವೈದ್ಯವೂ ಇದೆ. ಇತರ ವೈದ್ಯವೂ ಇದೆ. ಇಲ್ಲಿ ಸಸ್ಯಜನ್ಯ ಮದ್ದು ಎಣ್ಣೆಗಳೆಲ್ಲ ಆಯುರ್ವೇದವೆಂದು ತಿಳಿಯಲಾಗುತ್ತದೆ.

೪. ಈ ಮೂರು ಬಗೆಯ ವೈದ್ಯದಲ್ಲಿ ಜನಪದ ವೈದ್ಯ ಯಾವುದು? ಜನಪದ ವೈದ್ಯ ಯಾರು? ಗುರುತಿಸುವ ಬಗೆ ಹೇಗೆ?

ಒಗಟು ಒಡಪು, ಕುಣಿತಗಳ ವೈಖರಿ ಇತ್ಯಾದಿಗಳನ್ನು ಧ್ವನಿ ಮುದ್ರಿಸಿಕೊಳ್ಳಬೇಕು. ಹಾಗೆಯೇ ಅವರು ಬದುಕಿ ಬಾಳಿದ ಬಗ್ಗೆ ಅವರ ಕಲಾಜೀವನದ ಬಗ್ಗೆ ಸಂಕ್ಷಿಪ್ತ ಸಾಕ್ಷ್ಯಚಿತ್ರಗಳನ್ನು ತುರ್ತಾಗಿ ನಿರ್ಮಿಸಬೇಕು.

- ಸಂಗ್ರಹಿಸಿ, ಸಂಸ್ಕರಿಸಿ, ಸಂಕಲಿಸಿದ ಅತ್ಯುತ್ತಮ ಹಾಗೂ ಉಪಯುಕ್ತ ಮೂಲ ಧಾಟಿಯ ಜನಪದ ಸಾಹಿತ್ಯ, ಕಲೆಗಳ ಆಡಿಯೊ ವಿಡಿಯೊವನ್ನು ವಿಶ್ವವಿದ್ಯಾನಿಲಯ ಸಂರಕ್ಷಿಸಿ ಇಡುವುದಲ್ಲದೆ ಅದನ್ನು ಆಸಕ್ತರಿಗೆ ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕಲಿಸುವ ಅಥವಾ ತಿಳಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು.
- ಜಾನಪದ ವಿಶ್ವವಿದ್ಯಾನಿಲಯುವು ಮಾಡಬೇಕಾದ ಮತ್ತೊಂದು ತುರ್ತುಕಾರ್ಯವೇನೆಂದರೆ ಪ್ರತಿಯೊಬ್ಬ ಆಸಕ್ತ ನಾಗರಿಕನಿಗೂ ಅವನ ಮನೆಯಲ್ಲಿ ಅಥವಾ ಪರಿಸರದಲ್ಲಿ ದೊರಕುವ ವಸ್ತು ವಿಶೇಷಗಳು, ಕಥೆ, ಗಾದೆ, ಒಗಟು ಒಡಪುಗಳಲ್ಲಿ ಕಲೆಯ ವೈವಿಧ್ಯತೆಯನ್ನು ಛಾಯಾಚಿತ್ರ, ವಿಡಿಯೊ, ಆಡಿಯೊ ಮಾಡಿ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸುವ ಆಕರ್ಷಕ ಯೋಜನೆಯನ್ನು ರೂಪಿಸಬೇಕು. ಇದನ್ನು ಸಾಮೂಹಿಕ ಕಾರ್ಯಕ್ರಮವಾಗಿ ವರ್ಷವಿಡೀ ಹಮ್ಮಿಕೊಳ್ಳಬೇಕು.
- ಈಗಾಗಲೇ ಅನೇಕ ವ್ಯಕ್ತಿಗಳು, ಸಂಘ ಸಂಸ್ಥೆಗಳು ತಮ್ಮ ವಶದಲ್ಲಿರುವ, ಸಂರಕ್ಷಿಸಿರುವ, ದಾಖಲಿಸಿರುವ ಜಾನಪದ ಪರಂಪರೆಗೆ, ಸಂಸ್ಕೃತಿಗೆ ಸಂಬಂಧಪಟ್ಟ ಎಲ್ಲಾ ಛಾಯಾಚಿತ್ರಗಳನ್ನು, ಆಡಿಯೊ ವಿಡಿಯೊಗಳನ್ನು, ಸಾಕ್ಷ್ಯಚಿತ್ರಗಳನ್ನು, ವ್ಯಕ್ತಿ ಚಿತ್ರಗಳನ್ನು, ವಸ್ತು ಚಿತ್ರಗಳನ್ನು ಸೂಕ್ತ ಗೌರವ ಸಂಭಾವನೆ ನೀಡಿ ಸಂಗ್ರಹಿಸಲು ಮುಂದಾಗಬೇಕು.
- ಅರ್ಹ ಅನುಭವಿ ತಂತ್ರಜ್ಞರನ್ನು ಮತ್ತು ತಜ್ಞರನ್ನು ಕೂಡಲೆ ತಾತ್ಕಾಲಿಕವಾಗಿಯಾದರೂ ನೇಮಿಸಿಕೊಂಡು ದಾಖಲೀಕರಣದ ಕಾರ್ಯಕ್ಕೆ ಚಾಲನೆ ನೀಡಬೇಕು. ತಾತ್ಕಾಲಿಕವಾಗಿ ಹಾಗೂ ವೈಜ್ಞಾನಿಕವಾಗಿ ಸಂರಕ್ಷಿಸಿ ಇಡುವ ವಿಧಾನವನ್ನು ಅನುಸರಿಸಿ ಸಂಗ್ರಹಿಸಿಡಬೇಕು. ವಿಶ್ವವಿದ್ಯಾನಿಲಯ ತನ್ನ ಸ್ವಂತ ಕಟ್ಟಡ (ಸ್ಟುಡಿಯೋ ಮತ್ತಿತರ) ಮಾಡಿಕೊಳ್ಳಲು ವರ್ಷಗಳೇ ಬೇಕಾಗುವುದರಿಂದ ಸಾಧ್ಯವಾದಷ್ಟು ಈ ಕ್ಷೇತ್ರದಲ್ಲಿ ಕೆಲಸ ಮಾಡಬೇಕು.

ಆಗ ರಾಜಕೀಯಾದಿ ಬಾಹ್ಯ ಒತ್ತಡಗಳನ್ನು ತುಸು ತಡೆಗಟ್ಟಬಹುದು). ಒಬ್ಬ ಜಾನಪದ ವಿದ್ವಾಂಸರ ಸುಪರ್ದಿಯಲ್ಲಿ ಐದು ಜನ ಜನಪದ ವೈದ್ಯರು ಹಾಗೂ ಆ ವಿದ್ವಾಂಸರು ಸ್ಥಳೀಯವಾಗಿ ಗುರುತಿಸುವ ಕೆಲವು ಮನೆಮದ್ದುಗಾರ್ತಿಯರು ದಾಖಲೀಕರಣಕ್ಕೊಳಗಾಗುತ್ತಾರೆ.

೬. ಹೇಗೆ ದಾಖಲಿಸಬೇಕು?

ಅ. ಜನಪದ ವೈದ್ಯದಲ್ಲಿ ಆಸಕ್ತಿಯುಳ್ಳ, ಅದರ ಉತ್ಥಾನವನ್ನು ಆತ್ಮೀಯವಾಗಿ ಬಯಸುವ ಜಾನಪದ ಕ್ಷೇತ್ರಕಾರ್ಯ ತಜ್ಞರು ಸಸ್ಯಶಾಸ್ತ್ರ, ಮನುಷ್ಯ ಮತ್ತು ಪ್ರಾಣಿರೋಗ ತಜ್ಞರು ಔಷಧಶಾಸ್ತ್ರ ತಜ್ಞರು ಒಟ್ಟಿಗೆ ಕೂಡಿ ಜನಪದ ವೈದ್ಯವನ್ನು ದಾಖಲಿಸುವ ಕೆಲಸ ಮಾಡಿ ಎರಡನೆಯ ಹಂತದಲ್ಲಿ ಅದನ್ನು ವಿಶ್ಲೇಷಿಸುವ ಕಾರ್ಯಕ್ಕೆ ತೊಡಗಬಹುದು. ಈ ಜಾನಪದ ವಿದ್ವಾಂಸರು ನಡೆಸುವ ಅಧ್ಯಯನಾದಿಗಳಿಗೆ ಮೇಲೆ ತಿಳಿಸಿದ ತಜ್ಞರು ಮಾರ್ಗದರ್ಶಕರಾಗಿರುತ್ತಾರೆ. ಈ ಮಾರ್ಗದರ್ಶಕ ತಜ್ಞರ ಒಂದೆರಡು ಸೆಟ್‌ಗಳು ನಮ್ಮ ಬಳಿ ಕೆಲಸಕ್ಕೆ ಸಿದ್ಧವಿದ್ದರೆ ಸಾಕು. ಅವಶ್ಯವಿದ್ದಾಗ ಮಾತ್ರ ಇವರು ಕ್ಷೇತ್ರಕ್ಕೆ ಹೋಗಬೇಕು. ಮಾಗಡಿ ಗುರುದೇವ, ಡಾ. ಸತ್ಯನಾರಾಯಣ ಭಟ್‌ರಂಥವರ ಸಹಾಯ ಪಡೆಯಬಹುದು.

ಆ. ಸಾಕ್ಷ್ಯಚಿತ್ರ, ಜನಪದ ವೈದ್ಯಕ್ಕೆ ಸಂಬಂಧಪಟ್ಟಂತೆ ಈ ವೈದ್ಯರ **ಎಲ್ಲ** ಚಟುವಟಿಕೆಗಳ ಸಾಕ್ಷ್ಯಚಿತ್ರ ಮತ್ತು ಬರೆಹ ರೂಪದ ದಾಖಲೀಕರಣ ನಡೆಯಬೇಕು.

೭. ಇತರ ಕಾರ್ಯಗಳು:

ಕ. ಜನಪದ ವೈದ್ಯಪದಕೋಶ ರಚನೆ

ಜನಪದ ವೈದ್ಯದ ಅಧ್ಯಯನಕ್ಕೆ ನೆರವಾಗುವಂತೆ ಜನಪದ ವೈದ್ಯಕ್ಕೆ ಸಂಬಂಧಿಸಿದ ಹಲವು ಸಾವಿರ ಪ್ರಾದೇಶಿಕ ಶಬ್ದಗಳಿಗೆ ಚಿತ್ರಸಹಿತ ಅರ್ಥ ನೀಡಲು ಪ್ರಯತ್ನ ನಡೆಸುವುದರ ಜೊತೆಗೆ ಆಧುನಿಕ ಶಾಸ್ತ್ರೀಯ ಹೆಸರನ್ನು ನೀಡಿ ಜನಪದ ವೈದ್ಯ ಪದಕೋಶವನ್ನು ಸಿದ್ಧಗೊಳಿಸುವುದು (ಈ ಶಬ್ದಗಳನ್ನು ಆಯಾ ನಾಡ ಮದ್ದುಗಾರರು ಮತ್ತು ಮನೆ ಮದ್ದುಗಾರರಿಂದ ನೇರವಾಗಿ ಸಂಗ್ರಹಿಸಬೇಕು. ಮನೆಮದ್ದುಗಾರರ ಕೊಡುಗೆ ಅಪಾರವಾದದ್ದು. ನಾಡ ಮದ್ದುಗಾರರು ರೋಗ ಬಂದ ಮೇಲೆ ಗುಣಪಡಿಸುವ ಶಕ್ತಿಯುಳ್ಳವರಾಗಿದ್ದರೆ ಮನೆಮದ್ದುಗಾರರು ರೋಗ ಬರದಂತೆ ತಡೆಯುವ

ತುರ್ತಾಗಿ ಕೈಗೊಳ್ಳಬೇಕಾದ ಕಾರ್ಯಗಳು

– ಸಿರಿಗಂಧ ಶ್ರೀನಿವಾಸಮೂರ್ತಿ

೧. ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ರಾಜ್ಯಾದ್ಯಂತ ಅತ್ಯುತ್ತಮವಾದ ನೂರಾರು ಸಲಹೆ, ಸೂಚನೆ, ಮಾರ್ಗದರ್ಶನ ಬಂದಿದ್ದು ಅವುಗಳನ್ನು ಕಾರ್ಯಗತಗೊಳಿಸಲು ಹಗಲು ರಾತ್ರಿ ದುಡಿದರೂ ೨೫ ವರ್ಷಗಳೇ ಬೇಕಾಗುತ್ತದೆ. ನೂರಾರು ಕೋಟಿ ರೂಪಾಯಿಗಳ ಅನುದಾನವೂ ಸಾಲದಾಗುತ್ತದೆ. ವಿಶೇಷಾಧಿಕಾರಿಗಳು ಎಲ್ಲೆಲ್ಲಿ ಪೂರ್ವಭಾವಿ ಸಭೆ ನಡೆಸಿದ್ದಾರೋ ಅಲ್ಲೆಲ್ಲ ಜನಪದ ಸಂಸ್ಕೃತಿಯನ್ನು ಸಂರಕ್ಷಿಸಿಡುವ ಮತ್ತು ಪ್ರಸಾರ ಮಾಡುವ ವಿಚಾರಗಳೇ ಪ್ರಮುಖವಾಗಿ ಪ್ರಸ್ತಾಪಿತವಾಗಿವೆ. ಅಂದರೆ ಜನಸಮುದಾಯ ಕೂಡ ಸಂವಹನ ಮಾಧ್ಯಮಗಳ ಕಡೆ ನೋಡುತ್ತಿರುವುದು ಸ್ಪಷ್ಟವಾಗಿದೆ ಎಂದೇ ಅರ್ಥ. ಈ ನಿಟ್ಟಿನಲ್ಲಿ ನನ್ನದೊಂದು ಸಲಹೆ ಏನೆಂದರೆ ವಿಶ್ವವಿದ್ಯಾನಿಲಯ ತುರ್ತಾಗಿ ಅಂದರೆ ನಾಳೆಯಿಂದಲೇ ಕಾರ್ಯರೂಪಕ್ಕಿಳಿಸಬಹುದಾದ ಅಂಶಗಳನ್ನು ಟಿಪ್ಪಣಿ ಮಾಡಿದ್ದೇನೆ. ಇಂದಿನ ಸಂವಹನ (ಎಲೆಕ್ಟ್ರಾನಿಕ್ಸ್ ಮತ್ತು ಪ್ರಸಾರ) ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಹೇಗೆ ಜಾನಪದವನ್ನು ಸಂರಕ್ಷಿಸಬಹುದು ಹಾಗೂ ಜನರ ಬಳಿಗೆ ಆತ್ಮೀಯವಾಗಿ ಕೊಂಡೊಯ್ಯಬಹುದು ಮತ್ತು ಅದರ ಬಳಕೆಯನ್ನು ಹೇಗೆ ನಮ್ಮ ಬದುಕಿಗೆ ಇಂದು ಸಮರ್ಥವಾಗಿ ಅಳವಡಿಸಿಕೊಂಡು ನಮ್ಮ ಜನಪದ ಪರಂಪರೆಯನ್ನು ಕಾಪಾಡಿಕೊಳ್ಳಬಹುದೆಂಬುದಕ್ಕೆ ಇಲ್ಲಿ ಕೆಲವು ಕಿರು ಟಿಪ್ಪಣಿಗಳನ್ನು ನೀಡಲಾಗಿದೆ:

೨. ಇದುವರೆಗೂ ನಮ್ಮಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾಗಲಿ, ಅಕಾಡೆಮಿಗಳಾಗಲಿ, ಎಲೆಕ್ಟ್ರಾನಿಕ್ ಮಾಧ್ಯಮವನ್ನು, ಕಂಪ್ಯೂಟರ್ ಬಳಕೆಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ದಿವಂಗತರಾದ

ಭೂಮಿ ವಿಶ್ವವಿದ್ಯಾನಿಲಯದ ಜನಪದ ಔಷಧ ವನ ಬೆಳೆಸಲು ಕೊಂಡುಕೊಂಡ ಭೂಮಿ ಆಯಾ ವೈದ್ಯರ ಸ್ವಂತ ಭೂಮಿ ಇತ್ಯಾದಿ ಸ್ಥಳಗಳಲ್ಲಿ ಮುಖ್ಯವಾಗಿ ಆಯಾ ವೈದ್ಯರು ಹೆಸರಿಸುವ ಔಷಧ ಸಸ್ಯಗಳನ್ನು ಜೊತೆಗೆ ಇತರ ಔಷಧ ಗಿಡಗಳನ್ನು ಅರಣ್ಯ ಇಲಾಖೆಯ ಸಹಾಯದೊಂದಿಗೆ ನೆಡಬೇಕು. ಪರಿಸರ ಇಲಾಖೆ ಇದಕ್ಕೆ ಕೈ ಜೋಡಿಸುವಂತೆ ನೋಡಿಕೊಳ್ಳಬೇಕು. ಆಯಾಗಿಡದ ಬಳಿ ಅಲ್ಲಿಯ ವೈದ್ಯರು ಹೆಸರಿಸುವ ಪ್ರಾದೇಶಿಕ ಹೆಸರುಗಳ ನಾಮಫಲಕವಿರಬೇಕು. ಅಲ್ಲಿ ಸ್ಥಳೀಯ ವೈದ್ಯರು ತಿಳಿಸುವ ಸಸ್ಯೋಪಯೋಗವನ್ನು ಒಂದೆರಡು ಶಬ್ದಗಳಲ್ಲಿ ಬರೆಸಬೇಕು (ಮದ್ದು ತಯಾರಿಕ ವಿಧಾನ ಇಲ್ಲಿ ಬರೆದಿರುವುದಿಲ್ಲ). ಅರಣ್ಯ ಇಲಾಖೆಯ ಅನೇಕ ಔಷಧ ವನಗಳಂತೆ ಇವು ಪಾಳು ಬೀಳದೆ ಸದಾ ಜೀವಂತವಾಗಿರಬೇಕು. ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ ವನ ನಿರ್ವಹಣೆಯೂ ಸೇರಿಕೊಂಡಾಗ ಇದು ಜೀವಂತವಾಗಿರಬಹುದು.

ಪ್ರಯತ್ನ೨: ನಾಡ ವೈದ್ಯರ ಅಪೂರ್ವ ಜ್ಞಾನ ನಿರ್ವಹಣೆ

ನಾಡ ವೈದ್ಯರಲ್ಲಿ ಅಪೂರ್ವ ಜ್ಞಾನ ಕಂಡು ಬಂದರೆ ಅದನ್ನು ಜಗತ್ತಿನ ಔಷಧ ಕಂಪನಿಗಳು ತಮ್ಮ ಹಕ್ಕಿನ ವ್ಯಾಪ್ತಿಗೆ ತರಲು ಪ್ರಯತ್ನಿಸುತ್ತವೆ. ನಮ್ಮ ನಾಡ ವೈದ್ಯರಲ್ಲಿ ಅಪೂರ್ವ ಜ್ಞಾನ ಕಂಡು ಬಂದರೆ ಅದನ್ನು ಜಗತ್ತಿನ ಜೀವ ವೈವಿಧ್ಯತಾ ಕಾಯ್ದೆಯಂತೆ ಈ ಬಗ್ಗೆ ಬಲ್ಲ ವಕೀಲರ ನೆರವಿನೊಂದಿಗೆ ಆಯಾ ಗ್ರಾಮ ಪಂಚಾಯಿತಿಯಲ್ಲಿ ದಾಖಲಿಸುವುದು. ಕಂಪನಿಗಳು ಇವರ ಜ್ಞಾನವನ್ನು ಬಳಸಿಕೊಂಡು ಲಾಭ ಮಾಡಿದ್ದು ಕಂಡು ಬಂದರೆ ಅವರಿಂದ ಲಾಭಾಂಶವನ್ನು ಜನಪದ ವೈದ್ಯರಿಗೆ ಕೊಡಿಸುವುದು. ಡಾ. ಸುದರ್ಶನ್ ಈ ಕೆಲಸ ಮಾಡಿದ್ದಾರೆ.

೩. ಕೊಂಡಿ ಯಾರು? ನಿಭಾಯಿಸುವುದು ಹೇಗೆ?

ಜನಪದ ವೈದ್ಯ ಶಿಕ್ಷಣದಲ್ಲಿ ನಿರತವಾಗಿರುವ ವಿದ್ಯಾರ್ಥಿಗಳು ಇಲ್ಲಿಯ ಜನಪದ ವೈದ್ಯವನ, ವೈದ್ಯರ ಮತ್ತು ವಿಶ್ವವಿದ್ಯಾನಿಲಯದ ನಡುವೆ ಕೊಂಡಿಯಾಗಿರುತ್ತಾರೆ. ಇವರು ನಿಗದಿತ ಪಠ್ಯಕ್ರಮದಂತೆ ವನದ ಮತ್ತು ವೈದ್ಯರ ಕುರಿತು ವರದಿಯನ್ನು ಸಿದ್ಧಪಡಿಸುವುದಲ್ಲದೆ ಅಲ್ಲಿ ಹೆಚ್ಚಿನ ಗಿಡ ನೆಡುವುದರ ಪ್ರಗತಿ ಮತ್ತು ಅಲ್ಲಿಗೆ ಬರುವ ರೋಗಿಗಳ ಅಭಿಪ್ರಾಯ ಸಂಗ್ರಹಣೆ, ಅಲ್ಲಿಯ ಮನೆ ಮದ್ದುಗಾರರನ್ನು ಗುರುತಿಸಿ ವರದಿ ಒಪ್ಪಿಸುವುದು, ಅವರ 'ಜ್ಞಾನ' ಸಂಗ್ರಹಣೆ, ಅಲ್ಲಿಯ ವೈದ್ಯರನ್ನು ವಿಶ್ವವಿದ್ಯಾನಿಲಯಕ್ಕೆ ಕರೆತಂದು

ಬಂದಿದ್ದವು. ಆದರೆ, ಅಂಥಾ ಟೀಕೆ ತಪ್ಪೆಂಬುದನ್ನು ಆ ಟೀಕಾಕಾರರೇ ಈಗ ಒಪ್ಪುತ್ತಾರೆ. ಏಕೆಂದರೆ –

ಜಾನಪದ ಚಟುವಟಿಕೆಗಳಲ್ಲಿ ಕರ್ನಾಟಕ ಹಲವು ವಿಕ್ರಮಗಳನ್ನು ಮಾಡಿದೆ. ಭಾರತದಲ್ಲಿ ಅಷ್ಟೇ ಅಲ್ಲ, ಜಗತ್ತಿನ ಇತರ ರಾಷ್ಟ್ರಗಳ ವಿದ್ವಾಂಸರ ಗಮನವನ್ನೂ ಸೆಳೆಯುವಂತಾಗಿದೆ. ಈಗಲೂ ವಿದೇಶಿ ವಿದ್ವಾಂಸರು ಕರ್ನಾಟಕಕ್ಕೆ ಬಂದು ಇಲ್ಲಿನ ಜನಸಮುದಾಯಗಳು, ಅವರ ವಿಶಿಷ್ಟವಾದ ಜಾನಪದ ಕುರಿತು ಅಧ್ಯಯನ ಮಾಡುತ್ತಿದ್ದಾರೆ. ಜಗತ್ತಿನ ಇತರ ದೇಶಗಳ ಜನಸಮುದಾಯಗಳ ಕುರಿತಾದ ಹೆಚ್ಚಿನ ತಿಳಿವಳಿಕೆಗೆ ಅಗತ್ಯವಾದ ಮಾದರಿಗಳು, ಒಳನೋಟಗಳನ್ನು ಕರ್ನಾಟಕದಲ್ಲಿನ ದೇಸೀ ಮೂಲ ಸಮುದಾಯಗಳಲ್ಲಿ ಗುರುತಿಸುವ ಪ್ರಯತ್ನ ಅವರದು. ಅಷ್ಟಲ್ಲದೆಯೂ, ಇಲ್ಲಿನ ವೈವಿಧ್ಯಮಯ ಜನಸಮುದಾಯಗಳು ತಲೆಮಾರಿನಿಂದ ಕಟ್ಟಿಕೊಂಡು ಬಂದ ಬದುಕಿನ ಅನನ್ಯತೆಯನ್ನು ಅರಿಯುವುದು, ನಮ್ಮ ಒಳಗನ್ನು ತೆರೆಸುವ, ಅರಿವನ್ನು ಹೆಚ್ಚಿಸುವ ಕ್ರಿಯೆಗೆ ಪೂರಕವಾದುದಾಗಿರುತ್ತದೆ. ಜಗತ್ತನ್ನು ಕಾಡುತ್ತಿರುವ ಹಲವು ಪಿಡುಗುಗಳ ನಿವಾರಣೆಗೂ ಇಲ್ಲಿ ಮಾರ್ಗೋಪಾಯ ದೊರೆತೀತು.

ಈ ಮುನ್ನರಿವಿನಿಂದಾಗಿಯೇ, ನಮ್ಮ ಹಿರಿಯ ವಿದ್ವಾಂಸರು ಜಾನಪದಕ್ಕೊಂದು ವಿಶ್ವವಿದ್ಯಾನಿಲಯ ಅಗತ್ಯವೆಂದು ದಶಕಗಳಿಂದಲೂ ವಿವಿಧ ವೇದಿಕೆಗಳಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಹತ್ತು ವರ್ಷ ಆದ ಹೊತ್ತಿನಲ್ಲಿ, ಗುಲ್ಬರ್ಗಾದಲ್ಲಿ ನಡೆದ ರಾಜ್ಯಮಟ್ಟದ ಸಮ್ಮೇಳನದಲ್ಲೂ ಇದು ಪ್ರಸ್ತಾಪ ಆಯಿತು. ಕಾಳೇಗೌಡ ನಾಗವಾರರ ಸೂಚನೆಯಂತೆ ನಾನು ಈ ವಿಷಯವನ್ನು ಮಂಡಿಸಿದೆ. ಅವರು ಅನುಮೋದಿಸಿದರು ಹಾಗೂ ಸಮ್ಮೇಳನ ಸರ್ವಾನುಮತದಿಂದ ಠರಾವನ್ನು ಅಂಗೀಕರಿಸಿತು. ಸರಕಾರಕ್ಕೂ ಹೋಯಿತು. ಆದರೆ, ಆಮೇಲೆ ಆ ಬಗೆಗಿನ ದನಿ ಗಟ್ಟಿಯಾಗಲಿಲ್ಲ. ಎಚ್.ಎಲ್.ನಾಗೇಗೌಡ, ಜೀ.ಶಂ.ಪರಮಶಿವಯ್ಯ ಅವರಂತಹ ಧುರೀಣರು ಕಣ್ಮರೆಯಾದದ್ದು ಇದಕ್ಕೊಂದು ಕಾರಣ ಆದೀತು.

ಈಗ, ಇಷ್ಟು ವರ್ಷಗಳಿಂದಲೂ ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ವಿಭಿನ್ನವಾಗಿ ತೊಡಗಿಸಿಕೊಂಡು ಬಂದ, ಇದೀಗ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರೂ ಆಗಿರುವ ಶ್ರೀ ಗೊ.ರು.ಚನ್ನಬಸಪ್ಪ ಅವರು ಮತ್ತೆ ದನಿ ಎತ್ತಿದ್ದಾರೆ. ಅವರ ದನಿ ಸರಕಾರಕ್ಕೆ ಕೇಳುವಂತಾಗಿದೆ. ಇಂಥಾ ಸಂದರ್ಭ ಮತ್ತೆ ದೊರೆಯುವುದು ಕಷ್ಟವಾದೀತು. ಆದ್ದರಿಂದ, ಜಾನಪದ ಹಿತೈಷಿಗಳೆಲ್ಲ

ಜನಪದ ಬಯಲು ವಸ್ತು ಸಂಗ್ರಹಾಲಯದ ಸ್ವರೂಪ ಮತ್ತು ರೂಪುರೇಷೆ

– ಯು.ಎಸ್. ರಾಮಣ್ಣ

ಕರ್ನಾಟಕ ಸರ್ಕಾರ ಜಾನಪದ ವಿಶ್ವವಿದ್ಯಾನಿಲಯವನ್ನು ನೂತನವಾಗಿ ಸ್ಥಾಪಿಸುವುದು ಕನ್ನಡ ಜನತೆಗೆ ಸಂತೋಷವನ್ನುಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಯಾವ ಯಾವ ಅಂಶಗಳು ಇದರಲ್ಲಿ ಅಡಕವಾಗಿರಬೇಕೆಂಬುದು ಬಹಳ ಮುಖ್ಯವಾಗುತ್ತದೆ. ಈ ವಿಶ್ವವಿದ್ಯಾನಿಲಯವು ಇತರ ವಿಶ್ವವಿದ್ಯಾನಿಲಯಗಳಿಗಿಂತ ಭಿನ್ನವಾಗಿರಬೇಕೆಂಬುದು ಎಲ್ಲರ ಆಶಯವೂ ಆಗಿದೆ. ವಿಶ್ವವಿದ್ಯಾನಿಲಯದಲ್ಲಿ ಸಾಂಪ್ರದಾಯಿಕ ಪಠ್ಯಕ್ರಮಗಳ ಜೊತೆಗೆ ಜನಪದ ಕಲೆ ಮುಂತಾದ ವಿಚಾರಗಳ ಸೇರ್ಪಡೆಯಾಗಬೇಕಾಗುತ್ತದೆ. 'ಜಾನಪದ' ಎಲ್ಲದರ ತಾಯಿ ಬೇರಾದ್ದರಿಂದ ಬದುಕಿನ ಸಕಲ ವಿಷಯಗಳ ಅಧ್ಯಯನ ವಿಭಾಗಗಳನ್ನು ತೆರೆಯಬೇಕಾಗುತ್ತದೆ. ಜಾನಪದ ಮತ್ತು ಆದಿಮ ಸಂಸ್ಕೃತಿ, ಜಾನಪದ ಮತ್ತು ಮಾನವ ಶಾಸ್ತ್ರೀಯ ಅಧ್ಯಯನ, ಜಾನಪದ ಮತ್ತು ಮನಶಾಸ್ತ್ರೀಯ ಅಧ್ಯಯನ–ಹೀಗೆ ಹಲವು ನಿಟ್ಟಿನಿಂದ ಜಾನಪದ ಅಧ್ಯಯನ ನಡೆಸುವ ಅವಕಾಶವಿರಬೇಕಾಗುತ್ತದೆ. ಇವುಗಳ ಜೊತೆಗೆ ಜನಪದ ಸಂಸ್ಕೃತಿಯನ್ನು ಬಿಂಬಿಸುವ ವಸ್ತು ಸಂಗ್ರಹಾಲಯದ ಅಗತ್ಯವೂ ಇದೆ.

ಈಗಾಗಲೇ ಎಲ್ಲ ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಜಾನಪದ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿವೆ. ಜೊತೆಗೆ ಖಾಸಗಿಯಾಗಿಯೂ ಕೆಲವು ವ್ಯಕ್ತಿಗಳು ಮತ್ತು ಮಠಮಾನ್ಯಗಳ ಸಂಗ್ರಹಾಲಯಗಳು ತಲೆ ಎತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಈ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸ ಹೊರಟಿರುವ ಬಯಲು ಸಂಗ್ರಹಾಲಯ ಸುಸಜ್ಜಿತವಾದ ಮಾದರಿ ಜಾನಪದ ವಸ್ತು ಸಂಗ್ರಹಾಲಯವಾಗಬೇಕು. ಸಾಮಾನ್ಯವಾಗಿ ಕರ್ನಾಟಕದ ಎಲ್ಲ ವಸ್ತು ಸಂಗ್ರಹಾಲಯಗಳು ವಸ್ತುಗಳ ಸಂಗ್ರಹದಲ್ಲಿ ತೊಡಗಿಕೊಂಡು ವಸ್ತುಗಳನ್ನು ಸಂಗ್ರಹಿಸಲಾಗಿದೆ. ಆದರೆ ಯಾವ ವಸ್ತು ಸಂಗ್ರಹಾಲಯವೂ

ಜಾನಪದಕ್ಕೆ ಒಂದು ವಿಶ್ವವಿದ್ಯಾನಿಲಯವೇ ಏಕೆ ಬೇಕು?

– ಟಿ. ಗೋವಿಂದರಾಜು

'ಜಾನಪದ' ಎಂಬುದು ಇಡೀ ವಿಶ್ವವನ್ನು ಒಳಗೊಂಡ ಒಂದು ಜ್ಞಾನಸಮೂಹ. ಅದು ಮನುಷ್ಯರಿಗೆ ಮಾತ್ರ ಸಂಬಂಧಿಸಿದುದಲ್ಲ; ಪ್ರಾಣಿ, ಪಕ್ಷಿ, ಜಲಚರಾದಿಗಳನ್ನೂ ಒಳಗೊಂಡಿದೆ. ಬರೀ ಭೂಮಿಗೆ ಸಂಬಂಧಿಸಿದುದಲ್ಲ; ಆಗಸದ ಸೂರ್ಯ, ಚಂದ್ರಾದಿ ಗ್ರಹ, ತಾರೆಯರನ್ನೂ ಕುರಿತು ಮಾತನಾಡುತ್ತದೆ. ಕೇವಲ ಕಣ್ಣಿಗೆ ಕಾಣುವ ಪರಿಸರ, ಜೀವವನ್ನಲ್ಲ; ಅಗೋಚರವೆಂದು ನಂಬಿರುವ ದೇವ, ದೆವ್ವಗಳ ಹಾಗೆಯೇ, ಕೇವಲ ಹಳ್ಳಿಗೆ, ಅನಕ್ಷರಸ್ಥರಿಗೆ ಸಂಬಂಧಿಸಿದುದಲ್ಲ; ನಾಗರಿಕರಲ್ಲೂ, ಪ್ರಾಧ್ಯಾಪಕರಲ್ಲೂ ಜಾನಪದ ಇದೆ. ಜಾನಪದ ಎಂಬುದು ಕೇವಲ ಬಾಯಿ ಮಾತಿನ ಹಾಡು, ಕತೆ, ಮದುವೆ, ನಾಮಕರಣಕ್ಕೆ ಸಂಬಂಧಿಸಿದ್ದಲ್ಲ; ಅದರಲ್ಲಿ ವೈವಿಧ್ಯಮಯವಾದ ಕಲೆಗಳಿಗೆ, ನೃತ್ಯ–ಸಂಗೀತವಿದೆ; ವೈದ್ಯಶಾಸ್ತ್ರವಿದೆ, ಆಹಾರ ವಿಜ್ಞಾನವೂ ಇದೆ; ಭವಿಷ್ಯದ ಕಾಣ್ಕೆಯೂ ಇದೆ. ಹೀಗೆ, ಅದರಲ್ಲಿ ಎಲ್ಲ, ಎಲ್ಲವೂ ಇವೆ. ಅಂದರೆ, ಎಲ್ಲವನ್ನೂ ಕುರಿತು ಜನಪದರು ಮಾತಾಡಿದ್ದಾರೆ.

ಇಂಥಾ ಲೋಕವ್ಯಾಪಕವಾದ ಬಹುಮುಖೀ ಜ್ಞಾನ–ಸಂಪತ್ತನ್ನು ಕುರಿತು ಕೇವಲ ಜಾನಪದ ವಿದ್ವಾಂಸರಷ್ಟೇ ಅಲ್ಲದೆ ಭಾಷಾ–ವಿಜ್ಞಾನಿಗಳು, ಇತಿಹಾಸ–ಪುರಾತತ್ವ ಸಂಶೋಧಕರು, ಆಹಾರ ವಿಜ್ಞಾನಿಗಳೂ ಆಸಕ್ತಿಯಿಂದ ವಿವಿಧ ನೆಲೆಗಳಲ್ಲಿ ಅಧ್ಯಯನಗಳನ್ನು ನಡೆಸುತ್ತಿದ್ದಾರೆ. ಯಾವುದೇ ಕ್ಷೇತ್ರದ ಚಿಂತಕರನ್ನೂ ತನ್ನತ್ತ ಸೆಳೆಯಬಹುದಾದ ಸತ್ವ, ಮಹತ್ವ ಜಾನಪದಕ್ಕೆ ಇದೆ. ಜಾಗತೀಕರಣದ ಸಂದರ್ಭದಲ್ಲಿ ಇಂಥಾ ಅಮೂಲ್ಯವಾದ ಪಾರಂಪರಿಕ ಜ್ಞಾನವನ್ನು ಕುರಿತಾದ ಸಂಗ್ರಹ, ಸಂಶೋಧನೆ, ಪ್ರಚಾರ, ಸಂರಕ್ಷಣೆ ಇತ್ಯಾದಿಗಳು ತೀವ್ರ ಗತಿಯಲ್ಲಿ, ವೈಜ್ಞಾನಿಕ ನೆಲೆಯಲ್ಲಿ ಆಗಬೇಕಾದ ತುರ್ತು ಇದೆ. ಒಂದು ನಾಡಿನ, ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಅರಿಯಲು ಜಾನಪದ ಅತ್ಯಂತ ಉಪಯುಕ್ತವಾದುದಾಗಿದ್ದು, ಅಂತಹ ಅನೇಕ ಹೊಳಹುಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ.

ಪ್ರದರ್ಶನಗೊಳ್ಳುವಂತಾಗಬೇಕು. ಈ ಕಲಾವಿದರಿಗೆ ಅವರವರ ಶೈಕ್ಷಣಿಕ ಮಟ್ಟಕ್ಕೆ ತಕ್ಕಂತೆ ಸಂಭಾವನೆ ನೀಡಬೇಕಾಗುವುದು. ಬಯಲು ಸಂಗ್ರಹಾಲಯವನ್ನು ಸುತ್ತಿ ಬರಲು ಆಯಾಯಾ ಪ್ರದೇಶದ ಬಂಡಿಯ ಮಾದರಿಗಳನ್ನು ಇಡಬಹುದು. ಒಟ್ಟಿನಲ್ಲಿ ಚಿಕಾಗೋ ನಗರದಲ್ಲಿರುವ ಫೀಲ್ಡ್ ಮ್ಯೂಸಿಯಂ ಅಥವಾ ಬ್ರಿಟನ್ ದೇಶದ ಉತ್ತರ ಭಾಗದಲ್ಲಿರುವ ಭೀಮಿಷ್ ಮ್ಯೂಸಿಯಂನಂತೆ ಪರಿಸರ ಸ್ನೇಹಿ ಬಯಲು ಸಂಗ್ರಹಾಲಯದ ಸ್ಥಾಪನೆಯ ಅಗತ್ಯವಿದೆ.

ಪ್ರಾಣಿಶಾಸ್ತ್ರ, ಭೂಗರ್ಭಶಾಸ್ತ್ರ, ಜನಾಂಗೀಯ ಶಾಸ್ತ್ರಗಳ ಸಂಗ್ರಹ ಅಗತ್ಯವಾಗಿ ಆಗಬೇಕು. ಇದರ ಜೊತೆಗೆ ವಿಶ್ವಪರಂಪರೆಗೆ ಒಳ್ಳೆಯ ಮಾದರಿಯಾಗುವ ರೀತಿಯಲ್ಲಿ ಆಫ್ರಿಕ, ಅಮೆರಿಕ, ಯೂರೋಪ್, ಏಷ್ಯಾ ಮತ್ತು ಆಸ್ಟ್ರೇಲಿಯಾ ದೇಶದ ಸಂಗ್ರಹಾಲಯಗಳ ಮುಖ್ಯಸ್ಥರೊಡನೆ ವ್ಯವಹರಿಸಿ ವಸ್ತು ವಿನಿಮಯದ ಮೂಲಕ ಅಲ್ಲಿಯ ಜನಪದ ವಸ್ತುಗಳನ್ನೂ ಸಂಗ್ರಹಿಸಲು ಪ್ರಯತ್ನಿಸಬಹುದು. ತೀವ್ರ ಬದಲಾವಣೆಯ ಯುಗದಲ್ಲಿರುವ ನಾವು ನಮ್ಮ ನಶಿಸುತ್ತಿರುವ ಎಲ್ಲ ಬಗೆಯ ಕೈ ಕಸುಬುಗಳ ಸಾಧನಗಳ ದಾಖಲೀಕರಣವನ್ನೂ ಮಾಡಬೇಕು. ಭೌತಿಕ ಜಾನಪದದ ಅಧ್ಯಯನದ ದೃಷ್ಟಿಯಿಂದ ಇದು ಬಹಳ ಮುಖ್ಯವಾಗುತ್ತದೆ.

ಈ ಮೇಲೆ ತಿಳಿಸಿದ ಕೆಲಸಗಳಾಗಬೇಕಾದಲ್ಲಿ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಕಟ್ಟುವ ಕಟ್ಟಾಳುಗಳ ಸಂಖ್ಯೆ ಬೆಳೆಯಬೇಕು. ಸಂಗ್ರಹಕ್ಕಾಗಿ ನಿಯೋಜಿತರಾದ ಜಾನಪದ ತಜ್ಞರು ಸಂಗ್ರಹಕಾರ್ಯ ಪ್ರಾರಂಭವಾದ ಕೂಡಲೆ ಸಂಪೂರ್ಣ ಮಾಹಿತಿಯೊಡನೆ ವಸ್ತುಗಳನ್ನು ಸಂಗ್ರಹಿಸಬೇಕು. ಸಂಗ್ರಹಿಸಿದ ದಿನಾಂಕ, ಕೊಟ್ಟವರ ಹೆಸರು, ವಿಳಾಸ, ಸಂಗ್ರಹಿಸಿದವರ ಹೆಸರು, ವಸ್ತುವಿನ ಉಪಯೋಗ, ಅದರ ಸಾಂಸ್ಕೃತಿಕ ಮಹತ್ವ, ಜಾನಪದ ಶಾಸ್ತ್ರ, ಸಮಾಜ ಶಾಸ್ತ್ರ, ಜೀವ ಶಾಸ್ತ್ರ ಹೀಗೆ ಹತ್ತು ಹಲವು ಅಧ್ಯಯನದಲ್ಲಿ ಸಂಗ್ರಹಿಸಿದ ವಸ್ತುವಿನ ಪಾತ್ರ ಅದರ ಬಗೆಗಿರುವ ನಂಬಿಕೆ, ವಸ್ತುವಿನ ಬಗೆಗಿನ ಸಾಹಿತ್ಯಿಕ ಅಂಶಗಳನ್ನು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ದಾಖಲಿಸಬೇಕು.

ಒಟ್ಟಿನಲ್ಲಿ ಈ ಕೆಳಕಂಡ ಅಂಶಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಹೊಸ ಬಯಲು ಸಂಗ್ರಹಾಲಯವನ್ನು ಕಟ್ಟಬಹುದಾಗಿದೆ.

- ಪೂರ್ಣ ಪ್ರಮಾಣದ ರಾಸಾಯನಿಕ ಪ್ರಯೋಗಾಲಯ ಅಗತ್ಯವಾಗಿರಬೇಕು. ಮೈಸೂರಿನ ಆರ್.ಸಿ.ಎಲ್. ನ ಸಹಯೋಗವನ್ನು ಇದಕ್ಕಾಗಿ ಪಡೆಯಬಹುದು.

ಶಾಸ್ತ್ರ, ಗಣಿತಶಾಸ್ತ್ರ, ಮನಶಾಸ್ತ್ರ......... ಹೀಗೆ ಎಲ್ಲ ಮಾನವಿಕ ಮತ್ತು ವೈಜ್ಞಾನಿಕ ಶಿಸ್ತುಗಳೊಂದಿಗೆ ಜಾನಪದದ ಅಂತರಶಿಸ್ತೀಯ ಅಧ್ಯಯನ ನಡೆಯಬೇಕಾಗಿದೆ. ದಕ್ಷಿಣ ಭಾರತೀಯ ಭಾಷಾ ತಜ್ಞರು, ಜಾನಪದ ತಜ್ಞರೂ ಇಲ್ಲಿರಬೇಕಾಗುತ್ತದೆ. ಒಟ್ಟಾರೆ ಜಾನಪದ ಅಧ್ಯಯನ ಎಂದರೆ ಮಾನವನ ಸಮಸ್ತ ವಸ್ತು, ವಿಷಯ, ಜ್ಞಾನಗಳ ಅಧ್ಯಯನ ಜಾನಪದ ವಿಶ್ವವಿದ್ಯಾನಿಲಯದ ಉದ್ದೇಶವಾಗಬೇಕಾಗುತ್ತದೆ.

ಜಾನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಒಂದೊಂದೂ ವಿಷಯಕ್ಕೆ ಜಾನಪದ ವಿಶ್ವಕೋಶಗಳು ಪ್ರಕಟಗೊಳ್ಳಬೇಕು. ಜನಪದ ವೈದ್ಯ, ಅಡುಗೆ, ಗ್ರಾಮ ದೇವತೆ, ಕಲೆ-ಕಲಾವಿದರು, ಕೃಷಿ, ಗ್ರಾಮೀಣ ಕಸುಬುದಾರರು, ಆದಿವಾಸಿಗಳೇ ಮೊದಲುಗೊಂಡ ವಿಷಯ ವಿಶ್ವಕೋಶಗಳು ರೂಪುಗೊಳ್ಳಬೇಕು. ಜನಪದ ಶಬ್ದಗಳಿಗೆ ಅರ್ಥವನ್ನಷ್ಟೇ ಹೇಳಿದರೆ ಪ್ರಯೋಜನವಾಗದು ಅದು ಜಾನಪದ ಶಬ್ದಕೋಶವಾಗಬೇಕು. ಇಲ್ಲಿ ಅರ್ಥಗಳೊಡನೆ ಪ್ರಯೋಗ, ಸಂದರ್ಭ, ಟಿಪ್ಪಣಿ, ವಿವರಣೆಗಳೂ ಸೇರಬೇಕು. ಕರ್ನಾಟಕ ಜಾನಪದ ಪರಿಷತ್ತಿನ 'ಕನ್ನಡ ಜಾನಪದ ಶಬ್ದಕೋಶ' ಮಾದರಿಯಾಗಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಜಾನಪದ ವಿಶ್ವಕೋಶ', ಮೈಸೂರು ವಿಶ್ವವಿದ್ಯಾನಿಲಯದ 'ವಿಷಯ ವಿಶ್ವಕೋಶ: ಜಾನಪದ' ಸಂಪುಟ, ಕರ್ನಾಟಕ ಜಾನಪದ ಅಕಾಡೆಮಿಯ 'ಜಾನಪದ ಕೈಪಿಡಿ'ಗಳ ಮಾದರಿಗಳೆಲ್ಲ ಒಟ್ಟು ಸೇರಿದರೆ ಮಾತ್ರ ಜಾನಪದದ ವ್ಯಾಪಕತೆಯನ್ನು ಗುರುತಿಸಲು ಸಾಧ್ಯವಾದೀತು.

ಜಾನಪದ ತತ್ವ-ವಿಧಾನಗಳು ಸಾಮಾನ್ಯ ಪತ್ರಿಕೆಯೊಂದಿಗೆ ಜಾನಪದದ ವಿವಿಧ ಪ್ರಕಾರಗಳು ಐಚ್ಛಿಕ ವಿಷಯಗಳಾಗಿದ್ದು ಬೋಧನಾಂಗ ಅತ್ಯಗತ್ಯವಾಗಿ ಇರಬೇಕು. ಬೋಧನೆ ಇದ್ದಾಗ ವಿದ್ವಾಂಸರು ಹೆಚ್ಚು ಹೆಚ್ಚು ಅಧ್ಯಯನಶೀಲರಾಗುತ್ತಾರೆ. ಅಲ್ಲದೆ ನಮಗೆ ಬೇಕಾದ ಸಮರ್ಥ ಜಾನಪದ ಕ್ಷೇತ್ರತಜ್ಞರನ್ನು ಇಲ್ಲಿ ರೂಪಿಸಿಕೊಳ್ಳುವಂತಾಗಬೇಕು. ಇದಕ್ಕೆ ಪೂರಕವಾಗಿ ಶಾಲಾ-ಕಾಲೇಜುಗಳಲ್ಲಿ ಜಾನಪದ ಐಚ್ಛಿಕ ವಿಷಯವಾಗಬೇಕು. ಜಾನಪದ ಅಭ್ಯಾಸ ಉದ್ಯೋಗ ದೊರಕಿಸಿಕೊಡುವಂತಾಗಬೇಕು.

ಬುಡಕಟ್ಟು ಹಾಗೂ ಗ್ರಾಮೀಣ ಜೀವನವನ್ನು ಸಮಗ್ರವಾಗಿ ಕಟ್ಟಿಕೊಡಬಲ್ಲಂಥ, ಪ್ರಾದೇಶಿಕ ವೈವಿಧ್ಯಗಳನ್ನು ಪ್ರತಿಬಿಂಬಿಸುವಂಥ ಬಯಲು ವಸ್ತು ಸಂಗ್ರಹಾಲಯಗಳು ರೂಪುಗೊಳ್ಳಬೇಕು (ಮಾಹಿತಿಗಾಗಿ 'ಕರ್ನಾಟಕ ಜಾನಪದ ವಸ್ತು ಸಂಗ್ರಹಾಲಯಗಳು' ಕಿರುಹೊತ್ತಿಗೆಯನ್ನಿರಿಸಿದ್ದೇನೆ). ಜಾನಪದ

ಜಾನಪದ ವಿಶ್ವವಿದ್ಯಾನಿಲಯ: ಹೀಗಿದ್ದರೆ ಹೇಗೆ?

– ಟಿ. ಗೋವಿಂದರಾಜು

ಜಗತ್ತಿನಲ್ಲಿ ವೈವಿಧ್ಯಮಯವಾದ ಭೂಭಾಗವಿದೆ; ಹವಾಗುಣವಿದೆ. ಅದಕ್ಕೆ ತಕ್ಕಂತೆ ಬಾಳು ರೂಪಿಸಿಕೊಂಡ ಅಸಂಖ್ಯ ಸಮುದಾಯಗಳಿವೆ. ದೈನಂದಿನ ಬದುಕಿನ ಯಾತನೆಗಳನ್ನು ನೀಗಿಸುವುದೇ ಜೀವದ ಪ್ರಮುಖ ಕಾರ್ಯಭಾರವಾಗಿದ್ದರೂ ಮನುಷ್ಯ ಜೀವ ಅದಷ್ಟಕ್ಕೇ ಸೀಮಿತವಾಗಿ ಉಳಿಯದೆ, ಬದುಕಿನ ಅನಂತ ಸಾಧ್ಯತೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ವಿಸ್ತರಿಸಿಕೊಳ್ಳುತ್ತಲೇ ಬಂದಿದೆ. ಇದಕ್ಕೆ ಪೂರಕವಾಗಿಯೇ ಮನುಷ್ಯನ ಕಲ್ಪನೆಗಳು, ವಿಚಾರಗಳು ಹುಟ್ಟಿಕೊಂಡಿವೆ; ಸಾಕಾರಗೊಂಡಿವೆ. ಇದೆಲ್ಲದರ ಫಲವಾಗಿಯೇ ಒಂದೊಂದು ಪ್ರದೇಶ, ಸಮುದಾಯಕ್ಕೂ ವಿಭಿನ್ನ ಎನ್ನಬಹುದಾದ ಊಟೋಪಚಾರ, ಉಡುಗೆ–ತೊಡುಗೆ, ಆಚಾರ–ಸಂಪ್ರದಾಯ, ಸಾಹಿತ್ಯ–ಕಲೆ, ಮನೆ, ಗುಡಿ–ಗಾಡಿ ಮೊದಲಾದವು ರೂಢಿಗೆ ಬಂದಿವೆ. ಮನುಷ್ಯ ಬದುಕಿಗೆ ವಿಶೇಷ ಆಯಾಮ, ಅರ್ಥಪ್ರಾಪ್ತಿಗೆ ಇದೂ ಕಾರಣವಾಗಿದೆ.

ಇಂಥ ಮಾನವ ಸಮುದಾಯಗಳ ಅಂತರಂಗ–ಬಹಿರಂಗಗಳ ರೂಪು–ಭಾಪು ಕುರಿತು ತಿಳಿಯುವ ಕುತೂಹಲ ಮಾನವನಲ್ಲಿ ಆದಿಕಾಲದಿಂದಲೂ ಮೂಡಿಬಂದಿದೆ. ಇದು ತನ್ನನ್ನು ತಾನು ಅರ್ಥಮಾಡಿಕೊಳ್ಳಲು ಮಾಡಿದ ಸಾಹಸವೂ ಹೌದು. ಸಮುದಾಯಗಳು ವೈವಿಧ್ಯಮಯವಾದುದರಿಂದ ಒಂದೇ ನೆಲೆಯಲ್ಲಿ, ಏಕ ಪ್ರಯತ್ನಕ್ಕೇ ಎಲ್ಲವೂ ತಮ್ಮ ಗುಟ್ಟು ಬಿಟ್ಟುಕೊಡುವುದಿಲ್ಲ–ವಾದ್ದರಿಂದ, ಬೇರೆ ಬೇರೆ ಶಿಸ್ತುಗಳಿಂದ ಶೋಧನೆಗಳು, ಅಧ್ಯಯನಗಳು ಸಾಗಿವೆ. ಹುಟ್ಟು–ಬೆಳವಣಿಗೆ ಕುರಿತ ವೈಜ್ಞಾನಿಕ ನೆಲೆಯ ಪ್ರಯತ್ನವಿದ್ದಂತೆ ಮನುಷ್ಯನ ಆಚಾರ–ಸಂಪ್ರದಾಯಗಳ ಹುಟ್ಟು–ವೈಶಿಷ್ಟ್ಯಗಳ ಕುರಿತಾದ ಸಮಾಜೋ ಸಾಂಸ್ಕೃತಿಕ ನೆಲೆಯ ಅಧ್ಯಯನಗಳೂ ಹುಟ್ಟಿಕೊಂಡಿವೆ. ಇದೊಂದು ನಿರಂತರ ಪ್ರಕ್ರಿಯೆ. ಈ ಹುಡುಕಾಟ, ಅರ್ಥಗ್ರಹಿಕೆಯ ಪ್ರಮುಖ ಭಾಗವಾಗಿ 'ಶಿಕ್ಷಣ'ವಿದೆ. ಕಲಿಕೆ, ಬೋಧನೆ, ಸಂಶೋಧನೆ – ಎಲ್ಲವೂ ಪರಸ್ಪರ

ಜಾನಪದದ ಸರ್ವಾಂಗೀಣ ಅಧ್ಯಯನ ಸಾಧ್ಯವಾಗಲಿ

– ವ.ನಂ. ಶಿವರಾಮು

ಪ್ರಿಯ ವಿದ್ಯಾಗುರುಗಳಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ಗೌರವಪೂರ್ವಕ ನಮಸ್ಕಾರಗಳು. ಬಹು ದಿನಗಳ ಬೇಡಿಕೆ ಹಾಗೂ ಅತ್ಯಗತ್ಯವಾಗಿ ಆಗಲೇಬೇಕಾಗಿದ್ದ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆ ಹರ್ಷ ತಂದಿದೆ. ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯಾಗಿ ನೇಮಕಗೊಂಡಿರುವ ತಮಗೆ ಹೃತ್ಪೂರ್ವಕ ಅಭಿನಂದನೆಗಳು. ಜಾನಪದ ವಿಶ್ವವಿದ್ಯಾನಿಲಯಕ್ಕೆ ಪೂರ್ಣಕಾಲೀನ ಜಾನಪದ ಪ್ರಾಧ್ಯಾಪಕರನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡಿರುವುದು ನ್ಯಾಯಯುತವಾಗಿಯೇ ಇದೆ. ಜ್ಯೇಷ್ಠತೆಯ ದೃಷ್ಟಿಯಿಂದಲೂ ತಮ್ಮ ನೇಮಕಾತಿ ಸ್ವಾಗತಾರ್ಹವಾದುದು. ಜಾನಪದ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿ ಗೌರವಕ್ಕೆ ಪಾತ್ರವಾಗಲಿರುವ ತಮಗೆ ಅಭಿನಂದನೆಗಳು.

ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಥಮ ರ್‍ಯಾಂಕಿನೊಂದಿಗೆ ಜಾನಪದ ಎಂ.ಎ ಪಡೆದುಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ 'ಕರ್ನಾಟಕ ಜನಪದ ವೈದ್ಯಕೋಶ', ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯದರ್ಶಿ, 'ಜಾನಪದ ಲೋಕ'ದ ಆಡಳಿತ ಮತ್ತು ಸಂಶೋಧನಾಧಿಕಾರಿಯಾಗಿ ಅಲ್ಲದೆ ಜಾನಪದ ಸಂಗ್ರಹ, ಸಂಪಾದನೆ, ಸಂಶೋಧನಾ ಕ್ಷೇತ್ರದಲ್ಲಿ ನಾನು ಪಡೆದುಕೊಂಡಿರುವ ಅನುಭವಗಳ ಹಿನ್ನೆಲೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಕಾರ್ಯಯೋಜನೆಗಳ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಜಗತ್ತಿನ ಎಲ್ಲ ಜ್ಞಾನ ಶಾಖೆಗಳಿಗೂ ಜಾನಪದವೇ ತಾಯಿಬೇರು; ಮಾರ್ಗ, ಶಿಷ್ಟ, ಶಾಸ್ತ್ರೀಯ, ವೈಜ್ಞಾನಿಕ, ತಾಂತ್ರಿಕ, ಆಧುನಿಕ ಎಂದೆಲ್ಲ ಗುರುತಿಸಿಕೊಂಡಿರುವ ಎಲ್ಲ ಜ್ಞಾನ-ವಿಜ್ಞಾನಗಳ ಮೂಲ ಆಕರ ಜಾನಪದ ಎಂಬ ಸಂಗತಿ ಈಗಾಗಲೇ ಸಾಬೀತಾಗಿರುವಂಥದ್ದು. ಹೀಗಾಗಿ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕಾರರೊಂದಿಗೆ ಇತರ ಎಲ್ಲ ಮಾನವಿಕ, ವೈಜ್ಞಾನಿಕ, ತಾಂತ್ರಿಕ

ತಾಂತ್ರಿಕವಾಗಿಯೂ, ಬೌದ್ಧಿಕವಾಗಿಯೂ ಇಂದು ಬಹು ಉನ್ನತಿಯನ್ನು ಸಾಧಿಸಲಾಗಿದೆ. ನಮ್ಮ ಎಲ್ಲಾ ಜ್ಞಾನ ವಿಶೇಷಗಳ ತಾಯಿ ಬೇರು ಜಾನಪದ ಮೂಲದ್ದೇ ಆಗಿದೆ ಎಂಬುದು ಸಾಮಾನ್ಯ ತಿಳಿವಳಿಕೆಯೂ ಆಗಿದೆ. ಹೀಗಿದ್ದೂ, ಜಾನಪದ ಕುರಿತಾದ ಶೋಧನೆ, ತಿಳಿವಳಿಕೆ, ವಿಶ್ಲೇಷಣೆ, ಪೋಷಣೆ ಸಾಕಷ್ಟು ಸರಿಯಾದ ಪ್ರಮಾಣದಲ್ಲಿ, ರೀತಿಯಲ್ಲಿ ಆಗಲಿಲ್ಲ –ಎಂಬುದೂ ಗಮನಾರ್ಹವಾಗಿದೆ. ಇನ್ನೂ ಮುಂದುವರೆದು, ಅಲಕ್ಷಿತರ, ಅಸಂಘಟಿತರ, ದನಿ ಕಳೆದುಕೊಂಡವರ ದನಿಯಾಗಿ ನಿಲ್ಲುವ, ಅವರ ಕಲೆ–ಸಾಹಿತ್ಯಾದಿ ಜ್ಞಾನ ಪರಂಪರೆಗೆ ಜಾಗತಿಕ ಮಟ್ಟದಲ್ಲಿ ಮಹತ್ವ ತಂದುಕೊಡುವ ವಿಶಿಷ್ಟ ಪ್ರಯತ್ನ ವಿಶ್ವವಿದ್ಯಾನಿಲಯದಿಂದ ಆಗಬೇಕಾಗಿದೆ. ಜಾನಪದ ವಿಶ್ವವಿದ್ಯಾನಿಲಯ ಎಂಬುದು ಜನ ಸಾಮಾನ್ಯರನ್ನು ಕೇಂದ್ರವಾಗಿರಿಸಿಕೊಂಡ ಒಂದು ಉನ್ನತ ಶೈಕ್ಷಣಿಕ ಸಂಸ್ಥೆಯಾಗುತ್ತದೆ; ಆಗಬೇಕು; ಆಧುನಿಕ ಸಂದರ್ಭದ ಅನೇಕ ಕೇಡುಗಳ ನಡುವೆ ಸಿಕ್ಕಿ ನರಳುತ್ತಿರುವ ಅವರ ಬದುಕಿಗೆ, ಮನಸ್ಸಿಗೆ ಹೊಸ ಚೈತನ್ಯದಾಯೀ ಶಕ್ತಿಯಾಗುವ ಕೆಲಸವನ್ನೂ ಅದು ಮಾಡಬೇಕು. ದೇಸೀತನದ ಪ್ರಚ್ಛನ್ನ ಸಾಮರ್ಥ್ಯಗಳನ್ನೂ ಅದು ಶೋಧಿಸಬೇಕು. ಜಗತ್ತಿನಲ್ಲಿಯೇ ಇದು ಮೊದಲ ಜಾನಪದ ವಿಶ್ವವಿದ್ಯಾನಿಲಯ ಎಂಬ ಅಗ್ಗಳಿಕೆಯನ್ನು ಉಗ್ಗಡಿಸುವುದು ಆಮೇಲಿನದಾಗಬೇಕು. ದೂರಾನ್ವಯವೂ ಆಗುವ ಕಾಣ್ಕೆ, ಸದೃಢವಾದ ವೈಚಾರಿಕ ಮನೋಭೂಮಿಕೆ ಈ ವಿಶ್ವವಿದ್ಯಾನಿಲಯಕ್ಕೆ ದಕ್ಕಬೇಕು. ಅರ್ಥಾತ್, ವಿಶ್ವವಿದ್ಯಾನಿಲಯದ ಸಂರಚನೆ ವಿಶಿಷ್ಟ ತಳಹದಿಯ ಮೇಲೆ ರೂಪಿತವಾಗಬೇಕು. ನಾಡಿನ ವಿಚಾರವಂತರು, ಜಾನಪದ ಹಿತೈಷಿಗಳು ವಿಶ್ವವಿದ್ಯಾನಿಲಯದ ರೂಪುರೇಷೆ ನಿರ್ವಚನದಲ್ಲಿ ಮುಕ್ತವಾಗಿ ಸಂವಾದಿಸಬೇಕು; ನುಡಿ ರೂಪ ನೀಡಬೇಕು.

ವಿಶ್ವವಿದ್ಯಾನಿಲಯದ ಆಕೃತಿ ವಿಭಿನ್ನವಾಗಿ ಇರುವಂತೆಯೇ, ಅದರ ವಿವಿಧ ಅಂಗ–ಉಪಾಂಗಗಳ ಹೆಸರೂ ತನ್ನತನದಿಂದ ಕೂಡಿ ಮೊದಲ ಕೇಳುವಿಕೆಗೇ ತೀವ್ರವಾಗಿ ಗಮನ ಸೆಳೆಯುವಂತಿರಬೇಕು. ಈ ವಿಚಾರದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಯತ್ನ ಮಾದರಿಯಾಗಿದೆ. ಜಾನಪದ ವಿಶ್ವವಿದ್ಯಾನಿಲಯ ಅದರಿಂದಲೂ ಮುಂದೆ ಹೋಗಿ ಗ್ರಾಮೀಣ ಸೊಗಡಿನ, ಗ್ರಾಮೀಣ ಬದುಕಿನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ, ಇರುವ ಹಲವು ಪಾರಿಭಾಷಿಕ ಪದಗಳನ್ನೇ ವಿಶ್ವವಿದ್ಯಾನಿಲಯದಲ್ಲಿಯೂ ಬಳಸಲು ಸಾಧ್ಯವಿದೆ. ಉದಾಹರಣೆಗೆ – ಇಡೀ ವಿಶ್ವವಿದ್ಯಾನಿಲಯವನ್ನು ಒಂದು ದೊಡ್ಡ ಗ್ರಾಮ ಎಂದು ಪರಿಭಾವಿಸಿದರೆ, ಅದರಲ್ಲಿ ವಿವಿಧ ಕೇರಿಗಳು / ಹಟ್ಟಿಗಳು / ವಠಾರಗಳು

ಜಗತ್ತಿನ ಮೊದಲ ಜಾನಪದ ವಿಶ್ವವಿದ್ಯಾನಿಲಯ

– ತೀ.ನಂ. ಶಂಕರನಾರಾಯಣ

ಕರ್ನಾಟಕ ಸರ್ಕಾರ ಜಾನಪದ ವಿಶ್ವವಿದ್ಯಾನಿಲಯುವನ್ನು ಆರಂಭಿಸಿರುವುದು ಸಂತೋಷದ ಸಂಗತಿ. ಯೂರೋಪ್, ಅಮೆರಿಕಾ ಹಾಗೂ ಭಾರತದ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಜಾನಪದಕ್ಕೆ ಪ್ರತ್ಯೇಕವಾದ ಅಧ್ಯಯನ ವಿಭಾಗಗಳು ಮತ್ತು ಸಂಶೋಧನಾ ಕೇಂದ್ರಗಳಿವೆ. ಆದರೆ ಜಾನಪದಕ್ಕೇ ಪ್ರತ್ಯೇಕವಾದ ವಿಶ್ವವಿದ್ಯಾನಿಲಯುವಿರಲಿಲ್ಲ. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯುವೇ ಜಗತ್ತಿನ ಮೊಟ್ಟ ಮೊದಲ ಜಾನಪದ ವಿಶ್ವವಿದ್ಯಾನಿಲಯವಾಗಿರುವುದು ಐತಿಹಾಸಿಕವಾಗಿ ಮಹತ್ವಪೂರ್ಣ ಘಟನೆ.

ಈ ವಿಶ್ವವಿದ್ಯಾನಿಲಯದ ಅಧ್ಯಯನ ಮತ್ತು ಸಂಶೋಧನೆಗಳು ಕೇವಲ ಅಕಾಡೆಮಿಕ್ ಆಗಿರದೆ ಆನ್ವಯಿಕ ಸ್ವರೂಪದ್ದು ಆಗಿದ್ದು, ಗ್ರಾಮೀಣ, ಬುಡಕಟ್ಟು ಮೊದಲಾದ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಿ, ಕೀಳರಿಮೆಯನ್ನು ಹೋಗಲಾಡಿಸಿ, ತಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸಬೇಕು; ವಿಮರ್ಶಾತ್ಮಕವಾಗಿ ಗುಣದೋಷಗಳನ್ನು ಗುರುತಿಸಿ, ದೋಷಗಳನ್ನು ಕೈಬಿಟ್ಟು, ಗುಣಾತ್ಮಕ ಅಂಶಗಳನ್ನು ಅಳವಡಿಸಲು ನೆರವಾಗಬೇಕು; ಅವುಗಳ ಅಭಿವೃದ್ಧಿಗೂ ನೆರವಾಗಬೇಕು. ಜಾನಪದದ ಐತಿಹಾಸಿಕ ಮಹತ್ವವನ್ನು ಮಾತ್ರವಲ್ಲದೆ ಸಮಕಾಲೀನ ಪ್ರಸ್ತುತತೆಯನ್ನೂ ತಿಳಿಸಬೇಕು. ಹೀಗಾಗಬೇಕಾದರೆ ಇದು ಅಂತರಶಿಸ್ತೀಯ ಮತ್ತು ಆನ್ವಯಿಕ ಅಧ್ಯಯನವಾಗಬೇಕು. ಕೃಷಿ ವಿಶ್ವವಿದ್ಯಾನಿಲಯ, ವೈದ್ಯಕೀಯ ವಿಶ್ವವಿದ್ಯಾನಿಲಯ, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ, ವಿಶ್ವವಿದ್ಯಾನಿಲಯಗಳ ಗೃಹವಿಜ್ಞಾನ ಹಾಗೂ ದೈಹಿಕ ವಿಜ್ಞಾನ ವಿಭಾಗಗಳು, ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ, ಯುವಜನ ಸೇವಾ ಇಲಾಖೆ, ಪ್ರವಾಸೋದ್ಯಮ ಇಲಾಖೆ ಮೊದಲಾದವುಗಳ ನೆರವು ಪಡೆದು, ಅವುಗಳಿಗೆ ಸಲಹೆ ನೀಡಬೇಕು. ಕನ್ನಡ ಮಾತ್ರವಲ್ಲದೆ ತುಳು, ಕೊಡವ ಮೊದಲಾದ

(ಅನಿವಾರ್ಯವಾದಲ್ಲಿ ಆಧುನಿಕ ತಂತ್ರಜ್ಞಾನದ ಕೆಲ ಅಂಶಗಳನ್ನು ಬೆರೆಸಿ ದೇಸೀ ಶೈಲಿಯ ಗೃಹಗಳನ್ನು ನಿರ್ಮಿಸುವುದು ಅಸಾಧ್ಯವೇನೂ ಅಲ್ಲ). ಆಧುನಿಕತೆ ಹೆಸರಲ್ಲಿ ವಿಶ್ವವಿದ್ಯಾನಿಲಯವನ್ನು ಕಾಂಕ್ರೀಟ್ ಕಟ್ಟಡಗಳ ಮಸಣ ಮಾಡುವ ಬದಲು ಹೀಗೆ ವಿಭಿನ್ನವಾಗಿ ರೂಪಿಸಿದರೆ ಆಗ ಅದಕ್ಕೆ ಪ್ರವಾಸಿ ತಾಣದ ಮಹತ್ವವೂ ತಾನಾಗಿ ಪ್ರಾಪ್ತವಾಗುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಬೋಧನೆ, ಸಂಶೋಧನೆಗಳಿಗೆ ಸಹಜವಾಗಿಯೇ ಅವಕಾಶವಿರುತ್ತದೆ. ಪಠ್ಯಕ್ರಮ ಏನಿರಬೇಕೆಂಬುದನ್ನು ತಜ್ಞರೇ ನಿರ್ಧರಿಸಲಿ. ಆದರೆ, ತರಗತಿ–ಪದವಿ ಬೋಧನೆಗಿಂತ ಸಂಶೋಧನೆಗೆ ಹೆಚ್ಚಿನ ಆದ್ಯತೆ ಇರಬೇಕು. ಬೋಧನೆಯಲ್ಲಿಯೂ ಕೇವಲ ಜಾನಪದ ತತ್ವ –ಪ್ರಕಾರ ಇತ್ಯಾದಿಗಳಿಗೆ ಸೀಮಿತ ಆಗುವ ಬದಲು ಭಾಷಾವಿಜ್ಞಾನ, ಮನೋವಿಜ್ಞಾನ, ಮಾನವಶಾಸ್ತ್ರ, ವಾಸ್ತುವಿಜ್ಞಾನ....... ಮೊದಲಾದ ಅನ್ಯ ಶಿಸ್ತುಗಳ ಸಾಹಚರ್ಯದಿಂದಲೇ ಜಾನಪದ ಬೋಧನೆ ಆಗುವುದು ತೀರಾ ಅಗತ್ಯ. ಆದ್ದರಿಂದ, ಅಂತಹ ತಜ್ಞರೂ ಇಲ್ಲಿ ಗೌರವ ಪ್ರಾಧ್ಯಾಪಕರಾಗಿಯಾದರೂ ಕಾರ್ಯನಿರ್ವಹಿಸಬೇಕಾಗುತ್ತದೆ.

ಇದರಂತೆಯೇ ಪ್ರಾಧಾನ್ಯತೆ ಇರಬೇಕಾದುದು ಜನಪದ ಕಲೆಗಳ ಕಲಿಕೆಗೆ (ಆಯ್ದ ರೂಪಗಳು). ಇವನ್ನು ಗ್ರಾಮೀಣ ತಜ್ಞ ಕಲಾವಿದರೇ ಪ್ರಾಧ್ಯಾಪಕ ಸ್ಥಾನದಲ್ಲಿ ನಿಂತು ಕಲಿಸುವಂತಾಗಬೇಕು. ಈ ಕಲಿಕೆ ಅವರಿಗೆ ಕೇವಲ ಕಲೆಯಾಗಿ ಅಷ್ಟೇ ಉಳಿಯದೆ, ಆಧುನಿಕ ಬದುಕಿಗೆ, ಅಂತಾರಾಷ್ಟ್ರೀಯ ಬಳಕೆಗೆ ಸಶಕ್ತವಾಗುವಂತೆಯೂ ಇರಬೇಕು.

ಜಾನಪದ ವಿಶ್ವವಿದ್ಯಾನಿಲಯವು ಸ್ಥಳೀಯ (ನಾಡಿನ) ಬೌದ್ಧಿಕ ಸಂಪನ್ಮೂಲವನ್ನು ಬೆಳೆಸುವ, ಹಾಗೆಯೇ, ಅಂತಾರಾಷ್ಟ್ರೀಯ ಅಧ್ಯಯನ ಕೇಂದ್ರವೂ ಆಗಿ ಬೆಳೆದು ನಿಲ್ಲಬೇಕು. ಅದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಕಲಿಕೆ –ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದಾಗಬೇಕು.

ಅಂತೂ, ಈಗಾಗಲೇ ಎಷ್ಟೋ ವಿಶ್ವವಿದ್ಯಾನಿಲಯಗಳಿವೆ; ಮುಂದೆಯೂ ಹೊಸವು ಬರಲಿವೆ. ಜಾನಪದ ವಿಶ್ವವಿದ್ಯಾನಿಲಯವು ಹತ್ತರ ಜತೆ ಹನ್ನೊಂದನೆಯದಾಗಿ, ಕಳೆದು ಹೋಗುವ ಬದಲು, ಅದು ಎಂದಿಗೂ ತಾನೇ ಒಂದು –ಎಂಬಂತೆ ಆಗಲಿ.

ಚಾಮರಾಜನಗರದಲ್ಲೇ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿ

– ಸಿ.ಎಂ. ನರಸಿಂಹಮೂರ್ತಿ

ಕರ್ನಾಟಕದ ಜಾನಪದ ಸಂಪತ್ತಿನ ಅಧ್ಯಯನಕ್ಕಾಗಿ ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂದು ಕನ್ನಡದ ವಿದ್ವಾಂಸರು, ಜಾನಪದ ತಜ್ಞರು, ಕವಿಗಳು, ಸಾಹಿತಿಗಳು ಮತ್ತು ಸಾಂಸ್ಕೃತಿಕ ರಾಯಭಾರಿಗಳು; ಸಂಘ-ಸಂಸ್ಥೆಗಳು ಸರ್ಕಾರವನ್ನು ಒತ್ತಾಯಿಸಿದ್ದರು. ಇದರ ಫಲವಾಗಿ ವಿಶ್ವದಲ್ಲಿಯೇ ಮೊಟ್ಟಮೊದಲ ಬಾರಿಗೆ ಜಾನಪದ ವಿಶ್ವವಿದ್ಯಾನಿಲಯವನ್ನು ಕರ್ನಾಟಕದಲ್ಲಿ ಸ್ಥಾಪಿಸಲು ಮುಂದಾಗಿರುವುದು ನಿಜಕ್ಕೂ ಅಭಿನಂದನೀಯ. ಇದಕ್ಕಾಗಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರನ್ನು ಅಭಿನಂದಿಸುತ್ತೇನೆ.

ಚಾಮರಾಜನಗರ ಅತ್ಯಂತ ಹಿಂದುಳಿದ ಗಡಿ ಜಿಲ್ಲೆಯಾದರೂ ಸಹ ಜಾನಪದದ ಬೃಹತ್ ಕಣಜ. ಮಾದೇಶ್ವರ, ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿಗಳು ನಡೆದಾಡಿದ ಪುಣ್ಯ ಭೂಮಿ ಇದು. ಫಿನ್‌ಲ್ಯಾಂಡ್‌ನ ಕಲೇವಾಲ ಬಿಟ್ಟರೆ ಮಾದೇಶ್ವರ ಕಾವ್ಯವೇ ಬೃಹತ್ ಮೌಖಿಕ ಜನಪದ ಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಾದೇಶ್ವರ, ಮಂಟೇಸ್ವಾಮಿ ಕಾವ್ಯ ಈ ಭಾಗದ ನೀಲಗಾರರು, ಕಂಸಾಳೆಯವರ ಬಾಯಲ್ಲಿ ಈಗಲೂ ಜೀವಂತವಾಗಿ ಉಳಿದಿವೆ. ಜನಪದ ಗೊಂಬೆಯಾಟದ ಅನೇಕ ಕುಟುಂಬಗಳು ಜಿಲ್ಲೆಯಲ್ಲಿವೆ. ಮಾದೇಶ್ವರನ ಮೇಲೆ ರಚಿತವಾದ ಜನಪದ ಗೀತೆಗಳ ದೊಡ್ಡ ಭಂಡಾರವೇ ಜಿಲ್ಲೆಯಲ್ಲಿದೆ. ಕಾಡಿನ ಮಕ್ಕಳಾದ ಸೋಲಿಗರ ಜನಪದ ಹಾಡುಗಳು, ಆಚರಣೆಗಳು, ಸಾವಿರಾರು ಜನಪದ ಔಷಧೀಯ ಸಸ್ಯಗಳು ಇಲ್ಲಿವೆ. ಸುಮಾರು ಮುನ್ನೂರಕ್ಕೂ ಹೆಚ್ಚು ಮರಗಳನ್ನು ಹೇಳುವ ಮತ್ತು ಗುರುತಿಸುವ ಸೋಲಿಗರು ಇಲ್ಲಿದ್ದಾರೆ. ಇದಲ್ಲದೆ ಜಿಲ್ಲೆಯಲ್ಲಿ ಲಂಬಾಣಿಗಳು, ಬೇಡಕಂಪಣರು, ಗೊರವರು, ದಲಿತ ವರ್ಗದವರ ಜನಪದ ಹಾಡುಗಳ ಆಚರಣೆಗಳ ಪರಂಪರೆ ಹೇರಳವಾಗಿವೆ.

ಸಂಪಾದನೆಗೆ ನಿರ್ದಿಷ್ಟ ಮಾನದಂಡಗಳಿವೆ. ಅದರಂತೆ ಜನಪದ ಮಟ್ಟುಗಳ ಸಂಪಾದನೆಗೆ ಮಾನದಂಡಗಳನ್ನು ರೂಪಿಸಬೇಕಾಗಿದೆ. ಜನಪದ ಮಟ್ಟುಗಳು 'ಚಲನಶೀಲ ಪಠ್ಯ' ಗಳಾಗಿರುವುದರಿಂದ ಭಿನ್ನಪಾಠ, ರೂಪಾಂತರ, ಶಿಥಿಲತೆ ಮುಂತಾದ ತತ್ವಗಳನ್ನು ಇನ್ನಷ್ಟು ಖಚಿತಗೊಳಿಸಬೇಕಾಗಿದೆ.

೩. **ಸಾಹಿತ್ಯದಲ್ಲಿ ಜಾನಪದ ಅಧ್ಯಯನ ವಿಭಾಗ** : ಮಾರ್ಗ ಮತ್ತು ದೇಶಿ ಸಾಹಿತ್ಯದಲ್ಲಿ (ಪಂಪನಿಂದ ಆಧುನಿಕ ಸಾಹಿತ್ಯದವರೆಗೆ) ಜಾನಪದದ ಬಳಕೆ ಮತ್ತು ಪ್ರಭಾವ ತುಂಬ ಆಗಿದೆ. ಅವುಗಳಲ್ಲಿ ಹುದುಗಿರುವ ಜಾನಪದ ಅಂಶಗಳ ಸ್ವರೂಪವನ್ನು ಕುರಿತು ಅಧ್ಯಯನ ಆಗಬೇಕಾಗಿದೆ. ಉದಾ. ಪಂಪಭಾರತ, ವಡ್ಡಾರಾಧನೆ, ವಚನ, ದಾಸಸಾಹಿತ್ಯ ಮುಂತಾದ ಆಧುನಿಕ ಪೂರ್ವ ಸಾಹಿತ್ಯ ; ಬೇಂದ್ರೆ, ಆನಂದಕಂದ, ಜಿ.ಪಿ. ರಾಜರತ್ನಂ, ರಾವ್‌ಬಹಾದ್ದೂರ, ದೇವನೂರು, ಕಂಬಾರ ಮುಂತಾದ ಹೊಸಗನ್ನಡ ಸಾಹಿತ್ಯದ ಮೇಲೆ ಜಾನಪದದ ಬಳಕೆ ಮತ್ತು ಪ್ರಭಾವ ಕುರಿತು ಪ್ರತ್ಯೇಕ ಅಧ್ಯಯನ ವಿಭಾಗದ ಅಗತ್ಯವಿದೆ.

ಭಾಗ: ೨

೧. ಉದ್ದೇಶಿತ ಜಾನಪದ ವಿಶ್ವವಿದ್ಯಾನಿಲಯವು 'ಬೆಳಗಾವಿ' ಯಲ್ಲಿ ನಿರ್ಮಾಣವಾಗುವುದು ಸೂಕ್ತ ; ಸಮಂಜಸ. ಬೆಳಗಾವಿಯಲ್ಲಿ ಕನ್ನಡದ ಬೇರುಗಳು ಗಟ್ಟಿಗೊಳ್ಳಬೇಕಾಗಿದೆ. ಬೆಳಗಾವಿಯನ್ನು ಕೇಂದ್ರವಾಗಿಟ್ಟುಕೊಂಡು ದ್ವಿಭಾಷಿಕ ಪ್ರದೇಶಗಳ ಜಾನಪದ ಅಧ್ಯಯನ ವ್ಯಾಪಕವಾಗಿ ನಡೆಯಬೇಕಾಗಿದೆ.

೨. 'ಬೆಳಗಾವಿ' ಜಿಲ್ಲಾ ಸ್ಥಳ ; ವಿಭಾಗ ಸ್ಥಳ; ಮಹಾನಗರಪಾಲಿಕೆ. ಭೌಗೋಳಿಕವಾಗಿಯೂ ಸಹಿತ ಉತ್ತಮ ಹವಾಮಾನ, ಅರೆಮಲೆನಾಡು. ವಿದ್ವಾಂಸರಿಗೆ ಹೋಗಿ–ಬರಲಿಕ್ಕೆ ವಿಮಾನ ನಿಲ್ದಾಣ, ರೇಲ್ವೆ ಜಂಕ್ಷನ್ ಇತ್ಯಾದಿ ಸೌಕರ್ಯಗಳಿವೆ. ಬೆಳಗಾವಿ NH-4 ಹೆದ್ದಾರಿಯ ಪಕ್ಕದಲ್ಲಿದೆ.

೩. ಶ್ರೀ ಎಚ್. ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಬೆಳಗಾವಿಗೆ 'ಎರಡನೆಯ ರಾಜಧಾನಿ'ಯ ಸ್ಥಾನ–ಸೌಕರ್ಯ ಕಲ್ಪಿಸಿದ್ದಾರೆ.

ಅದರಲ್ಲೂ, ಸಾಂಸ್ಕೃತಿಕ ಹಿನ್ನೆಲೆಯ ವಿಶ್ವವಿದ್ಯಾನಿಲಯ ಒಂದು ನೆಲೆಗೊಳ್ಳುವಾಗ ಕೇವಲ ರಾಜಕೀಯ ಹಿತಾಸಕ್ತಿ, ಪೈಪೋಟಿ, ಪ್ರಾದೇಶಿಕ ಪ್ರಾತಿನಿಧ್ಯದಂತಹ ಕ್ಷುಲ್ಲಕ ಕಾರಣಗಳು ಪ್ರಧಾನವಾಗಬಾರದು. ಪ್ರಸ್ತುತ ಜಾನಪದ ವಿಶ್ವವಿದ್ಯಾನಿಲಯದ ಸ್ಥಳ ನಿರ್ಧರಿಸುವ ಸಂದರ್ಭದಲ್ಲೂ ಈ ಎಚ್ಚರ ಮತ್ತು ಬದ್ಧತೆ ಅತ್ಯವಶ್ಯಕ. ಒಮ್ಮೆ ಸ್ಥಾಪನೆಯಾದ ನಂತರ ಸ್ಥಳ ಬದಲಾವಣೆಗೆ ಅವಕಾಶವಿಲ್ಲದ ಇಂತಹ ಮಹತ್ವದ ವಿಚಾರವನ್ನು ನಿರ್ಧರಿಸುವಾಗ ಅರ್ಥಪೂರ್ಣ ಕಾರಣವಿಲ್ಲದೆ ಬೇರಾವುದೇ ಒತ್ತಡಕ್ಕೆ, ಮುಲಾಜಿಗೆ ಒಳಗಾಗಬಾರದು.

ಕರ್ನಾಟಕದಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಸ್ಥಳ ಹುಡುಕಾಟದ ವಿಚಾರ ಸರ್ಕಾರದ ಮುಂದಿದೆ. ವೀರಗಾಸೆ, ಕೋಲಾಟ, ಸೋಮನ ಕುಣಿತ, ರಂಗದ ಕುಣಿತ, ಪೂಜಾಕುಣಿತ, ಪಟದ ಕುಣಿತ, ಸೋಬಾನೆ ಹಾಡುಗಳು, ಬಯಲಾಟ, ತಮಟೆ ವಾದನ, ಚಿಟ್ಟಿ ಮೇಳ, ಸುಗ್ಗಿ ಕುಣಿತ....ಮೊದಲಾದ ಹಲವು ಆಕರ್ಷಕ ಜನಪದ ಕಲೆಗಳು ಹಾಗೂ ಸಾವಿರಾರು ಜನಪದ ಕ್ರೀಡೆಗಳ ತವರು ಮಂಡ್ಯ ಜಿಲ್ಲೆ. ಹಾಗಾಗಿ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮಂಡ್ಯ ಜಿಲ್ಲೆ ಎನ್ನುವ ವಿಚಾರವನ್ನು ಗಂಭೀರವಾಗಿ ಪರಿಶೀಲಿಸಬಹುದು. ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ 'ಜನಪದ ಕಲೆಗಳ ಕಾಶಿ' ಎನಿಸಿದ ನಾಡು ನಾಗಮಂಗಲ ತಾಲ್ಲೂಕು (ಅದರ ಹೆಸರಿನಲ್ಲೇ ಅಡಗಿರುವ 'ನಾಗಮಂಡಲ'ದ ಜಾನಪದದ ಐತಿಹ್ಯ ಗಮನಾರ್ಹ). ಈ ತಾಲ್ಲೂಕು ಜನಪದ ಕಲೆಗಳಿಂದ ಶ್ರೀಮಂತ ಎನಿಸಿದೆ.

ಆದರೆ 'ಹಸಿವು ಅನ್ವೇಷಣೆಯ ತಾಯಿ, ಅವಶ್ಯಕತೆ ಆವಿಷ್ಕಾರದ ತಂದೆ' ಎಂಬಂತೆ, ಕಲೆ, ಸಂಸ್ಕೃತಿ, ಶಿಕ್ಷಣದ ಪ್ರಗತಿಯ ವಿಚಾರಗಳಲ್ಲಿ ಅಲ್ಲಿನ ದಟ್ಟ ಬರಗಾಲವೇ ವರದಾನವಾಗಿದ್ದು ಈ ನೆಲದ ಪವಾಡ! ಶ್ರಮದ ಬೆವರಿನೊಂದಿಗೆ, ಸಾಂಪ್ರದಾಯಿಕ ಹಬ್ಬಗಳ ಆಚರಣೆಯ ಜೊತೆ ಮೈದಾಳುವ ಹಲವು ಜನಪದ ಕಲೆಗಳು ಇಂದಿಗೂ ಅಲ್ಲಿ ಜೀವಂತ. ಈ ಕಾರಣಗಳಿಗೆ ಕಿರೀಟವಿಟ್ಟಂತೆ ನಾಗಮಂಗಲದಲ್ಲೇ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮತ್ತೊಂದು ಮಹತ್ವವಿದೆ.

ಜನಪದ ಕಲೆ, ಸಾಹಿತ್ಯಗಳ ಅಧ್ಯಯನ ಮತ್ತು ಸಂಶೋಧನೆಗಳನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಕೆಲವು ವಿದ್ವಾಂಸರು ಈ ತಾಲ್ಲೂಕಿನವರು. ಜೀ. ಶಂ. ಪರಮಶಿವಯ್ಯ ಮತ್ತು ಎಚ್.ಎಲ್. ನಾಗೇಗೌಡ ಪ್ರಮುಖರು.

ಜನಪದ ಸಂಗೀತದ ಅರಿವು ಮೂಡಿಸುವ ಕೆಲಸವಾಗಲಿ

– ಎಲ್.ಜಿ. ಸುಮಿತ್ರ

ಮಾನ್ಯರೆ,

ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯಾಗಿ ನೀವು ವಹಿಸಿಕೊಂಡಿರುವ ಕೆಲಸ ಗುರುತರವಾದದ್ದು. ಜಾನಪದ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕೆ ಮತ್ತು ಜೀವನದಲ್ಲಿ ಅವರ ಯಶಸ್ಸು, ಇವುಗಳನ್ನು ಸಾಧಿಸಬೇಕಾದ ಈ ಜವಾಬ್ದಾರಿಯಲ್ಲಿ ನಿಮಗೆ ಯಶಸ್ಸು ಕೋರುತ್ತೇನೆ.

ಜನಪದ ಸಂಗೀತ ಮತ್ತು ನಾಟ್ಯದ ಮೂಲ ಲಕ್ಷಣಗಳ ತಿಳಿವಳಿಕೆ ಬಹಳ ಮುಖ್ಯವೆಂದೂ, ಅದರ ಕೆಲಸ ಬಹಳ ಆಗಬೇಕಾದದ್ದು ಇದೆ ಎಂದೂ ನಾನು ನಂಬಿದ್ದೇನೆ. ಜಾನಪದದ ಎಲ್ಲ ಪ್ರಕಾರಗಳಲ್ಲೂ ಸಂಗೀತ ಹಾಸುಹೊಕ್ಕಾಗಿರುವುದರಿಂದ ಈ ವಿಷಯದ ಅರಿವು ಮತ್ತು ತಿಳಿವಳಿಕೆ ತಮ್ಮ ಪಠ್ಯದಿಂದಲೇ ಎಲ್ಲ ಜಾನಪದ ವಿದ್ಯಾರ್ಥಿಗಳಿಗೂ ಮೂಡಬೇಕಾದದ್ದು ಅತ್ಯವಶ್ಯಕ.

ಹಾಗಲ್ಲದಿದ್ದಲ್ಲಿ ಇಂದಿನ ಮಾರುಕಟ್ಟೆ ಸಂಸ್ಕೃತಿಯ ಒತ್ತಡಗಳಲ್ಲಿ ವಿವಿಧ ಕಲಾಪ್ರಕಾರಗಳಲ್ಲಿ ಈ ಸಂಗೀತದ ಜಾನಪದೀಯ ಅಂಶಗಳನ್ನು ಉಳಿಸಿಕೊಂಡು ಮುನ್ನಡೆಯುವುದು ಕಷ್ಟ. ಇಂದು ಜನಪದ ಸಂಗೀತ ಕ್ಷೇತ್ರದಲ್ಲಿ ಆಗುತ್ತಿರುವ ಕೆಲವು ಅನಪೇಕ್ಷಿತ ಬೆಳವಣಿಗೆಗಳಿಗೆ ಈ ತಿಳಿವಳಿಕೆಯ ಅಭಾವ ಮುಖ್ಯಕಾರಣ. ಹಾಗಾಗಿ ನನ್ನ ಈ ಆಲೋಚನೆಯನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ. ಈ ದಿಸೆಯಲ್ಲಿ ನನ್ನ ಸಲಹೆಗಳ ಅಗತ್ಯ ಬಿದ್ದರೆ ತಿಳಿಸಿ. ನನ್ನ ಸಹಕಾರ ಯಾವತ್ತೂ ಇದ್ದದ್ದೇ.

ದಿನಾಂಕ: ೨೩.೧೧.೨೦೧೦

ಆಗ ಮಾತ್ರ ಇದು ಜನಪದ ಕಲಾವಿದರ ವಿಶ್ವವಿದ್ಯಾನಿಲಯವಾಗುತ್ತದೆ. ಕಲೆಗಳ ರೂಪಾಂತರ ಕಲಿಕಾ ಕೇಂದ್ರದ ಕನಸೇ ಜನಪದ ಕಲಾವಿದರ ಕನಸು. ಜಾನಪದ ಜೀವಂತ ಉಳಿಯುವಂತಾಗಲಿ ಎಂಬುದೇ ಕನ್ನಡ ನಾಡಿನ ಊರು ಊರುಗಳಲ್ಲಿ ಮನೆ ಮನೆಗೂ ಇರುವ ಈ ಜನಪದ ಕಲಾವಿದರ ವಿಭಿನ್ನ ವಿಶ್ವವಿದ್ಯಾನಿಲಯವೇ ಆಗುವುದಾದರೆ ಹಿಂದಿನ ಮೂಲ ಗ್ರಾಮಗಳಂತಾದರೆ ಹೇಗೆ?

ದಿನಾಂಕ:೨೯.೧೦.೨೦೧೦

ವಿಭಾಗಗಳನ್ನು ತೆರೆಯಬೇಕು. ಅವು ಕೇವಲ ಅಧ್ಯಯನಕ್ಕಷ್ಟೇ ಸೀಮಿತಗೊಳ್ಳದೆ, ನಿಜವಾದ ಜನಪದ ಬದುಕು ಅಲ್ಲಿ ನಿರ್ಮಾಣಗೊಳ್ಳಬೇಕು. ಇವತ್ತಿನ ದಿನಮಾನಗಳಲ್ಲಿ ಭಾರತದಂತಹ ದೇಶಕ್ಕೂ ಈ ಬಗೆಯ ಶೈಕ್ಷಣಿಕ ವಾತಾವರಣದ ಅವಶ್ಯಕತೆ ಬಹಳಷ್ಟಿದೆ. ನೇಮಕಾತಿಯ ಸಂದರ್ಭದಲ್ಲಿ ಅರ್ಹ-ತಜ್ಞ ಪದವೀಧರರ ಜತೆಗೆ ಜಾನಪದದ ವಿವಿಧ ಪ್ರಕಾರಗಳಲ್ಲಿ ಪರಿಣತರಾದ "ಜನಪದ"ರಿಗೂ ಅವಕಾಶ ಕಲ್ಪಿಸಿಕೊಡಬೇಕು. ಅಂಥವರಿಗಾಗಿ ಅವಶ್ಯವಿದ್ದರೆ "ಸಂಪನ್ಮೂಲ ವ್ಯಕ್ತಿ" ಎಂಬ ಹುದ್ದೆಯನ್ನು ಸೃಜಿಸಿಕೊಳ್ಳುವುದರ ಬಗೆಗೂ ಗಂಭೀರವಾಗಿ ಯೋಚಿಸಬಹುದಾಗಿದೆ. ಈ ಎಲ್ಲಾ ದೃಷ್ಟಿ-ಧೋರಣೆಗಳನ್ನಳವಡಿಸಿಕೊಂಡಲ್ಲಿ ಇದೊಂದು ಮಾದರಿ 'ದೇಸೀ ವಿಶ್ವವಿದ್ಯಾನಿಲಯ' ವಾಗಿ ರೂಪುಗೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಹಾಗಾಗಲೆಂದು ಮನಸಾ ಹಾರೈಸುತ್ತೇನೆ.

ದಿನಾಂಕ:೩೦.೧೧.೨೦೧೦

ಅಭಿಮಾನದ ಕೃತಜ್ಞತೆ ಅರ್ಪಿಸುವುದು ನಮ್ಮ ಕರ್ತವ್ಯವೇ ಸರಿ. ನಮ್ಮ ಜಾನಪದ ಬೇಲಿ ಮ್ಯಾಗಳ ಹೂವು, ಹಳ್ಳಿಯ ಹಲಸಿನ ಹಣ್ಣು ಇದ್ದಹಾಗೆ. ಮೇಲೆ ಸುಂದರವಿಲ್ಲ ಒಳಗೆ ರುಚಿಯಾಗಿದೆ, ವಿಶಿಷ್ಟವಾಗಿದೆ. ಅಂತಹ ವಿಶಿಷ್ಟ ಗುಣ ಋಣವುಳ್ಳ ಕಲೆಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಬಹಳವಿದೆ. ನಮ್ಮ ಮನೆಯ ಹಳೆಯ ಕಂಚು ಮತ್ತು ತಾಮ್ರದ ಚೊಂಬು, ಬಿಂದಿಗೆಗಳನ್ನು ಬೆಳಗಿ ಥಳಥಳಿಸುವಂತೆ ಮಾಡುವ ಬಗೆ ಹೇಗೆ? ಹಾಗೆ ಕರ್ನಾಟಕದ ದೇಶೀ ಸಂಸ್ಕೃತಿಗೆ ಪ್ರದರ್ಶನ ಮಾಡುವ ರೀತಿ ನೀತಿಯನ್ನು ಕಟ್ಟುವುದು ಹೇಗೆಂಬುದನ್ನು ಈಗ ಚಿಂತಿಸುವುದು ಮುಖ್ಯ.

ಮೊನ್ನೆ ರಷ್ಯಾದಲ್ಲಿ ರಷ್ಯಾ ಜಾನಪದ ಜನೋತ್ಸವವಾಯಿತು. ಅಲ್ಲಿಯ ಜನಪದ ಕಲಾವಿದ ಈ ರಷ್ಯಾ ದೇಶದ ನೂರಾರು ಜನಪದ ಕಲೆ ಕಸುಬುಗಳು ನಮ್ಮ ದೇಶಕ್ಕೆ ಕನ್ನಡಿ ಇದ್ದಂತೆ. ಆ ಕಲೆಗಳ ಕನ್ನಡಿಯ ಪ್ರತಿಬಿಂಬಗಳೇ ನಮ್ಮ ದೇಶದ ಜನಪದ ಕಲೆಗಳು. ಅವು ನಮ್ಮ ದೇಶದಲ್ಲಿ ಪ್ರತಿನಿತ್ಯವೂ ಪ್ರತಿಬಿಂಬಿಸಿದರೆ ನಾವು ನಿಜವಾಗಲೂ ನಮ್ಮ ಕಲೆಗಳನ್ನು ಪ್ರತಿಬಿಂಬಿಸಿದಂತೆ ಎಂದು ಹೇಳಿದ ಮಾತುಗಳನ್ನು ಕೇಳಿದ ಮೇಲೆ, ಕನ್ನಡ ನಾಡಿನ ಜನಪದ ಕಲೆಗಳು ಅವರಿಗಿಂತೇನು ಕಡಿಮೆ ಇಲ್ಲ ಎಂದು ನಾನು ಸಂತೋಷ ಪಟ್ಟುಕೊಂಡೆ. ಅದೇ ರೀತಿ ನಮ್ಮ ಎಲ್ಲಾ ಜಿಲ್ಲೆಗಳ ವಿಶಿಷ್ಟತೆ, ಪ್ರಾದೇಶಿಕ ವ್ಯತ್ಯಾಸಗಳ ಭಿನ್ನತೆ ಮಾತು ಮತ್ತು ಸಂಸ್ಕೃತಿಯ ಸೊಗಸು ಮತ್ತು ಸೊಬಗು ಕೂಡ.

ಐನೂರು ಎಕರೆ ಆವರಣದಲ್ಲಿ ನಮ್ಮ ಜಾನಪದ ಅನಾವರಣ-ವಾಗುವುದಾದರೆ ಇದರೊಳಗೆ ಯುರೋಪ್ ಮತ್ತು ರೋಮ್‌ನಲ್ಲಿ ನಡೆಯುವಂತಹ ಜನಪದ ಸಂತೆಗಳಾಗಬೇಕು. ವಿವಿಧ ಹಬ್ಬಗಳ ಜಾತ್ರೆಗಳಾಗಬೇಕು. ಈ ಜಾತ್ರೆಗಳಿಗೆ ದೇಶ ವಿದೇಶದ ಜನ ಬಂದು ನೋಡಬೇಕು, ನೋಡಿ ಕಲಿಯಬೇಕು. ವಚನಕಾರರ ಸಂದರ್ಭದಲ್ಲಿ ಆಯಾ ಕುಲಕಸುಬುಗಳು ಆಯಾ ಸಮುದಾಯಗಳಿಂದ ತರಬೇತಿ ಪಡೆಯುವ ತರಬೇತಿ ಕೇಂದ್ರಗಳಾದರೆ ಹೇಗೆ? ಅವು ಮಡಕೆ ಮಾಡುವುದಿರಬಹುದು, ಕಮ್ಮಾರರಿರಬಹುದು, ಚಮ್ಮಾರರಿರಬಹುದು, ನೇಕಾರ, ಕರಕುಶಲ ಕೆಲಸಗಳಿರಬಹುದು, ಗಾಣ ಆಡಿಸುವವರಿರಬಹುದು, ಬಡಗಿ ಇರಬಹುದು, ಒಂದೊಂದು ಜಿಲ್ಲೆಗಳ ವಿಶಿಷ್ಟ ಕುಲಕಸುಬುಗಳ ಕೇಂದ್ರ ಸ್ಥಾಪನೆಯಾಗಿ, ಅದರಿಂದ ಇವೆಲ್ಲವುಗಳನ್ನು ಹೆಚ್ಚು ಉತ್ಪಾದನೆ ಮಾಡಿ ಈ ಕರಕುಶಲ ವಸ್ತುಗಳು ದೇಶ-ವಿದೇಶಗಳಲ್ಲಿ ಮಾರಾಟವಾದರೆ ಅವುಗಳ ಶ್ರೇಷ್ಠತೆ, ಭವ್ಯತೆ ಜತೆಗೆ ಬದುಕು ಕೂಡ

ಜನಪದ ಬದುಕಿನ ನೆಲೆಗಳು ಒಡಮುರಿದೇಳಲಿ

– ವೀರೇಶ ಬಡಿಗೇರ

ಮಾನ್ಯರೆ,

ಸರ್, ತಾವು ಬಹು ನಿರೀಕ್ಷಿತ ಹಾಗೂ ಮಹಾತ್ವಾಕಾಂಕ್ಷೆಯ ವಿಶ್ವವಿದ್ಯಾನಿಲಯವೊಂದರ ವಿಶೇಷಾಧಿಕಾರಿಗಳಾಗಿದ್ದು, ತುಂಬ ಸಂತೋಷದ ವಿಚಾರ. ಅದಕ್ಕಾಗಿ ನನ್ನ ತುಂಬು ಹೃದಯದ ಅಭಿನಂದನೆಗಳು.

ಸಂಸ್ಕೃತಿ ವಿಸ್ಮೃತಿ, ಮೌಲ್ಯಗಳ ವಿಕಾರ, ಹಣ ಹಾಗೂ ಜಾತಿ–ತೋಳ್ಬಲಗಳೇ ರಾಜಕೀಯ ಮೌಲ್ಯವಾಗುತ್ತಿರುವ ಹೊತ್ತಿನಲ್ಲಿ ನಾಗರಿಕ ಸಂಸ್ಕೃತಿಯ ಹೊರಬಾಜು ಇರುವ ಹಾಗೂ ಸಂಕೋಚ ಪ್ರವೃತ್ತಿಯನ್ನು ಹೊಂದಿರುವ ಶ್ರಮ ಸಂಸ್ಕೃತಿಯ ಸಂವೇದನೆಯ ಆಶಯವುಳ್ಳ ಸಂಸ್ಥೆಯೊಂದನ್ನು ಕಟ್ಟಿ ಬೆಳೆಸುವ ಮಹತ್ಕಾರ್ಯ ತಮ್ಮ ಪಾಲಿಗೆ ಒಲಿದಿದ್ದು, ಮೌಲ್ಯಗಳ ಬಗೆಗೆ ಮತ್ತಷ್ಟು ನಿರೀಕ್ಷೆಯನ್ನು ನನ್ನಲ್ಲಿ ಹುಟ್ಟಿಸಿದೆ. ಜಾನಪದ ಕಳೆದು ಹೋಗುತ್ತಿರುವ ಸರಕಲ್ಲ ಅದು ಪರಿವರ್ತನಶೀಲವಾದದ್ದು ಎನ್ನುವ ಹೊಸ ಆಸೆಯನ್ನು ಹುಟ್ಟಿಸಬೇಕಾಗಿದೆ. ತಮ್ಮ ಸಾರಥ್ಯದಲ್ಲಿ ಜನಪದ ಬದುಕಿನ ನೆಲೆಗಳು ಒಡಮುರಿದೇಳಬೇಕು. ವಿಶ್ವವಿದ್ಯಾನಿಲಯವು ಜಾಗತೀಕರಣದ ಭ್ರಮೆಗಳಿಗೆ ತಕ್ಕ ಉತ್ತರ ನೀಡುವಂತಾಗಲಿ ಎನ್ನುವುದು ನನ್ನ ಅಪೇಕ್ಷೆಯಾಗಿದೆ.

ದಿನಾಂಕ: ೧೨.೧೧.೨೦೧೦

ನೆಲ ಮೂಲ ಸಂಸ್ಕೃತಿಯ ಸಂರಕ್ಷಣೆಯಾಗಲಿ

– ಚಿಕ್ಕಣ್ಣ ಯಣ್ಣೆಕಟ್ಟೆ

ಪೂಜ್ಯರೆ; ಪ್ರಣಾಮಗಳು.

ನೆಲ ಮೂಲ ಸಂಸ್ಕೃತಿಯ ಭಾಗವಾಗಿರುವ ಜನಪದ ಸಂಸ್ಕೃತಿಯ ಸಂರಕ್ಷಣೆ–ಸಂವರ್ಧನೆಯ ಒಟ್ಟು ರಕ್ಷಣೆಗೆ, ಕರ್ನಾಟಕದಲ್ಲಿ ಕನ್ನಡ ಸಂಸ್ಕೃತಿಯದ್ದೇ ಆದ ಜಾನಪದ ವಿಶ್ವವಿದ್ಯಾನಿಲಯವೊಂದರ ತುರ್ತು ಅಗತ್ಯವಿತ್ತು. ಗೊ.ರು.ಚ. ಮೊದಲಾದವರ ಅತೀವ ಒತ್ತಡ, ತೀವ್ರತೆಯಿಂದಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಆರಂಭವಾಗಿದೆ.

ಜಾನಪದ ಕ್ಷೇತ್ರದಲ್ಲಿ ತಮ್ಮ ಒಟ್ಟು ಅಧ್ಯಾಪನ, ಅಧ್ಯಯನ, ಕ್ಷೇತ್ರಕಾರ್ಯಗಳಿಂದ, ನೆಲದ ಮರೆಯ ನಿಧಿಯ ಹಾಗೆ, ಹುಸಿ ಮಾತುಗಾರಿಕೆ, ಆರ್ಭಟಗಳಿಂದ ಹೊರಗೆ ನಿಂತು, ಜಾನಪದ ಕ್ಷೇತ್ರವನ್ನು ನಿಜ ಅರ್ಥದಲ್ಲಿ ಶ್ರೀಮಂತಗೊಳಿಸಿದ, ಮೌಲಿಕ ಕೃತಿ ನೀಡಿದ ತಮ್ಮನ್ನು ಗುರುತಿಸಿ, ಗೊಂದಲ ಗೋಜಲುಗಳ ನಡುವೆಯೂ ತಮ್ಮನ್ನು ಕರೆತಂದು; ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಮೊದಲ ವಿಶೇಷಾಧಿಕಾರಿ ; ಅರ್ಥಾತ್ ಕುಲಪತಿಗಳನ್ನಾಗಿ ನೇಮಕ ಮಾಡಿದ ಸುದ್ದಿ ಪ್ರಕಟವಾದ ಕೂಡಲೇ ಹರ್ಷಿಸಿದೆ. ಸಂಪರ್ಕದ ಕೊರತೆ, ಕಛೇರಿಯ ವಿಳಾಸದ ಅಲಭ್ಯತೆಯ ಕಾರಣಗಳಿಂದ ಸಂಪರ್ಕಿಸಲು ತಡವಾಯಿತು. ತಮ್ಮಂಥ ಸಜ್ಜನಿಕೆಯವರಿಗೆ ಉನ್ನತ ಸ್ಥಾನ ಲಭಿಸುವುದು ಅಪರೂಪದ ಈ ದಿನಗಳಲ್ಲಿ ಕುಲಪತಿಯ ಹುದ್ದೆ ಹೆಮ್ಮೆಯ ಸಂಗತಿ. ತಮಗೆ ಗೌರವಪೂರ್ವಕ ಅಭಿನಂದನೆಗಳು.

ದಿನಾಂಕ: ೧೧.೧೧.೨೦೧೧

ಆದ್ದರಿಂದ ವಿಶ್ವವಿದ್ಯಾನಿಲಯ ಸಂಶೋಧನ ಯೋಜನೆಯನ್ನು ರೂಪಿಸಿ ಅದನ್ನು ಕೈಗೊಳ್ಳುವ ಸಾಮರ್ಥ್ಯವಿರುವ ವಿದ್ವಾಂಸರನ್ನು ಆಹ್ವಾನಿಸಬೇಕು. ಜೊತೆಗೆ ಆಸಕ್ತ ವಿದ್ವಾಂಸರು ತಾವೇ ಯೋಜನೆ ರೂಪಿಸಿ ಇಲ್ಲಿ ಸಂಶೋಧನೆ ಕೈಗೊಳ್ಳುವಂತೆ ಆಹ್ವಾನಿಸಬೇಕು. ಅವರು ಸೇವೆಯಲ್ಲಿದ್ದರೆ ನಿಯೋಜನೆ ಮೇಲೆ ಬರಲು ಅವಕಾಶ ಕಲ್ಪಿಸಬೇಕು. ಯೋಜನೆ ಮುಗಿದ ಮೇಲೆ ಅವರ ಕರ್ತವ್ಯಕ್ಕೆ ಮರಳಬೇಕು. ಹೀಗೆ ಮಾಡುವುದರಿಂದ ಕ್ರಮೇಣ ಕರ್ನಾಟಕದ ಎಲ್ಲಾ ವಿದ್ವಾಂಸರನ್ನು ವಿಶ್ವವಿದ್ಯಾನಿಲಯದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬಹುದು. ಆಗ ಅದು ಕೆಲವರ ವಿಶ್ವವಿದ್ಯಾನಿಲಯವಾಗದೆ ಎಲ್ಲರದೂ ಆಗುತ್ತದೆ.

ಶಿಕ್ಷಕೇತರ ಸಿಬ್ಬಂದಿ ನೇಮಕ ಮಾಡಿಕೊಳ್ಳುವಾಗಲೂ ಅಗತ್ಯ ಶೈಕ್ಷಣಿಕ ಅರ್ಹತೆ ಇರುವ ಜನಪದ ಕಲಾವಿದರು ಮತ್ತು ಕುಶಲಕರ್ಮಿಗಳಿಗೆ ಅವಕಾಶ ಕಲ್ಪಿಸಬೇಕು. ಮತ್ತು ಅವರು ಕರ್ನಾಟಕದ ಎಲ್ಲಾ ಭಾಗಗಳಿಗೂ ಸೇರಿದವರಾಗಿರಬೇಕು. ಜನಪದ ಕಲಾವಿದರ ಪ್ರದರ್ಶನಕ್ಕೆ ವಿಶ್ವವಿದ್ಯಾನಿಲಯದಲ್ಲಿ ಮತ್ತು ವಿಶ್ವವಿದ್ಯಾನಿಲಯದ ಮೂಲಕ ಹೊರಗಡೆಯೂ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಜಾನಪದ ವಸ್ತುಸಂಗ್ರಹಾಲಯ, ಜನಪದ ಕಲಾಪ್ರದರ್ಶನ, ಜನಪದರ ಉತ್ಪನ್ನಗಳ ಮಾರಾಟ ಮುಂತಾದವುಗಳ ಮೂಲಕ ವಿಶ್ವವಿದ್ಯಾನಿಲಯವನ್ನು ಪ್ರವಾಸೋದ್ಯಮದ ಕೇಂದ್ರವನ್ನಾಗಿಯೂ ಮಾಡಬಹುದು.

ಕರ್ನಾಟಕ ವಿಶ್ವವಿದ್ಯಾಲಯದಂತೆ ವಾರ್ಷಿಕ ಜಾನಪದ ಸಮ್ಮೇಳನಗಳನ್ನು ನಡೆಯಿಸಬೇಕು. ಅದರ ಸ್ವರೂಪ ಫಾಸಿಲ್ಸ್ ಸಮ್ಮೇಳನಗಳ ಮಾದರಿಯಲ್ಲಿ ಆಹ್ವಾನಿತ ವಿದ್ವಾಂಸರಿಂದಲ್ಲದೆ ಆಸಕ್ತರೆಲ್ಲರಿಗೂ ಪ್ರಬಂಧ ಮಂಡನೆಗೆ ಮುಕ್ತ ಅವಕಾಶ ನೀಡುವಂತೆ ಇರಬೇಕು. ಅವುಗಳಲ್ಲಿ ಉತ್ತಮವಾದುವನ್ನು ಆಯ್ದು ಪ್ರಕಟಿಸಬೇಕು.

ಇತರ ವಿಶ್ವವಿದ್ಯಾನಿಲಯಗಳಂತೆಯೇ ಒಂದು ವಿದ್ವತ್ಪತ್ರಿಕೆ ಹೊರಡಿಸಬೇಕು, ಪ್ರಸಾರಾಂಗವಿರಬೇಕು.

ಕೊನೆಗೆ, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ ಎಂಬ ಹೆಸರಿನಲ್ಲಿ ವಿಶ್ವವಿದ್ಯಾನಿಲಯ ಎಂಬುದನ್ನೇ ಸೇರಿಸಿ. ಏಕೆಂದರೆ ಆಲಯ ಧಾರ್ಮಿಕವಾದುದು. ನಿಲಯ ಲೌಕಿಕ.

ದಿನಾಂಕ:೩೦.೧೨.೨೦೧೦

ವಾದ್ಯ, ಸಂಗೀತ, ವೇಷಭೂಷಣ, ವಿನೋದ, ಆಹಾರ-ವಿಹಾರ, ಮಾಟ-ಮಂತ್ರ, ಔಷಧ, ವೈದ್ಯಕೀಯ, ಹುಟ್ಟು-ಸಾವುಗಳವರೆಗಿನ ಮಾನವ ಜೀವನದ ಎಲ್ಲ ಚಟುವಟಿಕೆಗಳನ್ನು ಒಳಗೊಳ್ಳುವ ಜಾನಪದಕ್ಕೆ ತನ್ನದೇ ಆದ ಒಂದು ಪ್ರತ್ಯೇಕವಾದ ಕಲಿಕಾ ಮಾರ್ಗ ಇಲ್ಲ. ಇದು ಏನಿದ್ದರೂ ಬದುಕಿನಲ್ಲಿಯೇ ಹುಟ್ಟಿ ಬೆಳೆಯಬೇಕಾದ ಸಿರಿ. ಆದ್ದರಿಂದ ಬದುಕಿಗೆ ಪೂರಕವಾಗಿ ಹಾಗೂ ಬದುಕಿನಿಂದ ಪ್ರಫುಲ್ಲಿತವಾಗುವ ಜನಪದವೂ ನಮ್ಮ ಜನಸಾಮಾನ್ಯರ ನಂಬಿಕೆ, ನಡವಳಿಕೆಗಳಿಂದ ಉಳಿದು ಬೆಳೆಯಬೇಕಾಗಿದೆ. ಬದುಕಿಗೆ ಬಲ ಮತ್ತು ಸ್ಫೂರ್ತಿ ಕಾಯಕವಾಗಿರುವ ಜಾನಪದವು ಇಂದು ಆಧುನಿಕತೆಯ ತಲ್ಲಣದಲ್ಲಿ ಸಿಲುಕಿ ನಾಶಗೊಳ್ಳುತ್ತಿರುವುದರಿಂದ ಉಚ್ಚ ಜೀವನಾದರ್ಶ ಹಾಗೂ ಮೌಲ್ಯಗಳನ್ನು ಒಳಗೊಂಡಿರುವ ಈ ದೇಶೀ ಪರಂಪರೆಯನ್ನು ರಕ್ಷಿಸಿಕೊಳ್ಳಲು ಜಾನಪದಕ್ಕೆ ಮರುಹುಟ್ಟು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ನಮಗೊಂದು ಜಾನಪದ ವಿಶ್ವವಿದ್ಯಾನಿಲಯವು ಅಗತ್ಯವಾಗಿರುವುದನ್ನು ಮನಗಂಡು ಜಾನಪದ ವಿದ್ವಾಂಸರು ಕಳೆದೊಂದು ದಶಕದಿಂದಲೂ ಜಾನಪದ ವಿಶ್ವವಿದ್ಯಾನಿಲಯ ಕನ್ನಡ ನಾಡಿನ ಸಮಗ್ರ ಜನಪದ ಸಂಸ್ಕೃತಿ ಪ್ರಸಾರಕ್ಕೆ, ಅಧ್ಯಯನಕ್ಕೆ ಅಗತ್ಯವೆಂದು ಯೋಚಿಸಿದ ಕ್ರಮ ಸ್ವಾಗತಾರ್ಹವಾದುದಾಗಿದೆ.

ಜಾನಪದ ವಿಷಯವನ್ನು ಪಠ್ಯವಾಗಿ ಮುಂದಿಟ್ಟುಕೊಂಡು ಕಳೆದ ಶತಮಾನದಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾನಿಲಯವು ಅಧ್ಯಯನಕ್ಕೆ ಅವಕಾಶ ಕಲ್ಪಿಸಿತು. ನಂತರ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜಾನಪದವನ್ನು ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ಕೇಂದ್ರಗಳನ್ನು ಆರಂಭಿಸಿದವು. ನಮ್ಮ ಬದುಕಿಗೆ ಪೂರಕವಾಗುವ ಎಲ್ಲ ವಿಷಯ ಸಂಗತಿಗಳ ಕುರಿತಾಗಿ ಇವತ್ತು ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಹುಟ್ಟಿಕೊಂಡಿವೆ. ಹಂಪಿಯಲ್ಲಿ ಆರಂಭಗೊಂಡ ಕನ್ನಡ ವಿಶ್ವವಿದ್ಯಾಲಯವು, ಕನ್ನಡ ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನಕ್ಕೆ ಅವಕಾಶ ಕಲ್ಪಿಸಿದೆ. ಕನ್ನಡ ಸಂಸ್ಕೃತಿಯ ಒಂದು ಭಾಗವಾದರೂ ಜಾನಪದವನ್ನು ಸಮಗ್ರವಾಗಿ ಒಂದೇ ಕಡೆ ಅಧ್ಯಯನ ಮಾಡುವ ಪರಿಕರಗಳು ಹಂಪಿ ವಿಶ್ವವಿದ್ಯಾಲಯದಲ್ಲಿ ಆರಂಭಗೊಳ್ಳಲಿಲ್ಲ. ಇಲ್ಲದಿದ್ದರೆ ಇದೇ ವಿಶ್ವವಿದ್ಯಾಲಯದಲ್ಲಿ ಕನ್ನಡ ಜನಪದ ಸಂಸ್ಕೃತಿ, ಪರಂಪರೆಯನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದ್ದರೆ ಈಗ ಆಯೋಜಿಸಿರುವಂತೆ ಪ್ರತ್ಯೇಕವಾದ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಅಗತ್ಯ ಇರಲಿಲ್ಲವೇನೋ? ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ನಾಡಿನ ಹಲವೆಡೆ, ಬೇರೆ ಬೇರೆ ಮಾದರಿಗಳನ್ನು ಲಕ್ಷ್ಯದಲ್ಲಿರಿಸಿಕೊಂಡು

ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಮಗ್ರ ಮಾಹಿತಿ ಸಿದ್ಧಪಡಿಸಬೇಕು. ಪ್ರತಿಯೊಂದು ಮನೆ, ಊರು, ಹೋಬಳಿಗಳಲ್ಲಿರುವ ಕಲಾವಿದರ ಪರಿಚಯಾತ್ಮಕ ಲೇಖನ/ಸಂಕಲನಗಳನ್ನು ಹೊರತರುವ ಪ್ರಯತ್ನ ಮಾಡಬೆಕು. ಜಾನಪದದ ಎಲ್ಲ ಪ್ರಕಾರಗಳ ಬಗ್ಗೆ ಸಮಗ್ರವಾದ ಅಧ್ಯಯನ ಬುಡಕಟ್ಟು ಜನಾಂಗೀಯ ಮೂಲಗಳಿಂದ ನಡೆಯಬೇಕು. ಇಡೀ ಜಾನಪದವೇ ಮಹಿಳಾ ಲೋಕದ ಅನನ್ಯ ಸೃಷ್ಟಿಯಾಗಿರುವುದರಿಂದ ಪ್ರಾಚೀನ ಕಾಲದಿಂದಲೂ ಸ್ತ್ರೀ ಪ್ರಧಾನ ಕುಟುಂಬದ ಮೇಲೆ ಪುರುಷ ಪ್ರಧಾನ ಕುಟುಂಬ ನಡೆಸಿರುವ ದೌರ್ಜನ್ಯದ ಬಗ್ಗೆ ಹಾಗೂ ಸ್ತ್ರೀ ಪ್ರತಿಭಟನೆಯ ಒಳ ಸ್ವರೂಪಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಬೇಕು.

ಜಾನಪದ ವಿಶ್ವವಿದ್ಯಾನಿಲಯಕ್ಕೆ ಪ್ರತ್ಯೇಕವಾದ ಬೃಹತ್ ವಸ್ತು ಸಂಗ್ರಹಾಲಯು ಆಗಬೇಕು. ಕರ್ನಾಟಕದ ಎಲ್ಲ ಭಾಗಗಳಿಗೂ ಅನುಕೂಲವಾಗುವ ಹಾಗೆ ನಿರ್ದಿಷ್ಟ ಸ್ಥಳದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಆಗಬೇಕು. ದಾವಣಗೆರೆ ಜಿಲ್ಲೆ ಇದಕ್ಕೆ ಸೂಕ್ತವಾದ ಸ್ಥಳ ಎಂಬುದಾಗಿ ಸೂಚಿಸ ಬಯಸುತ್ತೇನೆ. ಜಾನಪದದಲ್ಲಿ ಪ್ರಕಟಗೊಂಡಿರುವ ಎಲ್ಲ ಕೃತಿಗಳ/ಲೇಖನಗಳ ಸಮಗ್ರವಾದ ಗ್ರಂಥಸೂಚಿ ಪ್ರಕಟಿಸಬೇಕು. ಪ್ರಾದೇಶಿಕ ಭಾಷೆಯ ವೈವಿಧ್ಯತೆಗಳನ್ನು ತಿಳಿಯಲು ಜಾನಪದ ನಿಘಂಟು ಸಿದ್ಧಗೊಳಿಸಬೇಕು.

ಕರ್ನಾಟಕದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಅಧ್ಯಯನ ಇತರ ರಾಜ್ಯ, ರಾಷ್ಟ್ರಗಳ ಕಲೆ, ಸಾಹಿತ್ಯ, ಸಂಸ್ಕೃತಿಗಳೊಂದಿಗೆ ನಡೆಯಬೇಕು. ಇದಕ್ಕಾಗಿ ಕರ್ನಾಟಕದ ಶ್ರೇಷ್ಠ ಜಾನಪದ ಕೃತಿಗಳು (ಪ್ರತಿಯೊಂದು ಪ್ರಕಾರಗಳ) ಇತರೆ ಭಾಷೆಗಳಿಗೆ ಅನುವಾದಗೊಳ್ಳಬೇಕು. ಬೇರೆ ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿಕೊಳ್ಳುವ ಕೆಲಸ ನಡೆಯಬೇಕು. ಜನಪದ ಕಲಾವಿದರ ಬಗ್ಗೆ, ಅವರ ಬದುಕು, ಕಲೆಗಳ ಬಗ್ಗೆ ವಿಶೇಷ ಪ್ರೋತ್ಸಾಹ ನೀಡಬೇಕು. ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ ತನ್ನದೇ ಆದ ವೈಶಿಷ್ಟ್ಯತೆಯನ್ನು ಈ ಎಲ್ಲ ಕೆಲಸ ಕಾರ್ಯಗಳ ಹಿನ್ನೆಲೆಯಲ್ಲಿ ಉಳಿಸಿಕೊಳ್ಳುವ ಪ್ರಯತ್ನ ಮಾಡಲಿ ಎಂದು ಆಶಿಸುತ್ತೇನೆ.

ದಿನಾಂಕ:೦೬.೧೨.೨೦೧೦

- ನಿಜವಾಗಿಯೂ ಜಾನಪದ ಕ್ಷೇತ್ರದ ಬಗ್ಗೆ ಸಮರ್ಪಣ ಭಾವದಿಂದ ಕೆಲಸ ಮಾಡುವಂತಹ ಸಹೃದಯ ಜನಪದರನ್ನು ಆಯ್ಕೆ ಮಾಡಿಕೊಂಡು ಜಾನಪದ ಸಂಘಟನೆ ರೂಪುಗೊಳ್ಳಲಿ.
- ಜನಪದ ಕಲಾವಿದರು, ಜಾನಪದ ಅಧ್ಯಾಪಕರು, ಜನಪದರು– ಈ ಮೂರು ವರ್ಗದೊಳಗೆ ಜಾನಪದ ವಿಶ್ವವಿದ್ಯಾನಿಲಯ ಅಪೂರ್ವತೆಯ ಆಗರವಾಗಲಿ.
- ಹಿರಿಯ ಜಾನಪದ ತಜ್ಞರು, ವಿದ್ವಾಂಸರು, ವಿದ್ಯಾರ್ಥಿಗಳಲ್ಲಿ ಇರಬಹುದಾದ ಜಾನಪದದ ಹೊಸ ಹೊಳಹುಗಳ ಜಾಡಿನಲ್ಲಿ ಜಾನಪದ ವಿಶೇಷಾಧಿಕಾರಿ ಮನ್ವಂತರದ ಹರಿಕಾರರಾಗಬೇಕು.
- ಈಗಾಗಲೇ ಜಾನಪದ ಕ್ಷೇತ್ರದಲ್ಲಿ ಕ್ಷೇತ್ರಕಾರ್ಯ ಮಾಡಿರುವ, ವಿಶೇಷ ಆಸಕ್ತರನ್ನು ವಿವಿಧ ಸೇವೆಯ ಮೂಲಕ ಎಲೆಮರೆಯ ಕಾಯಿಯಂ-ತಿರುವವರನ್ನು ವಿಶ್ವವಿದ್ಯಾನಿಲಯ ಕಟ್ಟುವ ಕೆಲಸಕ್ಕೆ ಬಳಸಿಕೊಳ್ಳಬಹುದು.
- ಜಾನಪದ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಗ್ರಂಥಾಲಯ ಬಂದಾಗ ನಮ್ಮ ಕಡೆಯಿಂದ ಬಹಳಷ್ಟು ಗ್ರಂಥಗಳನ್ನು ನೀಡಿ, ನಮ್ಮ ಜಾನಪದ ಗ್ರಂಥಾಲಯ ವಿಸ್ತಾರವಾಗಲು ನೆರವಾಗುವೆ.

ತಮ್ಮ ಸದಾಶಯಕ್ಕೆ ಬದುಕಿರುವವರೆಗೂ ಸಹಕರಿಸುವೆ. ಜಾನಪದ ವಿಶ್ವವಿದ್ಯಾನಿಲಯ ಸ್ಮರಣೀಯ ವಿಶ್ವವಿದ್ಯಾನಿಲಯವಾಗಲಿ ಎಂದು ಆಶಿಸುವೆ.

ದಿನಾಂಕ:೦೩.೧೨.೨೦೧೦

- ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು "ಭಾರತೀಯ ವಿಜ್ಞಾನ ಸಂಸ್ಥೆ" ಇರಬೇಕು. ಅದರಲ್ಲಿ ವಿಜ್ಞಾನಿಗಳು, ಜಾನಪದ ತಜ್ಞರು ಇರಬೇಕು. ಅಂದರೆ ವಿಜ್ಞಾನದ ಬೇರೆ ಬೇರೆ ಶಾಖೆಗಳಾದ ಖಗೋಳ, ಜೀವ, ಸಸ್ಯ, ವೈದ್ಯ, ತಂತ್ರಜ್ಞಾನ ಇತ್ಯಾದಿಗಳ ತಜ್ಞರಿರಬೇಕು. ಅಲ್ಲದೆ ಮಾನವಿಕ ವಿಭಾಗಗಳಾದ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಇನ್ನು ಮುಂತಾದ ತಜ್ಞರು ಇರಬೇಕು.

- ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯೇ ಮುಖ್ಯವಾಗಿರಬೇಕು.

- ಜನಪದ ಕಲೆಗಳು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವಂತಿರಬೇಕು.

- ಪ್ರಸಾರಾಂಗ ಹಾಗೂ ಗ್ರಂಥಾಲಯಗಳು ಇರಲೇಬೇಕು.

- ಪರಿಸರ ಸಂರಕ್ಷಣೆ ಹಾಗೂ ವಿಕೋಪಗಳ ಮುನ್ಸೂಚನೆ ಬಗೆಗಿನ ಜನಪದರ ಜ್ಞಾನವನ್ನು ತಿಳಿಯುವ ವಿಭಾಗವಿದ್ದು, ಅದರಲ್ಲಿ ಪರಂಪರಾಗತ ಜ್ಞಾನವನ್ನು ಹೊಂದಿರುವ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅವರಿಂದ ವಿದ್ಯಾರ್ಥಿಗಳಿಗೆ ಕಲಿಸಬೇಕು.

ದಿನಾಂಕ: ೧೬.೧೧.೨೦೧೦

- ಪ್ರತಿಯೊಂದು ಹಳ್ಳಿಯ ಜನಪದ ಕಲಾವಿದರಲ್ಲಿರುವ ಮೌಖಿಕ ಕಥೆ, ಕಾವ್ಯಗಳ ಸಂಗ್ರಹ.
- ಜನಪದ ಕಲೆಗಳು, ಸಂಗೀತ ಪರಿಕರಗಳು, ಇತರೆ ಸಲಕರಣೆಗಳ ರಕ್ಷಣೆ.
- ಪ್ರತಿಯೊಂದು ಜನಪದ ಕಲೆ, ಸಾಹಿತ್ಯ, ಸಂಗೀತ, ಹಬ್ಬಗಳು, ಆಚರಣೆಗಳು, ಜಾತ್ರೆಗಳು, ಹುಟ್ಟು, ಸಾವು, ಮದುವೆ, ಇನ್ನಿತರ ಪ್ರಕಾರಗಳ ಆಡಿಯೋ, ವಿಡಿಯೋ, ಲಿಖಿತ ದಾಖಲೀಕರಣ.
- ವೆಬ್‌ನಲ್ಲಿ ಪ್ರತಿಯೊಂದು ಪ್ರದೇಶದ ಜನಪದ ಕಲೆ, ಕಲಾವಿದರ ಮಾಹಿತಿ ಇಡುವುದು.
- ಬುಡಕಟ್ಟು ಸಮುದಾಯಗಳ ವೈದ್ಯ ಪದ್ಧತಿಗಳ ಅಧ್ಯಯನ ಮತ್ತು ಜ್ಞಾನ ರಕ್ಷಣೆ.
- ವಸ್ತು ಸಂಗ್ರಹಾಲಯ–ಪ್ರತಿಯೊಂದು ಪ್ರದೇಶಗಳ–ವಿಶೇಷ ಕಲೆ, ಸಂಸ್ಕೃತಿಗಳನ್ನು ಬಿಂಬಿಸುವಂತೆ, ರಾಜ್ಯವನ್ನು ಪ್ರತಿನಿಧಿಸುವಂತೆ ಇರುವುದು.

ದಿನಾಂಕ: ೧೫.೧೨.೨೦೧೦

ಶ್ರದ್ಧಾಕೇಂದ್ರಗಳು ಇಂಥ ಜಾತಿ–ಮತಾತೀತ, ಕಾಲ–ದೇಶಾತೀತ ಧಾರ್ಮಿಕ ಆಶಯಗಳ ಶ್ರದ್ಧಾಕೇಂದ್ರಗಳಾಗಿವೆ. ಈ ಶ್ರದ್ಧಾಕೇಂದ್ರಗಳ ಆಚರಣೆ, ನಂಬಿಕೆ, ಜಾತ್ಯತೀತತೆ ಇತ್ಯಾದಿಗಳ ಸಾಂಸ್ಕೃತಿಕ ಲೋಕಗಳನ್ನು ಹಾಗೂ ಇಂಥ ಶ್ರದ್ಧಾಕೇಂದ್ರಗಳ ನಡುವಿನ ಅಂತರ್ ಸಂಬಂಧಗಳನ್ನು ಸಂಶೋಧಿಸಿ ಅಧ್ಯಯನಕ್ಕೆ ಒಳಪಡಿಸುವುದು.

೨. ಸಾಂಸ್ಕೃತಿಕ ನಕಾಶೆಯ ಶೋಧ ಹಾಗೂ ನಿರ್ಮಾಣ ಸಂಬಂಧಿ ಅಧ್ಯಯನ:

ಆದಿಮ ದೈವಗಳು, ನಾಥರು, ಸಿದ್ಧರು, ಆರೂಢರು, ಸಂತರು ಭೌಗೋಳಿಕವಾಗಿ ನಡೆದಾಡಿದ ದಾರಿಗಳು ಸಾಂಸ್ಕೃತಿಕವಾಗಿ ಅತ್ಯಂತ ಕುತೂಹಲಕಾರಿಯಾಗಿದ್ದು ಈ ದಾರಿಗಳಲ್ಲೇ ಸಮುದಾಯಗಳು ತಲೆತಲಾಂತರಗಳಿಂದ ಪರುಸೆಗಳಾಗಿ ಸಂಚರಿಸುತ್ತಿವೆ. ಇಂಥ ಸಾಂಸ್ಕೃತಿಕ ದಾರಿಗಳ ಸಂಶೋಧನೆ ಮತ್ತು ಅಧ್ಯಯನಗಳಿಂದ ಸಮಗ್ರ ಸಾಂಸ್ಕೃತಿಕ ನಕಾಶೆ (Cultural Map) ಒಂದನ್ನು ನಿರ್ಮಿಸುವುದು. ಈ ಸಾಂಸ್ಕೃತಿಕ ನಕಾಶೆಯ ಅಧ್ಯಯನವು ಕರ್ನಾಟಕವಷ್ಟೇ ಅಲ್ಲದೆ ಇಡೀ ಭಾರತದ ಆರ್ಥಿಕ, ಸಾಮಾಜಿಕ, ರಾಜಕೀಯ, ಚರಿತ್ರೆಗಳ ಹೊಸ ಚಿತ್ರಣಗಳ ಸುರುಳಿಗಳನ್ನೇ ಬಿಚ್ಚಬಹುದು.

೩. ಆದಿಮ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ:

ಸೋಲಿಗ, ಕಾಡುಕುರುಬ, ಜೇನು ಕುರುಬ ಮುಂತಾದ ಬುಡಕಟ್ಟು ಸಮೂಹಗಳು ತಮ್ಮ ಅನಾದಿ ಕಾಲದ ನೆನಪುಗಳನ್ನು ಆಚರಣೆ, ಭಾಷೆ, ಆಹಾರಪದ್ಧತಿಗಳ ಮೂಲಕ ಉಳಿಸಿಕೊಂಡು ಬಂದಿವೆ. ಇಲ್ಲಿಂದ ಆರಂಭಿಸಿ ಆಧುನಿಕ ನಾಗರಿಕ ಸಂದರ್ಭಗಳವರೆಗಿನ ಆಚರಣೆ, ಭಾಷೆ, ಆಹಾರಪದ್ಧತಿಗಳಲ್ಲಿನ ಪಲ್ಲಟಗಳ ಅಧ್ಯಯನ ಕೈಗೊಳ್ಳುವುದು. ಈ ಅಧ್ಯಯನವು ಸಾಂಸ್ಕೃತಿಕ ಇತಿಹಾಸದ ಪಲ್ಲಟಗಳ ಅಧ್ಯಯನವಾಗಿ ಹಾಗೂ ಬುಡಕಟ್ಟು ಸಮೂಹಗಳ ಲೋಕದೃಷ್ಟಿ, ಚಿಂತನಾಕ್ರಮ ಮತ್ತು ಜ್ಞಾನಮೀಮಾಂಸೆಗಳ ಅಧ್ಯಯನವಾಗಿ ತೆರೆದುಕೊಳ್ಳಬಹುದು.

೪. ಕಾಯಕ ತತ್ವಾಧಾರಿತ ಸಾಂಸ್ಕೃತಿಕ ಉದ್ಯಮಗಳ ಅಧ್ಯಯನ:

ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ ಮುಂತಾದ ಕುಲ ಮೂಲ ಕಸುಬುಗಳು ಸಮುದಾಯಗಳ ಜೀವನ ನಿರ್ವಹಣೆಯನ್ನೂ ಮೀರಿ ಕಾಯಕತತ್ವ – ದಾರ್ಶನಿಕತೆಯ ಸಾಂಸ್ಕೃತಿಕ ಉದ್ಯಮಗಳಾಗಿವೆ. ಆಧುನಿಕತೆ ಹಾಗೂ ಜಾತಿಯ ಕೀಳರಿಮೆಯ ಒತ್ತಡಗಳಿಗೆ ಸಿಲುಕಿ ಅವನತಿಯ

ಅರಿವಾಗುತ್ತದೆ. ಇದಕ್ಕೆ ಜಾನಪದವನ್ನು ಇತರ ಮಾನವಿಕಗಳು ಮತ್ತು ವಿಜ್ಞಾನ ಶಿಸ್ತುಗಳ ಜೊತೆ ಅಂತರ್‌ಶಿಸ್ತೀಯ ಮತ್ತು ಆನ್ವಯಿಕ ರೀತಿಯಲ್ಲಿ ವಿಶ್ಲೇಷಿಸುವ ಅಗತ್ಯವಿದೆ. ಇದನ್ನು ಸದ್ಯ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಗಳು ಮಾಡುತ್ತಿಲ್ಲ.

ಹೊಸ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಬೋಧನೆ–ಶೋಧನೆಗಿಂತಲೂ ಹೆಚ್ಚಾಗಿ ಶೋಧನೆ–ವಿಶ್ಲೇಷಣೆಗಳು ನಡೆಯಬೇಕು. ಹೊಸ ಪದವೀಧರರನ್ನು ಸೃಷ್ಟಿಸಿ ಸಮಾಜಕ್ಕೆ ಬಿಡುವ ಬದಲು, ಅನ್ಯ ವಿಶ್ವವಿದ್ಯಾನಿಲಯಗಳು ಸೃಷ್ಟಿಸುವ ವಿವಿಧ ವಿಷಯಗಳ ಪದವೀಧರರನ್ನು ಇಲ್ಲಿ ಸರಿಯಾಗಿ ಬಳಸಿಕೊಳ್ಳುವಂತಾಗಬೇಕು. ಸಾಂಪ್ರದಾಯಿಕ ಜ್ಞಾನ ಹೊಸ ರೂಪದಲ್ಲಿ ಹೊಸ ಸಮಾಜಕ್ಕೆ ದೊರೆಯುವಂತಾಗಲು ಇದು ಶ್ರಮಿಸಬೇಕು.

ಜನಪದ ವೈದ್ಯ (ಮಾನವ/ಪಶು) ಹಾಗೂ ಆಹಾರ (ಮಾನವ/ ಪಶು) ಕ್ರಮಗಳು ಆರೋಗ್ಯ, ಪರಿಸರ ರಕ್ಷಣೆ ದೃಷ್ಟಿಯಿಂದ ಶ್ರೇಷ್ಠ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಅವುಗಳ ಬಳಕೆ ಕಡಿಮೆಯಾಗುತ್ತಿದೆ. ಇವುಗಳನ್ನು ಸರಿಯಾಗಿ ಸಂಗ್ರಹಿಸುವ ಕ್ಷೇತ್ರಕಾರ್ಯಕರ್ತರು – ಅದನ್ನು ವಿಶ್ಲೇಷಿಸುವ ಪ್ರಯೋಗಾಲಯ ಸಿಬ್ಬಂದಿ –ಅದರ ಫಲಶ್ರುತಿಯನ್ನು ಸಮಾಜಕ್ಕೆ ತಲುಪಿಸುವ ವ್ಯವಸ್ಥೆ ಹೀಗೆ ಹೊಸಬಗೆಯ ಯೋಜನೆಗಳನ್ನು ಈ ವಿಶ್ವವಿದ್ಯಾನಿಲಯ ಹಮ್ಮಿಕೊಳ್ಳಬಹುದು.

ಒಟ್ಟಿನಲ್ಲಿ ಸಮಾಜಕ್ಕೆ ಉಪಯುಕ್ತ ಎನಿಸುವಂತೆ ಆನ್ವಯಿಕ ಹಾಗೂ ಅಂತರ್‌ಶಿಸ್ತೀಯ ಸ್ವರೂಪವನ್ನು ಜಾನಪದ ಪಡೆಯದಿದ್ದರೆ ಅದು ಸಂಗತ ಎನಿಸಲಾರದು.

ದಿನಾಂಕ: ೨೦.೧೧.೨೦೧೦

ಜನಪದ ಭಾರತೀಯ ದಾರ್ಶನಿಕತೆಯ ಹಿನ್ನೆಲೆಯಲ್ಲಿ ನಡೆಸಬಹುದಾದ ಈ ತೌಲನಿಕ ಅಧ್ಯಯನವು ಸಂಸ್ಕೃತಿ ಪರಿಕಲ್ಪನೆಯ ವಿಭಿನ್ನ ಸಾಧ್ಯತೆಗಳ ಅಧ್ಯಯನವೇ ಆಗಬಹುದು.

೮. ಸಾಂಸ್ಕೃತಿಕ ಸಮಗ್ರತೆಯ ಅಧ್ಯಯನ ವಿಧಾನಗಳ ಶೋಧ ಮತ್ತು ಈ ಕುರಿತ ಅಧ್ಯಯನ:

ಇದುವರೆಗಿನ ಸಾಂಸ್ಕೃತಿಕ ಅಧ್ಯಯನ ವಿಧಾನಗಳು ತಮ್ಮ ಸೀಮಿತ ದೃಷ್ಟಿಕೋನದಿಂದಾಗಿ ಮೇಲ್ಕಂಡ ಅಪಾರ ಅಧ್ಯಯನ ಸಾಧ್ಯತೆಗಳನ್ನು ಸಾಧಿಸಲಾಗಿಲ್ಲ. ಉದಾ: ಕನ್ನಡ ಸಂದರ್ಭದ ಪ್ರಧಾನ ಸಂಸ್ಕೃತಿ, ಉಪಸಂಸ್ಕೃತಿ, ಪರ್ಯಾಯಸಂಸ್ಕೃತಿ, ತಳಸಂಸ್ಕೃತಿ ಮುಂತಾದ ಪಾರಿಭಾಷಿಕ ಸಂಸ್ಕೃತಿ ಚಿಂತನಾ ಕ್ರಮಗಳು ತಮ್ಮ ಮಿತಿಗಳಿಂದಾಗಿ ಅಪ್ರಸ್ತುತಗೊಳ್ಳುತ್ತಿವೆ. ಸಂಸ್ಕೃತಿಯು ಸಮುದಾಯ ಆಶಯಗಳ ಸಮಗ್ರತೆಯ ಪ್ರತೀಕವಾಗಿರುವುದರಿಂದ, ಈ ಸಮಗ್ರತೆಯನ್ನು ಗ್ರಹಿಸಿ, ಶೋಧಿಸಿ ಅಧ್ಯಯನ ಶಿಸ್ತಿಗೆ ಒಳಪಡಿಸಬಲ್ಲ ಅಖಂಡ ತಾತ್ವಿಕತೆಯ, ಬಹುಶಿಸ್ತೀಯ ಅಧ್ಯಯನ ವಿಧಾನಗಳನ್ನು ಶೋಧಿಸಬೇಕಾಗಿದೆ.

೯. ಸಮಗ್ರ ಸಂಸ್ಕೃತಿ ಮಾಹಿತಿಕೋಶ ನಿರ್ಮಾಣ:

ಮೇಲ್ಕಂಡ ಸಂಸ್ಕೃತಿ ಸಂಶೋಧನೆ ಮತ್ತು ಅಧ್ಯಯನ ಕಾರ್ಯ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಬೇಕಾದರೆ ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಶ್ರದ್ಧಾಕೇಂದ್ರಗಳು, ಜಾತ್ರೆಗಳು, ಪರುಸೆಗಳು, ಆಚರಣೆಗಳು, ದಾರ್ಶನಿಕ ನುಡಿಗಟ್ಟುಗಳು ಮುಂತಾಗಿ ಸಾಂಸ್ಕೃತಿಕ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ಸಮಗ್ರ ಸಾಂಸ್ಕೃತಿಕ ಮಾಹಿತಿಕೋಶವೊಂದು ಸಿದ್ಧವಾಗಬೇಕು.

೧೦. ಉಪೇಕ್ಷಿತ ಸಮುದಾಯಗಳ ಅಭಿವೃದ್ಧಿ ಅಧ್ಯಯನ:

ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಕಾರಣಗಳಿಗಾಗಿ ಉಪೇಕ್ಷಿತಗೊಂಡಿರಬಹುದಾದ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿ ಸಾಧ್ಯತೆಗಳ ಕುರಿತು ಅಧ್ಯಯನ ನಡೆಸುವುದು. ಜೊತೆಗೆ ಸಂಸ್ಕೃತಿ ಅಧ್ಯಯನ ಚಟುವಟಿಕೆಗಳ ಅಂತಿಮ ದತ್ತಾಂಶಗಳ ಮೇರೆಗೆ ಉಪೇಕ್ಷಿತ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಮತ್ತಿತರ ಸಂಘ ಸಂಸ್ಥೆಗಳಿಗೆ ಮಾಹಿತಿಯಾಧಾರಿತ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವುದು.

ದಿನಾಂಕ:೧೧.೧೧.೨೦೧೦

ಪರಿಪೂರ್ಣತೆಯನ್ನು ಸಾಧಿಸುವಂತಿರಬೇಕು. ಆಗ ವಿಸ್ತೃತ ಜಗತ್ತಿನಲ್ಲಿ ವಿದ್ಯಾರ್ಥಿ ಹೋಟೆಲ್ ಉದ್ಯಮದಲ್ಲೂ ಅನ್ನಗಿಟ್ಟಿಸಬಲ್ಲ.

- ಇನ್ನು ಪಾರಂಪರಿಕ ವೈದ್ಯ ಪದ್ಧತಿ–ನಿಮಗೂ ಗೊತ್ತೇ ಇದೆ. ಹಿಂದೆ ಯಾರೂ ಆಸ್ಪತ್ರೆ ಆಶ್ರಯಿಸಿರಲಿಲ್ಲ. ದನಗಳಿಗಾಗಲಿ, ಜನಗಳಿಗಾಗಲಿ ತಮ್ಮ ಪರಿಸರದಲ್ಲೇ ಔಷಧಿಗಳು, ಔಷಧ ಜ್ಞಾನ–ನಾಟಿ ವೈದ್ಯ ಲಭ್ಯವಿದ್ದಿತು. ನಮ್ಮ ಭಾರತೀಯ ಪರಂಪರೆಯನ್ನು ಏಕೆ ವಿಶ್ವವಿದ್ಯಾನಿಲಯ ವೈಭವೀಕರಿಸಬಾರದು? ಪಾರಂಪರಿಕ ವೈದ್ಯದ ಬಗ್ಗೆ ಒಂದು ಪತ್ರಿಕೆಯಿರುವುದು ಉತ್ತಮ. ಪರಿಪೂರ್ಣತೆ ಪಡೆದ ಪದವೀಧರ ಸ್ವ ಉದ್ಯೋಗಿಯಾಗಿ ಹೊಟ್ಟೆಪಾಡು ಮಾಡಬಲ್ಲ.

- ಆಧುನಿಕ ಕೃಷಿ–ಭೂಮಿಯನ್ನು ಬರಡಾಗಿಸಿದೆ. ರಾಸಾಯನಿಕ ಗೊಬ್ಬರ, ವಿದೇಶಿ ಬೀಜ ರೈತರ ಬದುಕನ್ನು ಗೊಬ್ಬರವಾಗಿಸಿದೆ. ಪಾರಂಪರಿಕ ಕೃಷಿ (ಸಾವಯವ ವ್ಯವಸಾಯ, ವ್ಯವಸಾಯಕ್ಕೆ ಪೂರಕ ಕಸುಬು ಪಶುಪಾಲನೆ, ಮಾಂಸ ಉದ್ಯಮ ಇತ್ಯಾದಿ) ಬಗ್ಗೆ ವಿದ್ಯಾರ್ಥಿಗಳು ಓದುವುದು ಉತ್ತಮ.

- ಭಾರತೀಯ ಸಂಸ್ಕೃತಿಯ ಬಗ್ಗೆ ಒಂದು ಪತ್ರಿಕೆಯಿರುವುದು ಸೂಕ್ತ.

- ಜಾನಪದ–ನಮ್ಮ ಸಂಸ್ಕೃತಿ, ಭಾಷೆ, ನೆಲ–ಜಲ, ಪರಂಪರೆ ಅಧ್ಯಯನ ಹೌದು, ಅಷ್ಟೇ ಸಾಲದು. ಇಂದು ನಾವು ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಆದ್ದರಿಂದ ಇಂಗ್ಲಿಷ್ ಜ್ಞಾನ ಕೂಡ ಅತ್ಯವಶ್ಯಕ. ಜಾನಪದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕೂಡ ಕಡ್ಡಾಯ ಅಧ್ಯಯನವಾಗಿರಬೇಕು.

- ಪದವಿ ಮಟ್ಟದಲ್ಲಿ ನಮ್ಮ ನೆಲದ ಜಿಯಾಗ್ರಫಿ, ಕೃಷಿ ಅರ್ಥಶಾಸ್ತ್ರ, ಇತಿಹಾಸ ಇಂತಹ ಒಂದೊಂದು ವಿಷಯುಗಳು ಜಾನಪದ ವಿಷಯುಗಳ ಜೊತೆಗಿರಬೇಕು. ಇದರಿಂದ ಸ್ಪರ್ಧಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸಬಹುದು.

ದಿನಾಂಕ: ೧೨.೧೦.೨೦೧೦

ಪರಿಪೂರ್ಣತೆಯನ್ನು ಸಾಧಿಸುವಂತಿರಬೇಕು. ಆಗ ವಿಸ್ತೃತ ಜಗತ್ತಿನಲ್ಲಿ ವಿದ್ಯಾರ್ಥಿ ಹೋಟೆಲ್ ಉದ್ಯಮದಲ್ಲೂ ಅನ್ನಗಿಟ್ಟಿಸಬಲ್ಲ.

- ಇನ್ನು ಪಾರಂಪರಿಕ ವೈದ್ಯ ಪದ್ಧತಿ-ನಿಮಗೂ ಗೊತ್ತೇ ಇದೆ. ಹಿಂದೆ ಯಾರೂ ಆಸ್ಪತ್ರೆ ಆಶ್ರಯಿಸಿರಲಿಲ್ಲ. ದನಗಳಿಗಾಗಲಿ, ಜನಗಳಿಗಾಗಲಿ ತಮ್ಮ ಪರಿಸರದಲ್ಲೇ ಔಷಧಿಗಳು, ಔಷಧ ಜ್ಞಾನ-ನಾಟಿ ವೈದ್ಯ ಲಭ್ಯವಿದ್ದಿತು. ನಮ್ಮ ಭಾರತೀಯ ಪರಂಪರೆಯನ್ನು ಏಕೆ ವಿಶ್ವವಿದ್ಯಾನಿಲಯ ವೈಭವೀಕರಿಸಬಾರದು? ಪಾರಂಪರಿಕ ವೈದ್ಯದ ಬಗ್ಗೆ ಒಂದು ಪತ್ರಿಕೆಯಿರುವುದು ಉತ್ತಮ. ಪರಿಪೂರ್ಣತೆ ಪಡೆದ ಪದವೀಧರ ಸ್ವ ಉದ್ಯೋಗಿಯಾಗಿ ಹೊಟ್ಟೆಪಾಡು ಮಾಡಬಲ್ಲ.
- ಆಧುನಿಕ ಕೃಷಿ-ಭೂಮಿಯನ್ನು ಬರಡಾಗಿಸಿದೆ. ರಾಸಾಯನಿಕ ಗೊಬ್ಬರ, ವಿದೇಶಿ ಬೀಜ ರೈತರ ಬದುಕನ್ನು ಗೊಬ್ಬರವಾಗಿಸಿದೆ. ಪಾರಂಪರಿಕ ಕೃಷಿ (ಸಾವಯವ ವ್ಯವಸಾಯ, ವ್ಯವಸಾಯಕ್ಕೆ ಪೂರಕ ಕಸುಬು ಪಶುಪಾಲನೆ, ಮಾಂಸ ಉದ್ಯಮ ಇತ್ಯಾದಿ) ಬಗ್ಗೆ ವಿದ್ಯಾರ್ಥಿಗಳು ಓದುವುದು ಉತ್ತಮ.
- ಭಾರತೀಯ ಸಂಸ್ಕೃತಿಯ ಬಗ್ಗೆ ಒಂದು ಪತ್ರಿಕೆಯಿರುವುದು ಸೂಕ್ತ.
- ಜಾನಪದ-ನಮ್ಮ ಸಂಸ್ಕೃತಿ, ಭಾಷೆ, ನೆಲ-ಜಲ, ಪರಂಪರೆ ಅಧ್ಯಯನ ಹೌದು, ಅಷ್ಟೇ ಸಾಲದು. ಇಂದು ನಾವು ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಆದ್ದರಿಂದ ಇಂಗ್ಲಿಷ್ ಜ್ಞಾನ ಕೂಡ ಅತ್ಯವಶ್ಯಕ. ಜಾನಪದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕೂಡ ಕಡ್ಡಾಯ ಅಧ್ಯಯನವಾಗಿರಬೇಕು.
- ಪದವಿ ಮಟ್ಟದಲ್ಲಿ ನಮ್ಮ ನೆಲದ ಜಿಯಾಗ್ರಫಿ, ಕೃಷಿ ಅರ್ಥಶಾಸ್ತ್ರ, ಇತಿಹಾಸ ಇಂತಹ ಒಂದೊಂದು ವಿಷಯಗಳು ಜಾನಪದ ವಿಷಯಗಳ ಜೊತೆಗಿರಬೇಕು. ಇದರಿಂದ ಸ್ಪರ್ಧಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸಬಹುದು.

ದಿನಾಂಕ: ೧೨.೧೦.೨೦೧೦

ಜನಪದ ಭಾರತೀಯ ದಾರ್ಶನಿಕತೆಯ ಹಿನ್ನೆಲೆಯಲ್ಲಿ ನಡೆಸಬಹುದಾದ ಈ ತೌಲನಿಕ ಅಧ್ಯಯನವು ಸಂಸ್ಕೃತಿ ಪರಿಕಲ್ಪನೆಯ ವಿಭಿನ್ನ ಸಾಧ್ಯತೆಗಳ ಅಧ್ಯಯನವೇ ಆಗಬಹುದು.

೮. ಸಾಂಸ್ಕೃತಿಕ ಸಮಗ್ರತೆಯ ಅಧ್ಯಯನ ವಿಧಾನಗಳ ಶೋಧ ಮತ್ತು ಈ ಕುರಿತ ಅಧ್ಯಯನ:

ಇದುವರೆಗಿನ ಸಾಂಸ್ಕೃತಿಕ ಅಧ್ಯಯನ ವಿಧಾನಗಳು ತಮ್ಮ ಸೀಮಿತ ದೃಷ್ಟಿಕೋನದಿಂದಾಗಿ ಮೇಲ್ಕಂಡ ಅಪಾರ ಅಧ್ಯಯನ ಸಾಧ್ಯತೆಗಳನ್ನು ಸಾಧಿಸಲಾಗಿಲ್ಲ. ಉದಾ: ಕನ್ನಡ ಸಂದರ್ಭದ ಪ್ರಧಾನ ಸಂಸ್ಕೃತಿ, ಉಪಸಂಸ್ಕೃತಿ, ಪರ್ಯಾಯಸಂಸ್ಕೃತಿ, ತಳಸಂಸ್ಕೃತಿ ಮುಂತಾದ ಪಾರಿಭಾಷಿಕ ಸಂಸ್ಕೃತಿ ಚಿಂತನಾ ಕ್ರಮಗಳು ತಮ್ಮ ಮಿತಿಗಳಿಂದಾಗಿ ಅಪ್ರಸ್ತುತಗೊಳ್ಳುತ್ತಿವೆ. ಸಂಸ್ಕೃತಿಯು ಸಮುದಾಯ ಆಶಯಗಳ ಸಮಗ್ರತೆಯ ಪ್ರತೀಕವಾಗಿರುವುದರಿಂದ, ಈ ಸಮಗ್ರತೆಯನ್ನು ಗ್ರಹಿಸಿ, ಶೋಧಿಸಿ ಅಧ್ಯಯನ ಶಿಸ್ತಿಗೆ ಒಳಪಡಿಸಬಲ್ಲ ಅಖಂಡ ತಾತ್ವಿಕತೆಯ, ಬಹುಶಿಸ್ತೀಯ ಅಧ್ಯಯನ ವಿಧಾನಗಳನ್ನು ಶೋಧಿಸಬೇಕಾಗಿದೆ.

೯. ಸಮಗ್ರ ಸಂಸ್ಕೃತಿ ಮಾಹಿತಿಕೋಶ ನಿರ್ಮಾಣ:

ಮೇಲ್ಕಂಡ ಸಂಸ್ಕೃತಿ ಸಂಶೋಧನೆ ಮತ್ತು ಅಧ್ಯಯನ ಕಾರ್ಯ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಬೇಕಾದರೆ ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಶ್ರದ್ಧಾಕೇಂದ್ರಗಳು, ಜಾತ್ರೆಗಳು, ಪರುಸೆಗಳು, ಆಚರಣೆಗಳು, ದಾರ್ಶನಿಕ ನುಡಿಗಟ್ಟುಗಳು ಮುಂತಾಗಿ ಸಾಂಸ್ಕೃತಿಕ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ಸಮಗ್ರ ಸಾಂಸ್ಕೃತಿಕ ಮಾಹಿತಿಕೋಶವೊಂದು ಸಿದ್ಧವಾಗಬೇಕು.

೧೦. ಉಪೇಕ್ಷಿತ ಸಮುದಾಯಗಳ ಅಭಿವೃದ್ಧಿ ಅಧ್ಯಯನ:

ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಕಾರಣಗಳಿಗಾಗಿ ಉಪೇಕ್ಷಿತಗೊಂಡಿರಬಹುದಾದ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿ ಸಾಧ್ಯತೆಗಳ ಕುರಿತು ಅಧ್ಯಯನ ನಡೆಸುವುದು. ಜೊತೆಗೆ ಸಂಸ್ಕೃತಿ ಅಧ್ಯಯನ ಚಟುವಟಿಕೆಗಳ ಅಂತಿಮ ದತ್ತಾಂಶಗಳ ಮೇರೆಗೆ ಉಪೇಕ್ಷಿತ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಮತ್ತಿತರ ಸಂಘ ಸಂಸ್ಥೆಗಳಿಗೆ ಮಾಹಿತಿಯಾಧಾರಿತ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವುದು.

ದಿನಾಂಕ:೧೧.೧೧.೨೦೧೦

ಅರಿವಾಗುತ್ತದೆ. ಇದಕ್ಕೆ ಜಾನಪದವನ್ನು ಇತರ ಮಾನವಿಕಗಳು ಮತ್ತು ವಿಜ್ಞಾನ ಶಿಸ್ತುಗಳ ಜೊತೆ ಅಂತರ್‌ಶಿಸ್ತೀಯ ಮತ್ತು ಆನ್ವಯಿಕ ರೀತಿಯಲ್ಲಿ ವಿಶ್ಲೇಷಿಸುವ ಅಗತ್ಯವಿದೆ. ಇದನ್ನು ಸದ್ಯ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಗಳು ಮಾಡುತ್ತಿಲ್ಲ.

ಹೊಸ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಬೋಧನೆ–ಶೋಧನೆಗಿಂತಲೂ ಹೆಚ್ಚಾಗಿ ಶೋಧನೆ–ವಿಶ್ಲೇಷಣೆಗಳು ನಡೆಯಬೇಕು. ಹೊಸ ಪದವೀಧರರನ್ನು ಸೃಷ್ಟಿಸಿ ಸಮಾಜಕ್ಕೆ ಬಿಡುವ ಬದಲು, ಅನ್ಯ ವಿಶ್ವವಿದ್ಯಾನಿಲಯಗಳು ಸೃಷ್ಟಿಸುವ ವಿವಿಧ ವಿಷಯಗಳ ಪದವೀಧರರನ್ನು ಇಲ್ಲಿ ಸರಿಯಾಗಿ ಬಳಸಿಕೊಳ್ಳುವಂತಾಗಬೇಕು. ಸಾಂಪ್ರದಾಯಿಕ ಜ್ಞಾನ ಹೊಸ ರೂಪದಲ್ಲಿ ಹೊಸ ಸಮಾಜಕ್ಕೆ ದೊರೆಯುವಂತಾಗಲು ಇದು ಶ್ರಮಿಸಬೇಕು.

ಜನಪದ ವೈದ್ಯ (ಮಾನವ/ಪಶು) ಹಾಗೂ ಆಹಾರ (ಮಾನವ/ ಪಶು) ಕ್ರಮಗಳು ಆರೋಗ್ಯ, ಪರಿಸರ ರಕ್ಷಣೆ ದೃಷ್ಟಿಯಿಂದ ಶ್ರೇಷ್ಠ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಅವುಗಳ ಬಳಕೆ ಕಡಿಮೆಯಾಗುತ್ತಿದೆ. ಇವುಗಳನ್ನು ಸರಿಯಾಗಿ ಸಂಗ್ರಹಿಸುವ ಕ್ಷೇತ್ರಕಾರ್ಯಕರ್ತರು – ಅದನ್ನು ವಿಶ್ಲೇಷಿಸುವ ಪ್ರಯೋಗಾಲಯ ಸಿಬ್ಬಂದಿ –ಅದರ ಫಲಶ್ರುತಿಯನ್ನು ಸಮಾಜಕ್ಕೆ ತಲುಪಿಸುವ ವ್ಯವಸ್ಥೆ ಹೀಗೆ ಹೊಸಬಗೆಯ ಯೋಜನೆಗಳನ್ನು ಈ ವಿಶ್ವವಿದ್ಯಾನಿಲಯ ಹಮ್ಮಿಕೊಳ್ಳಬಹುದು.

ಒಟ್ಟಿನಲ್ಲಿ ಸಮಾಜಕ್ಕೆ ಉಪಯುಕ್ತ ಎನಿಸುವಂತೆ ಆನ್ವಯಿಕ ಹಾಗೂ ಅಂತರ್‌ಶಿಸ್ತೀಯ ಸ್ವರೂಪವನ್ನು ಜಾನಪದ ಪಡೆಯದಿದ್ದರೆ ಅದು ಸಂಗತ ಎನಿಸಲಾರದು.

ದಿನಾಂಕ: ೨೦.೧೧.೨೦೧೦

ಶ್ರದ್ಧಾಕೇಂದ್ರಗಳು ಇಂಥ ಜಾತಿ–ಮತಾತೀತ, ಕಾಲ–ದೇಶಾತೀತ ಧಾರ್ಮಿಕ ಆಶಯಗಳ ಶ್ರದ್ಧಾಕೇಂದ್ರಗಳಾಗಿವೆ. ಈ ಶ್ರದ್ಧಾಕೇಂದ್ರಗಳ ಆಚರಣೆ, ನಂಬಿಕೆ, ಜಾತ್ಯತೀತತೆ ಇತ್ಯಾದಿಗಳ ಸಾಂಸ್ಕೃತಿಕ ಲೋಕಗಳನ್ನು ಹಾಗೂ ಇಂಥ ಶ್ರದ್ಧಾಕೇಂದ್ರಗಳ ನಡುವಿನ ಅಂತರ್ ಸಂಬಂಧಗಳನ್ನು ಸಂಶೋಧಿಸಿ ಅಧ್ಯಯನಕ್ಕೆ ಒಳಪಡಿಸುವುದು.

೨. ಸಾಂಸ್ಕೃತಿಕ ನಕಾಶೆಯ ಶೋಧ ಹಾಗೂ ನಿರ್ಮಾಣ ಸಂಬಂಧಿ ಅಧ್ಯಯನ:

ಆದಿಮ ದೈವಗಳು, ನಾಥರು, ಸಿದ್ಧರು, ಆರೂಢರು, ಸಂತರು ಭೌಗೋಳಿಕವಾಗಿ ನಡೆದಾಡಿದ ದಾರಿಗಳು ಸಾಂಸ್ಕೃತಿಕವಾಗಿ ಅತ್ಯಂತ ಕುತೂಹಲಕಾರಿಯಾಗಿದ್ದು ಈ ದಾರಿಗಳಲ್ಲೇ ಸಮುದಾಯಗಳು ತಲೆತಲಾಂತರಗಳಿಂದ ಪರುಸೆಗಳಾಗಿ ಸಂಚರಿಸುತ್ತಿವೆ. ಇಂಥ ಸಾಂಸ್ಕೃತಿಕ ದಾರಿಗಳ ಸಂಶೋಧನೆ ಮತ್ತು ಅಧ್ಯಯನಗಳಿಂದ ಸಮಗ್ರ ಸಾಂಸ್ಕೃತಿಕ ನಕಾಶೆ (Cultural Map) ಒಂದನ್ನು ನಿರ್ಮಿಸುವುದು. ಈ ಸಾಂಸ್ಕೃತಿಕ ನಕಾಶೆಯ ಅಧ್ಯಯನವು ಕರ್ನಾಟಕವಷ್ಟೇ ಅಲ್ಲದೆ ಇಡೀ ಭಾರತದ ಆರ್ಥಿಕ, ಸಾಮಾಜಿಕ, ರಾಜಕೀಯ, ಚರಿತ್ರೆಗಳ ಹೊಸ ಚಿತ್ರಣಗಳ ಸುರುಳಿಗಳನ್ನೇ ಬಿಚ್ಚಬಹುದು.

೩. ಆದಿಮ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ:

ಸೋಲಿಗ, ಕಾಡುಕುರುಬ, ಜೇನು ಕುರುಬ ಮುಂತಾದ ಬುಡಕಟ್ಟು ಸಮೂಹಗಳು ತಮ್ಮ ಅನಾದಿ ಕಾಲದ ನೆನಪುಗಳನ್ನು ಆಚರಣೆ, ಭಾಷೆ, ಆಹಾರಪದ್ಧತಿಗಳ ಮೂಲಕ ಉಳಿಸಿಕೊಂಡು ಬಂದಿವೆ. ಇಲ್ಲಿಂದ ಆರಂಭಿಸಿ ಆಧುನಿಕ ನಾಗರಿಕ ಸಂದರ್ಭಗಳವರೆಗಿನ ಆಚರಣೆ, ಭಾಷೆ, ಆಹಾರಪದ್ಧತಿಗಳಲ್ಲಿನ ಪಲ್ಲಟಗಳ ಅಧ್ಯಯನ ಕೈಗೊಳ್ಳುವುದು. ಈ ಅಧ್ಯಯನವು ಸಾಂಸ್ಕೃತಿಕ ಇತಿಹಾಸದ ಪಲ್ಲಟಗಳ ಅಧ್ಯಯನವಾಗಿ ಹಾಗೂ ಬುಡಕಟ್ಟು ಸಮೂಹಗಳ ಲೋಕದೃಷ್ಟಿ, ಚಿಂತನಾಕ್ರಮ ಮತ್ತು ಜ್ಞಾನಮೀಮಾಂಸೆಗಳ ಅಧ್ಯಯನವಾಗಿ ತೆರೆದುಕೊಳ್ಳಬಹುದು.

೪. ಕಾಯಕ ತತ್ವಾಧಾರಿತ ಸಾಂಸ್ಕೃತಿಕ ಉದ್ಯಮಗಳ ಅಧ್ಯಯನ:

ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ ಮುಂತಾದ ಕುಲ ಮೂಲ ಕಸುಬುಗಳು ಸಮುದಾಯಗಳ ಜೀವನ ನಿರ್ವಹಣೆಯನ್ನೂ ಮೀರಿ ಕಾಯಕತತ್ವ – ದಾರ್ಶನಿಕತೆಯ ಸಾಂಸ್ಕೃತಿಕ ಉದ್ಯಮಗಳಾಗಿವೆ. ಆಧುನಿಕತೆ ಹಾಗೂ ಜಾತಿಯ ಕೀಳರಿಮೆಯ ಒತ್ತಡಗಳಿಗೆ ಸಿಲುಕಿ ಅವನತಿಯ

- ಪ್ರತಿಯೊಂದು ಹಳ್ಳಿಯ ಜನಪದ ಕಲಾವಿದರಲ್ಲಿರುವ ಮೌಖಿಕ ಕಥೆ, ಕಾವ್ಯಗಳ ಸಂಗ್ರಹ.
- ಜನಪದ ಕಲೆಗಳು, ಸಂಗೀತ ಪರಿಕರಗಳು, ಇತರೆ ಸಲಕರಣೆಗಳ ರಕ್ಷಣೆ.
- ಪ್ರತಿಯೊಂದು ಜನಪದ ಕಲೆ, ಸಾಹಿತ್ಯ, ಸಂಗೀತ, ಹಬ್ಬಗಳು, ಆಚರಣೆಗಳು, ಜಾತ್ರೆಗಳು, ಹುಟ್ಟು, ಸಾವು, ಮದುವೆ, ಇನ್ನಿತರ ಪ್ರಕಾರಗಳ ಆಡಿಯೋ, ವಿಡಿಯೋ, ಲಿಖಿತ ದಾಖಲೀಕರಣ.
- ವೆಬ್‌ನಲ್ಲಿ ಪ್ರತಿಯೊಂದು ಪ್ರದೇಶದ ಜನಪದ ಕಲೆ, ಕಲಾವಿದರ ಮಾಹಿತಿ ಇಡುವುದು.
- ಬುಡಕಟ್ಟು ಸಮುದಾಯಗಳ ವೈದ್ಯ ಪದ್ಧತಿಗಳ ಅಧ್ಯಯನ ಮತ್ತು ಜ್ಞಾನ ರಕ್ಷಣೆ.
- ವಸ್ತು ಸಂಗ್ರಹಾಲಯ–ಪ್ರತಿಯೊಂದು ಪ್ರದೇಶಗಳ–ವಿಶೇಷ ಕಲೆ, ಸಂಸ್ಕೃತಿಗಳನ್ನು ಬಿಂಬಿಸುವಂತೆ, ರಾಜ್ಯವನ್ನು ಪ್ರತಿನಿಧಿಸುವಂತೆ ಇರುವುದು.

ದಿನಾಂಕ: ೧೫.೧೨.೨೦೧೦

- ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು "ಭಾರತೀಯ ವಿಜ್ಞಾನ ಸಂಸ್ಥೆ" ಇರಬೇಕು. ಅದರಲ್ಲಿ ವಿಜ್ಞಾನಿಗಳು, ಜಾನಪದ ತಜ್ಞರು ಇರಬೇಕು. ಅಂದರೆ ವಿಜ್ಞಾನದ ಬೇರೆ ಬೇರೆ ಶಾಖೆಗಳಾದ ಖಗೋಳ, ಜೀವ, ಸಸ್ಯ, ವೈದ್ಯ, ತಂತ್ರಜ್ಞಾನ ಇತ್ಯಾದಿಗಳ ತಜ್ಞರಿರಬೇಕು. ಅಲ್ಲದೆ ಮಾನವಿಕ ವಿಭಾಗಗಳಾದ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಇನ್ನು ಮುಂತಾದ ತಜ್ಞರು ಇರಬೇಕು.
- ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯೇ ಮುಖ್ಯವಾಗಿರಬೇಕು.
- ಜನಪದ ಕಲೆಗಳು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವಂತಿರಬೇಕು.
- ಪ್ರಸಾರಾಂಗ ಹಾಗೂ ಗ್ರಂಥಾಲಯಗಳು ಇರಲೇಬೇಕು.
- ಪರಿಸರ ಸಂರಕ್ಷಣೆ ಹಾಗೂ ವಿಕೋಪಗಳ ಮುನ್ಸೂಚನೆ ಬಗೆಗಿನ ಜನಪದರ ಜ್ಞಾನವನ್ನು ತಿಳಿಯುವ ವಿಭಾಗವಿದ್ದು, ಅದರಲ್ಲಿ ಪರಂಪರಾಗತ ಜ್ಞಾನವನ್ನು ಹೊಂದಿರುವ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅವರಿಂದ ವಿದ್ಯಾರ್ಥಿಗಳಿಗೆ ಕಲಿಸಬೇಕು.

ದಿನಾಂಕ: ೧೬.೧೧.೨೦೧೦

- ನಿಜವಾಗಿಯೂ ಜಾನಪದ ಕ್ಷೇತ್ರದ ಬಗ್ಗೆ ಸಮರ್ಪಣ ಭಾವದಿಂದ ಕೆಲಸ ಮಾಡುವಂತಹ ಸಹೃದಯ ಜನಪದರನ್ನು ಆಯ್ಕೆ ಮಾಡಿಕೊಂಡು ಜಾನಪದ ಸಂಘಟನೆ ರೂಪುಗೊಳ್ಳಲಿ.
- ಜನಪದ ಕಲಾವಿದರು, ಜಾನಪದ ಅಧ್ಯಾಪಕರು, ಜನಪದರು– ಈ ಮೂರು ವರ್ಗದೊಳಗೆ ಜಾನಪದ ವಿಶ್ವವಿದ್ಯಾನಿಲಯ ಅಪೂರ್ವತೆಯ ಆಗರವಾಗಲಿ.
- ಹಿರಿಯ ಜಾನಪದ ತಜ್ಞರು, ವಿದ್ವಾಂಸರು, ವಿದ್ಯಾರ್ಥಿಗಳಲ್ಲಿ ಇರಬಹುದಾದ ಜಾನಪದದ ಹೊಸ ಹೊಳಹುಗಳ ಜಾಡಿನಲ್ಲಿ ಜಾನಪದ ವಿಶೇಷಾಧಿಕಾರಿ ಮನ್ವಂತರದ ಹರಿಕಾರರಾಗಬೇಕು.
- ಈಗಾಗಲೇ ಜಾನಪದ ಕ್ಷೇತ್ರದಲ್ಲಿ ಕ್ಷೇತ್ರಕಾರ್ಯ ಮಾಡಿರುವ, ವಿಶೇಷ ಆಸಕ್ತರನ್ನು ವಿವಿಧ ಸೇವೆಯ ಮೂಲಕ ಎಲೆಮರೆಯ ಕಾಯಿಯಂ-ತಿರುವವರನ್ನು ವಿಶ್ವವಿದ್ಯಾನಿಲಯ ಕಟ್ಟುವ ಕೆಲಸಕ್ಕೆ ಬಳಸಿಕೊಳ್ಳಬಹುದು.
- ಜಾನಪದ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಗ್ರಂಥಾಲಯ ಬಂದಾಗ ನಮ್ಮ ಕಡೆಯಿಂದ ಬಹಳಷ್ಟು ಗ್ರಂಥಗಳನ್ನು ನೀಡಿ, ನಮ್ಮ ಜಾನಪದ ಗ್ರಂಥಾಲಯ ವಿಸ್ತಾರವಾಗಲು ನೆರವಾಗುವೆ.

ತಮ್ಮ ಸದಾಶಯಕ್ಕೆ ಬದುಕಿರುವವರೆಗೂ ಸಹಕರಿಸುವೆ. ಜಾನಪದ ವಿಶ್ವವಿದ್ಯಾನಿಲಯ ಸ್ಮರಣೀಯ ವಿಶ್ವವಿದ್ಯಾನಿಲಯವಾಗಲಿ ಎಂದು ಆಶಿಸುವೆ.

ದಿನಾಂಕ:೦೩.೧೨.೨೦೧೦

ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಮಗ್ರ ಮಾಹಿತಿ ಸಿದ್ಧಪಡಿಸಬೇಕು. ಪ್ರತಿಯೊಂದು ಮನೆ, ಊರು, ಹೋಬಳಿಗಳಲ್ಲಿರುವ ಕಲಾವಿದರ ಪರಿಚಯಾತ್ಮಕ ಲೇಖನ/ಸಂಕಲನಗಳನ್ನು ಹೊರತರುವ ಪ್ರಯತ್ನ ಮಾಡಬೆಕು. ಜಾನಪದದ ಎಲ್ಲ ಪ್ರಕಾರಗಳ ಬಗ್ಗೆ ಸಮಗ್ರವಾದ ಅಧ್ಯಯನ ಬುಡಕಟ್ಟು ಜನಾಂಗೀಯ ಮೂಲಗಳಿಂದ ನಡೆಯಬೇಕು. ಇಡೀ ಜಾನಪದವೇ ಮಹಿಳಾ ಲೋಕದ ಅನನ್ಯ ಸೃಷ್ಟಿಯಾಗಿರುವುದರಿಂದ ಪ್ರಾಚೀನ ಕಾಲದಿಂದಲೂ ಸ್ತ್ರೀ ಪ್ರಧಾನ ಕುಟುಂಬದ ಮೇಲೆ ಪುರುಷ ಪ್ರಧಾನ ಕುಟುಂಬ ನಡೆಸಿರುವ ದೌರ್ಜನ್ಯದ ಬಗ್ಗೆ ಹಾಗೂ ಸ್ತ್ರೀ ಪ್ರತಿಭಟನೆಯ ಒಳ ಸ್ವರೂಪಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಬೇಕು.

ಜಾನಪದ ವಿಶ್ವವಿದ್ಯಾನಿಲಯಕ್ಕೆ ಪ್ರತ್ಯೇಕವಾದ ಬೃಹತ್ ವಸ್ತು ಸಂಗ್ರಹಾಲಯು ಆಗಬೇಕು. ಕರ್ನಾಟಕದ ಎಲ್ಲ ಭಾಗಗಳಿಗೂ ಅನುಕೂಲವಾಗುವ ಹಾಗೆ ನಿರ್ದಿಷ್ಟ ಸ್ಥಳದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಆಗಬೇಕು. ದಾವಣಗೆರೆ ಜಿಲ್ಲೆ ಇದಕ್ಕೆ ಸೂಕ್ತವಾದ ಸ್ಥಳ ಎಂಬುದಾಗಿ ಸೂಚಿಸ ಬಯಸುತ್ತೇನೆ. ಜಾನಪದದಲ್ಲಿ ಪ್ರಕಟಗೊಂಡಿರುವ ಎಲ್ಲ ಕೃತಿಗಳ/ಲೇಖನಗಳ ಸಮಗ್ರವಾದ ಗ್ರಂಥಸೂಚಿ ಪ್ರಕಟಿಸಬೇಕು. ಪ್ರಾದೇಶಿಕ ಭಾಷೆಯ ವೈವಿಧ್ಯತೆಗಳನ್ನು ತಿಳಿಯಲು ಜಾನಪದ ನಿಘಂಟು ಸಿದ್ಧಗೊಳಿಸಬೇಕು.

ಕರ್ನಾಟಕದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಅಧ್ಯಯನ ಇತರ ರಾಜ್ಯ, ರಾಷ್ಟ್ರಗಳ ಕಲೆ, ಸಾಹಿತ್ಯ, ಸಂಸ್ಕೃತಿಗಳೊಂದಿಗೆ ನಡೆಯಬೇಕು. ಇದಕ್ಕಾಗಿ ಕರ್ನಾಟಕದ ಶ್ರೇಷ್ಠ ಜಾನಪದ ಕೃತಿಗಳು (ಪ್ರತಿಯೊಂದು ಪ್ರಕಾರಗಳ) ಇತರೆ ಭಾಷೆಗಳಿಗೆ ಅನುವಾದಗೊಳ್ಳಬೇಕು. ಬೇರೆ ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿಕೊಳ್ಳುವ ಕೆಲಸ ನಡೆಯಬೇಕು. ಜನಪದ ಕಲಾವಿದರ ಬಗ್ಗೆ, ಅವರ ಬದುಕು, ಕಲೆಗಳ ಬಗ್ಗೆ ವಿಶೇಷ ಪ್ರೋತ್ಸಾಹ ನೀಡಬೇಕು. ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ ತನ್ನದೇ ಆದ ವೈಶಿಷ್ಟ್ಯತೆಯನ್ನು ಈ ಎಲ್ಲ ಕೆಲಸ ಕಾರ್ಯಗಳ ಹಿನ್ನೆಲೆಯಲ್ಲಿ ಉಳಿಸಿಕೊಳ್ಳುವ ಪ್ರಯತ್ನ ಮಾಡಲಿ ಎಂದು ಆಶಿಸುತ್ತೇನೆ.

ದಿನಾಂಕ:೦೬.೧೨.೨೦೧೦

ವಾದ್ಯ ಸಂಗೀತ, ವೇಷಭೂಷಣ, ವಿನೋದ, ಆಹಾರ-ವಿಹಾರ, ಮಾಟ-ಮಂತ್ರ, ಔಷಧ, ವೈದ್ಯಕೀಯ, ಹುಟ್ಟು-ಸಾವುಗಳವರೆಗಿನ ಮಾನವ ಜೀವನದ ಎಲ್ಲ ಚಟುವಟಿಕೆಗಳನ್ನು ಒಳಗೊಳ್ಳುವ ಜಾನಪದಕ್ಕೆ ತನ್ನದೇ ಆದ ಒಂದು ಪ್ರತ್ಯೇಕವಾದ ಕಲಿಕಾ ಮಾರ್ಗ ಇಲ್ಲ. ಇದು ಏನಿದ್ದರೂ ಬದುಕಿನಲ್ಲಿಯೇ ಹುಟ್ಟಿ ಬೆಳೆಯಬೇಕಾದ ಸಿರಿ. ಆದ್ದರಿಂದ ಬದುಕಿಗೆ ಪೂರಕವಾಗಿ ಹಾಗೂ ಬದುಕಿನಿಂದ ಪ್ರಫುಲ್ಲಿತವಾಗುವ ಜನಪದವೂ ನಮ್ಮ ಜನಸಾಮಾನ್ಯರ ನಂಬಿಕೆ, ನಡವಳಿಕೆಗಳಿಂದ ಉಳಿದು ಬೆಳೆಯಬೇಕಾಗಿದೆ. ಬದುಕಿಗೆ ಬಲ ಮತ್ತು ಸ್ಫೂರ್ತಿ ಕಾಯಕವಾಗಿರುವ ಜಾನಪದವು ಇಂದು ಆಧುನಿಕತೆಯ ತಲ್ಲಣದಲ್ಲಿ ಸಿಲುಕಿ ನಾಶಗೊಳ್ಳುತ್ತಿರುವುದರಿಂದ ಉಚ್ಚ ಜೀವನಾದರ್ಶ ಹಾಗೂ ಮೌಲ್ಯಗಳನ್ನು ಒಳಗೊಂಡಿರುವ ಈ ದೇಶೀ ಪರಂಪರೆಯನ್ನು ರಕ್ಷಿಸಿಕೊಳ್ಳಲು ಜಾನಪದಕ್ಕೆ ಮರುಹುಟ್ಟು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ನಮಗೊಂದು ಜಾನಪದ ವಿಶ್ವವಿದ್ಯಾನಿಲಯವು ಅಗತ್ಯವಾಗಿರುವುದನ್ನು ಮನಗಂಡು ಜಾನಪದ ವಿದ್ವಾಂಸರು ಕಳೆದೊಂದು ದಶಕದಿಂದಲೂ ಜಾನಪದ ವಿಶ್ವವಿದ್ಯಾನಿಲಯ ಕನ್ನಡ ನಾಡಿನ ಸಮಗ್ರ ಜನಪದ ಸಂಸ್ಕೃತಿ ಪ್ರಸಾರಕ್ಕೆ, ಅಧ್ಯಯನಕ್ಕೆ ಅಗತ್ಯವೆಂದು ಯೋಚಿಸಿದ ಕ್ರಮ ಸ್ವಾಗತಾರ್ಹವಾದುದಾಗಿದೆ.

ಜಾನಪದ ವಿಷಯವನ್ನು ಪಠ್ಯವಾಗಿ ಮುಂದಿಟ್ಟುಕೊಂಡು ಕಳೆದ ಶತಮಾನದಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾನಿಲಯವು ಅಧ್ಯಯನಕ್ಕೆ ಅವಕಾಶ ಕಲ್ಪಿಸಿತು. ನಂತರ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜಾನಪದವನ್ನು ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ಕೇಂದ್ರಗಳನ್ನು ಆರಂಭಿಸಿದವು. ನಮ್ಮ ಬದುಕಿಗೆ ಪೂರಕವಾಗುವ ಎಲ್ಲ ವಿಷಯ ಸಂಗತಿಗಳ ಕುರಿತಾಗಿ ಇವತ್ತು ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಹುಟ್ಟಿಕೊಂಡಿವೆ. ಹಂಪಿಯಲ್ಲಿ ಆರಂಭಗೊಂಡ ಕನ್ನಡ ವಿಶ್ವವಿದ್ಯಾಲಯವು, ಕನ್ನಡ ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನಕ್ಕೆ ಅವಕಾಶ ಕಲ್ಪಿಸಿದೆ. ಕನ್ನಡ ಸಂಸ್ಕೃತಿಯ ಒಂದು ಭಾಗವಾದರೂ ಜಾನಪದವನ್ನು ಸಮಗ್ರವಾಗಿ ಒಂದೇ ಕಡೆ ಅಧ್ಯಯನ ಮಾಡುವ ಪರಿಕರಗಳು ಹಂಪಿ ವಿಶ್ವವಿದ್ಯಾಲಯದಲ್ಲಿ ಆರಂಭಗೊಳ್ಳಲಿಲ್ಲ. ಇಲ್ಲದಿದ್ದರೆ ಇದೇ ವಿಶ್ವವಿದ್ಯಾಲಯದಲ್ಲಿ ಕನ್ನಡ ಜನಪದ ಸಂಸ್ಕೃತಿ, ಪರಂಪರೆಯನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದ್ದರೆ ಈಗ ಆಯೋಜಿಸಿರುವಂತೆ ಪ್ರತ್ಯೇಕವಾದ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಅಗತ್ಯ ಇರಲಿಲ್ಲವೇನೋ? ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ನಾಡಿನ ಹಲವೆಡೆ, ಬೇರೆ ಬೇರೆ ಮಾದರಿಗಳನ್ನು ಲಕ್ಷ್ಯದಲ್ಲಿರಿಸಿಕೊಂಡು

ಆದ್ದರಿಂದ ವಿಶ್ವವಿದ್ಯಾನಿಲಯ ಸಂಶೋಧನ ಯೋಜನೆಯನ್ನು ರೂಪಿಸಿ ಅದನ್ನು ಕೈಗೊಳ್ಳುವ ಸಾಮರ್ಥ್ಯವಿರುವ ವಿದ್ವಾಂಸರನ್ನು ಆಹ್ವಾನಿಸಬೇಕು. ಜೊತೆಗೆ ಆಸಕ್ತ ವಿದ್ವಾಂಸರು ತಾವೇ ಯೋಜನೆ ರೂಪಿಸಿ ಇಲ್ಲಿ ಸಂಶೋಧನೆ ಕೈಗೊಳ್ಳುವಂತೆ ಆಹ್ವಾನಿಸಬೇಕು. ಅವರು ಸೇವೆಯಲ್ಲಿದ್ದರೆ ನಿಯೋಜನೆ ಮೇಲೆ ಬರಲು ಅವಕಾಶ ಕಲ್ಪಿಸಬೇಕು. ಯೋಜನೆ ಮುಗಿದ ಮೇಲೆ ಅವರ ಕರ್ತವ್ಯಕ್ಕೆ ಮರಳಬೇಕು. ಹೀಗೆ ಮಾಡುವುದರಿಂದ ಕ್ರಮೇಣ ಕರ್ನಾಟಕದ ಎಲ್ಲಾ ವಿದ್ವಾಂಸರನ್ನು ವಿಶ್ವವಿದ್ಯಾನಿಲಯದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬಹುದು. ಆಗ ಅದು ಕೆಲವರ ವಿಶ್ವವಿದ್ಯಾನಿಲಯವಾಗದೆ ಎಲ್ಲರದೂ ಆಗುತ್ತದೆ.

ಶಿಕ್ಷಕೇತರ ಸಿಬ್ಬಂದಿ ನೇಮಕ ಮಾಡಿಕೊಳ್ಳುವಾಗಲೂ ಅಗತ್ಯ ಶೈಕ್ಷಣಿಕ ಅರ್ಹತೆ ಇರುವ ಜನಪದ ಕಲಾವಿದರು ಮತ್ತು ಕುಶಲಕರ್ಮಿಗಳಿಗೆ ಅವಕಾಶ ಕಲ್ಪಿಸಬೇಕು. ಮತ್ತು ಅವರು ಕರ್ನಾಟಕದ ಎಲ್ಲಾ ಭಾಗಗಳಿಗೂ ಸೇರಿದವರಾಗಿರಬೇಕು. ಜನಪದ ಕಲಾವಿದರ ಪ್ರದರ್ಶನಕ್ಕೆ ವಿಶ್ವವಿದ್ಯಾನಿಲಯದಲ್ಲಿ ಮತ್ತು ವಿಶ್ವವಿದ್ಯಾನಿಲಯದ ಮೂಲಕ ಹೊರಗಡೆಯೂ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಜಾನಪದ ವಸ್ತುಸಂಗ್ರಹಾಲಯ, ಜನಪದ ಕಲಾಪ್ರದರ್ಶನ, ಜನಪದರ ಉತ್ಪನ್ನಗಳ ಮಾರಾಟ ಮುಂತಾದವುಗಳ ಮೂಲಕ ವಿಶ್ವವಿದ್ಯಾನಿಲಯವನ್ನು ಪ್ರವಾಸೋದ್ಯಮದ ಕೇಂದ್ರವನ್ನಾಗಿಯೂ ಮಾಡಬಹುದು.

ಕರ್ನಾಟಕ ವಿಶ್ವವಿದ್ಯಾಲಯದಂತೆ ವಾರ್ಷಿಕ ಜಾನಪದ ಸಮ್ಮೇಳನಗಳನ್ನು ನಡೆಯಿಸಬೇಕು. ಅದರ ಸ್ವರೂಪ ಫಾಸಿಲ್ಸ್ ಸಮ್ಮೇಳನಗಳ ಮಾದರಿಯಲ್ಲಿ ಆಹ್ವಾನಿತ ವಿದ್ವಾಂಸರಿಂದಲ್ಲದೆ ಆಸಕ್ತರೆಲ್ಲರಿಗೂ ಪ್ರಬಂಧ ಮಂಡನೆಗೆ ಮುಕ್ತ ಅವಕಾಶ ನೀಡುವಂತೆ ಇರಬೇಕು. ಅವುಗಳಲ್ಲಿ ಉತ್ತಮವಾದುವನ್ನು ಆಯ್ದು ಪ್ರಕಟಿಸಬೇಕು.

ಇತರ ವಿಶ್ವವಿದ್ಯಾನಿಲಯಗಳಂತೆಯೇ ಒಂದು ವಿದ್ವತ್ಪತ್ರಿಕೆ ಹೊರಡಿಸಬೇಕು, ಪ್ರಸಾರಾಂಗವಿರಬೇಕು.

ಕೊನೆಗೆ, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ ಎಂಬ ಹೆಸರಿನಲ್ಲಿ ವಿಶ್ವವಿದ್ಯಾನಿಲಯ ಎಂಬುದನ್ನೇ ಸೇರಿಸಿ. ಏಕೆಂದರೆ ಆಲಯ ಧಾರ್ಮಿಕವಾದುದು. ನಿಲಯ ಲೌಕಿಕ.

ದಿನಾಂಕ:೩೦.೧೨.೨೦೧೦

ನೆಲ ಮೂಲ ಸಂಸ್ಕೃತಿಯ ಸಂರಕ್ಷಣೆಯಾಗಲಿ

– ಚಿಕ್ಕಣ್ಣ ಯಣ್ಣೆಕಟ್ಟೆ

ಪೂಜ್ಯರೆ; ಪ್ರಣಾಮಗಳು.

ನೆಲ ಮೂಲ ಸಂಸ್ಕೃತಿಯ ಭಾಗವಾಗಿರುವ ಜನಪದ ಸಂಸ್ಕೃತಿಯ ಸಂರಕ್ಷಣೆ–ಸಂವರ್ಧನೆಯ ಒಟ್ಟು ರಕ್ಷಣೆಗೆ, ಕರ್ನಾಟಕದಲ್ಲಿ ಕನ್ನಡ ಸಂಸ್ಕೃತಿಯದ್ದೇ ಆದ ಜಾನಪದ ವಿಶ್ವವಿದ್ಯಾನಿಲಯವೊಂದರ ತುರ್ತು ಅಗತ್ಯವಿತ್ತು. ಗೊ.ರು.ಚ. ಮೊದಲಾದವರ ಅತೀವ ಒತ್ತಡ, ತೀವ್ರತೆಯಿಂದಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಆರಂಭವಾಗಿದೆ.

ಜಾನಪದ ಕ್ಷೇತ್ರದಲ್ಲಿ ತಮ್ಮ ಒಟ್ಟು ಅಧ್ಯಾಪನ, ಅಧ್ಯಯನ, ಕ್ಷೇತ್ರಕಾರ್ಯಗಳಿಂದ, ನೆಲದ ಮರೆಯ ನಿಧಿಯ ಹಾಗೆ, ಹುಸಿ ಮಾತುಗಾರಿಕೆ, ಆರ್ಭಟಗಳಿಂದ ಹೊರಗೆ ನಿಂತು, ಜಾನಪದ ಕ್ಷೇತ್ರವನ್ನು ನಿಜ ಅರ್ಥದಲ್ಲಿ ಶ್ರೀಮಂತಗೊಳಿಸಿದ, ಮೌಲಿಕ ಕೃತಿ ನೀಡಿದ ತಮ್ಮನ್ನು ಗುರುತಿಸಿ, ಗೊಂದಲ ಗೋಜಲುಗಳ ನಡುವೆಯೂ ತಮ್ಮನ್ನು ಕರೆತಂದು; ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಮೊದಲ ವಿಶೇಷಾಧಿಕಾರಿ ; ಅರ್ಥಾತ್ ಕುಲಪತಿಗಳನ್ನಾಗಿ ನೇಮಕ ಮಾಡಿದ ಸುದ್ದಿ ಪ್ರಕಟವಾದ ಕೂಡಲೇ ಹರ್ಷಿಸಿದೆ. ಸಂಪರ್ಕದ ಕೊರತೆ, ಕಛೇರಿಯ ವಿಳಾಸದ ಅಲಭ್ಯತೆಯ ಕಾರಣಗಳಿಂದ ಸಂಪರ್ಕಿಸಲು ತಡವಾಯಿತು. ತಮ್ಮಂಥ ಸಜ್ಜನಿಕೆಯವರಿಗೆ ಉನ್ನತ ಸ್ಥಾನ ಲಭಿಸುವುದು ಅಪರೂಪದ ಈ ದಿನಗಳಲ್ಲಿ ಕುಲಪತಿಯ ಹುದ್ದೆ ಹೆಮ್ಮೆಯ ಸಂಗತಿ. ತಮಗೆ ಗೌರವಪೂರ್ವಕ ಅಭಿನಂದನೆಗಳು.

ದಿನಾಂಕ: ೧೧.೧೧.೨೦೧೦

ಜನಪದ ಬದುಕಿನ ನೆಲೆಗಳು ಒಡಮುರಿದೇಳಲಿ

– ವೀರೇಶ ಬಡಿಗೇರ

ಮಾನ್ಯರೆ,

ಸರ್, ತಾವು ಬಹು ನಿರೀಕ್ಷಿತ ಹಾಗೂ ಮಹಾತ್ವಾಕಾಂಕ್ಷೆಯ ವಿಶ್ವವಿದ್ಯಾನಿಲಯವೊಂದರ ವಿಶೇಷಾಧಿಕಾರಿಗಳಾಗಿದ್ದು, ತುಂಬ ಸಂತೋಷದ ವಿಚಾರ. ಅದಕ್ಕಾಗಿ ನನ್ನ ತುಂಬು ಹೃದಯದ ಅಭಿನಂದನೆಗಳು.

ಸಂಸ್ಕೃತಿ ವಿಸ್ಮೃತಿ, ಮೌಲ್ಯಗಳ ವಿಕಾರ, ಹಣ ಹಾಗೂ ಜಾತಿ–ತೋಳ್ಬಲಗಳೇ ರಾಜಕೀಯ ಮೌಲ್ಯವಾಗುತ್ತಿರುವ ಹೊತ್ತಿನಲ್ಲಿ ನಾಗರಿಕ ಸಂಸ್ಕೃತಿಯ ಹೊರಬಾಜು ಇರುವ ಹಾಗೂ ಸಂಕೋಚ ಪ್ರವೃತ್ತಿಯನ್ನು ಹೊಂದಿರುವ ಶ್ರಮ ಸಂಸ್ಕೃತಿಯ ಸಂವೇದನೆಯ ಆಶಯವುಳ್ಳ ಸಂಸ್ಥೆಯೊಂದನ್ನು ಕಟ್ಟಿ ಬೆಳೆಸುವ ಮಹತ್ಕಾರ್ಯ ತಮ್ಮ ಪಾಲಿಗೆ ಒಲಿದಿದ್ದು, ಮೌಲ್ಯಗಳ ಬಗೆಗೆ ಮತ್ತಷ್ಟು ನಿರೀಕ್ಷೆಯನ್ನು ನನ್ನಲ್ಲಿ ಹುಟ್ಟಿಸಿದೆ. ಜಾನಪದ ಕಳೆದು ಹೋಗುತ್ತಿರುವ ಸರಕಲ್ಲ ಅದು ಪರಿವರ್ತನಶೀಲವಾದದ್ದು ಎನ್ನುವ ಹೊಸ ಆಸೆಯನ್ನು ಹುಟ್ಟಿಸಬೇಕಾಗಿದೆ. ತಮ್ಮ ಸಾರಥ್ಯದಲ್ಲಿ ಜನಪದ ಬದುಕಿನ ನೆಲೆಗಳು ಒಡಮುರಿದೇಳಬೇಕು. ವಿಶ್ವವಿದ್ಯಾನಿಲಯವು ಜಾಗತೀಕರಣದ ಭ್ರಮೆಗಳಿಗೆ ತಕ್ಕ ಉತ್ತರ ನೀಡುವಂತಾಗಲಿ ಎನ್ನುವುದು ನನ್ನ ಅಪೇಕ್ಷೆಯಾಗಿದೆ.

ದಿನಾಂಕ: ೧೨.೧೧.೨೦೧೦

ಅಭಿಮಾನದ ಕೃತಜ್ಞತೆ ಅರ್ಪಿಸುವುದು ನಮ್ಮ ಕರ್ತವ್ಯವೇ ಸರಿ. ನಮ್ಮ ಜಾನಪದ ಬೇಲಿ ಮ್ಯಾಗಳ ಹೂವು, ಹಳ್ಳಿಯ ಹಲಸಿನ ಹಣ್ಣು ಇದ್ದಹಾಗೆ. ಮೇಲೆ ಸುಂದರವಿಲ್ಲ ಒಳಗೆ ರುಚಿಯಾಗಿದೆ, ವಿಶಿಷ್ಟವಾಗಿದೆ. ಅಂತಹ ವಿಶಿಷ್ಟ ಗುಣ ಋಣವುಳ್ಳ ಕಲೆಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಬಹಳವಿದೆ. ನಮ್ಮ ಮನೆಯ ಹಳೆಯ ಕಂಚು ಮತ್ತು ತಾಮ್ರದ ಚೊಂಬು, ಬಿಂದಿಗೆಗಳನ್ನು ಬೆಳಗಿ ಥಳಥಳಿಸುವಂತೆ ಮಾಡುವ ಬಗೆ ಹೇಗೆ? ಹಾಗೆ ಕರ್ನಾಟಕದ ದೇಶೀ ಸಂಸ್ಕೃತಿಗೆ ಪ್ರದರ್ಶನ ಮಾಡುವ ರೀತಿ ನೀತಿಯನ್ನು ಕಟ್ಟುವುದು ಹೇಗೆಂಬುದನ್ನು ಈಗ ಚಿಂತಿಸುವುದು ಮುಖ್ಯ.

ಮೊನ್ನೆ ರಷ್ಯಾದಲ್ಲಿ ರಷ್ಯಾ ಜಾನಪದ ಜನೋತ್ಸವವಾಯಿತು. ಅಲ್ಲಿಯ ಜನಪದ ಕಲಾವಿದ ಈ ರಷ್ಯಾ ದೇಶದ ನೂರಾರು ಜನಪದ ಕಲೆ ಕಸುಬುಗಳು ನಮ್ಮ ದೇಶಕ್ಕೆ ಕನ್ನಡಿ ಇದ್ದಂತೆ. ಆ ಕಲೆಗಳ ಕನ್ನಡಿಯ ಪ್ರತಿಬಿಂಬಗಳೇ ನಮ್ಮ ದೇಶದ ಜನಪದ ಕಲೆಗಳು. ಅವು ನಮ್ಮ ದೇಶದಲ್ಲಿ ಪ್ರತಿನಿತ್ಯವೂ ಪ್ರತಿಬಿಂಬಿಸಿದರೆ ನಾವು ನಿಜವಾಗಲೂ ನಮ್ಮ ಕಲೆಗಳನ್ನು ಪ್ರತಿಬಿಂಬಿಸಿದಂತೆ ಎಂದು ಹೇಳಿದ ಮಾತುಗಳನ್ನು ಕೇಳಿದ ಮೇಲೆ, ಕನ್ನಡ ನಾಡಿನ ಜನಪದ ಕಲೆಗಳು ಅವರಿಗಿಂತೇನು ಕಡಿಮೆ ಇಲ್ಲ ಎಂದು ನಾನು ಸಂತೋಷ ಪಟ್ಟುಕೊಂಡೆ. ಅದೇ ರೀತಿ ನಮ್ಮ ಎಲ್ಲಾ ಜಿಲ್ಲೆಗಳ ವಿಶಿಷ್ಟತೆ, ಪ್ರಾದೇಶಿಕ ವ್ಯತ್ಯಾಸಗಳ ಭಿನ್ನತೆ ಮಾತು ಮತ್ತು ಸಂಸ್ಕೃತಿಯ ಸೊಗಸು ಮತ್ತು ಸೊಬಗು ಕೂಡ.

ಐನೂರು ಎಕರೆ ಆವರಣದಲ್ಲಿ ನಮ್ಮ ಜಾನಪದ ಅನಾವರಣ-ವಾಗುವುದಾದರೆ ಇದರೊಳಗೆ ಯುರೋಪ್ ಮತ್ತು ರೋಮ್‌ನಲ್ಲಿ ನಡೆಯುವಂತಹ ಜನಪದ ಸಂತೆಗಳಾಗಬೇಕು. ವಿವಿಧ ಹಬ್ಬಗಳ ಜಾತ್ರೆಗಳಾಗಬೇಕು. ಈ ಜಾತ್ರೆಗಳಿಗೆ ದೇಶ ವಿದೇಶದ ಜನ ಬಂದು ನೋಡಬೇಕು, ನೋಡಿ ಕಲಿಯಬೇಕು. ವಚನಕಾರರ ಸಂದರ್ಭದಲ್ಲಿ ಆಯಾ ಕುಲಕಸುಬುಗಳು ಆಯಾ ಸಮುದಾಯಗಳಿಂದ ತರಬೇತಿ ಪಡೆಯುವ ತರಬೇತಿ ಕೇಂದ್ರಗಳಾದರೆ ಹೇಗೆ? ಅವು ಮಡಕೆ ಮಾಡುವುದಿರಬಹುದು, ಕಮ್ಮಾರರಿರಬಹುದು, ಚಮ್ಮಾರರಿರಬಹುದು, ನೇಕಾರ, ಕರಕುಶಲ ಕೆಲಸಗಳಿರಬಹುದು, ಗಾಣ ಆಡಿಸುವವರಿರಬಹುದು, ಬಡಗಿ ಇರಬಹುದು, ಒಂದೊಂದು ಜಿಲ್ಲೆಗಳ ವಿಶಿಷ್ಟ ಕುಲಕಸುಬುಗಳ ಕೇಂದ್ರ ಸ್ಥಾಪನೆಯಾಗಿ, ಅದರಿಂದ ಇವೆಲ್ಲವುಗಳನ್ನು ಹೆಚ್ಚು ಉತ್ಪಾದನೆ ಮಾಡಿ ಈ ಕರಕುಶಲ ವಸ್ತುಗಳು ದೇಶ-ವಿದೇಶಗಳಲ್ಲಿ ಮಾರಾಟವಾದರೆ ಅವುಗಳ ಶ್ರೇಷ್ಠತೆ, ಭವ್ಯತೆ ಜತೆಗೆ ಬದುಕು ಕೂಡ

ವಿಭಾಗಗಳನ್ನು ತೆರೆಯಬೇಕು. ಅವು ಕೇವಲ ಅಧ್ಯಯನಕ್ಕಷ್ಟೇ ಸೀಮಿತಗೊಳ್ಳದೆ, ನಿಜವಾದ ಜನಪದ ಬದುಕು ಅಲ್ಲಿ ನಿರ್ಮಾಣಗೊಳ್ಳಬೇಕು. ಇವತ್ತಿನ ದಿನಮಾನಗಳಲ್ಲಿ ಭಾರತದಂತಹ ದೇಶಕ್ಕೂ ಈ ಬಗೆಯ ಶೈಕ್ಷಣಿಕ ವಾತಾವರಣದ ಅವಶ್ಯಕತೆ ಬಹಳಷ್ಟಿದೆ. ನೇಮಕಾತಿಯ ಸಂದರ್ಭದಲ್ಲಿ ಅರ್ಹ-ತಜ್ಞ ಪದವೀಧರರ ಜತೆಗೆ ಜಾನಪದದ ವಿವಿಧ ಪ್ರಕಾರಗಳಲ್ಲಿ ಪರಿಣತರಾದ "ಜನಪದ"ರಿಗೂ ಅವಕಾಶ ಕಲ್ಪಿಸಿಕೊಡಬೇಕು. ಅಂಥವರಿಗಾಗಿ ಅವಶ್ಯವಿದ್ದರೆ "ಸಂಪನ್ಮೂಲ ವ್ಯಕ್ತಿ" ಎಂಬ ಹುದ್ದೆಯನ್ನು ಸೃಜಿಸಿಕೊಳ್ಳುವುದರ ಬಗೆಗೂ ಗಂಭೀರವಾಗಿ ಯೋಚಿಸಬಹುದಾಗಿದೆ. ಈ ಎಲ್ಲಾ ದೃಷ್ಟಿ-ಧೋರಣೆಗಳನ್ನಳವಡಿಸಿಕೊಂಡಲ್ಲಿ ಇದೊಂದು ಮಾದರಿ 'ದೇಸೀ ವಿಶ್ವವಿದ್ಯಾನಿಲಯ' ವಾಗಿ ರೂಪುಗೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಹಾಗಾಗಲೆಂದು ಮನಸಾ ಹಾರೈಸುತ್ತೇನೆ.

ದಿನಾಂಕ:೩೦.೧೧.೨೦೧೦

ಆಗ ಮಾತ್ರ ಇದು ಜನಪದ ಕಲಾವಿದರ ವಿಶ್ವವಿದ್ಯಾನಿಲಯವಾಗುತ್ತದೆ. ಕಲೆಗಳ ರೂಪಾಂತರ ಕಲಿಕಾ ಕೇಂದ್ರದ ಕನಸೇ ಜನಪದ ಕಲಾವಿದರ ಕನಸು. ಜಾನಪದ ಜೀವಂತ ಉಳಿಯುವಂತಾಗಲಿ ಎಂಬುದೇ ಕನ್ನಡ ನಾಡಿನ ಊರು ಊರುಗಳಲ್ಲಿ ಮನೆ ಮನೆಗೂ ಇರುವ ಈ ಜನಪದ ಕಲಾವಿದರ ವಿಭಿನ್ನ ವಿಶ್ವವಿದ್ಯಾನಿಲಯುವೇ ಆಗುವುದಾದರೆ ಹಿಂದಿನ ಮೂಲ ಗ್ರಾಮಗಳಂತಾದರೆ ಹೇಗೆ?

ದಿನಾಂಕ:೨೯.೧೦.೨೦೧೦

ಜನಪದ ಸಂಗೀತದ ಅರಿವು ಮೂಡಿಸುವ ಕೆಲಸವಾಗಲಿ

– ಎಲ್.ಜಿ. ಸುಮಿತ್ರ

ಮಾನ್ಯರೆ,

ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯಾಗಿ ನೀವು ವಹಿಸಿಕೊಂಡಿರುವ ಕೆಲಸ ಗುರುತರವಾದದ್ದು. ಜಾನಪದ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕೆ ಮತ್ತು ಜೀವನದಲ್ಲಿ ಅವರ ಯಶಸ್ಸು, ಇವುಗಳನ್ನು ಸಾಧಿಸಬೇಕಾದ ಈ ಜವಾಬ್ದಾರಿಯಲ್ಲಿ ನಿಮಗೆ ಯಶಸ್ಸು ಕೋರುತ್ತೇನೆ.

ಜನಪದ ಸಂಗೀತ ಮತ್ತು ನಾಟ್ಯದ ಮೂಲ ಲಕ್ಷಣಗಳ ತಿಳಿವಳಿಕೆ ಬಹಳ ಮುಖ್ಯವೆಂದೂ, ಅದರ ಕೆಲಸ ಬಹಳ ಆಗಬೇಕಾದದ್ದು ಇದೆ ಎಂದೂ ನಾನು ನಂಬಿದ್ದೇನೆ. ಜಾನಪದದ ಎಲ್ಲ ಪ್ರಕಾರಗಳಲ್ಲೂ ಸಂಗೀತ ಹಾಸುಹೊಕ್ಕಾಗಿರುವುದರಿಂದ ಈ ವಿಷಯದ ಅರಿವು ಮತ್ತು ತಿಳಿವಳಿಕೆ ತಮ್ಮ ಪಠ್ಯದಿಂದಲೇ ಎಲ್ಲ ಜಾನಪದ ವಿದ್ಯಾರ್ಥಿಗಳಿಗೂ ಮೂಡಬೇಕಾದದ್ದು ಅತ್ಯವಶ್ಯಕ.

ಹಾಗಲ್ಲದಿದ್ದಲ್ಲಿ ಇಂದಿನ ಮಾರುಕಟ್ಟೆ ಸಂಸ್ಕೃತಿಯ ಒತ್ತಡಗಳಲ್ಲಿ ವಿವಿಧ ಕಲಾಪ್ರಕಾರಗಳಲ್ಲಿ ಈ ಸಂಗೀತದ ಜಾನಪದೀಯ ಅಂಶಗಳನ್ನು ಉಳಿಸಿಕೊಂಡು ಮುನ್ನಡೆಯುವುದು ಕಷ್ಟ. ಇಂದು ಜನಪದ ಸಂಗೀತ ಕ್ಷೇತ್ರದಲ್ಲಿ ಆಗುತ್ತಿರುವ ಕೆಲವು ಅನಪೇಕ್ಷಿತ ಬೆಳವಣಿಗೆಗಳಿಗೆ ಈ ತಿಳಿವಳಿಕೆಯ ಅಭಾವ ಮುಖ್ಯಕಾರಣ. ಹಾಗಾಗಿ ನನ್ನ ಈ ಆಲೋಚನೆಯನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ. ಈ ದಿಸೆಯಲ್ಲಿ ನನ್ನ ಸಲಹೆಗಳ ಅಗತ್ಯ ಬಿದ್ದರೆ ತಿಳಿಸಿ. ನನ್ನ ಸಹಕಾರ ಯಾವತ್ತೂ ಇದ್ದದ್ದೇ.

ದಿನಾಂಕ: ೨೩.೧೧.೨೦೧೦

ಅದರಲ್ಲೂ, ಸಾಂಸ್ಕೃತಿಕ ಹಿನ್ನೆಲೆಯ ವಿಶ್ವವಿದ್ಯಾನಿಲಯ ಒಂದು ನೆಲೆಗೊಳ್ಳುವಾಗ ಕೇವಲ ರಾಜಕೀಯ ಹಿತಾಸಕ್ತಿ, ಪೈಪೋಟಿ, ಪ್ರಾದೇಶಿಕ ಪ್ರಾತಿನಿಧ್ಯದಂತಹ ಕ್ಷುಲಕ ಕಾರಣಗಳು ಪ್ರಧಾನವಾಗಬಾರದು. ಪ್ರಸ್ತುತ ಜಾನಪದ ವಿಶ್ವವಿದ್ಯಾನಿಲಯದ ಸ್ಥಳ ನಿರ್ಧರಿಸುವ ಸಂದರ್ಭದಲ್ಲೂ ಈ ಎಚ್ಚರ ಮತ್ತು ಬದ್ಧತೆ ಅತ್ಯವಶ್ಯಕ. ಒಮ್ಮೆ ಸ್ಥಾಪನೆಯಾದ ನಂತರ ಸ್ಥಳ ಬದಲಾವಣೆಗೆ ಅವಕಾಶವಿಲ್ಲದ ಇಂತಹ ಮಹತ್ವದ ವಿಚಾರವನ್ನು ನಿರ್ಧರಿಸುವಾಗ ಅರ್ಥಪೂರ್ಣ ಕಾರಣವಿಲ್ಲದೆ ಬೇರಾವುದೇ ಒತ್ತಡಕ್ಕೆ, ಮುಲಾಜಿಗೆ ಒಳಗಾಗಬಾರದು.

ಕರ್ನಾಟಕದಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಸ್ಥಳ ಹುಡುಕಾಟದ ವಿಚಾರ ಸರ್ಕಾರದ ಮುಂದಿದೆ. ವೀರಗಾಸೆ, ಕೋಲಾಟ, ಸೋಮನ ಕುಣಿತ, ರಂಗದ ಕುಣಿತ, ಪೂಜಾಕುಣಿತ, ಪಟದ ಕುಣಿತ, ಸೋಬಾನೆ ಹಾಡುಗಳು, ಬಯಲಾಟ, ತಮಟೆ ವಾದನ, ಚಿಟ್ಟಿ ಮೇಳ, ಸುಗ್ಗಿ ಕುಣಿತ....ಮೊದಲಾದ ಹಲವು ಆಕರ್ಷಕ ಜನಪದ ಕಲೆಗಳು ಹಾಗೂ ಸಾವಿರಾರು ಜನಪದ ಕ್ರೀಡೆಗಳ ತವರು ಮಂಡ್ಯ ಜಿಲ್ಲೆ. ಹಾಗಾಗಿ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮಂಡ್ಯ ಜಿಲ್ಲೆ ಎನ್ನುವ ವಿಚಾರವನ್ನು ಗಂಭೀರವಾಗಿ ಪರಿಶೀಲಿಸಬಹುದು. ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ 'ಜನಪದ ಕಲೆಗಳ ಕಾಶಿ' ಎನಿಸಿದ ನಾಡು ನಾಗಮಂಗಲ ತಾಲ್ಲೂಕು (ಅದರ ಹೆಸರಿನಲ್ಲೇ ಅಡಗಿರುವ 'ನಾಗಮಂಡಲ'ದ ಜಾನಪದದ ಐತಿಹ್ಯ ಗಮನಾರ್ಹ). ಈ ತಾಲ್ಲೂಕು ಜನಪದ ಕಲೆಗಳಿಂದ ಶ್ರೀಮಂತ ಎನಿಸಿದೆ.

ಆದರೆ 'ಹಸಿವು ಅನ್ವೇಷಣೆಯ ತಾಯಿ, ಅವಶ್ಯಕತೆ ಆವಿಷ್ಕಾರದ ತಂದೆ' ಎಂಬಂತೆ, ಕಲೆ, ಸಂಸ್ಕೃತಿ, ಶಿಕ್ಷಣದ ಪ್ರಗತಿಯ ವಿಚಾರಗಳಲ್ಲಿ ಅಲ್ಲಿನ ದಟ್ಟ ಬರಗಾಲವೇ ವರದಾನವಾಗಿದ್ದು ಈ ನೆಲದ ಪವಾಡ! ಶ್ರಮದ ಬೆವರಿನೊಂದಿಗೆ, ಸಾಂಪ್ರದಾಯಿಕ ಹಬ್ಬಗಳ ಆಚರಣೆಯ ಜೊತೆ ಮೈದಾಳುವ ಹಲವು ಜನಪದ ಕಲೆಗಳು ಇಂದಿಗೂ ಅಲ್ಲಿ ಜೀವಂತ. ಈ ಕಾರಣಗಳಿಗೆ ಕಿರೀಟವಿಟ್ಟಂತೆ ನಾಗಮಂಗಲದಲ್ಲೇ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮತ್ತೊಂದು ಮಹತ್ವವಿದೆ.

ಜನಪದ ಕಲೆ, ಸಾಹಿತ್ಯಗಳ ಅಧ್ಯಯನ ಮತ್ತು ಸಂಶೋಧನೆಗಳನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಕೆಲವು ವಿದ್ವಾಂಸರು ಈ ತಾಲ್ಲೂಕಿನವರು. ಜೀ. ಶಂ. ಪರಮಶೀವಯ್ಯ ಮತ್ತು ಎಚ್.ಎಲ್. ನಾಗೇಗೌಡ ಪ್ರಮುಖರು.

ಸಂಪಾದನೆಗೆ ನಿರ್ದಿಷ್ಟ ಮಾನದಂಡಗಳಿವೆ. ಅದರಂತೆ ಜನಪದ ಮಟ್ಟುಗಳ ಸಂಪಾದನೆಗೆ ಮಾನದಂಡಗಳನ್ನು ರೂಪಿಸಬೇಕಾಗಿದೆ. ಜನಪದ ಮಟ್ಟುಗಳು 'ಚಲನಶೀಲ ಪಠ್ಯ' ಗಳಾಗಿರುವುದರಿಂದ ಭಿನ್ನಪಾಠ, ರೂಪಾಂತರ, ಶಿಥಿಲತೆ ಮುಂತಾದ ತತ್ವಗಳನ್ನು ಇನ್ನಷ್ಟು ಖಚಿತಗೊಳಿಸಬೇಕಾಗಿದೆ.

೩. **ಸಾಹಿತ್ಯದಲ್ಲಿ ಜಾನಪದ ಅಧ್ಯಯನ ವಿಭಾಗ** : ಮಾರ್ಗ ಮತ್ತು ದೇಶಿ ಸಾಹಿತ್ಯದಲ್ಲಿ (ಪಂಪನಿಂದ ಆಧುನಿಕ ಸಾಹಿತ್ಯದವರೆಗೆ) ಜಾನಪದದ ಬಳಕೆ ಮತ್ತು ಪ್ರಭಾವ ತುಂಬ ಆಗಿದೆ. ಅವುಗಳಲ್ಲಿ ಹುದುಗಿರುವ ಜಾನಪದ ಅಂಶಗಳ ಸ್ವರೂಪವನ್ನು ಕುರಿತು ಅಧ್ಯಯನ ಆಗಬೇಕಾಗಿದೆ. ಉದಾ. ಪಂಪಭಾರತ, ವಡ್ಡಾರಾಧನೆ, ವಚನ, ದಾಸಸಾಹಿತ್ಯ ಮುಂತಾದ ಆಧುನಿಕ ಪೂರ್ವ ಸಾಹಿತ್ಯ ; ಬೇಂದ್ರೆ, ಆನಂದಕಂದ, ಜಿ.ಪಿ. ರಾಜರತ್ನಂ, ರಾವ್‌ಬಹಾದ್ದೂರ, ದೇವನೂರು, ಕಂಬಾರ ಮುಂತಾದ ಹೊಸಗನ್ನಡ ಸಾಹಿತ್ಯದ ಮೇಲೆ ಜಾನಪದದ ಬಳಕೆ ಮತ್ತು ಪ್ರಭಾವ ಕುರಿತು ಪ್ರತ್ಯೇಕ ಅಧ್ಯಯನ ವಿಭಾಗದ ಅಗತ್ಯವಿದೆ.

ಭಾಗ: ೨

೧. ಉದ್ದೇಶಿತ ಜಾನಪದ ವಿಶ್ವವಿದ್ಯಾನಿಲಯವು 'ಬೆಳಗಾವಿ' ಯಲ್ಲಿ ನಿರ್ಮಾಣವಾಗುವುದು ಸೂಕ್ತ ; ಸಮಂಜಸ. ಬೆಳಗಾವಿಯಲ್ಲಿ ಕನ್ನಡದ ಬೇರುಗಳು ಗಟ್ಟಿಗೊಳ್ಳಬೇಕಾಗಿದೆ. ಬೆಳಗಾವಿಯನ್ನು ಕೇಂದ್ರವಾಗಿಟ್ಟುಕೊಂಡು ದ್ವಿಭಾಷಿಕ ಪ್ರದೇಶಗಳ ಜಾನಪದ ಅಧ್ಯಯನ ವ್ಯಾಪಕವಾಗಿ ನಡೆಯಬೇಕಾಗಿದೆ.

೨. 'ಬೆಳಗಾವಿ' ಜಿಲ್ಲಾ ಸ್ಥಳ ; ವಿಭಾಗ ಸ್ಥಳ; ಮಹಾನಗರಪಾಲಿಕೆ. ಭೌಗೋಳಿಕವಾಗಿಯೂ ಸಹಿತ ಉತ್ತಮ ಹವಾಮಾನ, ಅರೆಮಲೆನಾಡು. ವಿದ್ವಾಂಸರಿಗೆ ಹೋಗಿ–ಬರಲಿಕ್ಕೆ ವಿಮಾನ ನಿಲ್ದಾಣ, ರೇಲ್ವೆ ಜಂಕ್ಷನ್ ಇತ್ಯಾದಿ ಸೌಕರ್ಯಗಳಿವೆ. ಬೆಳಗಾವಿ NH-4 ಹೆದ್ದಾರಿಯ ಪಕ್ಕದಲ್ಲಿದೆ.

೩. ಶ್ರೀ ಎಚ್. ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಬೆಳಗಾವಿಗೆ 'ಎರಡನೆಯ ರಾಜಧಾನಿ'ಯ ಸ್ಥಾನ–ಸೌಕರ್ಯ ಕಲ್ಪಿಸಿದ್ದಾರೆ.

ಚಾಮರಾಜನಗರದಲ್ಲೇ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿ

– ಸಿ.ಎಂ. ನರಸಿಂಹಮೂರ್ತಿ

ಕರ್ನಾಟಕದ ಜಾನಪದ ಸಂಪತ್ತಿನ ಅಧ್ಯಯನಕ್ಕಾಗಿ ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂದು ಕನ್ನಡದ ವಿದ್ವಾಂಸರು, ಜಾನಪದ ತಜ್ಞರು, ಕವಿಗಳು, ಸಾಹಿತಿಗಳು ಮತ್ತು ಸಾಂಸ್ಕೃತಿಕ ರಾಯಭಾರಿಗಳು; ಸಂಘ–ಸಂಸ್ಥೆಗಳು ಸರ್ಕಾರವನ್ನು ಒತ್ತಾಯಿಸಿದ್ದರು. ಇದರ ಫಲವಾಗಿ ವಿಶ್ವದಲ್ಲಿಯೇ ಮೊಟ್ಟಮೊದಲ ಬಾರಿಗೆ ಜಾನಪದ ವಿಶ್ವವಿದ್ಯಾನಿಲಯವನ್ನು ಕರ್ನಾಟಕದಲ್ಲಿ ಸ್ಥಾಪಿಸಲು ಮುಂದಾಗಿರುವುದು ನಿಜಕ್ಕೂ ಅಭಿನಂದನೀಯ. ಇದಕ್ಕಾಗಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರನ್ನು ಅಭಿನಂದಿಸುತ್ತೇನೆ.

ಚಾಮರಾಜನಗರ ಅತ್ಯಂತ ಹಿಂದುಳಿದ ಗಡಿ ಜಿಲ್ಲೆಯಾದರೂ ಸಹ ಜಾನಪದದ ಬೃಹತ್ ಕಣಜ. ಮಾದೇಶ್ವರ, ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿಗಳು ನಡೆದಾಡಿದ ಪುಣ್ಯ ಭೂಮಿ ಇದು. ಫಿನ್‌ಲ್ಯಾಂಡ್‌ನ ಕಲೇವಾಲ ಬಿಟ್ಟರೆ ಮಾದೇಶ್ವರ ಕಾವ್ಯವೇ ಬೃಹತ್ ಮೌಖಿಕ ಜನಪದ ಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಾದೇಶ್ವರ, ಮಂಟೇಸ್ವಾಮಿ ಕಾವ್ಯ ಈ ಭಾಗದ ನೀಲಗಾರರು, ಕಂಸಾಳೆಯವರ ಬಾಯಲ್ಲಿ ಈಗಲೂ ಜೀವಂತವಾಗಿ ಉಳಿದಿವೆ. ಜನಪದ ಗೊಂಬೆಯಾಟದ ಅನೇಕ ಕುಟುಂಬಗಳು ಜಿಲ್ಲೆಯಲ್ಲಿವೆ. ಮಾದೇಶ್ವರನ ಮೇಲೆ ರಚಿತವಾದ ಜನಪದ ಗೀತೆಗಳ ದೊಡ್ಡ ಭಂಡಾರವೇ ಜಿಲ್ಲೆಯಲ್ಲಿದೆ. ಕಾಡಿನ ಮಕ್ಕಳಾದ ಸೋಲಿಗರ ಜನಪದ ಹಾಡುಗಳು, ಆಚರಣೆಗಳು, ಸಾವಿರಾರು ಜನಪದ ಔಷಧೀಯ ಸಸ್ಯಗಳು ಇಲ್ಲಿವೆ. ಸುಮಾರು ಮುನ್ನೂರಕ್ಕೂ ಹೆಚ್ಚು ಮರಗಳನ್ನು ಹೇಳುವ ಮತ್ತು ಗುರುತಿಸುವ ಸೋಲಿಗರು ಇಲ್ಲಿದ್ದಾರೆ. ಇದಲ್ಲದೆ ಜಿಲ್ಲೆಯಲ್ಲಿ ಲಂಬಾಣಿಗಳು, ಬೇಡಕಂಪಣರು, ಗೊರವರು, ದಲಿತ ವರ್ಗದವರ ಜನಪದ ಹಾಡುಗಳ ಆಚರಣೆಗಳ ಪರಂಪರೆ ಹೇರಳವಾಗಿವೆ.

(ಅನಿವಾರ್ಯವಾದಲ್ಲಿ ಆಧುನಿಕ ತಂತ್ರಜ್ಞಾನದ ಕೆಲ ಅಂಶಗಳನ್ನು ಬೆರೆಸಿ ದೇಸೀ ಶೈಲಿಯ ಗೃಹಗಳನ್ನು ನಿರ್ಮಿಸುವುದು ಅಸಾಧ್ಯವೇನೂ ಅಲ್ಲ). ಆಧುನಿಕತೆ ಹೆಸರಲ್ಲಿ ವಿಶ್ವವಿದ್ಯಾನಿಲಯವನ್ನು ಕಾಂಕ್ರೀಟ್ ಕಟ್ಟಡಗಳ ಮಸಣ ಮಾಡುವ ಬದಲು ಹೀಗೆ ವಿಭಿನ್ನವಾಗಿ ರೂಪಿಸಿದರೆ ಆಗ ಅದಕ್ಕೆ ಪ್ರವಾಸಿ ತಾಣದ ಮಹತ್ವವೂ ತಾನಾಗಿ ಪ್ರಾಪ್ತವಾಗುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಬೋಧನೆ, ಸಂಶೋಧನೆಗಳಿಗೆ ಸಹಜವಾಗಿಯೇ ಅವಕಾಶವಿರುತ್ತದೆ. ಪಠ್ಯಕ್ರಮ ಏನಿರಬೇಕೆಂಬುದನ್ನು ತಜ್ಞರೇ ನಿರ್ಧರಿಸಲಿ. ಆದರೆ, ತರಗತಿ–ಪದವಿ ಬೋಧನೆಗಿಂತ ಸಂಶೋಧನೆಗೆ ಹೆಚ್ಚಿನ ಆದ್ಯತೆ ಇರಬೇಕು. ಬೋಧನೆಯಲ್ಲಿಯೂ ಕೇವಲ ಜಾನಪದ ತತ್ವ –ಪ್ರಕಾರ ಇತ್ಯಾದಿಗಳಿಗೆ ಸೀಮಿತ ಆಗುವ ಬದಲು ಭಾಷಾವಿಜ್ಞಾನ, ಮನೋವಿಜ್ಞಾನ, ಮಾನವಶಾಸ್ತ್ರ, ವಾಸ್ತುವಿಜ್ಞಾನ....... ಮೊದಲಾದ ಅನ್ಯ ಶಿಸ್ತುಗಳ ಸಾಹಚರ್ಯದಿಂದಲೇ ಜಾನಪದ ಬೋಧನೆ ಆಗುವುದು ತೀರಾ ಅಗತ್ಯ. ಆದ್ದರಿಂದ, ಅಂತಹ ತಜ್ಞರೂ ಇಲ್ಲಿ ಗೌರವ ಪ್ರಾಧ್ಯಾಪಕರಾಗಿಯಾದರೂ ಕಾರ್ಯನಿರ್ವಹಿಸಬೇಕಾಗುತ್ತದೆ.

ಇದರಂತೆಯೇ ಪ್ರಾಧಾನ್ಯತೆ ಇರಬೇಕಾದುದು ಜನಪದ ಕಲೆಗಳ ಕಲಿಕೆಗೆ (ಆಯ್ದ ರೂಪಗಳು). ಇವನ್ನು ಗ್ರಾಮೀಣ ತಜ್ಞ ಕಲಾವಿದರೇ ಪ್ರಾಧ್ಯಾಪಕ ಸ್ಥಾನದಲ್ಲಿ ನಿಂತು ಕಲಿಸುವಂತಾಗಬೇಕು. ಈ ಕಲಿಕೆ ಅವರಿಗೆ ಕೇವಲ ಕಲೆಯಾಗಿ ಅಷ್ಟೇ ಉಳಿಯದೆ, ಆಧುನಿಕ ಬದುಕಿಗೆ, ಅಂತಾರಾಷ್ಟ್ರೀಯ ಬಳಕೆಗೆ ಸಶಕ್ತವಾಗುವಂತೆಯೂ ಇರಬೇಕು.

ಜಾನಪದ ವಿಶ್ವವಿದ್ಯಾನಿಲಯವು ಸ್ಥಳೀಯ (ನಾಡಿನ) ಬೌದ್ಧಿಕ ಸಂಪನ್ಮೂಲವನ್ನು ಬೆಳೆಸುವ, ಹಾಗೆಯೇ, ಅಂತಾರಾಷ್ಟ್ರೀಯ ಅಧ್ಯಯನ ಕೇಂದ್ರವೂ ಆಗಿ ಬೆಳೆದು ನಿಲ್ಲಬೇಕು. ಅದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಕಲಿಕೆ –ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದಾಗಬೇಕು.

ಅಂತೂ, ಈಗಾಗಲೇ ಎಷ್ಟೋ ವಿಶ್ವವಿದ್ಯಾನಿಲಯಗಳಿವೆ; ಮುಂದೆಯೂ ಹೊಸವು ಬರಲಿವೆ. ಜಾನಪದ ವಿಶ್ವವಿದ್ಯಾನಿಲಯವು ಹತ್ತರ ಜತೆ ಹನ್ನೊಂದನೆಯದಾಗಿ, ಕಳೆದು ಹೋಗುವ ಬದಲು, ಅದು ಎಂದಿಗೂ ತಾನೇ ಒಂದು –ಎಂಬಂತೆ ಆಗಲಿ.

ಜಗತ್ತಿನ ಮೊದಲ ಜಾನಪದ ವಿಶ್ವವಿದ್ಯಾನಿಲಯ

– ಶ್ರೀ.ನಂ. ಶಂಕರನಾರಾಯಣ

ಕರ್ನಾಟಕ ಸರ್ಕಾರ ಜಾನಪದ ವಿಶ್ವವಿದ್ಯಾನಿಲಯವನ್ನು ಆರಂಭಿಸಿರುವುದು ಸಂತೋಷದ ಸಂಗತಿ. ಯೂರೋಪ್, ಅಮೆರಿಕಾ ಹಾಗೂ ಭಾರತದ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಜಾನಪದಕ್ಕೆ ಪ್ರತ್ಯೇಕವಾದ ಅಧ್ಯಯನ ವಿಭಾಗಗಳು ಮತ್ತು ಸಂಶೋಧನಾ ಕೇಂದ್ರಗಳಿವೆ. ಆದರೆ ಜಾನಪದಕ್ಕೇ ಪ್ರತ್ಯೇಕವಾದ ವಿಶ್ವವಿದ್ಯಾನಿಲಯವಿರಲಿಲ್ಲ. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯವೇ ಜಗತ್ತಿನ ಮೊಟ್ಟ ಮೊದಲ ಜಾನಪದ ವಿಶ್ವವಿದ್ಯಾನಿಲಯವಾಗಿರುವುದು ಐತಿಹಾಸಿಕವಾಗಿ ಮಹತ್ವಪೂರ್ಣ ಘಟನೆ.

ಈ ವಿಶ್ವವಿದ್ಯಾನಿಲಯದ ಅಧ್ಯಯನ ಮತ್ತು ಸಂಶೋಧನೆಗಳು ಕೇವಲ ಅಕಾಡೆಮಿಕ್ ಆಗಿರದೆ ಅನ್ವಯಿಕ ಸ್ವರೂಪದ್ದು ಆಗಿದ್ದು, ಗ್ರಾಮೀಣ, ಬುಡಕಟ್ಟು ಮೊದಲಾದ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಿ, ಕೀಳರಿಮೆಯನ್ನು ಹೋಗಲಾಡಿಸಿ, ತಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸಬೇಕು; ವಿಮರ್ಶಾತ್ಮಕವಾಗಿ ಗುಣದೋಷಗಳನ್ನು ಗುರುತಿಸಿ, ದೋಷಗಳನ್ನು ಕೈಬಿಟ್ಟು, ಗುಣಾತ್ಮಕ ಅಂಶಗಳನ್ನು ಅಳವಡಿಸಲು ನೆರವಾಗಬೇಕು; ಅವುಗಳ ಅಭಿವೃದ್ಧಿಗೂ ನೆರವಾಗಬೇಕು. ಜಾನಪದದ ಐತಿಹಾಸಿಕ ಮಹತ್ವವನ್ನು ಮಾತ್ರವಲ್ಲದೆ ಸಮಕಾಲೀನ ಪ್ರಸ್ತುತತೆಯನ್ನೂ ತಿಳಿಸಬೇಕು. ಹೀಗಾಗಬೇಕಾದರೆ ಇದು ಅಂತರಶಿಸ್ತೀಯ ಮತ್ತು ಅನ್ವಯಿಕ ಅಧ್ಯಯನವಾಗಬೇಕು. ಕೃಷಿ ವಿಶ್ವವಿದ್ಯಾನಿಲಯ, ವೈದ್ಯಕೀಯ ವಿಶ್ವವಿದ್ಯಾನಿಲಯ, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ, ವಿಶ್ವವಿದ್ಯಾನಿಲಯಗಳ ಗೃಹವಿಜ್ಞಾನ ಹಾಗೂ ದೈಹಿಕ ವಿಜ್ಞಾನ ವಿಭಾಗಗಳು, ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ, ಯುವಜನ ಸೇವಾ ಇಲಾಖೆ, ಪ್ರವಾಸೋದ್ಯಮ ಇಲಾಖೆ ಮೊದಲಾದವುಗಳ ನೆರವು ಪಡೆದು, ಅವುಗಳಿಗೆ ಸಲಹೆ ನೀಡಬೇಕು. ಕನ್ನಡ ಮಾತ್ರವಲ್ಲದೆ ತುಳು, ಕೊಡವ ಮೊದಲಾದ

ತಾಂತ್ರಿಕವಾಗಿಯೂ, ಬೌದ್ಧಿಕವಾಗಿಯೂ ಇಂದು ಬಹು ಉನ್ನತಿಯನ್ನು ಸಾಧಿಸಲಾಗಿದೆ. ನಮ್ಮ ಎಲ್ಲಾ ಜ್ಞಾನ ವಿಶೇಷಗಳ ತಾಯಿ ಬೇರು ಜಾನಪದ ಮೂಲದ್ದೇ ಆಗಿದೆ ಎಂಬುದು ಸಾಮಾನ್ಯ ತಿಳಿವಳಿಕೆಯೂ ಆಗಿದೆ. ಹೀಗಿದ್ದೂ, ಜಾನಪದ ಕುರಿತಾದ ಶೋಧನೆ, ತಿಳಿವಳಿಕೆ, ವಿಶ್ಲೇಷಣೆ, ಪೋಷಣೆ ಸಾಕಷ್ಟು ಸರಿಯಾದ ಪ್ರಮಾಣದಲ್ಲಿ, ರೀತಿಯಲ್ಲಿ ಆಗಲಿಲ್ಲ –ಎಂಬುದೂ ಗಮನಾರ್ಹವಾಗಿದೆ. ಇನ್ನೂ ಮುಂದುವರೆದು, ಅಲಕ್ಷಿತರ, ಅಸಂಘಟಿತರ, ದನಿ ಕಳೆದುಕೊಂಡವರ ದನಿಯಾಗಿ ನಿಲ್ಲುವ, ಅವರ ಕಲೆ–ಸಾಹಿತ್ಯಾದಿ ಜ್ಞಾನ ಪರಂಪರೆಗೆ ಜಾಗತಿಕ ಮಟ್ಟದಲ್ಲಿ ಮಹತ್ವ ತಂದುಕೊಡುವ ವಿಶಿಷ್ಟ ಪ್ರಯತ್ನ ವಿಶ್ವವಿದ್ಯಾನಿಲಯದಿಂದ ಆಗಬೇಕಾಗಿದೆ. ಜಾನಪದ ವಿಶ್ವವಿದ್ಯಾನಿಲಯ ಎಂಬುದು ಜನ ಸಾಮಾನ್ಯರನ್ನು ಕೇಂದ್ರವಾಗಿರಿಸಿಕೊಂಡ ಒಂದು ಉನ್ನತ ಶೈಕ್ಷಣಿಕ ಸಂಸ್ಥೆಯಾಗುತ್ತದೆ; ಆಗಬೇಕು; ಆಧುನಿಕ ಸಂದರ್ಭದ ಅನೇಕ ಕೇಡುಗಳ ನಡುವೆ ಸಿಕ್ಕಿ ನರಳುತ್ತಿರುವ ಅವರ ಬದುಕಿಗೆ, ಮನಸ್ಸಿಗೆ ಹೊಸ ಚೈತನ್ಯದಾಯೀ ಶಕ್ತಿಯಾಗುವ ಕೆಲಸವನ್ನೂ ಅದು ಮಾಡಬೇಕು. ದೇಸೀತನದ ಪ್ರಚ್ಛನ್ನ ಸಾಮರ್ಥ್ಯಗಳನ್ನೂ ಅದು ಶೋಧಿಸಬೇಕು. ಜಗತ್ತಿನಲ್ಲಿಯೇ ಇದು ಮೊದಲ ಜಾನಪದ ವಿಶ್ವವಿದ್ಯಾನಿಲಯ ಎಂಬ ಅಗ್ಗಳಿಕೆಯನ್ನು ಉಗ್ಗಡಿಸುವುದು ಆಮೇಲಿನದಾಗಬೇಕು. ದೂರಾನ್ವಯವೂ ಆಗುವ ಕಾಣ್ಕೆ, ಸದೃಢವಾದ ವೈಚಾರಿಕ ಮನೋಭೂಮಿಕೆ ಈ ವಿಶ್ವವಿದ್ಯಾನಿಲಯಕ್ಕೆ ದಕ್ಕಬೇಕು. ಅರ್ಥಾತ್, ವಿಶ್ವವಿದ್ಯಾನಿಲಯದ ಸಂರಚನೆ ವಿಶಿಷ್ಟ ತಳಹದಿಯ ಮೇಲೆ ರೂಪಿತವಾಗಬೇಕು. ನಾಡಿನ ವಿಚಾರವಂತರು, ಜಾನಪದ ಹಿತೈಷಿಗಳು ವಿಶ್ವವಿದ್ಯಾನಿಲಯದ ರೂಪುರೇಷೆ ನಿರ್ವಚನದಲ್ಲಿ ಮುಕ್ತವಾಗಿ ಸಂವಾದಿಸಬೇಕು; ನುಡಿ ರೂಪ ನೀಡಬೇಕು.

ವಿಶ್ವವಿದ್ಯಾನಿಲಯದ ಆಕೃತಿ ವಿಭಿನ್ನವಾಗಿ ಇರುವಂತೆಯೇ, ಅದರ ವಿವಿಧ ಅಂಗ–ಉಪಾಂಗಗಳ ಹೆಸರೂ ತನ್ನತನದಿಂದ ಕೂಡಿ ಮೊದಲ ಕೇಳುವಿಕೆಗೇ ತೀವ್ರವಾಗಿ ಗಮನ ಸೆಳೆಯುವಂತಿರಬೇಕು. ಈ ವಿಚಾರದಲ್ಲಿ ಕನ್ನಡ ವಿಶ್ವವಿದ್ಯಾಲಯುದ ಪ್ರಯತ್ನ ಮಾದರಿಯಾಗಿದೆ. ಜಾನಪದ ವಿಶ್ವವಿದ್ಯಾನಿಲಯ ಅದರಿಂದಲೂ ಮುಂದೆ ಹೋಗಿ ಗ್ರಾಮೀಣ ಸೊಗಡಿನ, ಗ್ರಾಮೀಣ ಬದುಕಿನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ, ಇರುವ ಹಲವು ಪಾರಿಭಾಷಿಕ ಪದಗಳನ್ನೇ ವಿಶ್ವವಿದ್ಯಾನಿಲಯದಲ್ಲಿಯೂ ಬಳಸಲು ಸಾಧ್ಯವಿದೆ. ಉದಾಹರಣೆಗೆ – ಇಡೀ ವಿಶ್ವವಿದ್ಯಾನಿಲಯವನ್ನು ಒಂದು ದೊಡ್ಡ ಗ್ರಾಮ ಎಂದು ಪರಿಭಾವಿಸಿದರೆ, ಅದರಲ್ಲಿ ವಿವಿಧ ಕೇರಿಗಳು / ಹಟ್ಟಿಗಳು / ವಠಾರಗಳು

ಜಾನಪದದ ಸರ್ವಾಂಗೀಣ ಅಧ್ಯಯನ ಸಾಧ್ಯವಾಗಲಿ

– ವ.ನಂ. ಶಿವರಾಮು

ಪ್ರಿಯ ವಿದ್ಯಾಗುರುಗಳಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ಗೌರವಪೂರ್ವಕ ನಮಸ್ಕಾರಗಳು. ಬಹು ದಿನಗಳ ಬೇಡಿಕೆ ಹಾಗೂ ಅತ್ಯಗತ್ಯವಾಗಿ ಆಗಲೇಬೇಕಾಗಿದ್ದ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆ ಹರ್ಷ ತಂದಿದೆ. ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯಾಗಿ ನೇಮಕಗೊಂಡಿರುವ ತಮಗೆ ಹೃತ್ಪೂರ್ವಕ ಅಭಿನಂದನೆಗಳು. ಜಾನಪದ ವಿಶ್ವವಿದ್ಯಾನಿಲಯಕ್ಕೆ ಪೂರ್ಣಕಾಲೀನ ಜಾನಪದ ಪ್ರಾಧ್ಯಾಪಕರನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡಿರುವುದು ನ್ಯಾಯಯುತವಾಗಿಯೇ ಇದೆ. ಜ್ಯೇಷ್ಠತೆಯ ದೃಷ್ಟಿಯಿಂದಲೂ ತಮ್ಮ ನೇಮಕಾತಿ ಸ್ವಾಗತಾರ್ಹವಾದುದು. ಜಾನಪದ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿ ಗೌರವಕ್ಕೆ ಪಾತ್ರವಾಗಲಿರುವ ತಮಗೆ ಅಭಿನಂದನೆಗಳು.

ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಥಮ ರ್‍ಯಾಂಕಿನೊಂದಿಗೆ ಜಾನಪದ ಎಂ.ಎ ಪಡೆದುಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ 'ಕರ್ನಾಟಕ ಜನಪದ ವೈದ್ಯಕೋಶ', ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯದರ್ಶಿ, 'ಜಾನಪದ ಲೋಕ'ದ ಆಡಳಿತ ಮತ್ತು ಸಂಶೋಧನಾಧಿಕಾರಿಯಾಗಿ ಅಲ್ಲದೆ ಜಾನಪದ ಸಂಗ್ರಹ, ಸಂಪಾದನೆ, ಸಂಶೋಧನಾ ಕ್ಷೇತ್ರದಲ್ಲಿ ನಾನು ಪಡೆದುಕೊಂಡಿರುವ ಅನುಭವಗಳ ಹಿನ್ನೆಲೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಕಾರ್ಯಯೋಜನೆಗಳ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಜಗತ್ತಿನ ಎಲ್ಲ ಜ್ಞಾನ ಶಾಖೆಗಳಿಗೂ ಜಾನಪದವೇ ತಾಯಿಬೇರು; ಮಾರ್ಗ, ಶಿಷ್ಟ, ಶಾಸ್ತ್ರೀಯ, ವೈಜ್ಞಾನಿಕ, ತಾಂತ್ರಿಕ, ಆಧುನಿಕ ಎಂದೆಲ್ಲ ಗುರುತಿಸಿಕೊಂಡಿರುವ ಎಲ್ಲ ಜ್ಞಾನ-ವಿಜ್ಞಾನಗಳ ಮೂಲ ಆಕರ ಜಾನಪದ ಎಂಬ ಸಂಗತಿ ಈಗಾಗಲೇ ಸಾಬೀತಾಗಿರುವಂಥದ್ದು. ಹೀಗಾಗಿ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕಾರರೊಂದಿಗೆ ಇತರ ಎಲ್ಲ ಮಾನವಿಕ, ವೈಜ್ಞಾನಿಕ, ತಾಂತ್ರಿಕ

ಜಾನಪದ ವಿಶ್ವವಿದ್ಯಾನಿಲಯ: ಹೀಗಿದ್ದರೆ ಹೇಗೆ?

– ಟಿ. ಗೋವಿಂದರಾಜು

ಜಗತ್ತಿನಲ್ಲಿ ವೈವಿಧ್ಯಮಯವಾದ ಭೂಭಾಗವಿದೆ; ಹವಾಗುಣವಿದೆ. ಅದಕ್ಕೆ ತಕ್ಕಂತೆ ಬಾಳು ರೂಪಿಸಿಕೊಂಡ ಅಸಂಖ್ಯ ಸಮುದಾಯಗಳಿವೆ. ದೈನಂದಿನ ಬದುಕಿನ ಯಾತನೆಗಳನ್ನು ನೀಗಿಸುವುದೇ ಜೀವದ ಪ್ರಮುಖ ಕಾರ್ಯಭಾರವಾಗಿದ್ದರೂ ಮನುಷ್ಯ ಜೀವ ಅದಷ್ಟಕ್ಕೇ ಸೀಮಿತವಾಗಿ ಉಳಿಯದೆ, ಬದುಕಿನ ಅನಂತ ಸಾಧ್ಯತೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ವಿಸ್ತರಿಸಿಕೊಳ್ಳುತ್ತಲೇ ಬಂದಿದೆ. ಇದಕ್ಕೆ ಪೂರಕವಾಗಿಯೇ ಮನುಷ್ಯನ ಕಲ್ಪನೆಗಳು, ವಿಚಾರಗಳು ಹುಟ್ಟಿಕೊಂಡಿವೆ; ಸಾಕಾರಗೊಂಡಿವೆ. ಇದೆಲ್ಲದರ ಫಲವಾಗಿಯೇ ಒಂದೊಂದು ಪ್ರದೇಶ, ಸಮುದಾಯಕ್ಕೂ ವಿಭಿನ್ನ ಎನ್ನಬಹುದಾದ ಊಟೋಪಚಾರ, ಉಡುಗೆ–ತೊಡುಗೆ, ಆಚಾರ–ಸಂಪ್ರದಾಯ, ಸಾಹಿತ್ಯ–ಕಲೆ, ಮನೆ, ಗುಡಿ–ಗಾಡಿ ಮೊದಲಾದವು ರೂಢಿಗೆ ಬಂದಿವೆ. ಮನುಷ್ಯ ಬದುಕಿಗೆ ವಿಶೇಷ ಆಯಾಮ, ಅರ್ಥಪ್ರಾಪ್ತಿಗೆ ಇದೂ ಕಾರಣವಾಗಿದೆ.

ಇಂಥ ಮಾನವ ಸಮುದಾಯಗಳ ಅಂತರಂಗ–ಬಹಿರಂಗಗಳ ರೂಪು–ಭಾಪು ಕುರಿತು ತಿಳಿಯುವ ಕುತೂಹಲ ಮಾನವನಲ್ಲಿ ಆದಿಕಾಲದಿಂದಲೂ ಮೂಡಿಬಂದಿದೆ. ಇದು ತನ್ನನ್ನು ತಾನು ಅರ್ಥಮಾಡಿಕೊಳ್ಳಲು ಮಾಡಿದ ಸಾಹಸವೂ ಹೌದು. ಸಮುದಾಯಗಳು ವೈವಿಧ್ಯಮಯವಾದುದರಿಂದ ಒಂದೇ ನೆಲೆಯಲ್ಲಿ, ಏಕ ಪ್ರಯತ್ನಕ್ಕೇ ಎಲ್ಲವೂ ತಮ್ಮ ಗುಟ್ಟು ಬಿಟ್ಟುಕೊಡುವುದಿಲ್ಲ–ವಾದ್ದರಿಂದ, ಬೇರೆ ಬೇರೆ ಶಿಸ್ತುಗಳಿಂದ ಶೋಧನೆಗಳು, ಅಧ್ಯಯನಗಳು ಸಾಗಿವೆ. ಹುಟ್ಟು–ಬೆಳವಣಿಗೆ ಕುರಿತ ವೈಜ್ಞಾನಿಕ ನೆಲೆಯ ಪ್ರಯತ್ನವಿದ್ದಂತೆ ಮನುಷ್ಯನ ಆಚಾರ–ಸಂಪ್ರದಾಯಗಳ ಹುಟ್ಟು–ವೈಶಿಷ್ಟ್ಯಗಳ ಕುರಿತಾದ ಸಮಾಜೋ ಸಾಂಸ್ಕೃತಿಕ ನೆಲೆಯ ಅಧ್ಯಯನಗಳೂ ಹುಟ್ಟಿಕೊಂಡಿವೆ. ಇದೊಂದು ನಿರಂತರ ಪ್ರಕ್ರಿಯೆ. ಈ ಹುಡುಕಾಟ, ಅರ್ಥಗ್ರಹಿಕೆಯ ಪ್ರಮುಖ ಭಾಗವಾಗಿ 'ಶಿಕ್ಷಣ'ವಿದೆ. ಕಲಿಕೆ, ಬೋಧನೆ, ಸಂಶೋಧನೆ – ಎಲ್ಲವೂ ಪರಸ್ಪರ

ಶಾಸ್ತ್ರ, ಗಣಿತಶಾಸ್ತ್ರ, ಮನಶಾಸ್ತ್ರ......... ಹೀಗೆ ಎಲ್ಲ ಮಾನವಿಕ ಮತ್ತು ವೈಜ್ಞಾನಿಕ ಶಿಸ್ತುಗಳೊಂದಿಗೆ ಜಾನಪದದ ಅಂತರಶಿಸ್ತೀಯ ಅಧ್ಯಯನ ನಡೆಯಬೇಕಾಗಿದೆ. ದಕ್ಷಿಣ ಭಾರತೀಯ ಭಾಷಾ ತಜ್ಞರು, ಜಾನಪದ ತಜ್ಞರೂ ಇಲ್ಲಿರಬೇಕಾಗುತ್ತದೆ. ಒಟ್ಟಾರೆ ಜಾನಪದ ಅಧ್ಯಯನ ಎಂದರೆ ಮಾನವನ ಸಮಸ್ತ ವಸ್ತು, ವಿಷಯ, ಜ್ಞಾನಗಳ ಅಧ್ಯಯನ ಜಾನಪದ ವಿಶ್ವವಿದ್ಯಾನಿಲಯದ ಉದ್ದೇಶವಾಗಬೇಕಾಗುತ್ತದೆ.

ಜಾನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಒಂದೊಂದೂ ವಿಷಯಕ್ಕೆ ಜಾನಪದ ವಿಶ್ವಕೋಶಗಳು ಪ್ರಕಟಗೊಳ್ಳಬೇಕು. ಜನಪದ ವೈದ್ಯ, ಅಡುಗೆ, ಗ್ರಾಮ ದೇವತೆ, ಕಲೆ–ಕಲಾವಿದರು, ಕೃಷಿ, ಗ್ರಾಮೀಣ ಕಸುಬುದಾರರು, ಆದಿವಾಸಿಗಳೇ ಮೊದಲುಗೊಂಡ ವಿಷಯ ವಿಶ್ವಕೋಶಗಳು ರೂಪುಗೊಳ್ಳಬೇಕು. ಜನಪದ ಶಬ್ದಗಳಿಗೆ ಅರ್ಥವನ್ನಷ್ಟೇ ಹೇಳಿದರೆ ಪ್ರಯೋಜನವಾಗದು ಅದು ಜಾನಪದ ಶಬ್ದಕೋಶವಾಗಬೇಕು. ಇಲ್ಲಿ ಅರ್ಥಗಳೊಡನೆ ಪ್ರಯೋಗ, ಸಂದರ್ಭ, ಟಿಪ್ಪಣಿ, ವಿವರಣೆಗಳೂ ಸೇರಬೇಕು. ಕರ್ನಾಟಕ ಜಾನಪದ ಪರಿಷತ್ತಿನ 'ಕನ್ನಡ ಜಾನಪದ ಶಬ್ದಕೋಶ' ಮಾದರಿಯಾಗಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಜಾನಪದ ವಿಶ್ವಕೋಶ', ಮೈಸೂರು ವಿಶ್ವವಿದ್ಯಾನಿಲಯದ 'ವಿಷಯ ವಿಶ್ವಕೋಶ: ಜಾನಪದ' ಸಂಪುಟ, ಕರ್ನಾಟಕ ಜಾನಪದ ಅಕಾಡೆಮಿಯ 'ಜಾನಪದ ಕೈಪಿಡಿ'ಗಳ ಮಾದರಿಗಳೆಲ್ಲ ಒಟ್ಟು ಸೇರಿದರೆ ಮಾತ್ರ ಜಾನಪದದ ವ್ಯಾಪಕತೆಯನ್ನು ಗುರುತಿಸಲು ಸಾಧ್ಯವಾದೀತು.

ಜಾನಪದ ತತ್ವ–ವಿಧಾನಗಳು ಸಾಮಾನ್ಯ ಪತ್ರಿಕೆಯೊಂದಿಗೆ ಜಾನಪದದ ವಿವಿಧ ಪ್ರಕಾರಗಳು ಐಚ್ಛಿಕ ವಿಷಯಗಳಾಗಿದ್ದು ಬೋಧನಾಂಗ ಅತ್ಯಗತ್ಯವಾಗಿ ಇರಬೇಕು. ಬೋಧನೆ ಇದ್ದಾಗ ವಿದ್ವಾಂಸರು ಹೆಚ್ಚು ಹೆಚ್ಚು ಅಧ್ಯಯನಶೀಲರಾಗುತ್ತಾರೆ. ಅಲ್ಲದೆ ನಮಗೆ ಬೇಕಾದ ಸಮರ್ಥ ಜಾನಪದ ಕ್ಷೇತ್ರತಜ್ಞರನ್ನು ಇಲ್ಲಿ ರೂಪಿಸಿಕೊಳ್ಳುವಂತಾಗಬೇಕು. ಇದಕ್ಕೆ ಪೂರಕವಾಗಿ ಶಾಲಾ–ಕಾಲೇಜುಗಳಲ್ಲಿ ಜಾನಪದ ಐಚ್ಛಿಕ ವಿಷಯವಾಗಬೇಕು. ಜಾನಪದ ಅಭ್ಯಾಸ ಉದ್ಯೋಗ ದೊರಕಿಸಿಕೊಡುವಂತಾಗಬೇಕು.

ಬುಡಕಟ್ಟು ಹಾಗೂ ಗ್ರಾಮೀಣ ಜೀವನವನ್ನು ಸಮಗ್ರವಾಗಿ ಕಟ್ಟಿಕೊಡಬಲ್ಲಂಥ, ಪ್ರಾದೇಶಿಕ ವೈವಿಧ್ಯಗಳನ್ನು ಪ್ರತಿಬಿಂಬಿಸುವಂಥ ಬಯಲು ವಸ್ತು ಸಂಗ್ರಹಾಲಯಗಳು ರೂಪುಗೊಳ್ಳಬೇಕು (ಮಾಹಿತಿಗಾಗಿ 'ಕರ್ನಾಟಕ ಜಾನಪದ ವಸ್ತು ಸಂಗ್ರಹಾಲಯಗಳು' ಕಿರುಹೊತ್ತಿಗೆಯನ್ನಿರಿಸಿದ್ದೇನೆ). ಜಾನಪದ

ಪ್ರದರ್ಶನಗೊಳ್ಳುವಂತಾಗಬೇಕು. ಈ ಕಲಾವಿದರಿಗೆ ಅವರವರ ಶೈಕ್ಷಣಿಕ ಮಟ್ಟಕ್ಕೆ ತಕ್ಕಂತೆ ಸಂಭಾವನೆ ನೀಡಬೇಕಾಗುವುದು. ಬಯಲು ಸಂಗ್ರಹಾಲಯವನ್ನು ಸುತ್ತಿ ಬರಲು ಆಯಾಯಾ ಪ್ರದೇಶದ ಬಂಡಿಯ ಮಾದರಿಗಳನ್ನು ಇಡಬಹುದು. ಒಟ್ಟಿನಲ್ಲಿ ಚಿಕಾಗೋ ನಗರದಲ್ಲಿರುವ ಫೀಲ್ಡ್ ಮ್ಯೂಸಿಯಂ ಅಥವಾ ಬ್ರಿಟನ್ ದೇಶದ ಉತ್ತರ ಭಾಗದಲ್ಲಿರುವ ಭೀಮಿಷ್ ಮ್ಯೂಸಿಯಂನಂತೆ ಪರಿಸರ ಸ್ನೇಹಿ ಬಯಲು ಸಂಗ್ರಹಾಲಯದ ಸ್ಥಾಪನೆಯ ಅಗತ್ಯವಿದೆ.

ಪ್ರಾಣಿಶಾಸ್ತ್ರ, ಭೂಗರ್ಭಶಾಸ್ತ್ರ, ಜನಾಂಗೀಯ ಶಾಸ್ತ್ರಗಳ ಸಂಗ್ರಹ ಅಗತ್ಯವಾಗಿ ಆಗಬೇಕು. ಇದರ ಜೊತೆಗೆ ವಿಶ್ವಪರಂಪರೆಗೆ ಒಳ್ಳೆಯ ಮಾದರಿಯಾಗುವ ರೀತಿಯಲ್ಲಿ ಆಫ್ರಿಕ, ಅಮೆರಿಕ, ಯೂರೋಪ್, ಏಷ್ಯಾ ಮತ್ತು ಆಸ್ಟ್ರೇಲಿಯಾ ದೇಶದ ಸಂಗ್ರಹಾಲಯಗಳ ಮುಖ್ಯಸ್ಥರೊಡನೆ ವ್ಯವಹರಿಸಿ ವಸ್ತು ವಿನಿಮಯದ ಮೂಲಕ ಅಲ್ಲಿಯ ಜನಪದ ವಸ್ತುಗಳನ್ನೂ ಸಂಗ್ರಹಿಸಲು ಪ್ರಯತ್ನಿಸಬಹುದು. ತೀವ್ರ ಬದಲಾವಣೆಯ ಯುಗದಲ್ಲಿರುವ ನಾವು ನಮ್ಮ ನಶಿಸುತ್ತಿರುವ ಎಲ್ಲ ಬಗೆಯ ಕೈ ಕಸುಬುಗಳ ಸಾಧನಗಳ ದಾಖಲೀಕರಣವನ್ನೂ ಮಾಡಬೇಕು. ಭೌತಿಕ ಜಾನಪದದ ಅಧ್ಯಯನದ ದೃಷ್ಟಿಯಿಂದ ಇದು ಬಹಳ ಮುಖ್ಯವಾಗುತ್ತದೆ.

ಈ ಮೇಲೆ ತಿಳಿಸಿದ ಕೆಲಸಗಳಾಗಬೇಕಾದಲ್ಲಿ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಕಟ್ಟುವ ಕಟ್ಟಾಳುಗಳ ಸಂಖ್ಯೆ ಬೆಳೆಯಬೇಕು. ಸಂಗ್ರಹಕ್ಕಾಗಿ ನಿಯೋಜಿತರಾದ ಜಾನಪದ ತಜ್ಞರು ಸಂಗ್ರಹಕಾರ್ಯ ಪ್ರಾರಂಭವಾದ ಕೂಡಲೆ ಸಂಪೂರ್ಣ ಮಾಹಿತಿಯೊಡನೆ ವಸ್ತುಗಳನ್ನು ಸಂಗ್ರಹಿಸಬೇಕು. ಸಂಗ್ರಹಿಸಿದ ದಿನಾಂಕ, ಕೊಟ್ಟವರ ಹೆಸರು, ವಿಳಾಸ, ಸಂಗ್ರಹಿಸಿದವರ ಹೆಸರು, ವಸ್ತುವಿನ ಉಪಯೋಗ, ಅದರ ಸಾಂಸ್ಕೃತಿಕ ಮಹತ್ವ, ಜಾನಪದ ಶಾಸ್ತ್ರ, ಸಮಾಜ ಶಾಸ್ತ್ರ, ಜೀವ ಶಾಸ್ತ್ರ ಹೀಗೆ ಹತ್ತು ಹಲವು ಅಧ್ಯಯನದಲ್ಲಿ ಸಂಗ್ರಹಿಸಿದ ವಸ್ತುವಿನ ಪಾತ್ರ ಅದರ ಬಗೆಗಿರುವ ನಂಬಿಕೆ, ವಸ್ತುವಿನ ಬಗೆಗಿನ ಸಾಹಿತ್ಯಿಕ ಅಂಶಗಳನ್ನು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ದಾಖಲಿಸಬೇಕು.

ಒಟ್ಟಿನಲ್ಲಿ ಈ ಕೆಳಕಂಡ ಅಂಶಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಹೊಸ ಬಯಲು ಸಂಗ್ರಹಾಲಯವನ್ನು ಕಟ್ಟಬಹುದಾಗಿದೆ.

- ಪೂರ್ಣ ಪ್ರಮಾಣದ ರಾಸಾಯನಿಕ ಪ್ರಯೋಗಾಲಯ ಅಗತ್ಯವಾಗಿರಬೇಕು. ಮೈಸೂರಿನ ಆರ್.ಸಿ.ಎಲ್. ನ ಸಹಯೋಗವನ್ನು ಇದಕ್ಕಾಗಿ ಪಡೆಯಬಹುದು.

ಜಾನಪದಕ್ಕೆ ಒಂದು ವಿಶ್ವವಿದ್ಯಾನಿಲಯವೇ ಏಕೆ ಬೇಕು?

– ಟಿ. ಗೋವಿಂದರಾಜು

'ಜಾನಪದ' ಎಂಬುದು ಇಡೀ ವಿಶ್ವವನ್ನು ಒಳಗೊಂಡ ಒಂದು ಜ್ಞಾನಸಮೂಹ. ಅದು ಮನುಷ್ಯರಿಗೆ ಮಾತ್ರ ಸಂಬಂಧಿಸಿದುದಲ್ಲ; ಪ್ರಾಣಿ, ಪಕ್ಷಿ, ಜಲಚರಾದಿಗಳನ್ನೂ ಒಳಗೊಂಡಿದೆ. ಬರೀ ಭೂಮಿಗೆ ಸಂಬಂಧಿಸಿದುದಲ್ಲ; ಆಗಸದ ಸೂರ್ಯ, ಚಂದ್ರಾದಿ ಗ್ರಹ, ತಾರೆಯರನ್ನೂ ಕುರಿತು ಮಾತನಾಡುತ್ತದೆ. ಕೇವಲ ಕಣ್ಣಿಗೆ ಕಾಣುವ ಪರಿಸರ, ಜೀವವನ್ನಲ್ಲ; ಅಗೋಚರವೆಂದು ನಂಬಿರುವ ದೇವ, ದೆವ್ವಗಳ ಹಾಗೆಯೇ, ಕೇವಲ ಹಳ್ಳಿಗೆ, ಅನಕ್ಷರಸ್ಥರಿಗೆ ಸಂಬಂಧಿಸಿದುದಲ್ಲ; ನಾಗರಿಕರಲ್ಲೂ, ಪ್ರಾಧ್ಯಾಪಕರಲ್ಲೂ ಜಾನಪದ ಇದೆ. ಜಾನಪದ ಎಂಬುದು ಕೇವಲ ಬಾಯಿ ಮಾತಿನ ಹಾಡು, ಕತೆ, ಮದುವೆ, ನಾಮಕರಣಕ್ಕೆ ಸಂಬಂಧಿಸಿದ್ದಲ್ಲ; ಅದರಲ್ಲಿ ವೈವಿಧ್ಯಮಯವಾದ ಕಲೆಗಳಿಗೆ, ನೃತ್ಯ–ಸಂಗೀತವಿದೆ; ವೈದ್ಯಶಾಸ್ತ್ರವಿದೆ, ಆಹಾರ ವಿಜ್ಞಾನವೂ ಇದೆ; ಭವಿಷ್ಯದ ಕಾಣ್ಕೆಯೂ ಇದೆ. ಹೀಗೆ, ಅದರಲ್ಲಿ ಎಲ್ಲ, ಎಲ್ಲವೂ ಇವೆ. ಅಂದರೆ, ಎಲ್ಲವನ್ನೂ ಕುರಿತು ಜನಪದರು ಮಾತಾಡಿದ್ದಾರೆ.

ಇಂಥಾ ಲೋಕವ್ಯಾಪಕವಾದ ಬಹುಮುಖೀ ಜ್ಞಾನ–ಸಂಪತ್ತನ್ನು ಕುರಿತು ಕೇವಲ ಜಾನಪದ ವಿದ್ವಾಂಸರಷ್ಟೇ ಅಲ್ಲದೆ ಭಾಷಾ–ವಿಜ್ಞಾನಿಗಳು, ಇತಿಹಾಸ–ಪುರಾತತ್ವ ಸಂಶೋಧಕರು, ಆಹಾರ ವಿಜ್ಞಾನಿಗಳೂ ಆಸಕ್ತಿಯಿಂದ ವಿವಿಧ ನೆಲೆಗಳಲ್ಲಿ ಅಧ್ಯಯನಗಳನ್ನು ನಡೆಸುತ್ತಿದ್ದಾರೆ. ಯಾವುದೇ ಕ್ಷೇತ್ರದ ಚಿಂತಕರನ್ನೂ ತನ್ನತ್ತ ಸೆಳೆಯಬಹುದಾದ ಸತ್ವ, ಮಹತ್ವ ಜಾನಪದಕ್ಕೆ ಇದೆ. ಜಾಗತೀಕರಣದ ಸಂದರ್ಭದಲ್ಲಿ ಇಂಥಾ ಅಮೂಲ್ಯವಾದ ಪಾರಂಪರಿಕ ಜ್ಞಾನವನ್ನು ಕುರಿತಾದ ಸಂಗ್ರಹ, ಸಂಶೋಧನೆ, ಪ್ರಚಾರ, ಸಂರಕ್ಷಣೆ ಇತ್ಯಾದಿಗಳು ತೀವ್ರ ಗತಿಯಲ್ಲಿ, ವೈಜ್ಞಾನಿಕ ನೆಲೆಯಲ್ಲಿ ಆಗಬೇಕಾದ ತುರ್ತು ಇದೆ. ಒಂದು ನಾಡಿನ, ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಅರಿಯಲು ಜಾನಪದ ಅತ್ಯಂತ ಉಪಯುಕ್ತವಾದುದಾಗಿದ್ದು, ಅಂತಹ ಅನೇಕ ಹೊಳಹುಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ.

ಜನಪದ ಬಯಲು ವಸ್ತು ಸಂಗ್ರಹಾಲಯದ ಸ್ವರೂಪ ಮತ್ತು ರೂಪುರೇಷೆ

– ಯು.ಎಸ್. ರಾಮಣ್ಣ

ಕರ್ನಾಟಕ ಸರ್ಕಾರ ಜಾನಪದ ವಿಶ್ವವಿದ್ಯಾನಿಲಯವನ್ನು ನೂತನವಾಗಿ ಸ್ಥಾಪಿಸುವುದು ಕನ್ನಡ ಜನತೆಗೆ ಸಂತೋಷವನ್ನುಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಯಾವ ಯಾವ ಅಂಶಗಳು ಇದರಲ್ಲಿ ಅಡಕವಾಗಿರಬೇಕೆಂಬುದು ಬಹಳ ಮುಖ್ಯವಾಗುತ್ತದೆ. ಈ ವಿಶ್ವವಿದ್ಯಾನಿಲಯವು ಇತರ ವಿಶ್ವವಿದ್ಯಾನಿಲಯಗಳಿಗಿಂತ ಭಿನ್ನವಾಗಿರಬೇಕೆಂಬುದು ಎಲ್ಲರ ಆಶಯವೂ ಆಗಿದೆ. ವಿಶ್ವವಿದ್ಯಾನಿಲಯದಲ್ಲಿ ಸಾಂಪ್ರದಾಯಿಕ ಪಠ್ಯಕ್ರಮಗಳ ಜೊತೆಗೆ ಜನಪದ ಕಲೆ ಮುಂತಾದ ವಿಚಾರಗಳ ಸೇರ್ಪಡೆಯಾಗಬೇಕಾಗುತ್ತದೆ. 'ಜಾನಪದ' ಎಲ್ಲದರ ತಾಯಿ ಬೇರಾದ್ದರಿಂದ ಬದುಕಿನ ಸಕಲ ವಿಷಯಗಳ ಅಧ್ಯಯನ ವಿಭಾಗಗಳನ್ನು ತೆರೆಯಬೇಕಾಗುತ್ತದೆ. ಜಾನಪದ ಮತ್ತು ಆದಿಮ ಸಂಸ್ಕೃತಿ, ಜಾನಪದ ಮತ್ತು ಮಾನವ ಶಾಸ್ತ್ರೀಯ ಅಧ್ಯಯನ, ಜಾನಪದ ಮತ್ತು ಮನಶಾಸ್ತ್ರೀಯ ಅಧ್ಯಯನ–ಹೀಗೆ ಹಲವು ನಿಟ್ಟಿನಿಂದ ಜಾನಪದ ಅಧ್ಯಯನ ನಡೆಸುವ ಅವಕಾಶವಿರಬೇಕಾಗುತ್ತದೆ. ಇವುಗಳ ಜೊತೆಗೆ ಜನಪದ ಸಂಸ್ಕೃತಿಯನ್ನು ಬಿಂಬಿಸುವ ವಸ್ತು ಸಂಗ್ರಹಾಲಯದ ಅಗತ್ಯವೂ ಇದೆ.

ಈಗಾಗಲೇ ಎಲ್ಲ ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಜಾನಪದ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿವೆ. ಜೊತೆಗೆ ಖಾಸಗಿಯಾಗಿಯೂ ಕೆಲವು ವ್ಯಕ್ತಿಗಳು ಮತ್ತು ಮಠಮಾನ್ಯಗಳ ಸಂಗ್ರಹಾಲಯಗಳು ತಲೆ ಎತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಈ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸ ಹೊರಟಿರುವ ಬಯಲು ಸಂಗ್ರಹಾಲಯ ಸುಸಜ್ಜಿತವಾದ ಮಾದರಿ ಜಾನಪದ ವಸ್ತು ಸಂಗ್ರಹಾಲಯವಾಗಬೇಕು. ಸಾಮಾನ್ಯವಾಗಿ ಕರ್ನಾಟಕದ ಎಲ್ಲ ವಸ್ತು ಸಂಗ್ರಹಾಲಯಗಳು ವಸ್ತುಗಳ ಸಂಗ್ರಹದಲ್ಲಿ ತೊಡಗಿಕೊಂಡು ವಸ್ತುಗಳನ್ನು ಸಂಗ್ರಹಿಸಲಾಗಿದೆ. ಆದರೆ ಯಾವ ವಸ್ತು ಸಂಗ್ರಹಾಲಯವೂ

ಬಂದಿದ್ದವು. ಆದರೆ, ಅಂಥಾ ಟೀಕೆ ತಪ್ಪೆಂಬುದನ್ನು ಆ ಟೀಕಾಕಾರರೇ ಈಗ ಒಪ್ಪುತ್ತಾರೆ. ಏಕೆಂದರೆ –

ಜಾನಪದ ಚಟುವಟಿಕೆಗಳಲ್ಲಿ ಕರ್ನಾಟಕ ಹಲವು ವಿಕ್ರಮಗಳನ್ನು ಮಾಡಿದೆ. ಭಾರತದಲ್ಲಿ ಅಷ್ಟೇ ಅಲ್ಲ, ಜಗತ್ತಿನ ಇತರ ರಾಷ್ಟ್ರಗಳ ವಿದ್ವಾಂಸರ ಗಮನವನ್ನೂ ಸೆಳೆಯುವಂತಾಗಿದೆ. ಈಗಲೂ ವಿದೇಶಿ ವಿದ್ವಾಂಸರು ಕರ್ನಾಟಕಕ್ಕೆ ಬಂದು ಇಲ್ಲಿನ ಜನಸಮುದಾಯಗಳು, ಅವರ ವಿಶಿಷ್ಟವಾದ ಜಾನಪದ ಕುರಿತು ಅಧ್ಯಯನ ಮಾಡುತ್ತಿದ್ದಾರೆ. ಜಗತ್ತಿನ ಇತರ ದೇಶಗಳ ಜನಸಮುದಾಯಗಳ ಕುರಿತಾದ ಹೆಚ್ಚಿನ ತಿಳಿವಳಿಕೆಗೆ ಅಗತ್ಯವಾದ ಮಾದರಿಗಳು, ಒಳನೋಟಗಳನ್ನು ಕರ್ನಾಟಕದಲ್ಲಿನ ದೇಸೀ ಮೂಲ ಸಮುದಾಯಗಳಲ್ಲಿ ಗುರುತಿಸುವ ಪ್ರಯತ್ನ ಅವರದು. ಅಷ್ಟಲ್ಲದೆಯೂ, ಇಲ್ಲಿನ ವೈವಿಧ್ಯಮಯ ಜನಸಮುದಾಯಗಳು ತಲೆಮಾರಿನಿಂದ ಕಟ್ಟಿಕೊಂಡು ಬಂದ ಬದುಕಿನ ಅನನ್ಯತೆಯನ್ನು ಅರಿಯುವುದು, ನಮ್ಮ ಒಳಗನ್ನು ತೆರೆಸುವ, ಅರಿವನ್ನು ಹೆಚ್ಚಿಸುವ ಕ್ರಿಯೆಗೆ ಪೂರಕವಾದುದಾಗಿರುತ್ತದೆ. ಜಗತ್ತನ್ನು ಕಾಡುತ್ತಿರುವ ಹಲವು ಪಿಡುಗುಗಳ ನಿವಾರಣೆಗೂ ಇಲ್ಲಿ ಮಾರ್ಗೋಪಾಯ ದೊರೆತೀತು.

ಈ ಮುನ್ನರಿವಿನಿಂದಾಗಿಯೇ, ನಮ್ಮ ಹಿರಿಯ ವಿದ್ವಾಂಸರು ಜಾನಪದಕ್ಕೊಂದು ವಿಶ್ವವಿದ್ಯಾನಿಲಯ ಅಗತ್ಯವೆಂದು ದಶಕಗಳಿಂದಲೂ ವಿವಿಧ ವೇದಿಕೆಗಳಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಹತ್ತು ವರ್ಷ ಆದ ಹೊತ್ತಿನಲ್ಲಿ, ಗುಲ್ಬರ್ಗಾದಲ್ಲಿ ನಡೆದ ರಾಜ್ಯಮಟ್ಟದ ಸಮ್ಮೇಳನದಲ್ಲೂ ಇದು ಪ್ರಸ್ತಾಪ ಆಯಿತು. ಕಾಳೇಗೌಡ ನಾಗವಾರರ ಸೂಚನೆಯಂತೆ ನಾನು ಈ ವಿಷಯವನ್ನು ಮಂಡಿಸಿದೆ. ಅವರು ಅನುಮೋದಿಸಿದರು ಹಾಗೂ ಸಮ್ಮೇಳನ ಸರ್ವಾನುಮತದಿಂದ ಠರಾವನ್ನು ಅಂಗೀಕರಿಸಿತು. ಸರಕಾರಕ್ಕೂ ಹೋಯಿತು. ಆದರೆ, ಆಮೇಲೆ ಆ ಬಗೆಗಿನ ದನಿ ಗಟ್ಟಿಯಾಗಲಿಲ್ಲ. ಎಚ್.ಎಲ್.ನಾಗೇಗೌಡ, ಜೀ.ಶಂ.ಪರಮಶಿವಯ್ಯ ಅವರಂತಹ ಧುರೀಣರು ಕಣ್ಮರೆಯಾದದ್ದು ಇದಕ್ಕೊಂದು ಕಾರಣ ಆದೀತು.

ಈಗ, ಇಷ್ಟು ವರ್ಷಗಳಿಂದಲೂ ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ವಿಭಿನ್ನವಾಗಿ ತೊಡಗಿಸಿಕೊಂಡು ಬಂದ, ಇದೀಗ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರೂ ಆಗಿರುವ ಶ್ರೀ ಗೊ.ರು.ಚನ್ನಬಸಪ್ಪ ಅವರು ಮತ್ತೆ ದನಿ ಎತ್ತಿದ್ದಾರೆ. ಅವರ ದನಿ ಸರಕಾರಕ್ಕೆ ಕೇಳುವಂತಾಗಿದೆ. ಇಂಥಾ ಸಂದರ್ಭ ಮತ್ತೆ ದೊರೆಯುವುದು ಕಷ್ಟವಾದೀತು. ಆದ್ದರಿಂದ, ಜಾನಪದ ಹಿತೈಷಿಗಳೆಲ್ಲ

ಭೂಮಿ ವಿಶ್ವವಿದ್ಯಾನಿಲಯದ ಜನಪದ ಔಷಧ ವನ ಬೆಳೆಸಲು ಕೊಂಡುಕೊಂಡ ಭೂಮಿ ಆಯಾ ವೈದ್ಯರ ಸ್ವಂತ ಭೂಮಿ ಇತ್ಯಾದಿ ಸ್ಥಳಗಳಲ್ಲಿ ಮುಖ್ಯವಾಗಿ ಆಯಾ ವೈದ್ಯರು ಹೆಸರಿಸುವ ಔಷಧ ಸಸ್ಯಗಳನ್ನು ಜೊತೆಗೆ ಇತರ ಔಷಧ ಗಿಡಗಳನ್ನು ಅರಣ್ಯ ಇಲಾಖೆಯ ಸಹಾಯದೊಂದಿಗೆ ನೆಡಬೇಕು. ಪರಿಸರ ಇಲಾಖೆ ಇದಕ್ಕೆ ಕೈ ಜೋಡಿಸುವಂತೆ ನೋಡಿಕೊಳ್ಳಬೇಕು. ಆಯಾಗಿಡದ ಬಳಿ ಅಲ್ಲಿಯ ವೈದ್ಯರು ಹೆಸರಿಸುವ ಪ್ರಾದೇಶಿಕ ಹೆಸರುಗಳ ನಾಮಫಲಕವಿರಬೇಕು. ಅಲ್ಲಿ ಸ್ಥಳೀಯ ವೈದ್ಯರು ತಿಳಿಸುವ ಸಸ್ಯೋಪಯೋಗವನ್ನು ಒಂದೆರಡು ಶಬ್ದಗಳಲ್ಲಿ ಬರೆಸಬೇಕು (ಮದ್ದು ತಯಾರಿಕ ವಿಧಾನ ಇಲ್ಲಿ ಬರೆದಿರುವುದಿಲ್ಲ). ಅರಣ್ಯ ಇಲಾಖೆಯ ಅನೇಕ ಔಷಧ ವನಗಳಂತೆ ಇವು ಪಾಳು ಬೀಳದೆ ಸದಾ ಜೀವಂತವಾಗಿರಬೇಕು. ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ ವನ ನಿರ್ವಹಣೆಯೂ ಸೇರಿಕೊಂಡಾಗ ಇದು ಜೀವಂತವಾಗಿರಬಹುದು.

ಪ್ರಯತ್ನ೨: ನಾಡ ವೈದ್ಯರ ಅಪೂರ್ವ ಜ್ಞಾನ ನಿರ್ವಹಣೆ

ನಾಡ ವೈದ್ಯರಲ್ಲಿ ಅಪೂರ್ವ ಜ್ಞಾನ ಕಂಡು ಬಂದರೆ ಅದನ್ನು ಜಗತ್ತಿನ ಔಷಧ ಕಂಪನಿಗಳು ತಮ್ಮ ಹಕ್ಕಿನ ವ್ಯಾಪ್ತಿಗೆ ತರಲು ಪ್ರಯತ್ನಿಸುತ್ತವೆ. ನಮ್ಮ ನಾಡ ವೈದ್ಯರಲ್ಲಿ ಅಪೂರ್ವ ಜ್ಞಾನ ಕಂಡು ಬಂದರೆ ಅದನ್ನು ಜಗತ್ತಿನ ಜೀವ ವೈವಿಧ್ಯತಾ ಕಾಯ್ದೆಯಂತೆ ಈ ಬಗ್ಗೆ ಬಲ್ಲ ವಕೀಲರ ನೆರವಿನೊಂದಿಗೆ ಆಯಾ ಗ್ರಾಮ ಪಂಚಾಯಿತಿಯಲ್ಲಿ ದಾಖಲಿಸುವುದು. ಕಂಪನಿಗಳು ಇವರ ಜ್ಞಾನವನ್ನು ಬಳಸಿಕೊಂಡು ಲಾಭ ಮಾಡಿದ್ದು ಕಂಡು ಬಂದರೆ ಅವರಿಂದ ಲಾಭಾಂಶವನ್ನು ಜನಪದ ವೈದ್ಯರಿಗೆ ಕೊಡಿಸುವುದು. ಡಾ. ಸುದರ್ಶನ್ ಈ ಕೆಲಸ ಮಾಡಿದ್ದಾರೆ.

೩. ಕೊಂಡಿ ಯಾರು? ನಿಭಾಯಿಸುವುದು ಹೇಗೆ?

ಜನಪದ ವೈದ್ಯ ಶಿಕ್ಷಣದಲ್ಲಿ ನಿರತವಾಗಿರುವ ವಿದ್ಯಾರ್ಥಿಗಳು ಇಲ್ಲಿಯ ಜನಪದ ವೈದ್ಯವನ, ವೈದ್ಯರ ಮತ್ತು ವಿಶ್ವವಿದ್ಯಾನಿಲಯದ ನಡುವೆ ಕೊಂಡಿಯಾಗಿರುತ್ತಾರೆ. ಇವರು ನಿಗದಿತ ಪಠ್ಯಕ್ರಮದಂತೆ ವನದ ಮತ್ತು ವೈದ್ಯರ ಕುರಿತು ವರದಿಯನ್ನು ಸಿದ್ಧಪಡಿಸುವುದಲ್ಲದೆ ಅಲ್ಲಿ ಹೆಚ್ಚಿನ ಗಿಡ ನೆಡುವುದರ ಪ್ರಗತಿ ಮತ್ತು ಅಲ್ಲಿಗೆ ಬರುವ ರೋಗಿಗಳ ಅಭಿಪ್ರಾಯ ಸಂಗ್ರಹಣೆ, ಅಲ್ಲಿಯ ಮನೆ ಮದ್ದುಗಾರರನ್ನು ಗುರುತಿಸಿ ವರದಿ ಒಪ್ಪಿಸುವುದು, ಅವರ 'ಜ್ಞಾನ' ಸಂಗ್ರಹಣೆ, ಅಲ್ಲಿಯ ವೈದ್ಯರನ್ನು ವಿಶ್ವವಿದ್ಯಾನಿಲಯಕ್ಕೆ ಕರೆತಂದು

ತುರ್ತಾಗಿ ಕೈಗೊಳ್ಳಬೇಕಾದ ಕಾರ್ಯಗಳು

– ಸಿರಿಗಂಧ ಶ್ರೀನಿವಾಸಮೂರ್ತಿ

೧. ಜಾನಪದ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ರಾಜ್ಯಾದ್ಯಂತ ಅತ್ಯುತ್ತಮವಾದ ನೂರಾರು ಸಲಹೆ, ಸೂಚನೆ, ಮಾರ್ಗದರ್ಶನ ಬಂದಿದ್ದು ಅವುಗಳನ್ನು ಕಾರ್ಯಗತಗೊಳಿಸಲು ಹಗಲು ರಾತ್ರಿ ದುಡಿದರೂ ೨೫ ವರ್ಷಗಳೇ ಬೇಕಾಗುತ್ತದೆ. ನೂರಾರು ಕೋಟಿ ರೂಪಾಯಿಗಳ ಅನುದಾನವೂ ಸಾಲದಾಗುತ್ತದೆ. ವಿಶೇಷಾಧಿಕಾರಿಗಳು ಎಲ್ಲೆಲ್ಲಿ ಪೂರ್ವಭಾವಿ ಸಭೆ ನಡೆಸಿದ್ದಾರೋ ಅಲ್ಲೆಲ್ಲ ಜನಪದ ಸಂಸ್ಕೃತಿಯನ್ನು ಸಂರಕ್ಷಿಸಿಡುವ ಮತ್ತು ಪ್ರಸಾರ ಮಾಡುವ ವಿಚಾರಗಳೇ ಪ್ರಮುಖವಾಗಿ ಪ್ರಸ್ತಾಪಿತವಾಗಿವೆ. ಅಂದರೆ ಜನಸಮುದಾಯ ಕೂಡ ಸಂವಹನ ಮಾಧ್ಯಮಗಳ ಕಡೆ ನೋಡುತ್ತಿರುವುದು ಸ್ಪಷ್ಟವಾಗಿದೆ ಎಂದೇ ಅರ್ಥ. ಈ ನಿಟ್ಟಿನಲ್ಲಿ ನನ್ನದೊಂದು ಸಲಹೆ ಏನೆಂದರೆ ವಿಶ್ವವಿದ್ಯಾನಿಲಯ ತುರ್ತಾಗಿ ಅಂದರೆ ನಾಳೆಯಿಂದಲೇ ಕಾರ್ಯರೂಪಕ್ಕಿಳಿಸಬಹುದಾದ ಅಂಶಗಳನ್ನು ಟಿಪ್ಪಣಿ ಮಾಡಿದ್ದೇನೆ. ಇಂದಿನ ಸಂವಹನ (ಎಲೆಕ್ಟ್ರಾನಿಕ್ಸ್ ಮತ್ತು ಪ್ರಸಾರ) ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಹೇಗೆ ಜಾನಪದವನ್ನು ಸಂರಕ್ಷಿಸಬಹುದು ಹಾಗೂ ಜನರ ಬಳಿಗೆ ಆತ್ಮೀಯವಾಗಿ ಕೊಂಡೊಯ್ಯಬಹುದು ಮತ್ತು ಅದರ ಬಳಕೆಯನ್ನು ಹೇಗೆ ನಮ್ಮ ಬದುಕಿಗೆ ಇಂದು ಸಮರ್ಥವಾಗಿ ಅಳವಡಿಸಿಕೊಂಡು ನಮ್ಮ ಜನಪದ ಪರಂಪರೆಯನ್ನು ಕಾಪಾಡಿಕೊಳ್ಳಬಹುದೆಂಬುದಕ್ಕೆ ಇಲ್ಲಿ ಕೆಲವು ಕಿರು ಟಿಪ್ಪಣಿಗಳನ್ನು ನೀಡಲಾಗಿದೆ:

೨. ಇದುವರೆಗೂ ನಮ್ಮಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾಗಲಿ, ಅಕಾಡೆಮಿಗಳಾಗಲಿ, ಎಲೆಕ್ಟ್ರಾನಿಕ್ ಮಾಧ್ಯಮವನ್ನು, ಕಂಪ್ಯೂಟರ್ ಬಳಕೆಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ದಿವಂಗತರಾದ

ಆಗ ರಾಜಕೀಯಾದಿ ಬಾಹ್ಯ ಒತ್ತಡಗಳನ್ನು ತುಸು ತಡೆಗಟ್ಟಬಹುದು). ಒಬ್ಬ ಜಾನಪದ ವಿದ್ವಾಂಸರ ಸುಪರ್ದಿಯಲ್ಲಿ ಐದು ಜನ ಜನಪದ ವೈದ್ಯರು ಹಾಗೂ ಆ ವಿದ್ವಾಂಸರು ಸ್ಥಳೀಯವಾಗಿ ಗುರುತಿಸುವ ಕೆಲವು ಮನೆಮದ್ದುಗಾರ್ತಿಯರು ದಾಖಲೀಕರಣಕ್ಕೊಳಗಾಗುತ್ತಾರೆ.

೬. ಹೇಗೆ ದಾಖಲಿಸಬೇಕು?

ಅ. ಜನಪದ ವೈದ್ಯದಲ್ಲಿ ಆಸಕ್ತಿಯುಳ್ಳ, ಅದರ ಉತ್ಥಾನವನ್ನು ಆತ್ಮೀಯವಾಗಿ ಬಯಸುವ ಜಾನಪದ ಕ್ಷೇತ್ರಕಾರ್ಯ ತಜ್ಞರು ಸಸ್ಯಶಾಸ್ತ್ರ, ಮನುಷ್ಯ ಮತ್ತು ಪ್ರಾಣಿರೋಗ ತಜ್ಞರು ಔಷಧಶಾಸ್ತ್ರ ತಜ್ಞರು ಒಟ್ಟಿಗೆ ಕೂಡಿ ಜನಪದ ವೈದ್ಯವನ್ನು ದಾಖಲಿಸುವ ಕೆಲಸ ಮಾಡಿ ಎರಡನೆಯ ಹಂತದಲ್ಲಿ ಅದನ್ನು ವಿಶ್ಲೇಷಿಸುವ ಕಾರ್ಯಕ್ಕೆ ತೊಡಗಬಹುದು. ಈ ಜಾನಪದ ವಿದ್ವಾಂಸರು ನಡೆಸುವ ಅಧ್ಯಯನಾದಿಗಳಿಗೆ ಮೇಲೆ ತಿಳಿಸಿದ ತಜ್ಞರು ಮಾರ್ಗದರ್ಶಕರಾಗಿರುತ್ತಾರೆ. ಈ ಮಾರ್ಗದರ್ಶಕ ತಜ್ಞರ ಒಂದೆರಡು ಸೆಟ್‌ಗಳು ನಮ್ಮ ಬಳಿ ಕೆಲಸಕ್ಕೆ ಸಿದ್ಧವಿದ್ದರೆ ಸಾಕು. ಅವಶ್ಯವಿದ್ದಾಗ ಮಾತ್ರ ಇವರು ಕ್ಷೇತ್ರಕ್ಕೆ ಹೋಗಬೇಕು. ಮಾಗಡಿ ಗುರುದೇವ, ಡಾ. ಸತ್ಯನಾರಾಯಣ ಭಟ್‌ರಂಥವರ ಸಹಾಯ ಪಡೆಯಬಹುದು.

ಆ. ಸಾಕ್ಷ್ಯಚಿತ್ರ, ಜನಪದ ವೈದ್ಯಕ್ಕೆ ಸಂಬಂಧಪಟ್ಟಂತೆ ಈ ವೈದ್ಯರ ಎಲ್ಲ ಚಟುವಟಿಕೆಗಳ ಸಾಕ್ಷ್ಯಚಿತ್ರ ಮತ್ತು ಬರೆಹ ರೂಪದ ದಾಖಲೀಕರಣ ನಡೆಯಬೇಕು.

೭. ಇತರ ಕಾರ್ಯಗಳು:

ಕ. ಜನಪದ ವೈದ್ಯಪದಕೋಶ ರಚನೆ

ಜನಪದ ವೈದ್ಯದ ಅಧ್ಯಯನಕ್ಕೆ ನೆರವಾಗುವಂತೆ ಜನಪದ ವೈದ್ಯಕ್ಕೆ ಸಂಬಂಧಿಸಿದ ಹಲವು ಸಾವಿರ ಪ್ರಾದೇಶಿಕ ಶಬ್ದಗಳಿಗೆ ಚಿತ್ರಸಹಿತ ಅರ್ಥ ನೀಡಲು ಪ್ರಯತ್ನ ನಡೆಸುವುದರ ಜೊತೆಗೆ ಆಧುನಿಕ ಶಾಸ್ತ್ರೀಯ ಹೆಸರನ್ನು ನೀಡಿ ಜನಪದ ವೈದ್ಯ ಪದಕೋಶವನ್ನು ಸಿದ್ಧಗೊಳಿಸುವುದು (ಈ ಶಬ್ದಗಳನ್ನು ಆಯಾ ನಾಡ ಮದ್ದುಗಾರರು ಮತ್ತು ಮನೆ ಮದ್ದುಗಾರರಿಂದ ನೇರವಾಗಿ ಸಂಗ್ರಹಿಸಬೇಕು. ಮನೆಮದ್ದುಗಾರರ ಕೊಡುಗೆ ಅಪಾರವಾದದ್ದು. ನಾಡ ಮದ್ದುಗಾರರು ರೋಗ ಬಂದ ಮೇಲೆ ಗುಣಪಡಿಸುವ ಶಕ್ತಿಯುಳ್ಳವರಾಗಿದ್ದರೆ ಮನೆಮದ್ದುಗಾರರು ರೋಗ ಬರದಂತೆ ತಡೆಯುವ

ಒಗಟು ಒಡಪು, ಕುಣಿತಗಳ ವೈಖರಿ ಇತ್ಯಾದಿಗಳನ್ನು ಧ್ವನಿ ಮುದ್ರಿಸಿಕೊಳ್ಳಬೇಕು. ಹಾಗೆಯೇ ಅವರು ಬದುಕಿ ಬಾಳಿದ ಬಗ್ಗೆ ಅವರ ಕಲಾಜೀವನದ ಬಗ್ಗೆ ಸಂಕ್ಷಿಪ್ತ ಸಾಕ್ಷ್ಯಚಿತ್ರಗಳನ್ನು ತುರ್ತಾಗಿ ನಿರ್ಮಿಸಬೇಕು.

- ಸಂಗ್ರಹಿಸಿ, ಸಂಸ್ಕರಿಸಿ, ಸಂಕಲಿಸಿದ ಅತ್ಯುತ್ತಮ ಹಾಗೂ ಉಪಯುಕ್ತ ಮೂಲ ಧಾಟಿಯ ಜನಪದ ಸಾಹಿತ್ಯ, ಕಲೆಗಳ ಆಡಿಯೊ ವಿಡಿಯೊವನ್ನು ವಿಶ್ವವಿದ್ಯಾನಿಲಯ ಸಂರಕ್ಷಿಸಿ ಇಡುವುದಲ್ಲದೆ ಅದನ್ನು ಆಸಕ್ತರಿಗೆ ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕಲಿಸುವ ಅಥವಾ ತಿಳಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು.
- ಜಾನಪದ ವಿಶ್ವವಿದ್ಯಾನಿಲಯುವು ಮಾಡಬೇಕಾದ ಮತ್ತೊಂದು ತುರ್ತುಕಾರ್ಯವೇನೆಂದರೆ ಪ್ರತಿಯೊಬ್ಬ ಆಸಕ್ತ ನಾಗರಿಕನಿಗೂ ಅವನ ಮನೆಯಲ್ಲಿ ಅಥವಾ ಪರಿಸರದಲ್ಲಿ ದೊರಕುವ ವಸ್ತು ವಿಶೇಷಗಳು, ಕಥೆ, ಗಾದೆ, ಒಗಟು ಒಡಪುಗಳಲ್ಲಿ ಕಲೆಯ ವೈವಿಧ್ಯತೆಯನ್ನು ಛಾಯಾಚಿತ್ರ, ವಿಡಿಯೊ, ಆಡಿಯೊ ಮಾಡಿ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸುವ ಆಕರ್ಷಕ ಯೋಜನೆಯನ್ನು ರೂಪಿಸಬೇಕು. ಇದನ್ನು ಸಾಮೂಹಿಕ ಕಾರ್ಯಕ್ರಮವಾಗಿ ವರ್ಷವಿಡೀ ಹಮ್ಮಿಕೊಳ್ಳಬೇಕು.
- ಈಗಾಗಲೇ ಅನೇಕ ವ್ಯಕ್ತಿಗಳು, ಸಂಘ ಸಂಸ್ಥೆಗಳು ತಮ್ಮ ವಶದಲ್ಲಿರುವ, ಸಂರಕ್ಷಿಸಿರುವ, ದಾಖಲಿಸಿರುವ ಜಾನಪದ ಪರಂಪರೆಗೆ, ಸಂಸ್ಕೃತಿಗೆ ಸಂಬಂಧಪಟ್ಟ ಎಲ್ಲಾ ಛಾಯಾಚಿತ್ರಗಳನ್ನು, ಆಡಿಯೊ ವಿಡಿಯೊಗಳನ್ನು, ಸಾಕ್ಷ್ಯಚಿತ್ರಗಳನ್ನು, ವ್ಯಕ್ತಿ ಚಿತ್ರಗಳನ್ನು, ವಸ್ತು ಚಿತ್ರಗಳನ್ನು ಸೂಕ್ತ ಗೌರವ ಸಂಭಾವನೆ ನೀಡಿ ಸಂಗ್ರಹಿಸಲು ಮುಂದಾಗಬೇಕು.
- ಅರ್ಹ ಅನುಭವಿ ತಂತ್ರಜ್ಞರನ್ನು ಮತ್ತು ತಜ್ಞರನ್ನು ಕೂಡಲೆ ತಾತ್ಕಾಲಿಕವಾಗಿಯಾದರೂ ನೇಮಿಸಿಕೊಂಡು ದಾಖಲೀಕರಣದ ಕಾರ್ಯಕ್ಕೆ ಚಾಲನೆ ನೀಡಬೇಕು. ತಾತ್ಕಾಲಿಕವಾಗಿ ಹಾಗೂ ವೈಜ್ಞಾನಿಕವಾಗಿ ಸಂರಕ್ಷಿಸಿ ಇಡುವ ವಿಧಾನವನ್ನು ಅನುಸರಿಸಿ ಸಂಗ್ರಹಿಸಿಡಬೇಕು. ವಿಶ್ವವಿದ್ಯಾನಿಲಯ ತನ್ನ ಸ್ವಂತ ಕಟ್ಟಡ (ಸ್ಟುಡಿಯೋ ಮತ್ತಿತರ) ಮಾಡಿಕೊಳ್ಳಲು ವರ್ಷಗಳೇ ಬೇಕಾಗುವುದರಿಂದ ಸಾಧ್ಯವಾದಷ್ಟು ಈ ಕ್ಷೇತ್ರದಲ್ಲಿ ಕೆಲಸ ಮಾಡಬೇಕು.

ಆದ್ದರಿಂದ ಘನತೆವೆತ್ತ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯವು ಜನಪದ ವೈದ್ಯಕ್ಕೆ ನಿರ್ದಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟು ಮೇಲೆ ಬರೆದ ಅನುಕೂಲತೆ ಕಲ್ಪಿಸಿಕೊಡುತ್ತ ಇದರ ಯೋಗಕ್ಷೇಮದತ್ತ ಗಮನ ಹರಿಸಬೇಕಾದದ್ದು ಅಗತ್ಯವಾಗಿದೆ.

ಆ. ಈ ಮೊದಲು ಜನಪದ ವೈದ್ಯದ ಸ್ಥಿತಿಗತಿಗಳ ಬಗ್ಗೆ ತಿಳಿಯುವುದು ಅವಶ್ಯವಾಗಿದೆ.

೧. ಜನಪದ ವೈದ್ಯ –ಯಾವುದು? ಅದರ ವ್ಯಾಪ್ತಿ ಯಾವುದು?

ಕೆಲವರು ತಿಳಿದಿರುವಂತೆ ಇದು ಆಯುರ್ವೇದವಲ್ಲ. ಅದರ ತಾಯಿ.

೨. ಆಯುರ್ವೇದ ಯಾವುದು? ಅದರ ವ್ಯಾಪ್ತಿ ಯಾವುದು?

ಸುಶ್ರುತ, ಚರಕಾದಿ ಋಷಿ ಮುನಿಗಳ ಕಾಲಘಟ್ಟಕ್ಕೆ ಸೀಮಿತವಾದ ಮತ್ತು ಆ ಕಾಲಕ್ಕೆ ಅಕ್ಷರ ರೂಪಕ್ಕಿಳಿದ ಜ್ಞಾನ ನಿಧಿ ಅದು.

೩. ಆಯುರ್ವೇದೋತ್ತರ ಆಯುರ್ವೇದ (ಮೂರನೆಯದು ಮುಂದುವರಿದ ಆಯುರ್ವೇದ; ಅಥವಾ ಪ್ರಾಚೀನ ಆಯುರ್ವೇದದ ವಿಶೇಷ ರೀತಿಯ ಮುಂದುವರಿದ ರೂಪ) ಯಾವುದು? ಅದರ ವ್ಯಾಪ್ತಿ ಯಾವುದು? ಆರ್.ಎಮ್.ಪಿ. ತರಬೇತು ಪಡೆದಿರುವ ಜನಪದ ವೈದ್ಯರಿಗೆ ಯಾವ ಸ್ಥಾನ ನೀಡಬೇಕು?

ಮೂರನೆಯದು ಚರಕ ಸುಶ್ರುತಾದಿ ಋಷಿ ಮುನಿಗಳ ಪ್ರಾಚೀನ ಆಯುರ್ವೇದ ಗ್ರಂಥಗಳ ಓದು ಅವುಗಳ ಟೀಕೆ ಟಿಪ್ಪಣಿ ವಿಮರ್ಶೆಗಳ ಅಧ್ಯಯನ, ಪ್ರಾತ್ಯಕ್ಷಿಕೆ, ಅನುಭವ, ಆ ಕುರಿತ ತರಬೇತಿ, ಮೂಲಿಕಾತಜ್ಞರ ನಾಡ ವೈದ್ಯರ ಮನೆಮದ್ದುಗಾರರ ಒಡನಾಟ ಇತ್ಯಾದಿಗಳಿಂದ ಪೂರ್ಣಗೊಂಡು ಪರಂಪರಾಗತ ವೈದ್ಯದ ಹೆಸರಿನಲ್ಲಿ ಪ್ರಚಾರದಲ್ಲಿರುವ 'ಜ್ಞಾನ'. ಇಲ್ಲಿ ಕಿವಿಯಿಂದ ಕಿವಿಗೆ ಸಾಗಿಬಂದ ಜನಪದ ವೈದ್ಯವೂ ಇದೆ. ಇತರ ವೈದ್ಯವೂ ಇದೆ. ಇಲ್ಲಿ ಸಸ್ಯಜನ್ಯ ಮದ್ದು ಎಣ್ಣೆಗಳೆಲ್ಲ ಆಯುರ್ವೇದವೆಂದು ತಿಳಿಯಲಾಗುತ್ತದೆ.

೪. ಈ ಮೂರು ಬಗೆಯ ವೈದ್ಯದಲ್ಲಿ ಜನಪದ ವೈದ್ಯ ಯಾವುದು? ಜನಪದ ವೈದ್ಯ ಯಾರು? ಗುರುತಿಸುವ ಬಗೆ ಹೇಗೆ?

- ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಸ್ವತ್ತುಗಳನ್ನು ಪರಂಪರೆಯ ಸ್ವತ್ತುಗಳೆಂದು ಘೋಷಿಸಿ ಸಂರಕ್ಷಿಸುವ ರೀತಿಯಲ್ಲಿ ಜಾನಪದ ಪರಂಪರೆಯ ವಸ್ತು ವಿಶೇಷಗಳನ್ನು ಘೋಷಿಸಿ ಸಂರಕ್ಷಿಸಬೇಕು ಅದರ ಉಸ್ತುವಾರಿ ವಿಶ್ವವಿದ್ಯಾನಿಲಯಕ್ಕೆ ಬಿಡಬೇಕು.
- ನಮ್ಮ ಮೌಲಿಕ, ಮೌಖಿಕ ಮತ್ತು ಸಾಂಸ್ಕೃತಿಕ ಜಾನಪದ ಪರಂಪರೆಯನ್ನು ಸಂರಕ್ಷಿಸಿ ಕಾಪಾಡಲು ಜಾನಪದ ವಿಶ್ವವಿದ್ಯಾನಿಲಯ ಸಾರ್ವಜನಿಕರಲ್ಲಿ ಸಮೂಹ ಅರಿವು ಮೂಡಿಸುವತ್ತ ಚಿಂತನೆ ನಡೆಸಬೇಕು ಮತ್ತು ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಮತ್ತು ಸಮರ ಕಲೆಗಳು ಹಾಗೂ ಗ್ರಾಮೀಣ ಸಾಹಸ ಕ್ರೀಡೆಗಳನ್ನು ಉಳಿಸಿ ಬೆಳೆಸಬೇಕಾಗಿದ್ದು, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ ಈ ಕೆಳಕಂಡ ನಿಲುವುಗಳನ್ನು ತೆಗೆದುಕೊಳ್ಳಬೇಕಾಗಿದೆ:

- ತನ್ನ ಪಠ್ಯದಲ್ಲಿ ಈ ಕಲೆಗಳನ್ನು ಸೇರ್ಪಡಿಸುವುದು.
- ಕ್ಷೇತ್ರಕಾರ್ಯ ಸಂಶೋಧನೆ, ಅಧ್ಯಯನಕ್ಕೆ ಆದ್ಯತೆ ನೀಡುವುದು.
- ಈ ವಿಷಯ ಕುರಿತು ಪಠ್ಯವನ್ನು ಸಿದ್ಧಪಡಿಸುವುದು.
- ದೀರ್ಘಾವಧಿ ಕೋರ್ಸ್‌ಗಳನ್ನು ಪ್ರಾರಂಭಿಸುವುದು.
- ಅಲ್ಪಾವಧಿ ಕೋರ್ಸುಗಳನ್ನು ಪ್ರಾರಂಭಿಸುವುದು.
- ಪ್ರದರ್ಶನಕ್ಕೆ ಹೆಚ್ಚು ಒತ್ತುಕೊಡುವುದು.
- ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಸಾಂಸ್ಕೃತಿಕ ವಿನಿಯಮಕ್ಕೆ ಆದ್ಯತೆ ನೀಡುವುದು.
- ರಾಷ್ಟ್ರದ ಎಲ್ಲ ಜನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆಗಳ ಹಾಗೂ ಸಮರ ಕಲೆಗಳ ಅಂತರಶಿಸ್ತೀಯ ಅಧ್ಯಯನಕ್ಕೆ ಅವಕಾಶ ನೀಡುವುದು.

ದಯಮಾಡಿ ಈ ಎಲ್ಲಾ ವಿಚಾರಗಳ ಕುರಿತು ಮಂಥನ ನಡೆಸಿ ಈ ಎಲ್ಲಾ ವಿಚಾರಗಳಿಗೂ ಆದ್ಯತೆ ನೀಡುವುದರ ಮೂಲಕ ಜನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆ ಹಾಗೂ ಸಮರ ಕಲೆಗಳು ಮತ್ತು ಗ್ರಾಮೀಣ ಸಾಹಸ ಕ್ರೀಡೆಗಳಿಗೆ ಮಾನ್ಯತೆ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ದಿನಾಂಕ:೧೩.೧೨.೨೦೧೦

112

- ಎದೆಯ ಮೇಲೆ ಚಪ್ಪಡಿ ಕಲ್ಲುಗಳನ್ನು ಹೊಡೆಸಿಕೊಳ್ಳುವುದು.
- ಎದೆಯ ಮೇಲೆ ರಾಗಿ ಗುಂಡು (ರೋಣ) ಉರುಳಿಸಿಕೊಳ್ಳುವುದು.
- ಹಲ್ಲು ಮತ್ತು ಮೀಸೆಯಿಂದ ಭಾರ ಎತ್ತುವುದು.
- ಹಲ್ಲಿನಿಂದ ಭಾರ ಎತ್ತಿ ಹಿಂದಕ್ಕೆ ಎಸೆಯುವುದು.
- ಹಲ್ಲಿನಿಂದ ವಾಹನವನ್ನು ಎಳೆಯುವುದು.
- ಅಶ್ವಾರೂಢ ಸಾಹಸ ಕಲೆ ಹಾಗೂ ಇತರ ವಿದ್ಯೆಗಳು.

ಆ. ಸಮರ ಕಲೆಗಳು:

- ವಜ್ರಮುಷ್ಠಿ ಕಾಳಗ.
- ಗದಾಯುದ್ಧ.
- ಮಲ್ಲಯುದ್ಧ.
- ದೃಷ್ಟಿಯುದ್ಧ.
- ಕತ್ತಿ ವರಸೆ.
- ಜಲಯುದ್ಧ.
- ದೊಣ್ಣೆ ವರಸೆ.
- ಚಡಿ ವರಸೆ.
- ಮಾನ್ ಕೊಂಬು ವರಸೆ.
- ಬಿಜಲಿ ವರಸೆ.
- ಬರ್ಜಿ ವರಸೆ.
- ಬಾಕು ವರಸೆ ಇತ್ಯಾದಿ ಕೈವರಸೆಗಳು.

ಇಂತಹ ಅನೇಕ ಜನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆಗಳ ಬಗ್ಗೆ ಗಮನವೇ ಇಲ್ಲವಾಗಿದೆ. ಸಂಸ್ಕೃತಿಯ ಭಾಗವೆಂದಾಗಲಿ ಕ್ರೀಡೆಯೆಂದಾಗಲಿ, ಪರಿಗಣಿಸದೆ ಯಾವ ಇಲಾಖೆಗಳ ಅಡಿಯಲ್ಲಿಯೂ ಇವುಗಳಿಗೆ ಆಶ್ರಯವಿಲ್ಲದಾಗಿದೆ. ಆದ್ದರಿಂದ ಇವುಗಳ ಕುರಿತು,

ವಿಶ್ವವಿದ್ಯಾನಿಲಯವನ್ನು ಹಿರೇ ಮೈಲಾರ / ಗೋಕಾಕ ಭಾಗದಲ್ಲಿ / ಇಂಡಿ–ಚಡಚಣ, ಅಜ್ಜಂಪುರ ಸಮೀಪ ಅಮೃತ್ ಮಹಲ್ ಕಾವಲ್ – ಹಣ್ಣೆ ಗುಡ್ಡದಲ್ಲಿ / ಬಸವಕಲ್ಯಾಣ / ಕೂಡಲಸಂಗಮದಲ್ಲಿ ಸ್ಥಾಪಿಸಬಹುದು. ವಿಶ್ವವಿದ್ಯಾನಿಲಯದ ಕಟ್ಟಡಗಳು Thatched Roofs ಗಳಿರುವಂತೆ ನೋಡಿಕೊಳ್ಳಬೇಕು. ಕ್ಯಾಂಪಸ್ಸಿನ ಕೇಂದ್ರ (Centre) ದಲ್ಲಿ ವಿಶಿಷ್ಟವಾದ ಗ್ರಾಮ (Typical Village) ಇರುವಂತೆ – ಮಕ್ಕಳು ಕಲಿಯುವಂತಿರಬೇಕು. ಪ್ರವಾಸಿ ಕೇಂದ್ರವಾಗಿ ಪರಿವರ್ತಿತವಾಗುವಂತೆ ಮಾಡಬೇಕು.

ದಿನಾಂಕ: ೦೮.೧೦.೨೦೧೦

ಸಾಹಸ ಮತ್ತು ಸಮರ ಕಲೆಗಳಿಗೆ ಮನ್ನಣೆ ಇರಲಿ

– ಹಾಸನ ರಘು

ಮಾನ್ಯರೇ,

ಕರ್ನಾಟಕ ಸರ್ಕಾರವು ಪ್ರಪಂಚದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿರುವುದು ಶ್ಲಾಘನೀಯ ವಿಚಾರ. ಈ ವಿಶ್ವವಿದ್ಯಾನಿಲಯಕ್ಕೆ ಜಾನಪದ ವಿದ್ವಾಂಸರು, ಪಂಡಿತರು, ಚಿಂತಕರು ಆದ ಘನತೆವೆತ್ತ ತಾವು ವಿಶೇಷಾಧಿಕಾರಿಗಳಾಗಿ ಕರ್ನಾಟಕ ಸರ್ಕಾರದಿಂದ ನೇಮಿತವಾಗಿರುವುದು ಸಂತಸ ತಂದಿದೆ. ತಮ್ಮನ್ನು ಅಭಿನಂದಿಸಲು ಸಂತೋಷವಾಗುತ್ತಿದೆ.

ಜಾನಪದ ವಿಶ್ವವಿದ್ಯಾನಿಲಯದ ರೂಪುರೇಷೆಗಳ ಬಗೆಗೆ ಚರ್ಚಿಸಲು ನನ್ನನ್ನು ಆಹ್ವಾನಿಸಿರುವುದು ಕರ್ನಾಟಕ ಜಾನಪದ ಹಾಗೂ ಸಾಂಪ್ರದಾಯಿಕ ಸಾಹಸ ಕಲೆಗಳು, ಸಮರ ಕಲೆಗಳು ಹಾಗೂ ಗ್ರಾಮೀಣ ಸಾಹಸ ಕ್ರೀಡೆಗಳನ್ನು ಪ್ರತಿನಿಧಿಸಲು ಅನುವು ಮಾಡಿಕೊಟ್ಟಿದೆ. ಅದಕ್ಕಾಗಿ ತಮಗೆ ಆಭಾರಿಯಾಗಿರುತ್ತೇನೆ. ತಾವು ದಿನಾಂಕ: ೧೦.೧೨.೨೦೧೦ ರಂದು ಕರೆದಿರುವ ಸಭೆಗೆ ನನ್ನ ಅನಾರೋಗ್ಯದ ನಿಮಿತ್ತ ಹಾಜರಾಗಲು ಸಾಧ್ಯವಾಗಿರುವುದಿಲ್ಲ. ಈ ಕೆಳಕಂಡ ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ:

ರಾಷ್ಟ್ರ ಮಟ್ಟದಲ್ಲಿ ಜನಪದ ಕಲೆಗಳ (ಲೋಕಕಲಾ) ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಯಾವುದೇ ಅಕಾಡೆಮಿ ಅಸ್ತಿತ್ವದಲ್ಲಿರುವುದಿಲ್ಲ. ಇದರ ಬಗ್ಗೆ ಯಾರೂ ಸಹ ಚಿಂತನೆ ನಡೆಸಿರುವುದಿಲ್ಲ. ಆದರೆ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ರಾಷ್ಟ್ರೀಯ ಮಟ್ಟದ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಅಡಿಪಾಯವಿಟ್ಟಿರುವುದು ಇತಿಹಾಸ ಸೃಷ್ಟಿಸಿದೆ.

ಕರ್ನಾಟಕವು ಹಲವಾರು ಜನಪದ ಕಲೆಗಳ ತವರೂರು. ಹಾಗೆಯೇ ಜಾನಪದ ಹಾಗೂ ಸಾಂಪ್ರದಾಯಿಕ ಸಾಹಸ ಮತ್ತು ಸಮರ ಕಲೆ ಹಾಗೂ ಗ್ರಾಮೀಣ ಸಾಹಸ ಕ್ರೀಡೆಗಳ ತಾಣ. ಈ ಎಲ್ಲಾ ಕಲೆಗಳು ಕರ್ನಾಟಕ

ಪರಂಪರಾಜ್ಞಾನವನ್ನು ಸಂಗತಗೊಳಿಸುವುದು ಅಗತ್ಯ

– ಚಂದ್ರಶೇಖರ ಕಂಬಾರ

ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಸಂಬಂಧವಾಗಿ ಹಕ್ಕೊತ್ತಾಯ ಮಾಡಲು ಗೊ ರು ಚ ನೇತೃತ್ವದ ಬಣ (ಜಿ. ನಾರಾಯಣ, ದೇ ಜ ಗೌ, ಮುಖ್ಯಮಂತ್ರಿ ಚಂದ್ರು, ಡಿ.ಲಿಂಗಯ್ಯ ಮುಂತಾದವರು) ದಲ್ಲಿ ನಾನೂ ಇದ್ದೆ. ಈ ಎಲ್ಲ ಹಿರಿಯರ ಅಭಿಲಾಷೆಗೆ ನಾನು ಕೂಡ ಒತ್ತಾಸೆಯಾಗಿದ್ದೆ.

ಈಗ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಪ್ರಶ್ನೆ ಎಂದರೆ ಜಾನಪದವನ್ನು ಉಳಿಸುವುದು ಹೇಗೆ? ಏಕೆ? ಮತ್ತು ಅದನ್ನು ಬೆಳೆಸುವುದು ಹೇಗೆ? ಏಕೆ? ಈ ನಿಟ್ಟಿನಲ್ಲಿ ಅನೌಪಚಾರಿಕವಾಗಿ ತಜ್ಞರೊಡನೆ ಸಂವಾದ ನಡೆಸಬೇಕು. ಜಾನಪದದಲ್ಲಿ ಮುಖ್ಯವಾಗಿ ಮೌಖಿಕತೆ (Orality) ಗೆ ಒತ್ತು ಇರುವುದರಿಂದ ಅಕ್ಷರ ಕಲಿಕೆ ಬಂದಂದಿನಿಂದ ಮೌಖಿಕ ಸಾಹಿತ್ಯ ಪಾರಂಪರಿಕವಾಗಿ ಉಳಿದು ಬರುವುದು ಕಷ್ಟ, ದಲಿತರಲ್ಲಿ ಪ್ರಚಲಿತವಿರುವ ಸಾಹಿತ್ಯವನ್ನು ಉಳಿಸೋಕೆ ಯಾರು ಬಂದಾರು? ಜೋಗತೇರ ಹಾಡನ್ನು ಕೇಳಲು ಅವರ ಕುಟುಂಬದವರೇ ತಯಾರಿಲ್ಲ. ಬೇರೆಯವರು ಏಕೆ ಆಸ್ಥೆ ತೋರಿಸುತ್ತಾರೆ? ರಾಜಕಾರಣ– ರಾಜಕೀಯ ಭಾಷಣಗಳು, ಯಕ್ಷಗಾನದಲ್ಲಿ ಮೌಖಿಕತೆ ಪ್ರಜ್ವಲಿಸುವಂತೆ–ಇಂದಿಗೂ ಅವು ಚೈತನ್ಯದಾಯಕವಾಗಿದ್ದು ಚೇತೋಹಾರಿ ಪ್ರಯೋಗಗಳನ್ನು ನೀಡುವಂತೆ–ಕರ್ನಾಟಕದ ಇತರೆ ಯಾವ ಕಲೆಗಳು, ಸಂಸ್ಕೃತಿ ಸಜೀವವಾಗಿವೆ? ಜನರಿಂದ ಆಕರ್ಷಿತವಾಗಿವೆ? ಯಕ್ಷಗಾನ ಕಲೆಗೆ ಸಮಾಜದಲ್ಲಿ ಗೌರವ ಮನ್ನಣೆ ಇದೆ. ೧೦ ವರ್ಷಗಳಿಗೆ ಯಕ್ಷಗಾನ ತಂಡಗಳು (Troupes) ಮುಂದಾಗಿಯೇ book ಆಗಿವೆ. ಕಂಸಾಳೆ, ವೀರಗಾಸೆ, ಡೊಳ್ಳು ಕಲೆಗಳೇಕೆ ಯಕ್ಷಗಾನದಂತೆ ವೀಕ್ಷಕರನ್ನು ಆಕರ್ಷಿಸುತ್ತಿಲ್ಲ? ವಾಸ್ತವವಾಗಿ, ಉತ್ತರ ಕರ್ನಾಟಕದಲ್ಲಿ ಪ್ರಚುರವಾಗಿರುವ ಸಣ್ಣಾಟ, ದೊಡ್ಡಾಟ, ಗೊಂಬೆಯಾಟದ ಪ್ರದರ್ಶನಗಳನ್ನು ಮೊದಲಿಗೆ ಬ್ರಾಹ್ಮಣ ಸಮಾಜದವರು

ಅವಕಾಶ ಒದಗಿಸುವಂತಾಗಬೇಕು. ಇದರಿಂದ ಕಲೆ ಮತ್ತು ಕಲಾವಿದರ ಬೆಳವಣಿಗೆಯಾಗುತ್ತದೆ. ಮತ್ತು ಕಲಾವಿದರ ಸಾಮಾಜಿಕ ಆರ್ಥಿಕ ಸ್ಥಿತಿ-ಗತಿಯೂ ಸುಧಾರಿಸುತ್ತದೆ.

- ಜನಪದ ವೈದ್ಯಕ್ಕೆ ಸಂಬಂಧಿಸಿದಂತೆ ದಾಖಲೀಕರಣದೊಂದಿಗೆ ವೈದ್ಯಕೀಯ ದೃಢೀಕರಣ, ಪೇಟೆಂಟ್ ಮುಂತಾದವುಗಳನ್ನು ಕುರಿತು ಕೂಲಂಕಷ ವಿಚಾರಗಳಾಗುವುದು ಸೂಕ್ತ.

- ಪ್ರಸ್ತುತ ಜಾನಪದ ವಿಶ್ವವಿದ್ಯಾನಿಲಯ, ಅಂತಾರಾಷ್ಟ್ರೀಯ ಮಟ್ಟದ ಜಾನಪದ ಅಧ್ಯಯನ ಕೇಂದ್ರಗಳೊಂದಿಗೆ ಸಂಪರ್ಕ ಕಲ್ಪಿಸಿ ಜಾಗತಿಕ ಮಟ್ಟದಲ್ಲಿ ತೌಲನಿಕ ಅಧ್ಯಯನಗಳಿಗೆ, ವಿನಿಮಯ ಕಾರ್ಯಗಳಿಗೆ, ಜಂಟಿ ಅಧ್ಯಯನಗಳಿಗೆ ಸಹಾಯಕವಾಗಿ, ಸಂಪರ್ಕಸೇತುವೆಯಾಗಿ ಕಾರ್ಯನಿರ್ವಹಿಸಬೇಕು.

- ಭಾರತದಲ್ಲಿಯೇ ಜಾನಪದ ಅಧ್ಯಯನದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಇಲ್ಲಿ ನಡೆದ ಅಧ್ಯಯನಗಳು ಇತರ ರಾಜ್ಯ, ದೇಶದವರಿಗೆ ತಿಳಿಯಬೇಕು. ಅಲ್ಲಿಯ ಅಧ್ಯಯನಗಳು ಕನ್ನಡದವರಿಗೆ ಗೊತ್ತಾಗಬೇಕು. ಇದಕ್ಕಾಗಿ ಜಾನಪದ ಅನುವಾದದ ಕೆಲಸವನ್ನೂ ವಿಶ್ವವಿದ್ಯಾನಿಲಯ ಆದ್ಯತೆಯ ಮೇರೆಗೆ ಕೈಕೊಳ್ಳಬೇಕು.

- ಜಾನಪದ ಸಂಗ್ರಹ, ಪ್ರಕಟಣೆ ಅಧ್ಯಯನಗಳೊಂದಿಗೆ ಗ್ರಾಮಕೋಶಗಳು, ಸಾಂಸ್ಕೃತಿಕ ಪದಕೋಶಗಳು, ವಿಶ್ವಕೋಶಗಳು ಇತ್ಯಾದಿ ರಚನೆಯಾಗಬೇಕು. ಕೋಶಗಳ ರಚನೆ ಮತ್ತು ಅನುವಾದಗಳು ವಿಶ್ವವಿದ್ಯಾನಿಲಯದ ನಿರಂತರ ಚಟುವಟಿಕೆಗಳಲ್ಲಿ ಒಂದಾಗಿ ಪರಿಣಮಿಸಬೇಕು.

- ಜಾನಪದ ಎಲ್ಲ ಹಂತದಲ್ಲಿಯೂ ಬೋಧನೆಯ ವಿಷಯವಾಗುವಂತೆ ಗಮನವಹಿಸಬೇಕು. ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಿಗೆ ನೆಲದ ಸಂಸ್ಕೃತಿಯ ಪರಿಚಯ, ಅಭಿಮಾನ ಮೂಡಿಸುವ ಕಾರ್ಯವಾಗಬೇಕು. ಮುಂದೆ ಹಂತ ಹಂತವಾಗಿ ಪದವಿ ಪೂರ್ವ ಹಾಗೂ ಸ್ನಾತಕೋತ್ತರ ಶಿಕ್ಷಣದಲ್ಲಿ ಜಾನಪದ ಅಳವಡಿಕೆ, ಬೋಧನೆಯ ಸ್ವರೂಪ, ಪರಿಣಾಮ ಯಾವ ರೀತಿಯಾಗಿರಬೇಕೆಂಬುದನ್ನು ಗಂಭೀರವಾಗಿ ಹಾಗೂ ಕೂಲಂಕಷವಾಗಿ ವಿಚಾರಿಸಿ, ಅನುಷ್ಠಾನಕ್ಕೆ ತರುವ ಕೆಲಸವನ್ನೂ ತೀವ್ರವಾಗಿ ಮಾಡಬೇಕು.

ಹಿಂದುಳಿದವರು ನೆಲೆಸಿರುವೆಡೆಯಲ್ಲಿ ಸ್ಥಾಪನೆಯಾಗಲಿ

– ಎಚ್. ಜೆ. ಲಕ್ಕಪ್ಪಗೌಡ

ಆದಿವಾಸಿಗಳು, ಹಿಂದುಳಿದ ವರ್ಗಗಳು ನೆಲೆಸಿರುವೆಡೆಗಳಲ್ಲಿ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿ.

ಚಾಮರಾಜನಗರದಲ್ಲಿ ಸ್ಥಾಪನೆ ಮಾಡುವುದಾದರೆ:

- ಮೂಲಭೂತ ಸೌಕರ್ಯದ ಕೊರತೆ ಇದೆ.
- ಆದರೆ ಹಿಂದುಳಿದ ಜನ / ವರ್ಗದ ಜನ ಇದ್ದಾರೆ.
- ಹಿಂದುಳಿದ ಪ್ರದೇಶ ಅದು.
- ಹಿಂದುಳಿದ ಜನರನ್ನು ಅಭಿವೃದ್ಧಿ ಪಥದಲ್ಲಿ ನಡೆಸಲು ವಿಶ್ವವಿದ್ಯಾನಿಲಯ ಆಗಬೇಕು.
- ಜನಪದ ಸಂಸ್ಕೃತಿಯನ್ನು ಉಳಿಸಲು–ಬೆಳೆಸಲು ವಿ.ವಿ. ಅಗತ್ಯ.
- ಈ ವಿಶ್ವವಿದ್ಯಾನಿಲಯಕ್ಕೆ ಕಲಿತವರೇ ಬರಬೇಕಾಗಿಲ್ಲ; ಪ್ರತಿಭೆ ಇರುವ ಯಾರು ಬೇಕಾದರೂ ಬರಬಹುದು.

ಆದ್ಯತೆಗಳು:

- ಮೊದಲು ಜಾನಪದ ಗ್ರಂಥಾಲಯ ಆಗಬೇಕು.
- ಮೊದಲ ಸ್ತರದಲ್ಲಿ ಸಂಗ್ರಹ, ವರ್ಗೀಕರಣ ಅನಂತರ ವಿವೇಚನೆ, ವಿಶ್ಲೇಷಣೆ ನಡೆಯಬೇಕು.
- ಭಾಷೆ ಸೊಗಡು ಕೆಡದಂತೆ ಮೂಲ ಸ್ವರೂಪದಲ್ಲೇ ಸಾಹಿತ್ಯವನ್ನು ದಾಖಲೀಕರಿಸಬೇಕು.
- ಜಾನಪದದ ವೈಜ್ಞಾನಿಕ ಅರಿವು ಇರುವವರು ತೊಡಗಿಸಿಕೊಳ್ಳುವಂತೆ ಆಯ್ಕೆ ಇರಬೇಕು.

ಜಾನಪದದ ವ್ಯಾಪಾರೀಕರಣ ಆಗದಿರಲಿ

– ಶಾಲಿನಿ ರಘುನಾಥ

ಮಾನ್ಯರೆ,

ಈ ಹಿಂದೆ ಮಾನ್ಯ ಗೊ.ರು.ಚ ಅವರಿಗೆ ಕಳಿಸಿದ್ದ 'ಜಾನಪದ ವಿಶ್ವವಿದ್ಯಾನಿಲಯ–ಪರಿಕಲ್ಪನೆ' ವಿವರಗಳನ್ನು ನಿಮಗೀಗ ಮತ್ತೊಮ್ಮೆ ಕಳಿಸುತ್ತಿದ್ದೇನೆ. ವಿಶ್ವವಿದ್ಯಾನಿಲಯದ ಆರಂಭದ ಚಟುವಟಿಕೆಗಳೊಂದಿಗೆ ಮುಖ್ಯವಾಗಿ ಎರಡು ಕೆಲಸಗಳಿಗೆ ಹೆಚ್ಚಿನ ಗಮನವನ್ನು ನೀಡಬೇಕೆಂದು ನನ್ನ ಅನ್ನಿಸಿಕೆ:

- ಕರ್ನಾಟಕದ ಪ್ರತಿಯೊಂದು ಹಳ್ಳಿಯಲ್ಲೂ ಕ್ಷೇತ್ರಕಾರ್ಯವಾಗಬೇಕು. ಮತ್ತು ಮಾಹಿತಿಗಳ ಸಮಗ್ರ ದಾಖಲೀಕರಣವಾಗಬೇಕು.
- ಪ್ರಾಥಮಿಕ ಹಂತದಿಂದ ಹಿಡಿದು, ವಿಶ್ವವಿದ್ಯಾನಿಲಯದವರೆಗೆ ಜಾನಪದ ಬೋಧನೆಗೆ ಅವಕಾಶ ದೊರೆಯುವಂತೆ ಪ್ರಯತ್ನಿಸಬೇಕು. ಪ್ರಾಥಮಿಕ ಹಂತದಲ್ಲಿ ಜಾನಪದ ಅನೇಕ ವಿಷಯಗಳ ಬೋಧನೆಗೆ ಮಾಧ್ಯಮವಾಗುವಂತಾದರೆ ಒಳಿತು (ಜನಪದ ಹಾಡು, ಕುಣಿತ, ಆಟ ಇತ್ಯಾದಿ ಮಾಧ್ಯಮಗಳ ಮೂಲಕ).

ಜಾನಪದ ವಿಶ್ವವಿದ್ಯಾನಿಲಯ – ಪರಿಕಲ್ಪನೆ

- ಕರ್ನಾಟಕದ ಉಳಿದ ಎಲ್ಲ ವಿಶ್ವವಿದ್ಯಾನಿಲಯಗಳಿಗಿಂತ ಸ್ವರೂಪ ಮತ್ತು ಕಾರ್ಯವ್ಯಾಪ್ತಿಗಳಲ್ಲಿ ಇದು ಭಿನ್ನವಾದದ್ದು. ನಿಜ ಹೇಳಬೇಕೆಂದರೆ ಇತರ ಎಲ್ಲ ವಿಶ್ವವಿದ್ಯಾನಿಲಯಗಳಿಗಿಂತ ಮೊದಲು ಇದು ಅಸ್ತಿತ್ವಕ್ಕೆ ಬರಬೇಕಾಗಿತ್ತು.
- ಸಮಗ್ರ ಅಧ್ಯಯನದ ಮೂಲಕ ಸಮಷ್ಟಿ ಅಭಿವೃದ್ಧಿ ಇದರ ಗುರಿಯಾಗಬೇಕು. ಅಂದರೆ ಇದರಲ್ಲಿ ಮಾನವ ಜೀವನದ ಅಧ್ಯಯನವಷ್ಟೇ ಅಲ್ಲದೆ, ಪ್ರಾಣಿ ಪ್ರಪಂಚ, ಸಸ್ಯಪ್ರಪಂಚ, ಪರಿಸರ–ಇವುಗಳ ಸಂರಕ್ಷಣೆ,

ಸಮಾಜೋ ಸಾಂಸ್ಕೃತಿಕ ಅಧ್ಯಯನ ನಡೆಯಲಿ

- ಎಂ. ಚಿದಾನಂದ ಮೂರ್ತಿ

ಹರಿಹರ ಅಥವಾ ಗದಗ – ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಯೋಗ್ಯವಾದ ಸ್ಥಳ. ರಾಯಚೂರು / ಕೊಡಗು ಪ್ರದೇಶ ಕೂಡ ಉತ್ತಮವಾದ ಜಾಗಗಳೇ. ಜಾನಪದ ವಿಶ್ವವಿದ್ಯಾನಿಲಯದಲ್ಲಿ ಬೋಧನಾಂಗ ಮತ್ತು ಸಂಶೋಧನಾಂಗಗಳನ್ನು ಹುಟ್ಟು ಹಾಕಿದರೆ ಇಲ್ಲಿ ಪಟ್ಟಿ ಮಾಡಿದ ನಿಕಾಯಗಳನ್ನು ಗಮನಿಸಬಹುದು –

- ಮೌಖಿಕ ಸಾಹಿತ್ಯ (Oral Literature)
- ಆಚರಣೆಗಳು, ನಂಬಿಕೆಗಳು, ನಿಷೇಧಗಳು, ಸಂಪ್ರದಾಯಗಳು
- ಮಾಟ ಮಂತ್ರ ಮೋಡಿ
- ರಂಗಭೂಮಿ ಕಲೆಗಳು
- ಜನಪದ ಕಲೆಗಳು
- ಕರಕುಶಲ ಕಲೆಗಳು
- ತೌಲನಿಕ ಅಧ್ಯಯನ (ಭಾಷಾಂತರ ವಿಭಾಗ ಕಡ್ಡಾಯ)
- ಸಮಾಜೊ – ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಆದ್ಯತೆ ಇರಲಿ.
- ವಾಸ್ತು – ಶಿಲ್ಪ ಅಧ್ಯಯನದ ಕಡೆಗೂ ಗಮನ ಹರಿಸಬೇಕು.
- ಸುಸಜ್ಜಿತ ಗ್ರಂಥಾಲಯ ನಿರ್ಮಾಣ ಆಗಬೇಕು.
- ಪ್ರಕಟಣಾಂಗ – ಪ್ರಸಾರಾಂಗ ಸಂಸ್ಥೆಗಳು ಮುಖ್ಯವಾಗುತ್ತವೆ.
- ಪ್ರಸಾರಾಂಗದ ವತಿಯಿಂದ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಬೇಕು.

ದಿನಾಂಕ: ೨೨.೧೦.೨೦೧೦

ಮಕ್ಕಳಿಗೆ ಮನೆಯಲ್ಲಿ ಶಿಶುಪ್ರಾಸಗಳನ್ನು, ಕಥೆಗಳನ್ನು ಹೇಳುತ್ತೇವೆ. ಶಾಲಾ ಪಠ್ಯಗಳಲ್ಲಿ ಬಹುಸುಲಭವಾಗಿ ಜನಪದ ಕತೆಗಳನ್ನು, ಉತ್ತಮ ಹಾಡುಗಳನ್ನು ಸೇರಿಸಬಹುದಾಗಿದೆ. ಕೆಲ ವರ್ಗಗಳ ಪಠ್ಯಗಳಲ್ಲಿ ಅಲ್ಲಲ್ಲಿ ಜನಪದ ಕಥೆ, ತ್ರಿಪದಿ ಮತ್ತು ಕಥನಕಾವ್ಯಗಳ ತುಣುಕುಗಳು ಕಾಣಸಿಗುತ್ತವೆ. ಅವುಗಳ ಪ್ರಮಾಣವನ್ನು ಹೆಚ್ಚಿಸಬಹುದು. ಜೊತೆಗೆ ಜನಪದ ಕಲೆಗಳ ಪರಿಚಯ, ಕಲಾವಿದರ ಪರಿಚಯ ಸೇರಿಸಬಹುದು. ಜನಪದ ಆಟಗಳನ್ನು ಮಕ್ಕಳಿಗೆ ಕಲಿಸಬಹುದು. ಪ್ರಾಯೋಗಿಕವಾಗಿ ಜನಪದ ಹಾಡುಗಳನ್ನು ಹೇಳಿಕೊಡುವ ವ್ಯವಸ್ಥೆಯನ್ನೂ ಮಾಡಬಹುದು.

ಪಂಚಾಯತಿಗಳ ಬಳಕೆ

ಪ್ರತಿ ಹಳ್ಳಿಯ ಗ್ರಾಮಪಂಚಾಯತಿಗಳನ್ನು ಜಾನಪದ ಸಂಗತಿಗಳ ಸಂಗ್ರಹ, ಪ್ರಚಾರ, ಸಂರಕ್ಷಣೆ ಈ ಮುಂತಾದ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಸಾಧ್ಯವಿದೆ. ಗ್ರಾಮಪಂಚಾಯತಿಯ ಕೆಳಗಡೆ ಒಬ್ಬ ಜಾನಪದ ಕ್ಷೇತ್ರಕಾರ್ಯ ಸಹಾಯಕನನ್ನು ಸರ್ಕಾರ ನೇಮಿಸುವ ಯೋಜನೆ ಹಾಕುವುದು ಅವಶ್ಯವಿದೆ. ಆತ ಗ್ರಾಮಗಳಲ್ಲಿ ಮೌಖಿಕ ಪರಂಪರೆಯ ಜ್ಞಾನದ ಬಗ್ಗೆ ಪ್ರಚಾರ ಮಾಡುವುದು, ಪ್ರತಿಭಾವಂತರನ್ನು ಗುರುತಿಸಿ ಸರ್ಕಾರದ– ವಿಶ್ವವಿದ್ಯಾನಿಲಯದ ಗಮನಕ್ಕೆ ತರುವುದು ಮತ್ತು ಗ್ರಾಮಪಂಚಾಯತಿಯ ಅಧೀನದಲ್ಲಿ ಒಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿ, ಅದನ್ನು ಬೆಳೆಸಿಕೊಂಡು, ಕಾಪಾಡಿಕೊಂಡು ಬರುವ ಕೆಲಸವನ್ನು ಮಾಡುವುದು ಅವನ ಕರ್ತವ್ಯಗಳಾಗಬೇಕು.

ಜಾನಪದ ವಸ್ತುಸಂಗ್ರಹಾಲಯಗಳು ಪ್ರತಿ ಗ್ರಾಮಪಂಚಾಯತಿ ಮಟ್ಟದಲ್ಲಿ ಇರಬೇಕು. ಇಲ್ಲಿ ಜನಪದ ಸಾಹಿತ್ಯ ಮತ್ತು ಮಾಹಿತಿಗಳ ಸಂಗ್ರಹ, ಗ್ರಾಮಗಳ ನಾನಾ ಕ್ಷೇತ್ರಗಳಲ್ಲಿ ಕಾಣುವ ಪ್ರತಿಭಾವಂತರನ್ನು ಗುರುತಿಸುವ, ಅವರ ಬಗೆಗೆ ಮಾಹಿತಿಗಳನ್ನು ಕಲೆಹಾಕುವ, ಅವುಗಳನ್ನು ಸಂಗ್ರಹಾಲಯಗಳಲ್ಲಿ ದಾಖಲಿಸಿ ಇಡುವ, ಅಗತ್ಯ ಬಿದ್ದಾಗ ಸರ್ಕಾರಕ್ಕೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಗತ್ಯ ಮಾಹಿತಿಗಳನ್ನು ದೊರಕಿಸುವ ಕೆಲಸವನ್ನು ಮಾಡಬೇಕು.

ತಾಲ್ಲೂಕಾ ಮತ್ತು ಜಿಲ್ಲಾಮಟ್ಟದ ಪಂಚಾಯತಿಗಳ ಅಧೀನದಲ್ಲೂ ಇಂತಹ ಸಂಗ್ರಹಾಲಯಗಳು ಪ್ರಾರಂಭವಾಗಬೇಕು. ಅಲ್ಲಿಯೂ ಸಿಬ್ಬಂದಿಯ ವ್ಯವಸ್ಥೆಯಾಗಬೇಕು. ಜಿಲ್ಲಾಮಟ್ಟದಲ್ಲಿ ಜಾನಪದಕ್ಕೆ ಸಂಬಂಧಿಸಿ ಎರಡು ಘಟಕಗಳು ಕೆಲಸ ಮಾಡಬೇಕು:

ರಂಗ ಕಲೆಗಳು (Theatrical Arts), ಕುಣಿತ ಪ್ರಧಾನ ಕಲೆಗಳು (Non-Theatrical Arts), ಮೌಖಿಕ ಪರಂಪರೆ (Oral Tradition) ಮತ್ತು ಸಂಗೀತ (Music) - ಹೀಗೆ ಪ್ರತ್ಯೇಕ ನಿಕಾಯ (Faculty) ಗಳಿರಲಿ.

M.Phil , Ph.D. Courseಗಳನ್ನು ಯುಜಿಸಿ ನಿಯಮಾವಳಿಯನುಸಾರ ರೂಪಿಸಬೇಕು. ವಿದೇಶಿಯರಿಗೂ (Foreign Nationals) ಸಾದರಪಡಿಸಲು (Submission) ಅವಕಾಶವಿರಲಿ. ಮಹಾಪ್ರಬಂಧವನ್ನು ಸಾದರಪಡಿಸುವಾಗ ಮಾರ್ಗದರ್ಶಕರ (Guide) ಉಪಸ್ಥಿತಿ ಕಡ್ಡಾಯ. ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಂಶೋಧನ ವಿದ್ಯಾರ್ಥಿ ೧೦೦ ದಿನ ಇದ್ದರೆ ಮಾರ್ಗದರ್ಶಕರು ಕನಿಷ್ಠ ೩೦ ದಿನ ಇರಲೇಬೇಕು. ಮಾರ್ಗದರ್ಶಕರ ವಾಸ್ತವ್ಯಕ್ಕೆ ಅತಿಥಿ ಗೃಹದಲ್ಲಿ ಅನುಕೂಲ ಕಲ್ಪಿಸಬೇಕು.

ಸಂದರ್ಶಕ (Visiting) / ಅತಿಥಿ ಉಪನ್ಯಾಸಕರಾಗಿ (Guest Faculty) ಆಗಮಿಸುವ ಮೂಲ ಕಲಾವಿದರಿಗೆ ಜಾನಪದ ವಿಶ್ವವಿದ್ಯಾನಿಲಯ ಆವರಣದಲ್ಲಿ ಅನುಕೂಲ ಮಾಡಿಕೊಡಬೇಕು.

ಎಂ.ಫಿಲ್ , ಪಿಎಚ್. ಡಿ. ಸಂಶೋಧನ ವಿದ್ಯಾರ್ಥಿ ಕ್ಷೇತ್ರಕಾರ್ಯದ ದಾಖಲೀಕರಣ ಕಾರ್ಯದಲ್ಲಿ ತರಪೇತಿ ಹೊಂದಿದ್ದಕ್ಕೆ ಸರ್ಟಿಫಿಕೇಟ್ ಪಡೆದ ಅನಂತರವೇ ಪಿಎಚ್.ಡಿ. ನೋಂದಾವಣೆಗೆ ಅವಕಾಶ ಕಲ್ಪಿಸಿಕೊಡಬೇಕು. ನೋಂದಾವಣೆಯಾದ ಅನಂತರ ಸೈದ್ಧಾಂತಿಕ ವಿಚಾರಗಳ ಅರಿವಿಗೆ (Theoretical Foundation) ವ್ಯವಸ್ಥೆ ಮಾಡಬೇಕು. ವೈದ್ಯ ಪದ್ಧತಿ, ಕ್ರೀಡೆಕಲೆಗಳ ಅಧ್ಯಯನಕ್ಕೆ ಹೋದವರು Audio Video Recording ಮಾಡಿಕೊಂಡು ವರದಿ ಸಲ್ಲಿಸಿರಬೇಕು. ವಿಷಯದಲ್ಲಿ ತಜ್ಞರಾದವರಿಗೆ ಮಾತ್ರ ಮಾರ್ಗದರ್ಶನ ನೀಡಲು ಅವಕಾಶವಿರಬೇಕು.

- ಆಂಗ್ಲ ಮಾಧ್ಯಮದಲ್ಲಿ Kannada Folklore ಕುರಿತ ಸರ್ಟಿಫಿಕೇಟ್ (Certificate) ಮತ್ತು ಡಿಪ್ಲೊಮಾ ಶಿಕ್ಷಣ (Diploma Course) ಗಳನ್ನು ಆರಂಭಿಸಬೇಕು.
- ವರ್ಷದಲ್ಲಿ ಕನಿಷ್ಠ ಮೂರು ಸಾರಿ ಶಿಬಿರ (Workshop) ಗಳನ್ನು ಆಯೋಜಿಸಬೇಕು.
- ೨೪ ಗಂಟೆ ಕಾಲ ವಿದ್ಯುಚ್ಛಕ್ತಿ ಇರುವ ಕಂಪ್ಯೂಟರ್ ಕೇಂದ್ರ ತೆರೆಯಬೇಕು. ಗ್ರಾಮೀಣ ವ್ಯಕ್ತಿ ಕೂಡ ಕಂಪ್ಯೂಟರ್ ಬಳಸುವಂತಾಗಬೇಕು.

ಸಾಧ್ಯತೆ ಇದೆ. ಪ್ರಮುಖವಾದ ಹಾಡಿನ ಮತ್ತು ಕುಣಿತದ ಪ್ರಕಾರಗಳನ್ನು ಗುರುತಿಸಿ ಅವನ್ನು ಕಲಿಸುವ ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವೂ ಇದೆ.

ಹಾಗೆಯೇ ಪ್ರದರ್ಶನ ಕಲೆಗಳಲ್ಲಿ ಇರುವ ರಂಗ ಪ್ರಕಾರ ಮತ್ತು ಬೀದಿ ಪ್ರಕಾರಗಳನ್ನು ಇಂದು ಹೆಚ್ಚು ಪ್ರಚಾರಗೊಳಿಸಲಾಗುತ್ತಿದೆ. ಇದು ಗ್ರಾಮೀಣ ಭಾಗದ ಪ್ರತಿಭಾವಂತರಿಗೆ ಒಂದು ದೊಡ್ಡ ಅವಕಾಶ. ರಂಗ ಪ್ರಕಾರದ ಬಯಲಾಟಗಳನ್ನು, ಗೊಂಬೆಯಾಟಗಳನ್ನು ಆಧುನಿಕ ಬದುಕಿನ ಸಂಗತಿಗೆ ಒಗ್ಗಿಸಿಕೊಳ್ಳಲು ಸಾಧ್ಯವಿದೆ. ಅದಕ್ಕಾಗಿ ಮತ್ತೆ ಗ್ರಾಮೀಣ ಪ್ರತಿಭಾವಂತರಿಗೆ ಇಲ್ಲಿ ಅವಕಾಶಗಳು ದೊರೆಯುವಂತೆ ಆಗಬೇಕು.

೧. **ಚಿತ್ರಕಲಾ ವಿಭಾಗ :** ರಂಗೋಲಿ, ಹಚ್ಚೆ, ರೇಖಾಚಿತ್ರ ಕಲೆಗಳು, ಸಾಂಪ್ರದಾಯಿಕ ವಿಧಿಕ್ರಿಯಾಚರಣೆಗಳಲ್ಲಿ ಬಿಡಿಸುವ ಚಿತ್ರಗಳು–ಹೀಗೆ ಗ್ರಾಮೀಣ ಭಾಗದ ಬದುಕಿನಲ್ಲಿರುವ ಚಿತ್ರಕಲಾ ಮಾದರಿಗಳು ಇಲ್ಲಿ ಸೇರಬೇಕು.

೨. **ಸಂಗೀತ ವಿಭಾಗ:** ಹಾಡುಗಾರಿಕೆ ಮತ್ತು ವಾದ್ಯಗಾರಿಕೆಗಳು ಇಲ್ಲಿ ಸೇರಬೇಕು.

೩. **ನೃತ್ಯ–ಕುಣಿತ ವಿಭಾಗ:** ಗ್ರಾಮೀಣ ನೃತ್ಯ ಕಲೆಗಳನ್ನು ಗುರುತಿಸಿ, ಕಲಿಕೆ–ಬೋಧನೆಗಳು ಇಲ್ಲಿ ನಡೆಯಬೇಕು.

೪. **ಬಯಲಾಟ ವಿಭಾಗ:** ಉತ್ತರ ಕರ್ನಾಟಕದ ಬಯಲಾಟಗಳಾದ ದೊಡ್ಡಾಟ, ಸಣ್ಣಾಟ–ಪಾರಿಜಾತ, ಬೀದಿ ಬಯಲಾಟಗಳಲ್ಲದೆ, ದಕ್ಷಿಣ ಕರ್ನಾಟಕದ (ಹಳೆ ಮೈಸೂರು ಭಾಗದ) ಯಕ್ಷಗಾನ–ಬಯಲಾಟಗಳೂ ಇಲ್ಲಿ ಸೇರಬೇಕು. ಅಭಿನಯ, ನಿರ್ದೇಶನ, ರಂಗಪರಿಕರಗಳ ತಯಾರಿಕೆ ಇಲ್ಲಿ ಸೇರಬೇಕಾದುದು ಅವಶ್ಯ.

೫. **ಯಕ್ಷಗಾನ ವಿಭಾಗ :** ಕರಾವಳಿ ಭಾಗದ ಯಕ್ಷಗಾನ–ತಾಳಮದ್ದಳೆಗಳು ಮಾತ್ರ ಈ ವಿಭಾಗಕ್ಕೆ ಸೇರಬೇಕು. ಅಭಿನಯ, ನಿರ್ದೇಶನ, ರಂಗಪರಿಕರಗಳ ತಯಾರಿಕೆ ಇಲ್ಲಿ ಸೇರಬೇಕಾದುದು ಅವಶ್ಯ.

೬. **ಗೊಂಬೆಯಾಟಗಳ ವಿಭಾಗ :** ಎಲ್ಲ ಪ್ರಕಾರದ ಗೊಂಬೆಯಾಟಗಳೂ ಇಲ್ಲಿ ಸೇರಬೇಕು. ಗೊಂಬೆಗಳ ತಯಾರಿಕೆ ಮತ್ತು ಕಲಾ ಪ್ರದರ್ಶನಗಳೂ ಈ ಪಠ್ಯದಲ್ಲಿ ಸೇರುತ್ತವೆ.

೭. **ಪ್ರದರ್ಶನ ಕಲೆಗಳ ವಿಭಾಗ :** ಬೀದಿಯ ಮೇಲೆ ಪ್ರದರ್ಶನಗೊಳ್ಳುವ ವೃತ್ತಿ ಮತ್ತು ಹವ್ಯಾಸಿ ಕಲೆಗಳು.

ಪ್ರತಿಯೊಂದಕ್ಕೂ ಆರ್ಥಿಕ ನೆರವು ನೀಡುವ ಸಂಸ್ಥೆಗಳನ್ನು (Funding Agency) ಅವಲಂಬಿಸುವುದು ಯುಕ್ತ.

ಕೈಗೊಳ್ಳಬೇಕಾದ ಯೋಜನೆಗಳು:

೧. ಗ್ರಂಥಸೂಚಿ (Bibliography) ತಯಾರಿಸುವುದು.

೨. ವಿನಿಮಯ ಕಾರ್ಯಕ್ರಮ (Exchange Programme) ನಡೆಸುವುದು. INGC, Heritage, RRC- ಉಡುಪಿ, ಧರ್ಮಸ್ಥಳ, ಜಾನಪದ ಲೋಕ, ಹೊನ್ನಾವರ ಸಂಸ್ಥೆಗಳೊಡನೆ links ಇಟ್ಟುಕೊಳ್ಳುವುದು.

೩. ವಿಶ್ವವಿದ್ಯಾನಿಲಯಗಳ ಜಾನಪದ ವಿಭಾಗಗಳೊಂದಿಗೆ ಸಂಬಂಧ ಸ್ಥಾಪಿಸುವುದು.

ಕನ್ನಡ, ಇಂಗ್ಲಿಷಿನಲ್ಲಿ ಸಿ.ಡಿ. ಮಾಡಬೇಕು. ಆಡಿಯೊ ಸಿ.ಡಿ. ಮಾಡುವುದು.

೪. ಜಾನಪದ ವಿಶ್ವವಿದ್ಯಾನಿಲಯದ Thesis ಗಳ Synopsis ಮತ್ತು Findings ಗಳನ್ನು ಮುದ್ರಿಸಿ ವಿತರಿಸಬೇಕು. ಮುಖ್ಯ ಪತ್ಯಗಳನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿಸಬೇಕು.

ವರ್ಷಕ್ಕೊಂದು ಅಂತಾರಾಷ್ಟ್ರೀಯ ಕಮ್ಮಟ ಆಯೋಜಿಸುವುದು. ಭಾಗವಹಿಸುವವರಿಗೆ ವಾಸ್ತವ್ಯ ಮತ್ತು ಆಹಾರ ಒದಗಿಸಿದರೆ ಒಳ್ಳೆಯದು. ಕಮ್ಮಟ ಆಂಗ್ಲ ಭಾಷೆಯಲ್ಲಿ ಇದ್ದರೆ ಒಳ್ಳೆಯದು. ಪುನರುಕ್ತತೆಯನ್ನು ನಿವಾರಿಸಬೇಕು. ಬರೆಹಗಳನ್ನು ಸಂಪಾದಕ ಸಮಿತಿ ಪರಿಶೀಲನೆ (Committee Review) ಮಾಡಿದ ಅನಂತರವೇ ನಿಯತಕಾಲಿಕೆ (journal) ಗಳಲ್ಲಿ ಪ್ರಕಟಿಸಲು ಮುಂದಾಗಬೇಕು.

ದಿನಾಂಕ:೧೧.೧೦.೨೦೧೦

೩. **ಕಂಬಾರಿಕೆ ವಿಭಾಗ :** ಕಬ್ಬಿಣದ ಕೆಲಸಗಳು ಇಲ್ಲಿ ಸೇರುತ್ತವೆ.

೪. **ಕುಂಬಾರಿಕೆ ವಿಭಾಗ :** ಮಣ್ಣನ್ನು ಬಳಸಿ ಮಾಡುವ ಕೆಲಸಗಳು ಇಲ್ಲಿ ಸೇರಬೇಕು. ಆಧುನಿಕ ಜೀವನ ಶೈಲಿಗೆ ಅನುಕೂಲಕರವಾದ ಮತ್ತು ಮನೆಯ ಅಲಂಕರಣಕ್ಕಾಗಿ ಮಣ್ಣಿನ ಪಾತ್ರೆಗಳನ್ನು ಬಳಸಬಹುದಾಗಿದೆ.

೫. **ಬಡಿಗತನ ವಿಭಾಗ :** ಕಟ್ಟಿಗೆ ಬಳಸಿ ಮಾಡುವ ಕೆಲಸಗಳು ಇಲ್ಲಿ ಸೇರಬೇಕು. ಈ ಉದ್ಯೋಗವಂತೂ ಇವತ್ತು ಭಾರೀ ಬೇಡಿಕೆಯಲ್ಲಿದೆ.

೬. **ಅಕ್ಕಸಾಲಿ ವಿಭಾಗ :** ಲೋಹದ ಕುಶಲಕರ್ಮ ಕೆಲಸಗಳು. ಇದು ಕೂಡ ಬೇಡಿಕೆಯ ಉದ್ಯೋಗವೇ ಆಗಿದೆ.

೭. **ಮೇದಾರಿಕೆ ವಿಭಾಗ :** ಬಿದಿರು ಮುಂತಾದ ಸಿಬಿಕೆಯಿಂದ ಬುಟ್ಟಿ, ಚಾಪೆ, ಮರ, ಬೀಸಣಿಕೆ ಇಂತಹ ಮನೆ ಬಳಕೆಯ ವಸ್ತುಗಳ ತಯಾರಿಕೆ ಮತ್ತು ಮಾರಾಟಗಳು ಇಲ್ಲಿ ಸೇರಬೇಕು. ಇವನ್ನು ಇವತ್ತಿಗೂ ಹೆಚ್ಚು ಪ್ರಚಾರಗೊಳಿಸಲು ಸಾಧ್ಯವಿದೆ.

೮. **ಚಮ್ಮಾರಿಕೆ ವಿಭಾಗ :** ಚರ್ಮದಿಂದ ವಸ್ತುಗಳ ತಯಾರಿಕೆ ಮತ್ತು ಮಾರಾಟ. ಇದು ಕೂಡ ಅಷ್ಟೇ ಬೇಡಿಕೆ ಇರುವ ವಿಭಾಗ.

೯. **ನೇಕಾರಿಕೆ ವಿಭಾಗ :** ಬಟ್ಟೆ, ಕಂಬಳಿಗಳನ್ನು ನೇಯುವ, ಬಣ್ಣ ಹಾಕುವ, ಮಾರಾಟದ ವ್ಯವಸ್ಥೆ ಇಲ್ಲಿ ಸೇರಬೇಕು.

೧೦. **ವೇಷ-ಭೂಷಣ ವಿಭಾಗ :** ಸಿಂಪಿಗನ ಕೆಲಸಗಳು ಇಲ್ಲಿ ಮುಖ್ಯ. ಫ್ಯಾಶನ್ ಡಿಸೈನ್ ಮತ್ತು ಹೊಲಿಗೆಗಳು- ವೇಷಭೂಷಣ, ಕೌದಿ, ಕುಂಚಿಗೆ- ಕುಲಾಯಿ ಮುಂತಾದವುಗಳ ತಯಾರಿಕೆ ಇಲ್ಲಿ ಸೇರಬೇಕು.

ನಿಕಾಯ-೨

ದೇಸೀ ವಿಜ್ಞಾನ ವಿಭಾಗಗಳು

ದೇಸೀ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ವೈದ್ಯಕೀಯ ಮತ್ತು ಆಹಾರ-ಪಾನೀಯ ಇವು ಜನಪದರ ವೈಜ್ಞಾನಿಕ ತಿಳಿವಳಿಕೆಗಳೆನಿಸುತ್ತವೆ. ಗ್ರಾಮೀಣ ಬದುಕಿನ ಅನುಭವದ ವೈಜ್ಞಾನಿಕ ಚಿಂತನೆಗಳು ಈ ವಿಷಯಗಳಲ್ಲಿ ಹುದುಗಿರುತ್ತವೆ. ಅನಾರೋಗ್ಯದಿಂದ ಕಾಪಾಡುವ ವೈದ್ಯಕೀಯದ ಅರಿವು, ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು ಹೋಗಲು ಅವಶ್ಯವಾದ ಆಹಾರ-

ಉಪಭಾಷೆಗಳ ಅಧ್ಯಯನಕ್ಕೆ ಅವಕಾಶವಿರಲಿ

– ಜಿ. ಎಚ್. ನಾಯಕ

- ಎಲ್ಲ ಸಾಧ್ಯತೆಗಳಲ್ಲಿ ಜಾನಪದವನ್ನು ಶೈಕ್ಷಣಿಕ (academic) ವಾಗಿ ಬೆಳೆಸಲು ನೋಡಬೆಕು.
- ನಿರ್ದಿಷ್ಟಗೊಳಿಸಿಕೊಂಡು ನಿರ್ದಿಷ್ಟ ಪ್ರಕಾರವನ್ನು ಅಧ್ಯಯನಕ್ಕೆ ಗುರಿ ಮಾಡಬೇಕು.
- ಕರಿ ಒಕ್ಕಲು, ಗಾಮೊಕ್ಕಲು, ಹಾಲಕ್ಕಿ, ಸಿದ್ದಿ, ಕಚ್ಚೆಗೌಳಿಗರು ಇವೇ ಮುಂತಾದ ಸಮೂಹಗಳ ಉಪಭಾಷಿಕ ಅಧ್ಯಯನಕ್ಕೆ ಆದ್ಯತೆ ಇರಲಿ.
- ವಿಶ್ವವಿದ್ಯಾನಿಲಯ ಮಧ್ಯ ಕರ್ನಾಟಕದಲ್ಲೇ ಸ್ಥಾಪನೆಯಾಗಲಿ.

ದಿನಾಂಕ:೧೪.೧೦.೨೦೧೦

ಬದುಕಿನ ಮೌಲ್ಯಗಳ ಸಂರಕ್ಷಣೆ:

ಇಂತಹ ಸಮಯದಲ್ಲಿ ನಮ್ಮ ಪೂರ್ವಜರ ಬದುಕಿನ ಮಾದರಿಗಳು, ಚಿಂತನೆಗಳು ನಮ್ಮ ಸಹಾಯಕ್ಕೆ ಬರುತ್ತವೆ. ಗ್ರಾಮಾಂತರ ಬದುಕಿನ ಪರಿಗಳನ್ನು ಅರಿಯುವ, ಆಯುವ ಮತ್ತು ಅಧ್ಯಯನಕ್ಕೆ ಅಳವಡಿಸುವ ಉದ್ದೇಶಗಳು ನಮಗೆ ಇಂದು ಮುಖ್ಯವೆನಿಸುತ್ತವೆ. ಭಾರತೀಯ ಸಂಸ್ಕೃತಿಯ ಅನನ್ಯತೆಯನ್ನು, ನಮ್ಮ ಪರಂಪರೆಯ ಜ್ಞಾನದ ಅರಿವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಲು, ಅವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಜಾನಪದ ಶಾಸ್ತ್ರಾಭ್ಯಾಸ ಅವಶ್ಯವೆನಿಸುತ್ತದೆ. **'ಜಾನಪದ ವಿಶ್ವವಿದ್ಯಾನಿಲಯ'** ದ ಸ್ಥಾಪನೆ ಅದಕ್ಕಾಗಿ ತುರ್ತೆನಿಸುತ್ತದೆ.

ಕೈಗಾರಿಕೆಯ ನೆಪದಲ್ಲಿ ದೇಸೀ ಉದ್ಯೋಗಗಳ ನಾಶ:

ನಾವೀಗ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಗುಂಗಿನಲ್ಲಿದ್ದೇವೆ. ಇವು ನಮ್ಮ ಬದುಕನ್ನೆಲ್ಲ ಹಾಳುಮಾಡುತ್ತಿವೆ ಎಂದು ಹಲಬುತ್ತಿದ್ದೇವೆ. ಆದರೆ ಭಾರತ ಸ್ವಾತಂತ್ರ್ಯದ ಜೊತೆಗೆ ಸೌಲಭ್ಯ ಮತ್ತು ಸುಧಾರಣೆಗಳ ಹೆಸರಿನಲ್ಲಿ ನಮ್ಮ ದೇಶಕ್ಕೆ ಕಾಲಿಟ್ಟದ್ದು ಕೈಗಾರಿಕಾ ಕ್ರಾಂತಿ ಹೆಸರಿನಲ್ಲಿ ಯಾಂತ್ರೀಕರಣ. ಯಾಂತ್ರೀಕರಣ ಪ್ರವೇಶಿಸಿ ಗ್ರಾಮೀಣ ಬದುಕಿಗೆ ಆಸರೆಯಾದ ಸ್ವಾವಲಂಬಿ ಉದ್ಯೋಗಗಳನ್ನು ಹಾಳು ಮಾಡಿತು. ಪರಾವಲಂಬಿಗಳಾಗುವಂತೆ ಮಾಡಿತು. ಇದರಿಂದಾಗಿ ನಮ್ಮ ಗ್ರಾಮಾಂತರ ಪ್ರದೇಶದ ಕಸುಬುದಾರರ, ಕುಶಲಕರ್ಮಿಗಳ ಸಂಸಾರಗಳು ದಿವಾಳಿ ಎದ್ದವು.

ಜಾನಪದ ವಿಶ್ವವಿದ್ಯಾನಿಲಯದ ಅಧ್ಯಯನ/ತರಬೇತಿ ವಿಭಾಗಗಳು ಹೇಗಿರಬೇಕು?

'ಜಾನಪದ ವಿಶ್ವವಿದ್ಯಾನಿಲಯ' ದಲ್ಲಿ ಗ್ರಾಮೀಣ ಬದುಕಿನ ಬಹುಮುಖ್ಯ ಸಂಗತಿಗಳ ಅಧ್ಯಯನ, ತರಬೇತಿ, ಕಲಿಕೆ, ಪ್ರಸಾರಗಳು ನಡೆಯುವಂತೆ ವ್ಯವಸ್ಥೆಯಾಗಬೇಕು. ಅಲ್ಲಿ ಶಿಕ್ಷಣ ಕೊಡಲು ಗ್ರಾಮೀಣ ಪ್ರತಿಭಾವಂತರಿಗೆ ನೇರವಾಗಿ ಅವಕಾಶಗಳನ್ನು ಒದಗಿಸಿಕೊಡಬೇಕು. ಆ ನಿಟ್ಟಿನಲ್ಲಿ ಇಲ್ಲಿ ಒಂದು ಸಾಮಾನ್ಯ ನೋಟಕ್ಕೆ ೪ ಭಾಗಗಳಲ್ಲಿ (ಫ್ಯಾಕಲ್ಟಿ-ನಿಕಾಯಗಳಲ್ಲಿ) ೩೧ ಅಧ್ಯಯನ/ತರಬೇತಿ ವಿಭಾಗಗಳನ್ನು ಗುರುತಿಸಿಕೊಂಡು, ಒಂದೊಂದು ವಿಭಾಗದಲ್ಲಿ ಏನೇನು ಸೇರಬೇಕು ಎಂದು ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದರಿಂದ ಜಾನಪದ ವಿಶ್ವವಿದ್ಯಾನಿಲಯದ ಒಂದು ಸಾಮಾನ್ಯ ಕಲ್ಪನೆ ಬರಲು ಸಾಧ್ಯವಾಗುತ್ತದೆ.

ಕಲೆಗಳು ಬೋಧಪ್ರದವಾಗಿರುವಂತೆ ನೋಡಿಕೊಳ್ಳಬೇಕು

– ಡಿ. ಲಿಂಗಯ್ಯ

- ವಿಶ್ವವಿದ್ಯಾನಿಲಯ ಮಧ್ಯಕರ್ನಾಟಕದಲ್ಲೇ ತಲೆ ಎತ್ತಲಿ – ಎಲ್ಲರಿಗೂ ಅನುಕೂಲ. ಕೋಲಾರದಲ್ಲಿ ಅಂತರ್ಜಲವೇ ಬತ್ತಿ ಹೋಗಿದೆ. ೮೦೦ ಅಡಿ ಆಳದಲ್ಲಿ ಬೋರ್‌ವೆಲ್ ವಿಫಲ. ವಿಸ್ತಾರವಾದ ಭೂ ಪ್ರದೇಶ ಬೇಕು. ವೈದ್ಯಕೀಯ ಗಿಡಗಳನ್ನು ಬೆಳೆಸಲು ಜಾಗಬೇಕು. ಕಲೆಗಳಿಗೆ ಪ್ರಕೃತಿಯ ಹಿನ್ನೆಲೆ ಇರಬೇಕು. ಪ್ರಯೋಗ–ಪ್ರದರ್ಶನಕ್ಕೆ ಆದ್ಯತೆ ಇರಲಿ. ಕಲೆಗಳು ಹೆಚ್ಚು ಬೋಧಪ್ರದ (Educative) ಆಗಿರುವಂತೆ ನೋಡಿಕೊಳ್ಳಬೇಕು.
- ಕಲಿಸುವುದರ ಮೂಲಕವೇ ಕಲೆಗಳನ್ನು ಉಳಿಸಬೇಕು. ಆಚರಣೆಗಳು (Rituals) ಮಾರ್ಪಾಟು ಹೊಂದಿರುವುದರಿಂದ ಹಿರಿಯ ಕಲಾವಿದರನ್ನು ಬಳಿಸಿಕೊಂಡು ಆಡಿಯೊ ವಿಡಿಯೊ ತಂತ್ರಜ್ಞಾನದ ಮೂಲಕ ಆಸಕ್ತರಿಗೆ ಕಲಿಸುವ ಏರ್ಪಾಟು ಆಗಬೇಕು.
- ರಂಗದ ಕುಣಿತವನ್ನು ಕಲಿಸಲು (ಪ್ರಾಯೋಗಿಕವಾಗಿ) ಯತ್ನಿಸಬಹುದು. ಮೂಲ ಧಾಟಿಗೆ ವಿಶೇಷ ಪ್ರಾಶಸ್ತ್ಯ ನೀಡಬೇಓು. ಜನಪ್ರಿಯ ಸಿನಿಮಾ ಧಾಟಿ (tune)ಗಳಿಗೆ ಹೆಚ್ಚಿನ ಒಲವು ಬೇಡ. ಭರತನಾಟ್ಯ ಹೇಗೆ ಭರತನಾಟ್ಯವೇ ಆಗಿರುವುದೊ ಅಂತೆಯೇ ಜನಪದ ಕಲೆಗಳು – ಕುಣಿತಗಳು. ಕರ್ನಾಟಕ ಸಂಗೀತ ಕರ್ನಾಟಕ ಚಿತ್ರಕಲೆಗಳಿರುವಂತೆಯೇ ಕರ್ನಾಟಕದ ಜನಪದ ಕಲೆ. ಲವಲವಿಕೆಯಾಗಿ ಪ್ರದರ್ಶನಗೊಳ್ಳುವಂತೆ, ಪ್ರಸ್ತುತಪಡಿಸುವಂತೆ ವಿವಿಧ ರಾಗ ಮಟ್ಟುಗಳಲ್ಲಿ ದೀರ್ಘ ಕಥಾನಕಗಳನ್ನು ಹಾಡಲು ಉತ್ತೇಜಿಸಬೇಕು. ಆಗ ಮಾತ್ರ ಮಾದೇಶ್ವರ, ಮಂಟೇಸ್ವಾಮಿ ಕಾವ್ಯಗಳು ಎಲ್ಲರ ಸ್ಮರಣೆಯಲ್ಲೂ ಉಳಿಯಲು ಸಾಧ್ಯ. ರಾಗಿಕಲ್ಲು – ಪುನರ್‌ಸೃಷ್ಟಿ ಕಷ್ಟ ಸಾಧ್ಯ. ಢಕ್ಕೆ ವಾದ್ಯವನ್ನು ೮–೧೦ ವಿಧ (type)ಗಳಲ್ಲಿ ನುಡಿಸಬಲ್ಲರು. ಆದರೆ ತ್ರಿಪದಿಯನ್ನು ಹೇಗೆ ಬೇಕಾದರೂ ಹಾಡಬಹುದು. ಮೂಲ ಧಾಟಿಯಲ್ಲಿ ಹಾಡುವಂತಾಗಬೇಕು.

ಹಾಡುಗಳ ಶಕ್ತಿ ಕನ್ನಡಕ್ಕೆ ದೊರೆಯಿತು. ಇಷ್ಟೆಲ್ಲ ಆಗಿ ಈಗ ಜಾನಪದ ವಿಶ್ವವಿದ್ಯಾನಿಲಯದ ಅವಶ್ಯಕತೆ ಅರಿಯುವಲ್ಲಿಗೆ ಬಂದು ನಿಂತಿದ್ದೇವೆ.

ಜಾನಪದ ವಿಶ್ವವಿದ್ಯಾನಿಲಯದ ಬೇಡಿಕೆ:

ಈಗ ಇಪ್ಪತ್ತು ವರ್ಷಗಳ ಹಿಂದಿನ ಮಾತು. ಪಂಚಾಯತರಾಜ್‌ಗಳ ಹೊಸ ಆಡಳಿತವನ್ನು ಜಾರಿಗೆ ತರಲು ಕಾರಣರಾದ ಆಗಿನ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ದಿ. ನಜೀರಸಾಹೇಬರ ವಿನಂತಿಯ ಮೇರೆಗೆ, ಕನ್ನಡದ ಮೊದಲ ಜಾನಪದ ಪ್ರಾಧ್ಯಾಪಕರಾದ ಡಾ. ಜೀ. ಶಂ. ಪರಮಶಿವಯ್ಯ ಅವರು ಜಾನಪದ ಸಂಗತಿಗಳ ಸಂವರ್ಧನೆ-ಸಂರಕ್ಷಣೆ ಹೇಗೆ ಎಂಬ ವಿಚಾರಗಳನ್ನೊಳಗೊಂಡ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿ, ೧೯೮೮ ರಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಆ ಬರಹದಲ್ಲಿ ಅವರು **'ಜಾನಪದ ವಿಶ್ವವಿದ್ಯಾನಿಲಯ'** ದ ಅವಶ್ಯಕತೆಯನ್ನೂ ಮಂಡಿಸುತ್ತಾರೆ. ಆ ಸಾಲುಗಳು ಹೀಗಿವೆ:

"ಜಾನಪದ ಸಂರಕ್ಷಣೆ ದೃಷ್ಟಿಯಿಂದ, ಸಂವರ್ಧನೆಯ ದೃಷ್ಟಿಯಿಂದ ವ್ಯಾಪಕವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕಾದ ಅಗತ್ಯ ಈಗ ತುಂಬ ಇದೆ. ಜಾನಪದದಂಥ ವ್ಯಾಪಕವಾದ ಕ್ಷೇತ್ರದಲ್ಲಿ ಸರಿಯಾದ ಸಂಶೋಧನೆ, ಅಧ್ಯಯನ ನಡೆಯುಬೇಕಾದ ಬೇರೆ ಬೇರೆ ಇಲಾಖೆಗಳನ್ನೊಳಗೊಂಡ ಒಂದು **ವಿಶ್ವವಿದ್ಯಾನಿಲಯವನ್ನೇ ಸ್ಥಾಪಿಸಿ,** ಪ್ರಾಚೀನ ಮೌಖಿಕ ಜ್ಞಾನದ ಪ್ರಯೋಜನವನ್ನು ಪಡೆಯಬಹುದು" (ಜೀಶಂಪ, ೧೯೮೮).

ಇಪ್ಪತ್ತು ವರ್ಷಗಳ ಹಿಂದೆ ಕಂಡ ಜೀಶಂಪ ಅವರ ಕನಸು ಹಲವು ಹಿರಿಯರ ಪ್ರಯತ್ನದಿಂದ ನನಸಾಗುವ ದಾರಿಯಲ್ಲಿದೆ ಎಂಬುದು ಸಂತೋಷದ ಸಂಗತಿ.

ಲಿಖಿತ ಮೂಲದ ಶಿಸ್ತುಗಳ ಅಧ್ಯಯನದ ವಿಶ್ವವಿದ್ಯಾನಿಲಯಗಳು:

ಲಿಖಿತ ಮೂಲದ ಶಿಸ್ತುಗಳನ್ನೊಳಗೊಂಡ ಈಗಿನ ವಿಶ್ವವಿದ್ಯಾನಿಲಯಗಳು ಕೊಡುವ ಶಿಕ್ಷಣವು-ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಸಶಕ್ತವಾಗಿರುವ ಸಮುದಾಯಗಳು ಶಿಕ್ಷಣ ಪಡೆಯಲು ಹೆಚ್ಚು ಅನುಕೂಲಗಳನ್ನು ಒದಗಿಸುತ್ತ ಬಂದಿವೆ. ಹಾಗೆ ಸಶಕ್ತವಾಗಿರುವ ಸಮೂಹದಲ್ಲೂ ವಿಶೇಷವಾಗಿ ಗಂಡುಮಕ್ಕಳಿಗೆ ಮಾತ್ರ ಅವು ಹೆಚ್ಚು ಅನುಕೂಲತೆಗಳನ್ನು ಒದಗಿಸಿವೆ. **'ಜಾನಪದ ವಿಶ್ವವಿದ್ಯಾನಿಲಯ'** ವು ಈ

- ಅಡುಗೆ ವಿಷಯದಲ್ಲಿ ಆಳವಾದ ಅಧ್ಯಯನ ನಡೆಯಬೇಕು. ಬೆರಕೆಸೊಪ್ಪು ವೈದ್ಯದ ಹಿನ್ನೆಲೆಯಲ್ಲಿ ಪರಿಶೀಲನೆಗೆ ಗುರಿಯಾಗಬೇಕು. ವಿಶ್ವವಿದ್ಯಾನಿಲಯದ ಕಟ್ಟಡಗಳು ರಕ್ಷಣ ದೃಷ್ಟಿಯಿಂದಾದರೆ ಸಾಕು. ಹಳ್ಳಿಗಳ ತರಹ ಮನೆಗಳಿದ್ದರೆ ಸಾಕು. ಬಯಲು ಇರಬೇಕು. ಕಲಾವಿದರಿಗೆ ತರಪೇತಿ ಕೊಡಲು ಪ್ರಯೋಗ ಆಗಬೇಕು. ಕಲಾವಿದರು ಎಲ್ಲ ರೀತಿಯಲ್ಲೂ ಸಜ್ಜಾಗಿ ಬಂದು ಪ್ರದರ್ಶನ ನೀಡುವಂತಾಗಬೇಕು.
- ಕಲಾ ಪ್ರದರ್ಶನ ನೀಡುವಾಗ ಚಂದ್ರಾಕಾರವಾಗಿ ಬಳಸಬೇಕೆ? ಚಚ್ಚೌಕಾಕಾರವಾಗಿ ಬಳಸಬೇಕೆ? ತ್ರಿಕೋನಾಕಾರವಾಗಿ ನರ್ತಿಸಬೇಕೆ? ಪ್ರಸ್ತುತಗೊಳಿಸುವಾಗ ಅರ್ಧ ಚಂದ್ರಾಕೃತಿ ಮಾಡಿಕೊಂಡು ಪ್ರದರ್ಶಿಸಬೇಕೆ?
- ಕಲಾ ಪ್ರದರ್ಶನ ನೀಡುವಾಗ ಕಲಾವಿದರು ಶ್ರೋತೃಗಳಿಗೆ ಬೆನ್ನು ತೋರಿಸಬಾರದು. ವೃತ್ತಿಪರತೆ ರೂಢಿಯಾಗಲು ಪ್ರಯೋಗ ಮಾಡೋದು ಗೊತ್ತಿರಬೇಕು. ಸ್ಟೇಜ್ ಕವರ್ ಮಾಡೋದು ಗೊತ್ತಿರಬೇಕು.
- ರಷ್ಯನ್ ಬ್ಯಾಲೆಯನ್ನು ವೃತ್ತಾಕಾರದಲ್ಲಿ ತೋರಿಸುವಂತೆ ನಮ್ಮ ಕಲಾ ಪ್ರದರ್ಶನಗಳಲ್ಲಿ ವೇದಿಕೆ ಶಿಸ್ತನ್ನು ಪಾಲಿಸುವಂತಾಗಬೇಕು.
- ಕಲಾವಿದರು ಅಪ್ಪಿ ತಪ್ಪಿ ಮೈಕ್ ಹುಡುಕಿಕೊಂಡು ಹೋಗಬಾರದು. ಡೊಳ್ಳು, ಬೀಸು ಕಂಸಾಳೆ, ಕೋಲಾಟ ಆಡುವಾಗ ಸ್ಟೇಜನ್ನು ಸರಿಯಾಗಿ ಬಳಸಿಕೊಳ್ಳುವಂತಾಗಬೇಕು. ಹಚ್ಚೆ ಹುಯ್ಯುವಾಗ ಯೋಜಿತವಾದ ರೀತಿಯಲ್ಲಿ ಹಾಡಬೇಕು. ಕಲೆ, ಕರಕುಶಲಕಲೆಗಳಲ್ಲಿ ಕನಿಷ್ಠ ಮೂರು ತಿಂಗಳ ಶಿಕ್ಷಣ ನೀಡುವುದು.
- ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಬೇಕು. ತರಪೇತಿ ನೀಡಬೇಕು. ಕರಗ, ಪೂಜಾ ಕುಣಿತ, ರಂಗದ ಕುಣಿತ – ಎಲ್ಲೆಡೆ ಕಾಣಸಿಗುತ್ತವೆ.
- ರಂಗದ ಹೆಜ್ಜೆಗಳನ್ನು (Steps) ಹೇಳಿಕೊಟ್ಟರೆ ಎಲ್ಲರೂ ಕಲಿಯುತ್ತಾರೆ.
- ಹಗಲುವೇಷದವರು ಒಂದು–ಒಂದೂವರೆ ಗಂಟೆ ಕಾರ್ಯಕ್ರಮ ಕೊಡುವಂತಾಗಬೇಕು (ಬೌದ್ಧಮತಕ್ಕೆ ಹೋದ ದಲಿತರು ಸತ್ಯನಾರಾಯಣ ಪೂಜೆ ಮಾಡುತ್ತಾರೆ).
- ಕಲಾವಿದರ ಜೀವನಕ್ಕೆ ಮಾರ್ಗ ಹುಡುಕುವುದಾದರೆ ಅವರಿಗೆ ನಿರಂತರವಾಗಿ ತರಬೇತಿ ನೀಡುವ ಏರ್ಪಾಟು ಆಗಬೇಕು. ಈ ತರಬೇತಿ ಕನಿಷ್ಠ ಒಂದು ತಿಂಗಳು / ಮೂರು ತಿಂಗಳದ್ದಾಗಬೇಕು.

ದಿನಾಂಕ : ೨೦.೧೦.೨೦೧೦

ಜಾನಪದ ವಿಶ್ವವಿದ್ಯಾನಿಲಯ ಅಗತ್ಯ ಏಕೆ ?

– ವೀರಣ್ಣ ದಂಡೆ

ಜಾನಪದ ಶಾಸ್ತ್ರ ಅಭ್ಯಾಸದ ಕ್ರಮೇಣ ಬೆಳವಣಿಗೆ:

ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ (೧೯೪೯) ಹೊಸದರಲ್ಲಿಯೇ ಡಾ. ಬಿ.ಎಸ್. ಗದ್ದಗಿಮಠ ಅವರಿಗೆ ಪಿಎಚ್.ಡಿ. ಸಂಶೋಧನೆಗೆ ಜನಪದ ಸಾಹಿತ್ಯದ ವಿಷಯವೊಂದನ್ನು *(ಜಾನಪದ ಗೀತೆಗಳು)* ಆರಿಸಿಕೊಳ್ಳುವ ಅವಕಾಶ ಕೊಟ್ಟದ್ದೇ ವಿಶ್ವವಿದ್ಯಾಲಯದ ಮಟ್ಟದಲ್ಲಿ ಜಾನಪದ ಶಾಸ್ತ್ರದ ಅಭ್ಯಾಸಕ್ಕೆ ನಾಂದಿಹಾಡಿದಂತಾಗಿದೆ. ಇದು ನಡೆದದ್ದು ಬಹುಶಃ ೧೯೫೧-೫೨ ಇರಬೇಕು ಎಂದು ಅಂದಾಜಿಸಬಹುದು. ಏಕೆಂದರೆ ೧೯೫೪ರಲ್ಲಿಯೇ ಅವರಿಗೆ ಪಿಎಚ್.ಡಿ. ಪದವಿ ದೊರೆತಿದೆ.

ನಂತರ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಎಂ.ಎ. ಪಠ್ಯಗಳಲ್ಲಿ ಜನಪದ ಸಾಹಿತ್ಯದ ನೂರಂಕಿನ ಒಂದು ಪತ್ರಿಕೆಯನ್ನು ಸೇರಿಸಿದ್ದೇ ಜಾನಪದ ಶಾಸ್ತ್ರದ ಅಧ್ಯಯನಕ್ಕೆ ಅಧಿಕೃತ ನಾಂದಿಯಾಯಿತು. ಮುಂದೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಜಾನಪದ ಶಾಸ್ತ್ರದ ಪ್ರತ್ಯೇಕ ವಿಭಾಗಗಳೂ ಪ್ರಾರಂಭವಾದವು.

೧೯೬೭ ರಲ್ಲಿ ತರೀಕೆರೆಯಲ್ಲಿ ಗೊ.ರು. ಚನ್ನಬಸಪ್ಪ ಮತ್ತವರ ಸ್ನೇಹಿತರ ಪ್ರಯತ್ನದಿಂದ ಬಹುದೊಡ್ಡ ಪ್ರಮಾಣದಲ್ಲಿ ಜಾನಪದ ಸಮಾವೇಶ ನಡೆಯಿತು. ಅದರ ಅಂಗವಾಗಿ ಕಲಾಮೇಳಗಳು, ವಿಚಾರ ಸಂಕಿರಣಗಳು ನಡೆದವು. ಸಾವಿರ ಪುಟಕ್ಕೂ ಹೆಚ್ಚಿನ ಒಂದು ದೊಡ್ಡ ಸ್ಮರಣಗ್ರಂಥ **'ಹೊನ್ನ ಬಿತ್ತೇವು ಹೊಲಕ್ಕೆಲ್ಲ'** ಪ್ರಕಟವಾಯಿತು. ಜಿ. ನಾರಾಯಣ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ೧೯೭೬ರಲ್ಲಿ, ಇಡೀ ಕರ್ನಾಟಕದ ತುಂಬ ಇರುವ ಜನಪದ ಕಲೆಗಳನ್ನು ಗುರುತಿಸುವ, ಕಲಾಪ್ರದರ್ಶನಗಳನ್ನು ಏರ್ಪಡಿಸುವ ಪ್ರಯತ್ನಗಳು ನಡೆದವು. ಅದರ ಫಲವಾಗಿ ***'ಕರ್ನಾಟಕ ಜನಪದ ಕಲೆಗಳು' (೧೯೭೭)*** ಎಂಬ

- ಗಿಡ ಮೂಲಿಕೆಗಳ ಅಧ್ಯಯನಕ್ಕೆ ವಿಶೇಷ ಲಕ್ಷ್ಯ ಕೊಡುವುದು ಯುಕ್ತ.
- ಕರ್ನಾಟಕ ಸಂಸ್ಕೃತಿ ಅಧ್ಯಯನ ನಡೆಸುವುದರಿಂದ ಕನ್ನಡ ಎಂ.ಎ. ಶಿಕ್ಷಣವೂ ಇದ್ದರೆ ತೊಂದರೆಯಿಲ್ಲ.

ದಿನಾಂಕ:೦೨.೧೧.೨೦೧೦

ಕೃಷಿ ಸಲಕರಣೆಗಳ ಉತ್ಪಾದನೆ, ಗ್ರಾಮೀಣ ಅಡುಗೆ, ತಿಂಡಿ ತಿನಿಸುಗಳ ತಯಾರಿ, ಗ್ರಾಮೀಣ ಆಟೋಟಗಳ ತರಬೇತಿ ವ್ಯವಸ್ಥೆ, ಪ್ರದರ್ಶನ ಕಲೆಗಳು ಎಲ್ಲವೂ ಅಲ್ಲಿ ಜೀವಂತವಾಗಿರಬೇಕು, ಚಲನಶೀಲವಾಗಿರಬೇಕು. ಅದರೊಳಗೆ ಕಾರ್ಯನಿರತರಾಗಿರುವವರಿಗೆ ಉತ್ಪಾದನೆಗೆ ಬೇಕಾದ ಸವಲತ್ತುಗಳು, ಮೂಲ ಸಾಮಗ್ರಿಗಳು, ಮೂಲಭೂತ ಸೌಲಭ್ಯಗಳನ್ನು ವಿಶ್ವವಿದ್ಯಾನಿಲಯ ಒದಗಿಸಬೇಕು. ಅವರು ಉತ್ಪಾದಿಸಿದ ಸರಕುಗಳಿಗೆ ಮಾರುಕಟ್ಟೆಯನ್ನು ವಿಶ್ವವಿದ್ಯಾನಿಲಯ ಕಂಡುಕೊಳ್ಳಬೇಕು (ಮಂಗಳೂರಿನ ಅರೆಸರಕಾರಿ ಸಂಸ್ಥೆ ನಿರ್ಮಿಸಿದ 'ಪಿಲಿಕುಳ' ಸಾಂಸ್ಕೃತಿಕ ಕೇಂದ್ರ ಇದಕ್ಕೊಂದು ಮಾದರಿ).

- ವಿಶ್ವವಿದ್ಯಾನಿಲಯ ಪೂರ್ಣಪ್ರಮಾಣದಲ್ಲಿ ಕಾರ್ಯವೆಸಗುವ ಮುನ್ನ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗ ಹಾಗೂ ಪರಿಣತ ತಂಡವೊಂದು ವೈಜ್ಞಾನಿಕವಾಗಿ ಜಾನಪದ ಅಧ್ಯಯನ, ಪ್ರಸರಣಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಫಿನ್ಲೆಂಡಿನ ತುರ್ಕು ವಿಶ್ವವಿದ್ಯಾನಿಲಯ, ಫಿನ್ನಿಶ್ ಲಿಟರರಿ ಸೊಸೈಟಿ, ಭಾರತದ ಪೂರ್ವ ರಾಜ್ಯಗಳಲ್ಲಿನ ಬುಡಕಟ್ಟು ಅಧ್ಯಯನ ಕೇಂದ್ರವನ್ನು ಸಂದರ್ಶಿಸಿ ಅಲ್ಲಿನ ಚಟುವಟಿಕೆಗಳನ್ನು ಗಮನಿಸುವುದು ಅವಶ್ಯ.
- ವಿಶ್ವವಿದ್ಯಾನಿಲಯದ ಮೂಲಕ ಇಡಿಯ ಕರ್ನಾಟಕದ ಜನಪದ ಕಲೆಗಳ, ಆಚರಣೆಗಳ, ರಂಗಭೂಮಿಯ ಸರ್ವೇಕ್ಷಣೆ ನಡೆಸಿ ಜಿಲ್ಲಾವಾರು ಸಂಪುಟಗಳನ್ನು ಪ್ರಕಟಿಸಬಹುದು.
- ವಿವಿಧ ಬುಡಕಟ್ಟುಗಳನ್ನು (ಪ್ರಾತಿನಿಧಿಕವಾಗಿ) ಗುರುತಿಸಿ ಒಂದೊಂದು ಬುಡಕಟ್ಟಿನ ವಸತಿ, ಜೀವನ ವಿಧಾನವನ್ನು ಪ್ರತಿನಿಧಿಸುವ 'ಹಾಡಿ' ಗಳನ್ನು ವಿಶ್ವವಿದ್ಯಾನಿಲಯದ ಕೇಂದ್ರೀಯ ಸ್ಥಾನದಲ್ಲಿ ರೂಪಿಸಬೇಕು. ಅಲ್ಲಿ ಅವರು ತಮ್ಮ ಪಾರಂಪರಿಕ ಜೀವನ ವಿಧಾನವನ್ನು ಅನುಸರಿಸಬೇಕು. ಕೃತಕ ಸನ್ನಿವೇಶ ನಿರ್ಮಾಣವಾಗಬಾರದು. ಅಲ್ಲಿನ ವಾಸಿಗಳ ಬದುಕಿಗೆ ಬೇಕಾದ ಆಸರೆಯನ್ನು ವಿಶ್ವವಿದ್ಯಾನಿಲಯ ಒದಗಿಸಬೇಕು.
- ಪ್ರತಿಜಿಲ್ಲೆಗಳೂ ಗ್ರಾಮೀಣ ಪರಿಸರದ ಆಯ್ದ ಶಾಲೆಗಳಲ್ಲಿ ಜನಪದ ಆಟಗಳನ್ನು ಪ್ರೋತ್ಸಾಹಿಸುವುದಕ್ಕೆ ಸೂಕ್ತ ಏರ್ಪಾಟು ಮಾಡಬೇಕು. ಇಂತಹ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಿ ಅಂತರ್ ವಲಯ ಸ್ಪರ್ಧೆಯನ್ನು ಏರ್ಪಡಿಸಬೇಕು.

ಆಡಳಿತ ನಿರ್ವಹಣೆ ಮಾಡುವಾಗ ಹೊಸ ಮಾದರಿಯನ್ನು ರೂಪಿಸಬೇಕಾಗುತ್ತದೆ. ನಮ್ಮದು ಬಹುಸಂಸ್ಕೃತಿ(Multiculture)ಗಳ ನಾಡು. ಆದುದರಿಂದ ನಾಲ್ಕೂ ವಿಭಾಗಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದು ಯುಕ್ತ. ಆ ಕೇಂದ್ರಗಳು ಕೇಂದ್ರ ಆಡಳಿತ ಕಛೇರಿಯ ನಿಯಂತ್ರಣದಲ್ಲಿ ಇರತಕ್ಕದ್ದು.

ಆರ್ಥಿಕ ಹೊರೆ ತಪ್ಪಿಸಿಕೊಳ್ಳಲು, ಆಡಳಿತ ನಿರ್ವಹಣೆಯ ತೊಡಕುಗಳನ್ನು ನಿವಾರಿಸಿಕೊಳ್ಳಲು Management Expert ಗಳ ಸಲಹೆ ಪಡೆಯುವುದು.

ಪ್ರಥಮವಾಗಿ ಧ್ಯೇಯೋದ್ದೇಶಗಳನ್ನು ಪಟ್ಟಿ ಮಾಡುವುದು. ಒಂದೇ ಕೇಂದ್ರದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸದೆ ನಾಲ್ಕೂ ವಿಭಾಗಗಳಲ್ಲಿ ತೆರೆದಿದ್ದೇ ಆದರೆ ಹಲವು ಅಧ್ಯಯನಗಳ ದೊಡ್ಡ ಜಾಲವನ್ನೇ ನಿರ್ಮಿಸಬಹುದು. ವರದಿ – ವ್ಯಾಪಕ ಸ್ವರೂಪದ್ದು ಹಾಗೂ ಧೋರಣಾತ್ಮಕ (Comprehensive and Perspective) ಆಗಿರಬೇಕು.

- ಪರಂಪರಾ ಜ್ಞಾನ ಶಿಸ್ತುಗಳು (Schools of Traditional Knowledge)
- ಕೃಷಿ, ತಂತ್ರಜ್ಞಾನ (ದೇಸಿ)
- ಜಲ ನಿರ್ವಹಣ ವ್ಯವಸ್ಥೆ (Water Management)
- ಸಾಮಾಜಿಕ ಸಮಸ್ಯೆಗಳ ನಿರ್ವಹಣೆ
- ರಾಷ್ಟ್ರೀಯ – ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ದೂರ ಮಾಡಿಕೊಳ್ಳಲು ಒಂದು ಅಂತಾರಾಷ್ಟ್ರೀಯ ಅಧ್ಯಯನ ಕೇಂದ್ರ ಸ್ಥಾಪಿಸುವುದು ಅಗತ್ಯ.

  ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಹಂಗಾಮಿ (adhoc) ಆಗಿರಬಾರದು. ಅಸ್ತಿತ್ವವೇ ಇರುವುದಿಲ್ಲ. ಪ್ರಸಾರಾಂಗದ ಸ್ವರೂಪವನ್ನು ಸ್ಪಷ್ಟವಾಗಿ ಹೇಳಬೇಕು. ಅಲ್ಲಿಯ ಉದ್ಯೋಗಿಗಳ ಸೇವಾ ವಿವರ – ನಿಯಮಗಳು ಸ್ಪಷ್ಟವಾಗಿರಬೇಕು. ಸಹಾಯಕ ನಿರ್ದೇಶಕ, ಉಪ ನಿರ್ದೇಶಕ, ನಿರ್ದೇಶಕ ಹುದ್ದೆಗಳು ಇರಬೇಕು. ಅದು ಒಂದು ಘಟಕ (Unit) ಆಗಿ ರೂಪುಗೊಳ್ಳಬೇಕು.
- Electronic Media ಹಾಗೂ Print Media – ಇವುಗಳಿಗೆ ಬೇರೆ ಬೇರೆ ಸಹಾಯಕ ನಿರ್ದೇಶಕರು ಇತ್ಯಾದಿ ಇರಬೇಕು.
- Production Unit ಹಾಗೂ Marketing Unit - ಈ ಎರಡೂ ಬೇರೆ ಬೇರೆ ಇರಬೇಕು.

ಜಾನಪದ ವಿಶ್ವವಿದ್ಯಾನಿಲಯ : ನನ್ನ ಕನಸು

– ಎ.ವಿ. ನಾವಡ

ಬೇಗನೇ ಸಾಕಾರಗೊಳ್ಳಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯವು ಏಕಕಾಲಕ್ಕೆ ಸ್ಥಳೀಯವೂ ವಿಶ್ವಾತ್ಮಕವೂ ಆಗಬೇಕಾಗಿದೆ. ಜಾನಪದ ಎನ್ನುವುದು ಮಾನವ ಕಟ್ಟಿದ ವಸ್ತು ಸಂಸ್ಕೃತಿ, ಮೌಖಿಕ ಪರಂಪರೆ ಹಾಗೂ ಪಾರಂಪರಿಕ ನಡೆವಳಿಗಳನ್ನು ನೆಲಸಿದ ಕಾಲದ ಸಂದರ್ಭದಲ್ಲಿಟ್ಟು ಪರಿಶೀಲಿಸುವ ಶಾಸ್ತ್ರವೂ ಹೌದು. ಔಪಚಾರಿಕ ನೆಲೆಯಲ್ಲಿ ರೂಪುಗೊಂಡ/ ರೂಪುಗೊಳ್ಳುತ್ತಲೇ ಇರುವ ಜಾನಪದವನ್ನು ಒಂದು ಬಗೆಯ ಅಕೆಡೆಮಿಕ್ ಶಿಸ್ತಿಗೆ ಅಳವಡಿಸಿ ಆ ಶಾಸ್ತ್ರವನ್ನು, ಜ್ಞಾನಪರಂಪರೆಯನ್ನು ಮರುಪರಿಶೀಲಿಸುವ ಹಾಗೂ ಅದನ್ನು ಹುಟ್ಟು ಹಾಕುವ ಹುಟ್ಟುಗಾರರ ಬದುಕನ್ನು ಅರ್ಥೈಸುವ, ಜೊತೆಗೆ ಉತ್ತರಿಸುವ ಕೆಲಸವೂ ಆಗಬೇಕಾಗಿದೆ. ಜಾನಪದದ ಉತ್ಪಾದಕರನ್ನು ಮಾಹಿತಿದಾರರೆಂದೋ, ವಕ್ತೃಗಳೆಂದೋ ಪರಿಗಣಿಸಿ, ದೂರದಲ್ಲಿರಿಸಿ ನೋಡುವ ಅಧಿಕಾರೀಯ ಮನೋಧರ್ಮವನ್ನು ಕೈಬಿಟ್ಟು ಅವರನ್ನು ಸಹ ಸಂಶೋಧಕರೆಂದೂ, ಸೃಜನಶೀಲ ಕುಶಲಿಗಳೆಂದೂ ಪರಿಗಣಿಸುವ ಕಾಲ ಬರಬೇಕಾಗಿದೆ. ಅಕ್ಷರ ಸಾಹಿತಿಗಳು ತಮ್ಮ ರಚನೆಗಳಿಗೆ ಪಡೆಯುವ 'ಸ್ವಾಮ್ಯ' ವನ್ನು ಇವರು ಪಡೆವ ದಿನ ವಿಶ್ವವಿದ್ಯಾನಿಲಯದ ಪ್ರಯತ್ನದ ಫಲವಾಗಬೇಕು. ಜಾನಪದ ಸಂಪನ್ನಿಗರ ಬದುಕಿನ ಧಾರಣ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನ ವಿಶ್ವವಿದ್ಯಾನಿಲಯದಿಂದ ಆಗಬೇಕಾಗಿದೆ. ಜೊತೆಗೆ ಅವರ ಕೌಶಲವನ್ನು ಜಾತಿಯ ಕಟ್ಟಿಗೆ ಸೀಮಿತಗೊಳಿಸದೆ ತರಬೇತಿಯ ಮೂಲಕ ನಿರ್ಜಾತೀಕರಣ ಪ್ರಕ್ರಿಯೆಗೆ ಒಳಪಡಿಸುವ ಪ್ರಯತ್ನ ನಡೆಯಬೇಕು.

- ನಿಯೋಜಿತ ವಿಶ್ವವಿದ್ಯಾನಿಲಯ ಇತರೆ ಮಾಮೂಲಿ ವಿಶ್ವವಿದ್ಯಾನಿಲಯದಂತೆ ಒಂದು ಕೇಂದ್ರ ಸ್ಥಾನವನ್ನು ಹೊಂದಿದ್ದು ಅಲ್ಲಿ ಆಡಳಿತ ಪ್ರಮುಖರು, ಸಿಬ್ಬಂದಿಗಳು, ಪ್ರಾಧ್ಯಾಪಕರು ನೆಲೆಗೊಂಡು ರಾಜ್ಯಾದ್ಯಂತ ಹಬ್ಬಿಕೊಂಡಿರುವ ಕಲಾವಿದರನ್ನು, ಕಲಾಕುಶಲಿಗಳನ್ನು, ಜನಪದ ವೃತ್ತಿ ಪರಿಣತರನ್ನು ದೂರನಿಯಂತ್ರಣಕ್ಕೊಳಪಡಿಸುವ ವ್ಯವಸ್ಥೆ

- Central University Act ಹಾಗೂ State University Act – ಎರಡನ್ನೂ ಅಭ್ಯಸಿಸಬೇಕು. ದಾಖಲೆಗಾಗಿಯಾದರೂ ಮಾರ್ಗದರ್ಶಿಯಾಗಿ ಇಟ್ಟುಕೊಂಡು ವಿಧೇಯಕ ರಚನೆ ಮಾಡಬೇಕು.

ವಿಶ್ವವಿದ್ಯಾನಿಲಯಕ್ಕೆ ಸ್ಥಿರ ಮತ್ತು ಚರಾಸ್ತಿಗಳು (Assets) ಇರಬೇಕು.

- ಗ್ರಂಥಾಲಯ (Library)
- ಕಟ್ಟಡ (Building)
- ಸಿಬ್ಬಂದಿ (Statff)
- ಭೂಮಿ (Land)

೧೨B ಯಲ್ಲಿ ಪರಿಗಣನೆ ಮಾಡಲು ಇವುಗಳೆಲ್ಲಾ ಬೇಕೇ ಬೇಕು.

ಯುಜಿಸಿಯಿಂದ ಅನುದಾನ ಪಡೆಯಲು (ಅಧ್ಯಾಪಕರು) ೭೫ಕ್ಕಿಂತ ಹೆಚ್ಚಿದ್ದರೆ Unassigned Grants ಕನಿಷ್ಠ ೧೦ ಲಕ್ಷ ದೊರಕುವುದು. ಅಭಿವೃದ್ಧಿ ಅನುದಾನ (Development Grant) ಪ್ರತ್ಯೇಕ.

ವಿಶ್ವವಿದ್ಯಾನಿಲಯದ ರೂಪುರೇಷೆ ಸಿದ್ಧಪಡಿಸುವಾಗ ಪರಿನಿಯಮಗಳನ್ನು ರೂಪಿಸುವುದರೊಂದಿಗೆ ಆರ್ಥಿಕ ತೊಡಕುಗಳು (Financial implications) ಏನು, ಎಷ್ಟು ಎಂಬುದನ್ನು ಪರಿಶೀಲನೆ (workout) ಮಾಡಬೇಕು.

Recurring – Non recurring ಹಾಗೂ Plan – Non plan ಸ್ಪಷ್ಟವಾಗಬೇಕು.

ದಿನಾಂಕ: ೨೩.೧೦.೨೦೧೦

ಜನಪದ ನುಡಿಗಟ್ಟುಗಳ ಸಂಗ್ರಹ ಆಗಬೇಕು

– ಮಳಲಿ ವಸಂತಕುಮಾರ್

ಸನ್ಮಾನ್ಯರಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ನನ್ನ ನಮಸ್ಕಾರಗಳು. ತಾವು ಇರಿಸಿದ್ದ ಎರಡೂ ಪತ್ರಗಳನ್ನು ಓದಿದೆ. ಸಂತೋಷವಾಯಿತು. ಮೊದಲಿಗೆ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ ವಿಶೇಷಾಧಿಕಾರಿಯಾಗಿ ನೇಮಕಗೊಂಡ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸ್ವಯಂ ಶ್ರೇಷ್ಠ ಜಾನಪದ ವಿದ್ವಾಂಸರೂ, ಸಹೃದಯರೂ, ಸಂಸ್ಕೃತಿ ಸಂಪನ್ನರೂ ಆದ ತಾವು ಇಂತಹ ಒಂದು ಉನ್ನತ ಹುದ್ದೆಯನ್ನು ಅಲಂಕರಿಸಿದ್ದು ಔಚಿತ್ಯಪೂರ್ಣವಾಗಿದೆ. ಜಾನಪದ ವಿಶ್ವವಿದ್ಯಾನಿಲಯವನ್ನು ರೂಪಿಸುವುದು ತಮ್ಮ ಮುಂದಿರುವ ಸವಾಲಿನ ಕೆಲಸ. ಸದಾ ಕ್ರಿಯಾಶೀಲರಾದ ತಮಗೆ ಇದು ಕಷ್ಟಸಾಧ್ಯವೇನೂ ಅಲ್ಲ. ಇನ್ನು ಜಾನಪದ ವಿಶ್ವವಿದ್ಯಾನಿಲಯ ಬೆಳವಣಿಗೆ ಬಗ್ಗೆ ಸಲಹೆ ಕೇಳಿದ್ದೀರಿ. ಈಗ ಜಗತ್ತಿನಲ್ಲಿಯೇ Nordic Institute of Folklore ಒಂದು ಮಾದರಿ ಸಂಸ್ಥೆಯಾಗಿದೆ. ತಮಗೆ ತಿಳಿದಿರುವ ಹಾಗೆ ಪ್ರೊ. ಲೌರಿಹಾಂಕೊ ಅಂತಹವರು ವಿಶ್ವದ ವಿವಿಧ ದೇಶಗಳನ್ನು ಜಾನಪದದ ಶಾಸ್ತ್ರೀಯ ಅಧ್ಯಯನದ ತೆಕ್ಕೆಗೆ ಅಳವಡಿಸುವ ಪ್ರಯತ್ನ ಮಾಡಿದ್ದಾರೆ.

ಮುಖ್ಯವಾಗಿ ನಮ್ಮಲ್ಲಿ ಜಾನಪದ ಮಾಹಿತಿ ಸಂಗ್ರಹ ಅತ್ಯಗತ್ಯವಾಗಿ ಆಗಬೇಕಾಗಿದೆ. ಇದು ಪೂರ್ಣಪ್ರಮಾಣದ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ಜನಪದ ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಕಾರಗಳ ವಿಷಯ ಸಂಗ್ರಹ ವ್ಯಾಪಕ ಪ್ರಮಾಣದಲ್ಲಿ ಆಗಬೇಕಾಗಿದೆ. ಜಾನಪದ ಎಂ.ಎ. ಅಥವಾ ಕನ್ನಡ ಎಂ.ಎ. ಹಾಗೂ ಮಾನವಿಕ ಎಂ.ಎ. ಮಾಡಿದ ವ್ಯಕ್ತಿಗಳನ್ನು ರಾಜ್ಯಾದ್ಯಂತ ಸಂಗ್ರಹಣೆಯ ಕ್ಷೇತ್ರಕಾರ್ಯಕ್ಕೆ ನಿಯೋಜಿಸಬಹುದಾಗಿದೆ. ಅನಂತರ ದೊರೆತ ವಿಷಯಗಳ ಸಂಪಾದನೆ, ಸಂಶೋಧನೆ ಮತ್ತು ವೈಜ್ಞಾನಿಕ ವಿಶ್ಲೇಷಣೆಯ ಕಾರ್ಯವನ್ನು ಕೈಗೊಳ್ಳಬಹುದು.

- ಮಂಡ್ಯ ಪಿ ಇ ಎಸ್ ಶಿಕ್ಷಣ ಸಂಸ್ಥೆಯಲ್ಲಿ ಕಳೆದ ೨೦ ವರ್ಷಗಳಿಂದ ಸ್ವತಂತ್ರ ಜಾನಪದ ಅಧ್ಯಯನ ವಿಭಾಗವಿದೆ.
- ಪ್ರದರ್ಶನಾತ್ಮಕ ಕಲೆಗಳ ಕಲಿಕೆಗಾಗಿ ಮಂಡ್ಯದ ಕೀಲಾರದಲ್ಲಿ ಒಂದು ವಿಶೇಷ ಕಲಿಕಾ ಕೇಂದ್ರ ಇದೆ.

ಜಾನಪದ ವಾಸ್ತವವಾಗಿ ಏಕ ವಿಷಯಕದ ಜ್ಞಾನಕ್ಷೇತ್ರವಲ್ಲ. ಮಾನವನ ಸಮಸ್ತ ಚಟುವಟಿಕೆಗಳನ್ನು ಒಳಗೊಳ್ಳುವ ದೇಸೀ ಜ್ಞಾನಪರಂಪರೆ. ಸಂಗೀತ, ಕುಣಿತ, ಸಾಹಿತ್ಯ, ವೈದ್ಯ, ಕ್ರೀಡೆ –ಇತ್ಯಾದಿ ಎಲ್ಲವೂ ಸಮಾವೇಶಗೊಂಡಿವೆ.

ಕಲೆಗಳು–ಕಲಾವಿದರ ಸಂರಕ್ಷಣೆ ದೃಷ್ಟಿಯಿಂದ ಜಾನಪದ ಮತ್ತು ಜನಪದ ಕಲೆಗಳ ವಿಶ್ವವಿದ್ಯಾನಿಲಯ ಎನ್ನಬಹುದು.

ಜಾನಪದ ಮತ್ತು ಜನಪದ ಜೀವನ (Folklore and Folklife) ಕ್ಕೆ ಪ್ರತ್ಯೇಕ ಗುರುತು (Entity) ಇಲ್ಲದಿರುವುದರಿಂದ ಹಾಗೆ ಕರೆಯುವುದು ಉಚಿತವಲ್ಲ.

ಕಲಿಕೆಯ ದೃಷ್ಟಿಯಿಂದ –ಇವತ್ತಿನ ಅಗತ್ಯಕ್ಕೆ ತಕ್ಕಂತೆ – ಕಲೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಬಹುದು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಕಲೆಗಳನ್ನು ಕನ್ನಡಿಗರಿಗೆ ಪರಿಚಯಿಸಬಹುದು. ದೇಸಿ ಕಲೆಗಳನ್ನು ವಿನಿಮಯ ಮಾಡಿಕೊಳ್ಳಬಹುದು.

ಬಯಲು ರಂಗಭೂಮಿ – Epic Theatre – 'ಕಲಾ ಗ್ರಾಮ' ಸೃಷ್ಟಿ ಮಾಡಬಹುದು. ಭಾರತದ ಎಲ್ಲ ಕಲೆಗಳನ್ನು ಪರಿಚಯಿಸಬಹುದು. ಇದರ ಮೂಲಕ ಭಾರತದ ಭಾವೈಕ್ಯತೆಯನ್ನು ಸೃಷ್ಟಿಸಬಹುದು; ಸಾಧಿಸಬಹುದು. ಆ ಮೂಲಕ ಇಡೀ ದೇಶದ ಸಂಸ್ಕೃತಿಯನ್ನು ಬಿಂಬಿಸಬಹುದು.

ಭಾರತೀಯ ಪ್ರಾಚ್ಯ ಶಾಸನ ಸರ್ವೇಕ್ಷಣ ಇಲಾಖೆ, ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣ ಇಲಾಖೆಯವರು ಸರ್ವೇಕ್ಷಣೆ ನಡೆಸಿರುವಂತೆ ಜಾನಪದ ಸರ್ವೇಕ್ಷಣ ಕಾರ್ಯ ನಡೆಸಬೇಕು. ಜಾನಪದದ ಎಲ್ಲ ಬಗೆ (item) ಗಳನ್ನು ದಾಖಲಿಸಿಕೊಳ್ಳಬೇಕು.

ದಿನಾಂಕ:೩೦.೦೯.೨೦೧೦

- ಜನಪದ ಸಾಹಿತ್ಯ ಸಂಗತಿಗಳ ಜೊತೆಗೇ, ಭೌತಿಕ ಸಂಗತಿ ಹಾಗೂ ಜನಪದ ಆಚರಣೆಗಳ ಮೂರ್ತ ಹಾಗೂ ಅಮೂರ್ತ ಸಂಗತಿಗಳ ದಾಖಲೆಯೆಡೆ ಮುತುವರ್ಜಿ ವಹಿಸುವುದು ಹಾಗೂ ಹತ್ತು ವರ್ಷಗಳಿಗೊಮ್ಮೆ ಪುನಃ ಪುನಃ ಕ್ಷೇತ್ರಕಾರ್ಯಮಾಡಿ ಬದಲಾವಣೆಯ ಸ್ವರೂಪವನ್ನು ಅರಿಯುವ ಏರ್ಪಾಡು ಮಾಡುವುದು.
- ಜಾಗತೀಕರಣ, ಉದಾರೀಕರಣ ಹಾವಳಿಯಿಂದ ತಪ್ಪಿಸಿಕೊಂಡು ದೇಸಿನೆಲೆಯಲ್ಲಿ ತನ್ನತನವನ್ನು ಉಳಿಸಿಕೊಳ್ಳಲು ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಲು, ನಮ್ಮ ಅಭಿಜಾತ ಸಾಹಿತ್ಯ, ಕಲೆ, ವಿಜ್ಞಾನಗಳ ತಳಪಾಯ ಭದ್ರತೆಗೆ ಜಾನಪದವನ್ನು ಹೇಗೆ ಅರ್ಥಪೂರ್ಣವಾಗಿ ಬಳಸಬಹುದೆನ್ನುವುದನ್ನು ಅರಿತುಕೊಳ್ಳಲು ಹಾಗೂ ನಮ್ಮ ರಾಷ್ಟ್ರೀಯ ಪ್ರಜ್ಞೆಯ ಜಾಗೃತಿಗೆ, ಸಾಂಸ್ಕೃತಿಕ ಪುನರುತ್ಥಾನಕ್ಕೆ ಜಾನಪದ ಬಳಕೆಯ ಸಾಧ್ಯತೆಯ ನೆಲೆಗಳನ್ನು ಕಂಡುಕೊಳ್ಳಲು ಜಾನಪದ ವಿಶ್ವವಿದ್ಯಾನಿಲಯ ಜಾನಪದ ಚಿಂತಕರ ಸಮಾವೇಶವನ್ನು ಕರೆದು ಮಾರ್ಗದರ್ಶಿಸೂತ್ರವನ್ನು ರಚಿಸುವುದು.
- ಜಾನಪದವನ್ನು ಸೈದ್ಧಾಂತಿಕವಾಗಿ ಜಾಗತಿಕ ನೆಲೆಯಲ್ಲಿ ಪ್ರತಿಷ್ಠಾಪಿಸುವ ಹೇತುವಿನಿಂದ ಜಾನಪದ ವಿಶ್ವವಿದ್ಯಾನಿಲಯ, ವಿದೇಶಿ ಸಿದ್ಧಾಂತಗಳನ್ನು ಅನಾಮತ್ತಾಗಿ ಸ್ವೀಕರಿಸದೆ ನಮ್ಮ ದೇಶೀಯ ವಾತಾವರಣಕ್ಕೆ ಅವು ಚೆನ್ನಾಗಿ ಅಳವಡುವಂತೆ ತೂಗಿ, ಅಳೆದು ಅಲ್ಲಿ ನಮ್ಮತನದ ಛಾಪು ಒತ್ತಿ, ನಮ್ಮ ಸಿದ್ಧಾಂತಗಳನ್ನು ರೂಪಿಸಿ ಅವುಗಳು ಇತರರಿಗೂ ಮಾದರಿಯಾಗುವಂತೆ ಆಚರಣೆಗೆ ತರಲು ಮುಂದಾಗುವುದು.
- ಜಾನಪದ ವಿಶ್ವವಿದ್ಯಾನಿಲಯ ಜಾನಪದವನ್ನು ಮಹಿಳಾವಾದಿ ನೆಲೆಯಲ್ಲಿ ನೋಡುವ, ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಅಭ್ಯಸಿಸುವ, ಆನ್ವಯಿಕ ದೃಷ್ಟಿಯಿಂದ ವಿಶ್ಲೇಷಿಸುವ, ಬಂಡಾಯ ನೆಲೆಗಳನ್ನು ಗುರುತಿಸುವ, ವಿಶ್ವ ಜಾನಪದಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನೂ ನೀಡುವ ಸ್ವೋಪಜ್ಞ ನೆಲೆಯನ್ನು ಕಂಡುಕೊಳ್ಳುವುದು.
- ಸಸ್ಯ, ಪ್ರಾಣಿ, ಮನುಷ್ಯ ಇವುಗಳ ಅಂತರ್ ಸಂಬಂಧವೃದ್ಧಿಗೆ ಅನುಕೂಲ ಕಲ್ಪಿಸುವ ಜೀವಕೇಂದ್ರಿತ ತತ್ವವನ್ನು ಪಾಲಿಸಿಕೊಂಡು ಬರುವಲ್ಲಿ ಜಾನಪದ ವಿಶ್ವವಿದ್ಯಾನಿಲಯ ಮುಂಚೂಣಿಯಲ್ಲಿ ನಿಲ್ಲಬೇಕು.

ತೌಲನಿಕ ಜಾನಪದ ಅಧ್ಯಯನಕ್ಕೆ ಆದ್ಯತೆ ಇರಲಿ.

ಕನ್ನಡ ಸಾಹಿತ್ಯದ ಅಧ್ಯಯನ – ಸೌಂದರ್ಯ ಮೀಮಾಂಸೆ
ಭಾಷಾ ವೈಜ್ಞಾನಿಕ – ಉಪಭಾಷೆಗಳ ಅಧ್ಯಯನ
ಮಾನವಶಾಸ್ತ್ರ ಅಧ್ಯಯನ – ಜಾನಪದ
ಸಮಾಜಶಾಸ್ತ್ರ ಅಧ್ಯಯನ – ಜಾನಪದ
ಇತಿಹಾಸ ಅಧ್ಯಯನ – ಜಾನಪದ
ಮನೋವಿಜ್ಞಾನ ಅಧ್ಯಯನ – ಜಾನಪದ
ಸಂಸ್ಕೃತಿ ವಿಜ್ಞಾನ (Culturology) – ಜಾನಪದ

ದೈಶ್ಯ ಮೂಲವಾದ ಜ್ಞಾನ ಸಂಪತ್ತು (School of Indigenous Knowledge) – ಇದಕ್ಕೆ ಒತ್ತು ಇರಲಿ.

ಆಹಾರ ಪದ್ಧತಿ (Food habits)
ವೈದ್ಯ ಪದ್ಧತಿ (Medicine)
ಆಟೋಟ ವಿಧಾನಗಳು (Games)
ತಂತ್ರಜ್ಞಾನ (Technology)
ಕಲೆ ಮತ್ತು ವಾಸ್ತು ಶಿಲ್ಪ (Art & Architecture)
ನಿರ್ವಹಣ ವ್ಯವಸ್ಥೆ (Management)

ಆನ್ವಯಿಕ ಜಾನಪದ (Applied Folklore) ಅಧ್ಯಯನ ವಿಶೇಷವಾಗಿ ನಡೆಯುವಂತಿರಲಿ.

- ತೊಡುಗೆ, ಪ್ರಸಾದನಗಳು (Costume)
- ಫ್ಯಾಷನ್ ವಿನ್ಯಾಸ (Fashion Design)
- ಬೋಟಿಕ್ ಕಲೆ (Botique)
- ಗಣಕ ವಿಜ್ಞಾನ ವಿಭಾಗ (Department of Computer) ಪ್ರತ್ಯೇಕ ಇರಲಿ.

- ಕರ್ನಾಟಕ (ಭಾರತ)ದ ಹಲವಾರು ಬುಡಕಟ್ಟು ಜನಾಂಗಗಳ ಅಧ್ಯಯನ ನಡೆದು ಗುಣ-ದೋಷಗಳನ್ನು ಸಂಶೋಧಿಸಿ, ಅವರ ಬದುಕು ಆರ್ಥಿಕ ಸ್ವಾವಲಂಬನೆ, ಸಾಂಸ್ಕೃತಿಕ ಸಮೃದ್ಧಿಯತ್ತ ಸಾಗಲು ಅನುವು ಮಾಡುವ ದಾರಿಗಳನ್ನು ಸೃಷ್ಟಿಸಬೇಕು.
- ಜಾಗತೀಕರಣ, ಅನ್ಯ ಸಂಸ್ಕೃತಿಗಳ ಸುನಾಮಿಯಿಂದ ಪಾರಾಗಲು ಜನಪದ ಬದುಕಿನ ಕಳೆದುಹೋದ ಮೌಲ್ಯಗಳ ಪುನರ್ ವಿಮರ್ಶೆ ಆಗಬೇಕು. ಇಲ್ಲಿ ಅಧ್ಯಯನದಿಂದ ವಿದ್ಯಾರ್ಥಿಗಳಿಗೊಂದು ಹೊಸ ಮಾನವೀಯ ಬದುಕು ಪ್ರಾಪ್ತವಾಗಬೇಕು.
- ಜಿಲ್ಲಾವಾರು ಜನಪದ ವಸ್ತುಗಳ ಸಂಗ್ರಹ, ಅಧ್ಯಯನ, ಪ್ರಯೋಜನ, ತಂತ್ರಜ್ಞಾನದ ಹಿನ್ನೆಲೆಯಲ್ಲಿ ನಡೆಯಬೇಕು.
- ಜನಪದ ನಂಬಿಕೆ, ಆಚರಣೆಗಳಿಗೆ ವೈಜ್ಞಾನಿಕ ಕಾರಣಗಳನ್ನು ಹುಡುಕಬೇಕು.
- ಆಕಾಶ ಜಾನಪದ ಕುರಿತಂತೆ ವಿಶೇಷ ಅಧ್ಯಯನ – ಮತ್ತೆ ಬರೆವೆ. ಈಗಿಷ್ಟು ಸಾಕು.

ದಿನಾಂಕ:೨೪.೧೧.೨೦೧೦

ವಿಶೇಷವಾಗಿ ಈ ಕೆಳಗಿನ ಮೂರು ವಿಭಾಗಗಳು ಅಸ್ತಿತ್ವಕ್ಕೆ ಬರಬೇಕು :

- ಭಾಷಾಂತರ ವಿಭಾಗ
- ನಿಘಂಟು ವಿಭಾಗ
- ವಿಶ್ವಕೋಶ ಯೋಜನೆ

ಡಿಪ್ಲೊಮಾ ಶಿಕ್ಷಣಗಳ(courses)ನ್ನು ಆರಂಭಿಸುವುದು ಯುಕ್ತ:

- ಹೊಲಿಗೆ, ಪಾರಂಪರಿಕ ಕಲೆ, ಆಹಾರ ತಂತ್ರಜ್ಞಾನ, ವಿಶೇಷ ರುಚಿ (Food Recipes) ಇತ್ಯಾದಿಗಳ ಡಿಪ್ಲೊಮಾ ಶಿಕ್ಷಣಗಳನ್ನು ಆರಂಭಿಸಬೇಕು. ಗೃಹಿಣಿಯರು ಮನೆಯಲ್ಲೇ ಇದ್ದುಕೊಂಡು ಕಲಿಯುವಂತಾಗಬೇಕು

ಅರೆಕಾಲಿಕ (Part time) ವಾಗಿ – ಸಂಗೀತ (Music) ಮತ್ತು ನೃತ್ಯ (Dance) ತರಗತಿಗಳನ್ನು ಆರಂಭಿಸಬೇಕು.

ಕನ್ನಡ, ಇಂಗ್ಲಿಷ್, ಚರಿತ್ರೆ ಮತ್ತು ಮನೋವಿಜ್ಞಾನ ವಿಷಯಗಳು ಕಲಿಕೆಯ ಮುಖ್ಯ ವಿಷಯಗಳಾಗಿದ್ದಾಗ ವಿಶೇಷ ಕಲಿಕೆ (Specialization) ಯಾಗಿ Folklore ಇರಲಿ.

ಎರಡನ್ನೂ ಅನುಸಂಧಾನ ಮಾಡಿ ಪದವಿ ಗಳಿಸಲು ಅವಕಾಶ ಇರಬೇಕು.

ದಿನಾಂಕ:೩೦.೦೯.೨೦೧೦

ಜನಪದ ತಂತ್ರಜ್ಞಾನ ವಿಶೇಷ ಆದ್ಯತೆ ಪಡೆಯಲಿ

– ಎಂ.ಜಿ. ಬಿರಾದಾರ

ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ,

ನಿಮ್ಮ ಪತ್ರ ತಲುಪಿ ಎರಡು ದಿನವಾಯ್ತು. ಮೊದಲು ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು. ಜಾನಪದ ವಿಶ್ವವಿದ್ಯಾನಿಲಯಕ್ಕೆ ನೀವು ಕುಲಪತಿಗಳಾಗುವ ಸಂಗತಿ ನನಗೆ ಅಭಿಮಾನ, ಅತೀವ ಸಂತೋಷದ ಸಂಗತಿ. ಅದರ ಅಭಿವ್ಯಕ್ತಿಗೆ ಶಬ್ದಗಳು ಸವಕಳಿ ಎನ್ನಿಸಬಹುದು. ಕೊಡೋಣ.

ನಿಮ್ಮ ವಿನಂತಿಯ ಮೇರೆಗೆ ನನ್ನ ಹತ್ತಾರು ಗ್ರಂಥಗಳನ್ನು ಗ್ರಂಥಾಲಯಕ್ಕೆ ಕೊಡಬಲ್ಲೆ. ನನ್ನ ಗ್ರಂಥಾಲಯವನ್ನೇ ಒಂದೆರಡು ಕಾಲೇಜುಗಳಿಗೆ ಈಗಾಗಲೇ ಕೊಟ್ಟೂ ಆಗಿದೆ. ಅದೇನೇ ಇರಲಿ, ಆ ಪುಸ್ತಕಗಳನ್ನು ನನ್ನ ಖರ್ಚಿನಿಂದ ಕಳಿಸಲಾಗದು. ಯಾರ ಮುಖಾಂತರವಾದರೂ ನೀವೇ ಕೊಂಡೊಯ್ಯಬಹುದಾಗಿದೆ.

ಎರಡನೆಯದಾಗಿ, ಯೋಜಿತ ವಿಶ್ವವಿದ್ಯಾನಿಲಯದ ಸ್ವರೂಪ ಕುರಿತಂತೆ ಸಲಹೆ, ಸೂಚನೆ ಬಯಸಿದ್ದೀರಿ. ಇದು ಥಟ್ಟನೆ ನಿರ್ಧರಿಸುವ ಮಾತಲ್ಲ. ಅದು ನಿರಂತರವಾಗಿ, ಅಸಂಖ್ಯಾತ ತಜ್ಞರಿಂದ ನಡೆಯಬೇಕಾದ ಕ್ರಿಯೆ. ಬಹಳ ಕಠಿಣ ಕ್ರಿಯೆಯೂ ಅಹುದು.

ನಾನು 'ಪ್ರಜಾವಾಣಿ'ಯಲ್ಲಿ ಕೆಲವು ವಿಚಾರಗಳನ್ನು ನಾಲ್ಕಾರು ತಿಂಗಳ ಹಿಂದೆ ವ್ಯಕ್ತಪಡಿಸಿರುವೆ:

- ಮೊದಲನೆಯದಾಗಿ, ವಿಶ್ವವಿದ್ಯಾನಿಲಯವೆಂದೊಡನೆ ಅದು ನೀಡುವ ಪದವಿಗಳು ಪ್ರಯೋಜನಾತ್ಮಕ ಅಂದರೆ ಜ್ಞಾನದ ಜೊತೆಗೆ ಜೀವನಾಧಾರ ಉದ್ಯೋಗ ಒದಗಿಸುವ ಬಲವುಳ್ಳವಾಗಿರಬೇಕು. ಇದನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡು ಪಠ್ಯಕ್ರಮ ರೂಪುಗೊಳ್ಳಬೇಕು.

ಜನಪದ ಕಲೆಗಳು ಪುನಶ್ಚೇತನಗೊಳ್ಳಲಿ

– ಕಾಳೇಗೌಡ ನಾಗವಾರ

ಉತ್ತರ ಕನ್ನಡ - ಮಲೆನಾಡು - ಹಳೆ ಮೈಸೂರು ಸೇರುವ ಸ್ಥಳ ಮದಗ ಮಾಸೂರು / ಬನವಾಸಿ / ಹಾವೇರಿ / NH 4 ಗೆ ಹತ್ತಿರ ಇರುವೆಡೆ ತುಂಗಾಭದ್ರಾ ನದಿ ದಡದಲ್ಲಿ ಸ್ಥಾಪನೆಯಾದರೆ ಚೆನ್ನಾಗಿರುತ್ತದೆ. ಅರಣ್ಯದ ಆಜುಬಾಜಿನಲ್ಲಿ ಗಿಡಮರಗಳಿಗೆ ಧಕ್ಕೆಯಾಗದ ಹಾಗೆ ನಿರ್ಮಾಣವಾಗಬೇಕು. ನಾಲ್ಕೂ ವಿಭಾಗ ಕೇಂದ್ರಗಳಲ್ಲಿ ವಿಶ್ವವಿದ್ಯಾನಿಲಯ ಕೇಂದ್ರಗಳನ್ನು ತೆರೆಯಬೇಕು (ವಿಭಾಗೀಯ ಮಟ್ಟದಲ್ಲಿ ಸಭೆ ಜರುಗಿಸಿ ಸಂವಾದ ನಡೆಸುವುದು ಅಗತ್ಯ). ಬಯಲು ವಸ್ತು ಸಂಗ್ರಹಾಲಯ ನಿರ್ಮಾಣವಾಗಬೇಕು.

ಅಧ್ಯಯನ ಮತ್ತು ಸಂಶೋಧನೆಗೆ ಒತ್ತು ಇರಲಿ.

ವೈದ್ಯ ಪದ್ಧತಿ – ನಮ್ಮ ಪರಿಸ್ಥಿತಿಗನುಗುಣವಾಗಿ ಸಮಕಾಲೀನವಾಗಿ ಹವಾಮಾನಕ್ಕನುಗುಣವಾಗಿ ಯಾವುದು ಬೇಕೋ ಅದನ್ನು ಉಳಿಸಿಕೊಂಡು ಹೋಗಬೇಕು. ಕುರುಡಾಗಿ ಇರುವಂಥವನ್ನು ಕೈ ಬಿಡುವುದು.

ಜನಪದ ಸಂಗೀತ, ಜನಪದ ಚಿತ್ರಕಲೆ, ಜನಪದ ನೃತ್ಯಗಳ ಬಗ್ಗೆ ಕ್ಷೇತ್ರ ತಜ್ಞರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸುವುದು ಯುಕ್ತ. ಹಾಸನದ ಜಾದುಗಾರ ಶ್ರೀ ಸೈಯ್ಯದ್ ಹುಸೇನ್, ಚಿತ್ರಕಲಾವಿದರಾದ ಶ್ರೀ ಹಡಪದ, ಶ್ರೀ ಕೆ.ಟಿ. ಶಿವಪ್ರಸಾದ್– ಮಾಯಾಲೋಕದ ವಿಸ್ಮಯಗಳನ್ನು ಅಂತರಂಗದ ಕಣ್ಣುಗಳಿಂದ ನೋಡುವ ಪ್ರಯತ್ನ ಮಾಡಿದವರು. ಅಂಥವರ ಸಲಹೆಗಳನ್ನು ಗಮನಿಸುವುದು ಲೇಸು.

ಜನಪದ ಕಲೆಗಳನ್ನು ಪುನಶ್ಚೇತನಗೊಳಿಸಲು Repertory ತರಹ ಕಲೆಗಳನ್ನು ಕಲಿಸುವ ವ್ಯವಸ್ಥೆ ಆಗಬೇಕು. ಸಾಧಾರಣ ಸರ್ಕಾರಿ ನೌಕರನಿಗೆ ಲಭಿಸುವ ಎಲ್ಲ ಸವಲತ್ತುಗಳನ್ನು ಅವರಿಗೆ ಒದಗಿಸಬೇಕು.

ಕುಶಲಕರ್ಮಿಗಳ ಕೌಶಲ (Skills) ಬೆಳೆಸೋಕೆ – ಆಸಕ್ತಿ ಇರುವವರಿಗೆ ತರಪೇತು ಕೊಟ್ಟರೆ ಮತ್ತಷ್ಟು ಅಭಿವೃದ್ಧಿ ಆಗಬಹುದು.

ಅರಣ್ಯಾಧಿಕಾರಿ ಗಾ.ನಂ. ಶ್ರೀಕಂಠಯ್ಯ ನಾಟಿ ವೈದ್ಯ ಸಮ್ಮೇಳನ ನಡೆಸಿ ಗಿಡಮೂಲಿಕೆ ಕುರಿತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆ ಬಗೆಗೆ ಅವರನ್ನು ಸಂಪರ್ಕಿಸಬಹುದು.

ದಿನಾಂಕ:೦೭.೧೦.೨೦೧೦

ಮೂಲದ್ದೇ ಬೇರೆ ಬೇರೆ ರೂಪಗಳು. ಹಾಗೆಯೇ ಇದಕ್ಕೆ ಸಮನಾದ ಜನಪದ ಕಲೆಗಳು ಹೊರರಾಜ್ಯಗಳಲ್ಲೂ ಇವೆ. ತಮಿಳಿನ ತೆರುಕ್ಕೂತ್ತು, ಆಂಧ್ರದ ವೀಧಿನಾಟಕ, ಕೇರಳದ ಕಥಕ್ಕಳಿ – ಇವುಗಳನ್ನು ಪರಿಚಯಿಸುವ ವಸ್ತು, ಸಾಹಿತ್ಯ, ಪ್ರತಿಕೃತಿಗಳ ಸಂಗ್ರಹ ಮತ್ತು ಪ್ರದರ್ಶನ ಆಗಬೇಕು. ಹಾಗೆಯೇ ಉತ್ತರ ಪೂರ್ವೀ ಭಾರತದ ಮಿಜೋರಾಂ, ಮೇಘಾಲಯ – ಇತ್ಯಾದಿ ಪ್ರದೇಶಗಳ ಕೆಲವು ಜಾನಪದೀಯ ಕಲೆಗಳು ಕರ್ನಾಟಕದ ಕೆಲವು ಜನಪದ ಕಲೆಗಳಿಗೆ ಸಮೀಪವರ್ತಿಯಾಗಿವೆ. ಅವುಗಳ ವಿಡಿಯೋಕರಣದ ಮೂಲಕ ಸಂಗ್ರಹವೂ ಆಗಬೇಕು.

- ನಾವು ದೇಶದಲ್ಲೇ ಪ್ರಪ್ರಥಮ ವಿಶ್ವವಿದ್ಯಾನಿಲಯ ಕಟ್ಟುತ್ತಿರುವುದರಿಂದ ದಕ್ಷಿಣ ಪೂರ್ವೀ ಏಷ್ಯಾದ ಹಲವು ದೇಶಗಳಲ್ಲಿ ಅಲ್ಲದೆ ಭೂತಾನ, ಟಿಬೇಟ್, ಲಂಕಾಗಳಲ್ಲೂ ನಮಗೆ ಸಮೀಪವರ್ತಿಯಾದ ಕಲಾ ಪ್ರಕಾರಗಳಿವೆ. ಅವುಗಳ ಕುರಿತು ತಿಳಿವಳಿಕೆ ಮೂಡಿಸಬಲ್ಲ ಗ್ರಂಥ, ವಸ್ತುಗಳ ವಿಡಿಯೋ ಪ್ರತಿರೂಪಗಳನ್ನು ಸಂಗ್ರಹಿಸುವುದು ಯೋಗ್ಯ.

- ಎಲ್ಲಾ ಆಧುನಿಕ ಉಪಕರಣಗಳನ್ನೊಳಗೊಂಡ ಅತ್ಯುತ್ತಮ ಪ್ರದರ್ಶನ ಥಿಯೇಟರ್ ಮತ್ತು ಸ್ಕ್ರೀನ್ ಇತ್ಯಾದಿ ಇರಲೇಬೇಕು.

- ಜಾನಪದಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪ್ರಕಟವಾದ ಎಲ್ಲಾ ಪುಸ್ತಕಗಳು ಮತ್ತು ಅನ್ಯಭಾಷೆಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ಎಲ್ಲಾ ಪುಸ್ತಕಗಳ ದೊಡ್ಡ ಪ್ರಮಾಣದ ಗ್ರಂಥಾಲಯ ಇರಬೇಕು.

- ಇಂದು ಹೆಚ್ಚಿನ ಜನಪದ ಕಲೆಗಳನ್ನು ಅವುಗಳ ಮೂಲ ಆವರಣದಿಂದ ತೆಗೆದು ವೇದಿಕೆಯಲ್ಲಿ, ಪೇಟೆಪಟ್ಟಣಗಳಲ್ಲಿ ಪ್ರದರ್ಶಿಸುತ್ತಿದ್ದೇವೆ. ಆಗ ಆ ಕಲೆಗಳ ಮೂಲಸತ್ವ ಮತ್ತು ಸೌಂದರ್ಯದ ಬಹಳ ಅಂಶ ಇಲ್ಲವಾಗುತ್ತವೆ. ಉದಾಹರಣೆಗೆ : ಯಕ್ಷಗಾನ ಬಯಲಾಟ. ಅದು ಬಟ್ಟಂಬಯಲಿನಲ್ಲಿ ನಾಲ್ಕು ಕಂಬಗಳ ಮೇಲೆ ಹಾಕಿದ ಚಪ್ಪರದ ಕೆಳಗೆ ನಡೆಯುತ್ತಿದ್ದ ಕಲೆ. ಆಗ ನಮ್ಮ ನೋಟಕ್ಕೆ – ಕಲ್ಪನೆಗೆ – ಯಾವುದೇ ಅಡೆತಡೆ ಇರಲಿಲ್ಲ. ಆ ರಂಗಸ್ಥಳ ಸ್ವರ್ಗ, ಮರ್ತ್ಯ, ಪಾತಾಳಗಳಾಗಿ ಪರಿವರ್ತನೆಗೊಂಡಾಗ ನಮ್ಮ ಭಾವನೆಗೆ ಅಡ್ಡಿ ಬರುವ ಯಾವ ಅಂಶಗಳೂ ಅಲ್ಲಿರಲಿಲ್ಲ. ಪ್ರೇಕ್ಷಕನ ಕಲ್ಪನೆಗೆ ಸರಿಯಾಗಿ ಆ ಸಣ್ಣ ಸ್ಥಳ ಕಾಣಿಸಿಕೊಳ್ಳುತ್ತಿತ್ತು. ಪಾತ್ರಧಾರಿಗಳ

ಜನಪದ ವೈದ್ಯಕೀಯ ಪದ್ಧತಿ, ನಾಟಿವೈದ್ಯ, ಜಾಂಡೀಸ್ ಕುರಿತು ಡಿಗ್ರಿ ಕೋರ್ಸ್ ಆರಂಭಿಸುವುದು. ಅಡುಗೆ, ಉಡುಗೆ–ತೊಡುಗೆ ಕಲಿಸುವಂತಾಗಬೇಕು. ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸುವ ಅಗತ್ಯವಿದೆ. ವೀರಗಾಸೆ, ಡೊಳ್ಳು, ಕಂಸಾಳೆ ಕಲೆಗಳನ್ನು ಕಲಿಸುವಾಗ ಅಧ್ಯಾಪಕರ ಜೊತೆ ಮೂಲ ಕಲಾವಿದರನ್ನು ಸಂಪನ್ಮೂಲ ವ್ಯಕ್ತಿಯನ್ನಾಗಿ ಇಟ್ಟುಕೊಳ್ಳಬೇಕು. ಕಲೆಗಳಿಗೆ ಕಲಾವಿದರ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದರೆ, ಸ್ಥಾನಮಾನ, ಗೌರವ ನೀಡುವುದಾದರೆ ಶ್ರೋತೃಗಳು ಬಂದೇ ತೀರುತ್ತಾರೆ.

ಕಲೆಗಳನ್ನು ಉಳಿಸುವುದು – ಬೆಳೆಸುವುದು ಸಾಧ್ಯ – ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಕತೆ ಹೇಳುವುದು, ಒಗಟು ಒಡ್ಡುವುದು, ಕಂಸಾಳೆ ಮುಂತಾದ ಕಲೆಗಳನ್ನು ಕಲಿಸುವುದು. ಶಾಲಾ ಕಾಲೇಜು ಪಠ್ಯದಲ್ಲಿ ಕತೆ, ಒಗಟು, ಗೀತೆ, ಗಾದೆ, ಕಡ್ಡಾಯ ಆಗಬೇಕು.

ಔಷಧಿ ಪರಿಣಾಮಕಾರಿಯಾಗಿದ್ದರೆ ಅದರ ಮಾಹಿತಿಯನ್ನು ಮಕ್ಕಳಿಗೆ ವೈಜ್ಞಾನಿಕ ವಿಧಾನದಲ್ಲಿ ತಿಳಿಸುವುದು ಉಪಯುಕ್ತ. ಜನಪದ ಬಳಕೆದಾರರೂ ಸಿಗುತ್ತಾರೆ; ಶ್ರೋತೃಗಳೂ ಸಿಗುತ್ತಾರೆ.

ಕ್ಷೇತ್ರಕಾರ್ಯಕರ್ತರಿಗೆ ತರಬೇತಿ ನೀಡಬೇಕು. ಅವರು ಸಂಗ್ರಹಿಸಿ ತಂದ ಸಾಮಗ್ರಿಯನ್ನು ಸಂಗ್ರಾಹಕರ ಹೆಸರಿನಲ್ಲೇ ಪ್ರಕಟಿಸುವಾಗ ಸಂಯುಕ್ತವಾಗಿ ಗಾಯಕರ ಹೆಸರಿನಲ್ಲೂ ಪ್ರಕಟಿಸುವುದು ಯುಕ್ತ. ಗೌರವಧನ ಇಬ್ಬರಿಗೂ ಸಮಾನವಾಗಿ ವಿತರಣೆಯಾಗಬೇಕು.

- **ನಿಘಂಟು ಯೋಜನೆ,** ಪ್ರತಿ ತಾಲ್ಲೂಕಿಗೆ ನಾಲ್ಕು ಮಂದಿ ನೇಮಿಸಿ ಪರಿಷ್ಕರಣ ಕಾರ್ಯ ಕೈಗೊಳ್ಳಬೇಕು. ೧೦ ಸಂಪುಟಗಳನ್ನು ತರುವುದು.
- **ವಿಶ್ವಕೋಶ ಯೋಜನೆ,** ವ್ಯವಸ್ಥಿತವಾಗಿ ನಡೆಯಬೇಕು. ೧೦ ಸಂಪುಟಗಳಲ್ಲಿ ಹೊರ ಬರುವಂತಾಗಬೇಕು.
- ಸಾಮಗ್ರಿಯನ್ನು ಲಿಖಿತ ಮತ್ತು ಅಲಿಖಿತ ಮೂಲದಲ್ಲಿ ದೊರಕಿಸಿಕೊಳ್ಳಲು, ಸಾಕ್ಷ್ಯ ಚಿತ್ರ ನಿರ್ಮಿಸಲು –ಸ್ಟುಡಿಯೋ ನಿರ್ಮಾಣವಾಗಬೇಕು.
- ಮ್ಯೂಸಿಯಂ, ಆರ್ಕೈವ್ಸ್ ನಿರ್ಮಾಣ ಆಗಬೇಕು.
- ಕಲಿತು ಹಾಡುವವರು ಹವ್ಯಾಸಿ ಕಲಾವಿದರೇ ಹೊರತು ಮೂಲಗಾಯಕರಲ್ಲ.

ದಿನಾಂಕ:೦೮.೧೦.೨೦೧೦

ವಿಶ್ವವಿದ್ಯಾನಿಲಯಕ್ಕೊಂದು ಡ್ರೆಸ್‌ಕೋಡ್ ಇರಲಿ

- ಏರ್ಯ ಲಕ್ಷ್ಮೀನಾರಾಯಣ ಆಳ್ವ

ಶ್ರೀ ಅಂಬಳಿಕೆ ಹಿರಿಯಣ್ಣನವರಿಗೆ,

ಸಪ್ರೇಮ ವಂದನೆಗಳು. ನಿಮ್ಮ ಪತ್ರ ೦೪.೧೧.೨೦೧೦. ದೇಶದಲ್ಲೇ ಪ್ರಪ್ರಥಮವಾಗಿ ಪ್ರಾರಂಭವಾಗಲಿರುವ ಜಾನಪದ ವಿಶ್ವವಿದ್ಯಾನಿಲಯಕ್ಕೆ ನನಗೆ ಅನಿಸಿದ ಅನಿಸಿಕೆಗಳನ್ನು ಬರೆದು ಕಳುಹಿಸುವಂತೆ ತಿಳಿಸಿದ್ದೀರಿ.

ನಾನು ಜಾನಪದದಲ್ಲಿ "ತಜ್ಞ" ಅಲ್ಲ. ಆದರೂ ಜನಪದ ಕಲಾಪ್ರಕಾರಗಳ ನಡುವೆ ಹುಟ್ಟಿ ಬೆಳೆದಿದ್ದೇನೆ. ಅವುಗಳನ್ನು ಕಂಡು ಸಂತೋಷಪಟ್ಟಿದ್ದೇನೆ. ಕೆಲವು ಆರಾಧನಾ ರೂಪದ ಕಲೆಗಳಿಗೆ ಮನೆಯಂಗಳದಲ್ಲೇ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾ ಬಂದಿದ್ದೇನೆ.

ನನಗೆ ಅನಿಸಿದ ಕೆಲವು ವಿಚಾರಗಳನ್ನು ಬರೆದು ಈ ಕಾಗದದ ಜೊತೆ ಲಗ್ತೀಕರಿಸಿ ಕಳುಹಿಸಿಕೊಡುತ್ತಿದ್ದೇನೆ. ಈ ದಿನಗಳಲ್ಲಿ ನನ್ನ ವೈಯಕ್ತಿಕ ಕೆಲಸ ಕಾರ್ಯಗಳ ಒತ್ತಡದ ನಡುವೆ ಅವಸರವಾಗಿ ನನಗೆ ತೋಚಿದ ನಾಲ್ಕು ಮಾತು ಬರೆದು ಕಳುಹಿಸುತ್ತಿದ್ದೇನೆ.

ಜಾನಪದ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಕೆಲವು ಅನಿಸಿಕೆಗಳು

- ಭಾರತದಲ್ಲೇ ಮೊತ್ತಮೊದಲು ಪ್ರಾರಂಭವಾಗಲಿರುವ ವಿಶ್ವವಿದ್ಯಾನಿಲಯವಾದುದರಿಂದ ಕರ್ನಾಟಕದ ಮತ್ತು ಭಾರತದ ವಿವಿಧ ಪ್ರದೇಶಗಳ ಜಾನಪದ ಪರಿಕರಗಳ ದೊಡ್ಡ ಸಂಗ್ರಹಾಲಯ ಇರಬೇಕು. ಮೂಲ ಸಿಗದಿದ್ದಾಗ ಅವುಗಳ ಪ್ರತಿಕೃತಿಗಳನ್ನಾದರೂ ಮಾಡಿಸಿ ಇಡಬೇಕು. ಮತ್ತು ವಿಷಯಾನುಕ್ರಮವಾಗಿ ಅವುಗಳನ್ನು ಪ್ರಪ್ರತ್ಯೇಕವಾಗಿ ಜೋಡಿಸಿಡಬೇಕು. ಅದರ ಹತ್ತಿರ ಉಪಕರಣದ ಹೆಸರು, ಬಳಕೆಯ ಪ್ರದೇಶ, ಸಂದರ್ಭಗಳ ಸಂಕ್ಷಿಪ್ತ ಪರಿಚಯ ಇರಬೇಕು.

ಇಟ್ಟುಕೊಂಡು ಕಲೆಗಳನ್ನು ಕಲಿಸುವ ಏರ್ಪಾಡು ಮಾಡಬೇಕು. ಸಂಪನ್ಮೂಲ ವ್ಯಕ್ತಿಗಳು ಮೂಲ ಕಲಾವಿದರು ಕಲೆಗಳನ್ನು ಕಲಿಸುವ – ಪ್ರಯೋಗಿಸುವ ಕ್ರಮ ನೋಡಿ ಪಠ್ಯಕ್ರಮ ರೂಪಿಸಬೇಕು. ಸಿದ್ಧಾಂತ ರೂಪಿಸಿ (Theory build up) ಪಠ್ಯ ರೂಪಿಸಬೇಕು. ಜಾತ್ರೆಗಳ ಅಧ್ಯಯನಕ್ಕೆ ಆದ್ಯತೆ ಇರಲಿ.

ಕರ್ನಾಟಕದ ಎಲ್ಲ ಜಾತ್ರೆಗಳ ದಾಖಲೀಕರಣ (Documentation) ಆಗಬೇಕಾಗಿದೆ. ಪರಂಪರೆ ಮತ್ತು ಪ್ರದರ್ಶನ ವಿವರಗಳೊಂದಿಗೆ ಈ ದಾಖಲೀಕರಣ ಆಗಬೇಕು. ಜಾತ್ರೆಗಳ ಕುರಿತ ಸಂಪುಟಗಳನ್ನು ಹೊರ ತರಬೇಕು. ಕರ್ನಾಟಕದ ಪ್ರಮುಖ ಕಲೆಗಳನ್ನು ಗುರುತಿಸಿ ಇಂದಿಗೂ ಬದುಕಿರುವ ಎಲ್ಲಾ ಕಲಾವಿದರ ಪಟ್ಟಿ ವಿಶ್ವವಿದ್ಯಾನಿಲಯದಲ್ಲಿ ಇರಬೇಕು. ಅವರೆಲ್ಲ ವಿಶ್ವವಿದ್ಯಾನಿಲಯಕ್ಕೆ ಬರುವಂತಾಗಬೇಕು. ಅವರೇ ಎಲ್ಲ ಕಲೆಗಳ ಸಂಸ್ಕೃತಿಗಳ ದಾತಾರರು. ಅವುಗಳಲ್ಲಿ ಮುಖ್ಯವಾದುದನ್ನು ಕಲಿಸುವಂತಾಗಬೇಕು.

- ಸಾಂಪ್ರದಾಯಿಕ ಕೃಷಿ, ದೇಸೀ ಕೃಷಿ ಜ್ಞಾನ ಪರಂಪರೆ ಕಣ್ಮರೆಯಾಗುತ್ತಿದೆ.
- ದೇಸೀ ಏಕ ಅಲ್ಲ; ಅದು ಅನೇಕ.

ಪ್ರತಿ ಹತ್ತು ಕಿ.ಮೀ. ಆಚೆಗೆ ಅದು ಭಿನ್ನವಾಗಿರುತ್ತದೆ. ವ್ಯವಸಾಯ ಪದ್ಧತಿಯೇ ಬೇರೆಯಾಗಿರುತ್ತದೆ. ಈ ಕೆಳಕಂಡಂತೆ ವಿಂಗಡಿಸಿಕೊಳ್ಳಬಹುದು –

- ಮಲೆನಾಡು ಕೃಷಿ ಪದ್ಧತಿ
- ಅರೆ ಮಲೆನಾಡು ಕೃಷಿ ಪದ್ಧತಿ
- ಬಯಲು ಸೀಮೆ ಕೃಷಿ ಪದ್ಧತಿ
- ಬೆಂಗಾಡು ಸೀಮೆ ಕೃಷಿ ಪದ್ಧತಿ
- ನೀರಾವರಿ ಆಶ್ರಯ ಹಾಗೂ ಬಯಲು ಪ್ರದೇಶದ ಕೃಷಿ ಪದ್ಧತಿ

ಉದಾಹರಣೆಗೆ: ಬೆಂಗಾಡು ಸೀಮೆಯ ಆರ್ಕ, ನವಣೆ, ಕೊರ್ಲೆ, ಜಡೆ, ದುಂಡು ನವಣೆ – ಮೂಲ ತಳಿಗಳು ಸಂಪೂರ್ಣ ನಾಶವಾಗಿವೆ.

ಮೂಲ ತಳಿಗಳನ್ನು ಬಿಟ್ಟಿದ್ದರಿಂದ ಸಾಂಪ್ರದಾಯಿಕ ವ್ಯವಸಾಯ ಕಣ್ಮರೆಯಾಗಿದೆ.

2

ಸುಂದರ ಪ್ರಾಕೃತಿಕ ಆವರಣದಲ್ಲಿ ರೂಪುಗೊಳ್ಳಲಿ

– ಲಿಂಗದೇವರು ಹಳೇಮನೆ

ಜನಪದ ಕಲಾವಿದರನ್ನು ನಿಕೃಷ್ಟ ಸ್ಥಿತಿಯಲ್ಲಿಟ್ಟುಕೊಂಡು ವಿಶ್ವವಿದ್ಯಾನಿಲಯವನ್ನು ಬೆಳೆಸೋಕೆ ಆಗುವುದಿಲ್ಲ. ಆರ್ಥಿಕವಾಗಿ ಸಾಮಾಜಿಕವಾಗಿ ಸದೃಢವಾಗಿದ್ದರೆ ಮಾತ್ರ ಹೆಮ್ಮೆಯ ಕಲೆಗಳಾಗಿ ತಮ್ಮ ಕಲೆಗಳನ್ನು ಉಳಿಸೋಕೆ ಪ್ರಯತ್ನ ಮಾಡುತ್ತಾರೆ. ಯೂರೋಪಿನಲ್ಲಿ ಬುಡಕಟ್ಟು ಜನರು ಯಾವ ಕೀಳರಿಮೆಯೂ ಇಲ್ಲದೆ ಕಲೆಗಳನ್ನು ಪ್ರದರ್ಶಿಸುತ್ತಾರೆ. ಶಾಲಾ ಕಾಲೇಜು ಮಕ್ಕಳು ರಂಗದ ಕುಣಿತ, ಪಟಾಕುಣಿತ ಕುಣಿಯುವುದರಲ್ಲಿ ಆಸಕ್ತಿ ತೋರಿಸಿದರೆ ಅಂಥವರನ್ನು ಉತ್ತೇಜಿಸಬೇಕು. ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಜಾನಪದ ಅಧ್ಯಯನ ವಿಭಾಗಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡು ಒಂದೇ ಬಗೆಯ ಕೆಲಸ ಮಾಡುವುದರಿಂದ ನಕಲು (Duplicate) ಆಗದಂತೆ ಅವರಿಗೂ ಮಾರ್ಗದರ್ಶನ ನೀಡುವುದು ಅಗತ್ಯ.

ಅತಿಥಿ ಕಲಾವಿದರಿಗೆ ಉತ್ತಮ ಸಂಭಾವನೆ ಕೊಡಬೇಕಾದುದು ಅಪೇಕ್ಷಣೀಯ. ಅಲೆಮಾರಿಗಳು, ಆಧುನಿಕ ಅಲೆಮಾರಿಗಳ ಬಗೆಗೆ ಅಧ್ಯಯನ ನಡೆಸಬೇಕು. ಕಲೆಯ ಸ್ವರೂಪ ಸ್ವಭಾವಕ್ಕನುಗುಣವಾಗಿ ಅದನ್ನು ಪುನಶ್ಚೇತನಗೊಳಿಸಲು ತರಬೇತಿ ಶಿಬಿರ ನಡೆಸಬೇಕು.

ಕಲೆಗಳನ್ನು ಆಧುನಿಕ ರೀತಿಯಲ್ಲಿ ಬೆಳೆಸಲು ಸಾಧ್ಯವೇ? ನೋಡಬೇಕು. ಇಲ್ಲಿ ಲಭ್ಯವಾಗುವ ಕಲಾಕೌಶಲ (Artefacts)ಗಳನ್ನಿಟ್ಟುಕೊಂಡು ಚರಿತ್ರೆಯನ್ನು ಪುನಾರಚಿಸಲು (Reconstruct) ಯತ್ನಿಸಬೇಕು. ಕರ್ನಾಟಕಕಷ್ಟೇ ಸೀಮಿತಗೊಳಿಸದೆ ಲೋಕದೃಷ್ಟಿ (Worldview) ಇಟ್ಟುಕೊಂಡು ಕಲೆಗಳ ಅಧ್ಯಯನ ನಡೆಸಬೇಕು. ಜಾನಪದಕ್ಕೆ ಸ್ಥಳೀಯ ಎಲ್ಲೆ (Space bound) ಇಲ್ಲ. ಸಾರ್ವತ್ರಿಕ ಆಶಯ (Universal Motif) ಗಳನ್ನು ಲಕ್ಷಿಸಬೇಕು. ಸ್ಥಳೀಯ ವರ್ಣನೆ (Local description) ಗಳನ್ನು ನಿರ್ಲಕ್ಷಿಸಬೇಕಾಗಿಲ್ಲ. ಸಾರ್ವತ್ರಿಕ ಲಕ್ಷಣ (Universal character) ವನ್ನು ಸಂಬದ್ಧಗೊಳಿಸಿ ಪರಿಶೀಲಿಸಬೇಕು.

- ವಿಶ್ವವಿದ್ಯಾನಿಲಯದ ಕೇಂದ್ರ ಲಕ್ಷ್ಯ (Focus) ಮತ್ತು ದರ್ಶನ (Vision) ಸ್ಪಷ್ಟವಾಗಿರಲಿ.
- ಜನಪದ ಗ್ರಾಮ ನಿರ್ಮಾಣಕ್ಕೆ ಯತ್ನಿಸಬೇಕು.
- ಜನರೇ ಸ್ವಯಂ ಮುಂದೆ ಬಂದು ವಸ್ತುಗಳನ್ನು ಕೊಡುವಂಥ ವಾತಾವರಣ ಹುಟ್ಟು ಹಾಕಬೇಕು.
- ಬೃಹತ್ ಮ್ಯೂಸಿಯಂ ಕಟ್ಟಬೇಕು. ಪ್ರಾಕೃತಿಕ ಆವರಣ (ambience) ಚೆನ್ನಾಗಿರುವಂತೆ ನೋಡಿಕೊಳ್ಳಬೇಕು.
- ಖಾಸಗಿಯಾಗಿ ನಡೆಸುವ ಮ್ಯೂಸಿಯಂಗಳಿಗೆ ಉತ್ತೇಜನವಿರಲಿ.
- ಒಳ್ಳೆಯ ಪ್ರಾಕೃತಿಕ ಆವರಣ ಸೃಷ್ಟಿಯಾಗುವಂತೆ ನೋಡಿಕೊಳ್ಳಬೇಕು.
- ಸಣ್ಣಾಟ, ದೊಡ್ಡಾಟಗಳಿಗೆ ಯಕ್ಷಗಾನದಂತೆ ಪೋಷಣೆ (Patronize) ಮಾಡುವುದು ಕಷ್ಟ. ಏಕೆಂದರೆ ಸಣ್ಣಾಟ ಇನ್ನೂ ಶೈಲೀಕೃತ (Stylize) ಆಗಿಲ್ಲ.
- ತಾಳಮದ್ದಲೆ – ತರ್ಕಬದ್ಧವಾದುದು – ಪಾಟೀ ಸವಾಲಿಗೆ ಹೆಚ್ಚು ಅವಕಾಶ ಇರುತ್ತದೆ.
- ಸದಾಶಯ, ಮಾನವಪರ ಇರುವಂಥ ಕಲೆಗಳನ್ನು ಪುನಶ್ಚೇತನಗೊಳಿಸಬೇಕು.
- ತಂಡೋಪತಂಡವಾಗಿ ಮನೆ ಮನೆಗೂ ಹೋಗಿ /ಬಂದು ಮಾರ್ನವಮಿಪದ, ಚೌಪದನಗಳಲ್ಲಿ ಹರಸುವ ಸಂಪ್ರದಾಯವನ್ನು ಪುನಶ್ಚೇತನಗೊಳಿಸಬೇಕು.
- ವಿಶ್ವವಿದ್ಯಾನಿಲಯದ ಲಾಂಛನ (Logo) ಒಟ್ಟಾರೆ ಜನಪದ ಸಂಸ್ಕೃತಿಯ ಪ್ರತೀಕವಾಗಿರಬೇಕು.
- ವಿಶ್ವವಿದ್ಯಾನಿಲಯದಲ್ಲಿ ಶಿಬಿರಗಳು / ಸಮ್ಮೇಳನಗಳು ನಿರಂತರವಾಗಿ ಜರುಗಲಿ. ಭಾಷಾ ಅಧ್ಯಯನ ವಿಭಾಗದಲ್ಲಿ ಸಂಗ್ರಹಿತ ಸಾಹಿತ್ಯ ವಿಭಾಗ ಹಾಗೂ ಪಾರಂಪರಿಕ ಸಾಹಿತ್ಯ ವಿಭಾಗಗಳನ್ನು ರಚಿಸಿಕೊಂಡು ಜನಪದ ಅಭಿವ್ಯಕ್ತಿಗಳಿಗೆ ವಿಶೇಷ ಒತ್ತುಕೊಟ್ಟು ಅಧ್ಯಯನ ನಡೆಸಬೇಕು. Stylistics, Regional Variation, Descriptive, Structural ಮಾದರಿಯಲ್ಲಿ ಪರಿಶೀಲಿಸಬೇಕು.

- ದೀವರ ಕಲೆಗಳನ್ನು ಅಭ್ಯಸಿಸುವಾಗ ಶ್ರೀ ಈಶ್ವರಪ್ಪ ನಾಯಕ ಹಾಗೂ ಶ್ರೀ ಹುಚ್ಚಪ್ಪ ಮಾಸ್ತರರನ್ನು ಸಂಪರ್ಕಿಸುವುದು.
- ಧ್ಯೇಯವಾಕ್ಯವಾಗಿ ಕವಿರಾಜಮಾರ್ಗಕಾರನ "ವಸುಧಾ ವಲಯ ವಿಶೇಷಂ" ಮಾತನ್ನು ಬಳಸುವುದು ಉಚಿತ.
- ಲಾಂಛನ : ವರ್ತುಲದ-ಕೇಂದ್ರದಲ್ಲಿ ತೆನೆ-ಸುತ್ತಲೂ ನಾಲ್ಕೂ ವಲಯದ ಪ್ರಾತಿನಿಧಿಕ ಕಲೆಗಳಿರುವಂತೆ ನೋಡಿಕೊಳ್ಳಬೇಕು.

ದಿನಾಂಕ: ೧೪.೧೦.೨೦೧೧

ಕಲಾ ಪ್ರದರ್ಶನಕ್ಕೆ ಮಾರುಕಟ್ಟೆ ಕಲ್ಪಿತವಾಗಲಿ

- ನಲ್ಲೂರು ಪ್ರಸಾದ್

- ಉದ್ದೇಶಿತ ವಿಶ್ವವಿದ್ಯಾನಿಲಯದಲ್ಲಿ ಅಕೆಡೆಮಿಕ್ ವ್ಯವಸ್ಥೆ ತರುವುದಕ್ಕಿಂತ ಹೆಚ್ಚಾಗಿ ಪ್ರದರ್ಶನ (Performance) ಕ್ಕೆ ಒತ್ತು ಕೊಡುವ ಅಗತ್ಯವಿದೆ.
- ಸಮಗ್ರ ಕರ್ನಾಟಕದ – ಸಮಸ್ತವನ್ನೂ ಪ್ರದರ್ಶನಕ್ಕಿಡುವ ವ್ಯವಸ್ಥೆ ಆಗಬೇಕು. ಎಲ್ಲ ವಸ್ತು ವಿಷಯ ಸಂಗತಿಗಳೂ ಅಲ್ಲಿ ಇರಬೇಕು.
- ಗ್ರಾಮೀಣ ಬದುಕಿಗೆ ಒತ್ತುಕೊಡುವ ಉದ್ದೇಶದಿಂದ ಆರೋಗ್ಯ ಮತ್ತು ಶಿಕ್ಷಣ ಸಂಬಂಧಿಯಾದ ಕಾರ್ಯಕ್ರಮಗಳಿಗೆ ಆದ್ಯತೆ ಇರಲಿ.
- ಕಲಿಕೆ ಮತ್ತು ಪ್ರಯೋಗ – ಪ್ರದರ್ಶನ – ಮೂಲ ಕಲಾವಿದರನ್ನೇ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಿ ಕಲಿಕೆಯಲ್ಲಿ ತೊಡಗುವುದು.
- ಆಧುನಿಕ ಜಗತ್ತಿಗೆ ಕಲೆಗಳನ್ನು ಮಾರುಕಟ್ಟೆ (Marketing) ಮಾಡುವುದು ಆವಶ್ಯಕ. ಸಾಧ್ಯವಿದ್ದೆಡೆಗಳಲ್ಲಿ ಮಾರ್ಪಾಟು ಮಾಡಿ ಉಳಿಸಿಕೊಳ್ಳಲು ಯತ್ನಿಸಬೇಕು.
- ಹಿಂದೆ ಕಲಾವಿದರು ಭಿಕ್ಷೆ ಬೇಡಿ ಕಲಾ ಪ್ರದರ್ಶನ ನೀಡುತ್ತಿದ್ದರು. ಈಗ ಆ ಸನ್ನಿವೇಶವಿಲ್ಲ. ದುಡಿಯುವ ಮಾರ್ಗವಾಗಿ – ಡೊಳ್ಳು / ಪೂಜಾ / ಪಟಾ ಕುಣಿತ / ತಮಟೆ ವಾದನ ಬೆಳೆಯಬೇಕು. ಕಲೆಯಾಗಿ ಮಾರ್ಪಡಬೇಕು.
- ವಿಶ್ವವಿದ್ಯಾನಿಲಯದ ಬೇರೆ ಬೇರೆ ಕೇಂದ್ರಗಳನ್ನು ಬೇರೆ ಬೇರೆ ವಿಭಾಗ ಮಟ್ಟದಲ್ಲಿ ಸ್ಥಾಪಿಸುವುದಕ್ಕಿಂತ ಒಂದು ಕೇಂದ್ರದಲ್ಲಿ ಸ್ಥಾಪನೆಯಾಗುವುದು ಲೇಸು. ಆಡಳಿತ ನಿಯಂತ್ರಣ ಸಾಧಿಸಬಹುದು.

ದಿನಾಂಕ:೨೬.೧೦.೨೦೧೦

ಚಲನಶೀಲತೆಗೆ ಎಡೆ ಇರಲಿ

– ದೇವನೂರು ಮಹಾದೇವ

ಜಾನಪದ ವಿಶ್ವವಿದ್ಯಾನಿಲಯವು ಚಿತ್ರದುರ್ಗದಲ್ಲೇ ನಿರ್ಮಾಣವಾಗಲಿ.

ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯವೇ ಜಾನಪದದ ನಾಡಿಮಿಡಿತ. ಅದಕ್ಕನುಗುಣವಾಗಿ ಜಾನಪದ ಅಧ್ಯಯನ ವಿಷಯಗಳನ್ನು ರೂಪಿಸಬೇಕು. ಮಾನಸಿಕ, ಕೌಟುಂಬಿಕ, ಭಿನ್ನ ಭಿನ್ನ ಗುಂಪುಗಳ ಸಮಾಜದ ಸಂಬಂಧದ ಸ್ವಸ್ಥತೆಗೆ – ಶಾಪ, ಬೈಗುಳ, ಗಾದೆ ಮಾತುಗಳ ರೂಪದ ಅಭಿವ್ಯಕ್ತಿ Catharsis element ನ್ನು ಕೇಂದ್ರವಾಗಿಟ್ಟುಕೊಂಡು ವಿಷಯಗಳ ವಿಂಗಡಣೆ ಮಾಡುತ್ತಾ ಹೋಗಬೇಕು. We need badly ಇದನ್ನೇ. ಇದು ಇವತ್ತಿನ ಸಮಾಜದ ಅಗತ್ಯವಾಗಿ ಪರಿಣಮಿಸಿದೆ. ಈ ಕಾರಣಕ್ಕಾಗಿಯೆ, ಜಾನಪದ ಅಧ್ಯಯನ ಆಗಲೇಬೇಕು.

ಜಾನಪದವನ್ನು ಸರಕಾಗಿಯೇ ನೋಡುತ್ತಿದ್ದೇವೆ. ಇದರಿಂದ ಹೊರ ಬರಬೇಕಾಗಿದೆ. ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಪದವೀಧರರಿಗೆ ಕೀಳರಿಮೆ (Inferiority) ಇದ್ದರೆ ಇಂಗ್ಲಿಷ್ ಪದವೀಧರರಿಗೆ ಒಣ ಪ್ರತಿಷ್ಠೆ ಇರುವುದು ಕಂಡುಬರುತ್ತದೆ.

ಆದಿಮ ಮನಸ್ಸು – ಆದಿಮ ಬದುಕಿಗೆ ಜಾಗತಿಕ ಆಯಾಮ ಇರುವುದರಿಂದ ಜಾನಪದವನ್ನು ಉನ್ನತ ಶಿಕ್ಷಣದಲ್ಲೇ ಉಳಿಸಬೇಕು. ಜಾನಪದವನ್ನು ಉಳಿಸಬೇಕು ಎನ್ನುವುದಕ್ಕಿಂತ ಅದರ ಚಲನಶೀಲತೆಗೆ ಒತ್ತುಕೊಡುವುದು ಲೇಸು.

ಸಂಘಟನೆ – ವಿಘಟನೆ; ಐಕ್ಯತೆ – ಛಿದ್ರತೆ – ಈ ಪ್ರಕ್ರಿಯೆಗಳು ಈ ಪರಂಪರಾ ಜ್ಞಾನದಲ್ಲಿ ಅಂತರ್ಗತವಾಗಿ ಬಂದಿವೆ ಎಂಬುದನ್ನು ಗಮನಿಸಬೇಕು. ದೇಹ–ಮನಸ್ಸು–ಸಮಾಜ– ಜಗತ್ತು – ಈ ನೆಲೆಯಲ್ಲಿ ಸಂಘಟನೆ, ವಿಘಟನೆ ಪ್ರಕ್ರಿಯೆಗಳ ಬಗೆಗೆ ವಿಚಾರ ಮಾಡುವುದು ಯುಕ್ತ.

ಜಾನಪದವನ್ನು ಈ ನೆಲದ ಪಳೆಯುಳಿಕೆಗಳಾಗಿ ನೋಡದೆ ಅದಕ್ಕೆ ಭೌತಿಕವಾದ, ಸಾಮಾಜಿಕವಾದ ಬೆಲೆ ಪ್ರತಿಷ್ಠೆ, ಗೌರವ ತಂದುಕೊಡಬೇಕು.

ಯಕ್ಷಗಾನ Form ಮತ್ತು ಕಲಾವಿದರು – ಶಿಷ್ಟರು :: ಯೋಗಿಗಳು

ಜನಪದ Form ಮತ್ತು ಕಲಾವಿದರು – ಪರಿಶಿಷ್ಟರು :: ಜೋಗಿಗಳು

ಯಕ್ಷಗಾನದಂಥ ವಿಜೃಂಭಿಸುವ ಕಲೆಗಳನ್ನು ತಡವಾಗಿ ವಿಶ್ವವಿದ್ಯಾನಿಲಯದ ಆವರಣಕ್ಕೆ ಬರಮಾಡಿಕೊಳ್ಳುವುದು ಸಮಂಜಸವಾಗಿ ಕಾಣುತ್ತದೆ.

ಜೋಗಿಹಾಡು – ಸಂವಹನ ದೃಷ್ಟಿಯಿಂದ – ಹೆಣ್ಣು ಪ್ರಧಾನವಾಗಿ – ಗಂಡು ಪ್ರಧಾನ (Attitude) ವಾಗಿ ಹಾಡುವ ಪರಿಕ್ರಮ ಬೆರಗುಗೊಳಿಸುವಂಥದು. ಚಕ್ಕಳದ ಗೊಂಬೆ ಪೇಂಟಿಂಗ್ – ಅದ್ಭುತ, ಮೆಚ್ಚುಗೆಗೆ ಅರ್ಹವಾದುದು. ಇವುಗಳ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಬೇಕು.

ಈ ಕಾಲಮಾನಕ್ಕೆ ಯಾವುದು ಲಾಭದಾಯಕ? ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ Attitude ಬೆಳೆಸಿಕೊಂಡು ಕೆಲಸ ಮಾಡಬೇಕು. ಆಗ ಆ Stigma ಹೋಗುವುದು ಸಾಧ್ಯ. ಜಾನಪದದಲ್ಲಿ ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ಅನಿಷ್ಟಗಳನ್ನು ಕಡಿಮೆ ಮಾಡಿ, ಇಲ್ಲವೇ ದೂರ (eradicate) ಮಾಡಿ ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯವನ್ನು ಸಾಧಿಸಬೇಕು.

ಮೈಲಾರಲಿಂಗನ ಆರಾಧನೆಯ ಸಂಪ್ರದಾಯದಲ್ಲಿ ಮಾನಸಿಕ ಸಮಾಧಾನಕ್ಕಾಗಿ ಭಕ್ತಾದಿಗಳು ತಮ್ಮನ್ನು ತಾವು ಹಿಂಸೆಗೆ ಗುರಿಪಡಿಸಿಕೊಳ್ಳುತ್ತಾರೆ. ಯಾವ ಬಗೆಯ ಹಿಂಸೆ ಅವರಿಗೆ ಸಮಾಧಾನ ನೀಡುವುದೋ ಅದನ್ನು ಅವರು ಸಂಪ್ರದಾಯದ ಹೆಸರಿನಲ್ಲಿ ಉಳಿಸಿಕೊಂಡು ಬಂದಿದ್ದಾರೆ. ದೇವರು ಮೈದುಂಬುವುದು, ಮೈಮೇಲೆ ದೇವರನ್ನು ಬರಿಸಿಕೊಳ್ಳುವ ಕ್ರಮ ಅದನ್ನು ದೃಢೀಕರಿಸುತ್ತದೆ.

ದಿನಾಂಕ:೦೬.೧೧.೨೦೧೦

ಜಾನಪದದ ಮುಕ್ತ ಹಾಗೂ ಜಾತ್ಯತೀತ ತತ್ವಗಳನ್ನು ಕಾಯ್ದುಕೊಳ್ಳಬೇಕು

- ಸಿದ್ಧಲಿಂಗಯ್ಯ

ಆಸಕ್ತರು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಬೇರೆ ಬೇರೆ ತಂಡಗಳನ್ನು ರಚಿಸಿ ಎರಡು-ಮೂರು ವಾರಗಳ ಕಾರ್ಯಾಗಾರಗಳನ್ನು ನಡೆಸುವುದು ಅಗತ್ಯ. ಇಡೀ ರಾಜ್ಯದ ಯುವಜನ ಇದರಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ಬೇರೆ ದೇಶಗಳ ಜಾನಪದ ತಜ್ಞರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಮೂರು ತಿಂಗಳು, ಆರು ತಿಂಗಳು ಅವಧಿಗೆ ನೇಮಿಸಿಕೊಳ್ಳುವುದು. ಇಲ್ಲಿಂದಲೂ ಹೊರ ದೇಶಗಳಿಗೆ ಕಲೆ ಸಂಸ್ಕೃತಿ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಳ್ಳಬೇಕು. ಭಾರತದಲ್ಲಿರುವ ಜಾನಪದ ಅಧ್ಯಯನ ಸಂಸ್ಥೆ / ಕೇಂದ್ರಗಳಿದ್ದ ಪಕ್ಷದಲ್ಲಿ ಅಲ್ಲಿಗೆ ಕರ್ನಾಟಕದ ವಿದ್ವಾಂಸರನ್ನು ಕಳುಹಿಸಿಕೊಡುವ ವ್ಯವಸ್ಥೆಯಾಗಬೇಕು. ಸಂಶೋಧನಾಸಕ್ತರಿಗೆ ವಿದ್ಯಾರ್ಥಿ ವೇತನ ಕೊಡುವುದು. ಮಾನವಿಕ ವಿಭಾಗದ ಎಲ್ಲರನ್ನೂ ಒಳಗೊಂಡಂತೆ ಈ ಯೋಜನೆಯನ್ನು ವಿಸ್ತರಿಸುವುದು.

ವರ್ಷಕ್ಕೊಮ್ಮೆ ದೊಡ್ಡ ಪ್ರಮಾಣದ ಕಲಾ ಪ್ರದರ್ಶನಗಳನ್ನು (Event) ಏರ್ಪಡಿಸುವುದು. Grand Event ಜರುಗಿಸಿ ದೇಶದ ಗಮನ ಸೆಳೆಯುವುದು. ಕರ್ನಾಟಕದ ಎಲ್ಲ ಭಾಗದ ಜನಪದ ಕಲಾವಿದರನ್ನು ಬರಮಾಡಿಕೊಂಡು ಆ ಕಲೆಯಲ್ಲಿ ಬದಲಾವಣೆ-ಸುಧಾರಣೆ- ಹೊಸತನ (Innovative)ವನ್ನು ಮೆರೆಯುವುದಾದರೆ ಪ್ರಯೋಗ ಮಾಡಲು ಮುಕ್ತ ಅವಕಾಶ ಕಲ್ಪಿಸಿಕೊಡಬೇಕು. ಪ್ರಯೋಗ ಮತ್ತು ಪ್ರದರ್ಶನದಲ್ಲಿ ಪ್ರಸ್ತುತತೆ ತರಲು ಯತ್ನಿಸುವುದು. ಬೆಳಗಲ್ ವೀರಣ್ಣ ಅವರ ಸ್ವಾತಂತ್ರ್ಯ ಹೋರಾಟದ ಗೊಂಬೆಯಾಟ, ಗಾಂಧೀಜಿ ಕುರಿತ ತೊಗಲು ಗೊಂಬೆಯಾಟ ಸಫಲವಾದವು. ಪ್ರಸ್ತುತತೆ ತರುವ ಅವಕಾಶವಿದ್ದರೆ ಅಂಥ ಪ್ರಯೋಗಗಳನ್ನು ಉತ್ತೇಜಿಸಬೇಕು; ಅವಕಾಶ ಒದಗಿಸಬಹುದು.

ದಾಖಲೀಕರಣ – ವಿಶ್ಲೇಷಣೆ – ಅಧ್ಯಯನಗಳಿಗೆ ವಿಶೇಷ ಒತ್ತು ಕೊಡಬೇಕು. ಹೊಸ ಒಳನೋಟ- ಚಿಂತನೆಗಳಿಗೆ ಎಡೆ ಮಾಡಿಕೊಡಬೇಕು.

ಗೋಚರಕ್ಕೆ ಬಂದಿದ್ದೂ ನಮ್ಮ ಗಮನಕ್ಕೆ ಬಾರದೆ ಇದ್ದ ಅನೇಕ ಸಂಗತಿಗಳನ್ನು ಅಧ್ಯಯನದ ಮೂಲಕ ಪ್ರಕಟಗೊಳಿಸುವ ವ್ಯವಸ್ಥೆ ಆಗಬೇಕು.

ಅರ್ಥಪೂರ್ಣವಾದ ರೀತಿಯಲ್ಲಿ ಒಂದು ಬೃಹತ್ ಮ್ಯೂಸಿಯಂ ಸ್ಥಾಪಿಸುವುದು ಅಗತ್ಯ. ಕರ್ನಾಟಕದ ಎಲ್ಲ ವಿಭಾಗಗಳ ವಸ್ತು ಸಾಮಗ್ರಿಗಳು ಅಲ್ಲಿ ಪ್ರದರ್ಶನಗೊಳ್ಳಬೇಕು.

ಕಲಾವಿದರ ಭೇಟಿ(Meet the artist) ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ತಿಂಗಳೂ ನಾಡಿನ ಸುಪ್ರಸಿದ್ಧ ಜನಪದ ಕಲಾವಿದರ ಭೇಟಿ–ಮಾತುಕತೆ–ಪ್ರದರ್ಶನ ನಡೆಯುವಂತಾಗಬೇಕು.

ಅಂತಾರಾಷ್ಟ್ರೀಯ ಮಟ್ಟದ ಜಾನಪದದ ಶ್ರೇಷ್ಠಾತಿಶ್ರೇಷ್ಠ (classic) ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಭಾಷಾಂತರ ಯೋಜನೆ ಹಮ್ಮಿಕೊಳ್ಳಬೇಕು.

ಬೃಹತ್ ಯೋಜನೆಗಳು:

- ಯುವ ಸಂಶೋಧಕರಿಂದ ನಾಡಿನಾದ್ಯಂತ ಕ್ಷೇತ್ರಕಾರ್ಯ ನಡೆಯುವಂತಾಗಬೇಕು.
- ಜನಪದ ಕಲಾವಿದರ ಜೀವನಾಧ್ಯಯನವನ್ನು ಕೈಗೆತ್ತಿಕೊಳ್ಳಬೇಕು.
- ಜಾನಪದದಲ್ಲಿ ಆಸಕ್ತಿ ಮೂಡಿಸಲು ಕಾಲೇಜು ಮಟ್ಟದಲ್ಲಿ ಉಪನ್ಯಾಸ ಪ್ರಯೋಗ–ಪ್ರದರ್ಶನ ಜರುಗಬೇಕು.
- ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ರಾಜ್ಯ ವ್ಯಾಪ್ತಿಯ ಜನಪದ ಕಲಾ ಪ್ರದರ್ಶನಗಳು ನಡೆಯುವಂತಾಗಬೇಕು.
- ರಾಜ್ಯ ವ್ಯಾಪ್ತಿಯಲ್ಲಿ ಜಾನಪದ ತಜ್ಞರ ದಿನವನ್ನು ಆಚರಿಸುವಂತಾಗಬೇಕು. ಜೀಶಂಪ / ಗದ್ದಗೀಮಠ / ಅರ್ಚಕ ರಂಗಸ್ವಾಮಿ / ಹಲಸಂಗಿ ಗೆಳೆಯರು / ವೆರಿಯರ್ ಎಲ್ವಿನ್ / ಎಚ್.ಎಲ್. ನಾಗೇಗೌಡ / ಕರೀಂಖಾನ್ / ಕರಾಕೃ – ಇಂಥವರ ಜೀವನ ಪರಿಚಯ ಆಗಬೇಕು. ಕಿರು ಕೃತಿಗಳನ್ನು ರಚಿಸಿ ಪ್ರಕಟ ಮಾಡಬೇಕು.
- ಜನಪದ ಕಲಾವಿದರು ಮತ್ತು ಸಂಶೋಧಕರ ಭಾವಚಿತ್ರಗಳ – ಭಾವಚಿತ್ರ ಮಾತ್ರವಲ್ಲ – ಕ್ಷೇತ್ರಕಾರ್ಯ – ಉಪನ್ಯಾಸ– ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಚಿತ್ರವನ್ನೊಳಗೊಂಡ ಆಲ್ಬಮ್ ತಯಾರಿಸುವುದು.

- ಬದುಕಿರುವ ಕಲಾವಿದರ ಧ್ವನಿಮುದ್ರಿಕೆಗಳನ್ನೂ ಸಿದ್ಧಪಡಿಸಿ ಸಂರಕ್ಷಿಸುವುದು.
- ರಾಷ್ಟ್ರೀಯ ಅಂತಾರಾಷ್ಟ್ರೀಯ ತಜ್ಞರ ಚಿತ್ರಗಳನ್ನು ಅಂತರ್ಜಾಲದಲ್ಲಿ ದೊರಕಿಸಿಕೊಂಡು 'ಗ್ಯಾಲರಿ' ನಿರ್ಮಿಸುವುದು.
- ಎಲ್ಲ ಕಸುಬು – ಕೌಶಲಗಳ – ಆಯಗಾರರ – ಜಾನಪದ ಗ್ರಾಮ (Folklore Village) ಮರುಸೃಷ್ಟಿಯಾಗಬೇಕು.
- ಹಳೆಯ ವಾದ್ಯಗಳ ಸಂಗ್ರಹ ಕಾರ್ಯ ನಡೆಯಬೇಕು. ವಾದ್ಯಗಳನ್ನು ಉತ್ಪನ್ನ (Manufacture) ಮಾಡುವ ಒಂದು ವಿಭಾಗವನ್ನೇ ಕಟ್ಟಬೇಕು. ಆಧುನಿಕ ರೀತಿಯಲ್ಲಿ ಉಪಯುಕ್ತವಾಗಿ ಉತ್ಪನ್ನ ಮಾಡುವ ಘಟಕ ಒಂದನ್ನು ತೆರೆಯುವುದು ಯುಕ್ತ. ಗಂಟೆ / ಡೋಲು ತಯಾರು ಮಾಡುವವರಿಗೆ ಅವಕಾಶ (Scope) ಇರಬೇಕು.
- ರೈತರು, ಕೃಷಿ ಕಾರ್ಮಿಕರು ಹಾಗೂ ಜಾನಪದ ವಿಶ್ವವಿದ್ಯಾನಿಲಯದೊಡನೆ ಸಂಬಂಧ ಸ್ಥಾಪನೆ ಆಗಲಿ. ಜಾನಪದ ಮನಸ್ಸಿಗೆ ಸಂಬಂಧಪಟ್ಟ ವಿಷಯ ರೈತರ ಮನಸ್ಸನ್ನು ಅರಿಯಲು – ಅವರ ಬದುಕನ್ನು ಅರಿಯಲು ಉತ್ತಮ ಸಾಮಗ್ರಿ.
- ಜಾನಪದ ಪಿಎಚ್.ಡಿ. ಮಹಾಪ್ರಬಂಧಗಳ ಪಟ್ಟಿ, ಸಂಪನ್ಮೂಲ ವ್ಯಕ್ತಿಗಳ ಕೋಶ ತಯಾರಾಗಬೇಕು.
- ಸುಸಜ್ಜಿತವಾದ ಗ್ರಂಥಾಲಯವೊಂದು ನಿರ್ಮಾಣಗೊಳ್ಳಬೇಕು.
- ಅಕಾಡೆಮಿಗಳಿಗಿಂತ ಭಿನ್ನವಾದ ರೀತಿಯಲ್ಲಿ ಕೆಲವು ಪ್ರಶಸ್ತಿಗಳನ್ನು ಸ್ಥಾಪನೆ (Award Institute) ಮಾಡುವುದು ಅಗತ್ಯ.
- ಕಲೆಗಳನ್ನು ಕಲಿಸುವ ಮೂಲಕ ಪ್ರಯೋಗ ಪ್ರದರ್ಶನ ನೀಡುವುದರ ಮೂಲಕ ಕರ್ನಾಟಕ ಜಾನಪದವನ್ನು ಜಗತ್ತಿನ ಗಮನಕ್ಕೆ ತರುವುದು ಅಗತ್ಯ. ಅನುವಾದ ಕಾರ್ಯವೂ ಸಾಗಬೇಕು.
- ರಾಷ್ಟ್ರ–ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗಮನ ಸೆಳೆಯುವಂತೆ ಮಾಡಲು ಯೋಜನೆಗಳನ್ನು ರೂಪಿಸಬೇಕು. ಉದಾಹರಣೆಗೆ: ನಮ್ಮ ಅತ್ಯುತ್ತಮ ಜಾನಪದ ಪ್ರಕಾರ (Form) ಒಂದು ಕಾಶ್ಮೀರದಲ್ಲಿ / ಟೋಕಿಯೋದಲ್ಲಿ / ನ್ಯೂಜಿಲೆಂಡ್‌ನಲ್ಲಿ ಪ್ರದರ್ಶನಗೊಳ್ಳಬೇಕು. ಆ ಬಗ್ಗೆ ಉಪನ್ಯಾಸ ನೀಡುವಂತಾಗಬೇಕು.

ಕಾಲೇಜುಗಳಲ್ಲಿ ಜನಪದ ಹಾಡುಗಳ ಹಾಡುಗಾರಿಕೆ ಕಾರ್ಯಕ್ರಮ ಜರುಗಿದರೆ ವಿದ್ಯಾರ್ಥಿಗಳ ಪ್ರತಿಕ್ರಿಯೆ ವಿಭಿನ್ನ ಸ್ವರೂಪದ್ದು. ಗೀತೆಗಳಿಗೆ, ಕಲಾಪ್ರಕಾರಗಳಿಗೆ ದೊರಕುವ ಪ್ರತಿಕ್ರಿಯೆ ವಿಶಿಷ್ಟವಾದುದು; ಭಿನ್ನ ರೀತಿಯದು: ಉನ್ಮಾದಕ್ಕೊಳಗಾಗುತ್ತಾರೆ / ರೋಮಾಂಚನಗೊಳ್ಳುತ್ತಾರೆ / ಎದ್ದು ಕುಣಿಯುತ್ತಾರೆ. ಕಲಾವಿದರೊಂದಿಗೆ ಸೇರಿ ಕುಣಿದು ಕುಪ್ಪಳಿಸುತ್ತಾರೆ – ನಿಯಂತ್ರಣ ಮಾಡುವುದು ಕಷ್ಟ. ಬಡಿದೆಬ್ಬಿಸುವ – ತೀವ್ರ ಗತಿಯ (Fast Rhythm) ತಮಟೆ–ಡೊಳ್ಳು–ಕಂಸಾಳೆ– ಅಂಕನಹಳ್ಳಿ ಶಿವಣ್ಣನವರ ಪೂಜಾ ಕುಣಿತ ವೀಕ್ಷಿಸಿದ ಯಾರಿಗಾದರೂ ಈ ಭಾವ ಮೂಡುವುದರಲ್ಲಿ ಸಂಶಯವಿಲ್ಲ.

ಜನಪದ ಆಚರಣೆಗಳು ಇಂದು ಹೊಸ ಆಯಾಮ ಪಡೆಯುತ್ತಿವೆ. ಹಿಂದಿನ ಸಂದರ್ಭ (Context) ಬೇರೆ ಇದ್ದಿರಬಹುದು. ಈಗ ಬೇರೆ ರೂಪ (Form) ತಗೊಂಡು ಇವತ್ತಿಗೆ ಪ್ರಸ್ತುತ (Relevant) ಆಗುತ್ತಾ ಇವೆ.

ಉದಾಹರಣೆಗೆ:

- **ಉಪವಾಸ** – ಮೊದಲಿಗೆ ಅದು ಒಂದು ಧಾರ್ಮಿಕ ವಿಧಿ ಆಗಿತ್ತು. ಈಗ ಅದಕ್ಕೆ ರಾಜಕೀಯ ಆಯಾಮ ಬಂದಿದೆ.
- **ಉರುಳು ಸೇವೆ** – ದಿನಗೂಲಿ ನೌಕರರು ಉರುಳು ಸೇವೆ ಮಾಡುವುದು.
- **ಜೈಕಾರ ಹಾಕುವುದು** – ಅಣ್ಣಮ್ಮಾಕಿ ಜೈ; ವಿದ್ಯಾಗಣಪತೀ ಕಿ ಜೈ; ಈ ಘೋಷಣೆಗಳಿಗೂ ರಾಜಕೀಯ ಘೋಷಣೆಗಳಿಗೂ ಸಂಬಂಧ ಇದೆ.
- **ರಾಜಕೀಯ ಭಾಷಣಗಳು** – ಸದನದಲ್ಲಿ ಆಡುವ ಮಾತುಗಳಲ್ಲಿ ಗಾದೆ, ಒಗಟುಗಳು ಬಳಕೆಯಾಗುತ್ತಿರುವುದು. ದೇವರು ಬಂದಾಗ ಮೈದುಂಬುವಂತೆ ರಾಜಕೀಯ ಘೋಷಣೆಗಳನ್ನು ಕೂಗುವವರು ಉದ್ವೇಗಕ್ಕೊಳಗಾಗುತ್ತಾರೆ.
- **ಮುಡಿ ತೆಗೆಸುವುದು** – ಮಂತ್ರಿ ಶ್ರೀರಾಮುಲು ಅವರ ಕ್ರಿಯೆಗೆ ಬೆಂಬಲ ವ್ಯಕ್ತಪಡಿಸಲು ಅನುಯಾಯಿಗಳು ಮುಡಿ ತೆಗೆಸುವುದು.

ಹೀಗೆ ಜಾನಪದ ಚಟುವಟಿಕೆಗಳು ಒಂದು ರಾಜಕೀಯ ಕ್ರಿಯೆ / ರಾಜಕೀಯ ಸ್ವರೂಪ ಪಡೆಯುತ್ತಿವೆ.

ಗೊರೂರರು ರಾಜಕೀಯ ಕೈದಿಯಾಗಿದ್ದಾಗ ಕಳ್ಳರಿಂದ ಸಂಗ್ರಹಿಸಿದ ಹಾಡುಗಳು ಅವರ 'ಹಳ್ಳಿಯ ಹಾಡುಗಳು' ಸಂಕಲನದಲ್ಲಿ ಸೇರಿವೆ. ಆಂಜನೇಯ ಮೂರ್ತಿಯನ್ನು, ಒಡವೆಗಳನ್ನು ಕದಿಯಲು ಹೋದ ಕಳ್ಳರು ಹಾಡುವ

ಹಾಡಿನಲ್ಲಿ 'ಒಪ್ಪಾದ ಆಂಜನೇಯ ಬೆಪ್ಪಾದ' ಎಂಬ ಮಾತು ಬರುತ್ತದೆ. ಒಡವೆಗಳನ್ನು ಮುಟ್ಟಿದಾಗ ಆಂಜನೇಯನ ತೊಡೆಗಳು ನಡುಗಿದಂತೆ 'ಗಡಗಡ ನಡುಗಿದ್ಯೇನಪ್ಪಾ'? ಎಂದು ಉದ್ಗರಿಸುವ ರೀತಿ ಗಮನಾರ್ಹ.

ಹೀಗೆ ಜನಪದ ಸಾಹಿತ್ಯದಲ್ಲಿ ಯಾವ ನಿರ್ಬಂಧವೂ ಇಲ್ಲ. ದೇವರೇ ಅಸಹಾಯಕ ಎಂದು ಚಿತ್ರಿಸುವ ಪರಿ ಅನನ್ಯ. 'ಗರತಿಯ ಹಾಡು' ಸಂಕಲನದಲ್ಲಿ ಸಂಕಲಿತವಾಗಿರುವ ಹಾಡೊಂದರಲ್ಲಿ ಇಬ್ಬರೂ ನೀರಿಗೆ ಹೋಗುತ್ತಾ ಇದ್ದಾಗ ಊರಿನವರು ಕೇಳಿದ ಪ್ರಶ್ನೆಗೆ ಹೆಣ್ಣುಮಗಳು ದಿಟ್ಟವಾಗಿ 'ಕುಲವೆರಡು ಮನವೊಂದು' ಎನ್ನುವ ಉತ್ತರವು ಜಾನಪದ ಎಷ್ಟು ಮುಕ್ತ ಎಷ್ಟು ಜಾತ್ಯತೀತ ಎಂಬುದನ್ನು ಸಾಬೀತು ಮಾಡುತ್ತದೆ.

ದಿನಾಂಕ: ೦೪.೧೧.೨೦೧೦

ಜನಪದ ನಾಟಕಗಳು ಮುನ್ನೆಲೆಗೆ ಬರಲಿ

- ಬಸವಲಿಂಗಯ್ಯ

ಜಾನಪದ ನಿಂತಿರುವುದೇ ಕಲೆ ಮತ್ತು ಕಲಾವಿದರಿಂದ. ಪಾರಂಪರಿಕ ಕ್ರೀಡೆ ಮತ್ತು ಕಲೆಗಳ ಪ್ರದರ್ಶನಕ್ಕೆ ಮೇಲಿಂದ ಮೇಲೆ ಅವಕಾಶಗಳನ್ನು ಕಲ್ಪಿಸಬೇಕು. ಬುಡಕಟ್ಟು ಸಂಸ್ಕೃತಿ-ಪ್ರದರ್ಶನಗಳಿಗೆ ಶ್ರೀಮಂತ ಅವಕಾಶ. ಎಲ್ಲ ಪ್ರದರ್ಶನಗಳಿಗೂ ಆಚರಣೆಗಳೇ ಬೆನ್ನೆಲುಬು. ಆದ್ದರಿಂದಲೇ ಪ್ರತಿಯೊಂದು ಪ್ರದರ್ಶನವನ್ನು ಆಚರಣೆಗಳ ಮೂಲಕ ಕೊಂಡಿ (link) ಸಾಧಿಸಿಬಿಡಬೇಕು.

ಎಲ್ಲ ಜನಪದ ನೃತ್ಯಗಳೂ ಆರೋಗ್ಯದ ಕಾಳಜಿ ಹೊಂದಿವೆ. ಪರಿಸರ ಜ್ಞಾನಿ ಸಾಲುಮರದ ತಿಮ್ಮಕ್ಕ, ವಿಶಿಷ್ಟ ಪ್ರತಿಭೆಯ ಕಂಸಾಳೆ ಮಹಾದೇವಯ್ಯ – ಇಂಥ ವಿರಳರನ್ನು ಆದರ್ಶವಾಗಿಟ್ಟುಕೊಳ್ಳಬೇಕು. ವರ್ತಮಾನದಲ್ಲಿ – ಆಧುನಿಕರು ದೇಸಿಯನ್ನೇ ಬಯಸುತ್ತಿರುವುದು ಶುಭ ಶಕುನ.

ಜನಪದ ನಾಟಕಗಳಿಗೆ ವಿಶೇಷ ವಿಭಾಗವನ್ನೇ ತೆರೆಯಬೇಕು. ವ್ಯಕ್ತಿಗಳನ್ನು- ಅವರ ವ್ಯಕ್ತಿತ್ವವನ್ನು ರೂಪಿಸುವ ಕೆಲಸ ನಾಟಕದಿಂದ ಆಗುವುದು. ಶೈಕ್ಷಣಿಕವಾಗಿ ಬೆಳೆಸುವುದು ಅದರ ಮತ್ತೊಂದು ಸಾಧ್ಯತೆ.

ಸಣ್ಣಾಟ, ದೊಡ್ಡಾಟ, ಭೂತಾರಾಧನೆಗಳಿಗೆ (ಯಕ್ಷಗಾನಕ್ಕಿಂತ) ಕೇರಳದಲ್ಲಿ 'ಥೈಯ್ಯಂ' ಗೆ ಪ್ರಾಶಸ್ತ್ಯ ನೀಡುವಂತೆ, ಪ್ರಾಶಸ್ತ್ಯ ನೀಡಬೇಕು. ನೃತ್ಯ, ಹಾಡು ಮತ್ತು ಹೆಜ್ಜೆಮೇಳ – ಇವು ಅಸ್ತಿತ್ವವನ್ನು ಸಾಧಿಸಬೇಕು.

ಕರ್ನಾಟಕದ ಎಲ್ಲ ಬಗೆಯ ಕಲೆಗಳ ಸಮಗ್ರ ದಾಖಲೀಕರಣ (Documentation) ಆಗಲಿ. ಪ್ರತಿಯೊಂದು ಜಿಲ್ಲೆಯೂ ಗಮನದಲ್ಲಿರಬೇಕು. ಕ್ಷೇತ್ರತಜ್ಞರಿಂದ ತರಪೇತಾದ ಕ್ಷೇತ್ರಕಾರ್ಯಕರ್ತರು ಯಾವ ಜಿಲ್ಲೆಯನ್ನೂ ಕೈಬಿಡದೆ ಸೂಚಿ ತಯಾರಿಸಬೇಕು. ತಜ್ಞರ ನೇತೃತ್ವದಲ್ಲಿ ಕಲಾವಿದರಿಗೆ ಜವಾಬ್ದಾರಿ ಹೊರಿಸಬೇಕು.

ಮೂಲಪಠ್ಯಕ್ಕೆ ಉಪಪಠ್ಯಗಳು (Sub texts) ಇರುತ್ತವೆ. ಸಂಸ್ಕೃತಿಯಲ್ಲಿ ಭೇದ ಎಣಿಸಬಾರದು. ತಾರತಮ್ಯ ಮಾಡದೆ ಎಲ್ಲವನ್ನೂ ಸಮ ಸಂಸ್ಕೃತಿಗಳೆಂದೇ ಪರಿಭಾವಿಸಬೇಕು.

ಕಲೆಗಳಲ್ಲೂ Gradation ಮಾಡಕೂಡದು. ಗಾಯನ-ನರ್ತನ-ಸಾಹಿತ್ಯ ಜೊತೆ ಜೊತೆಯಾಗಿ ಸಾಗುವಂಥವು. ಜನಪದ ನಾಟಕಗಳು ಹುಟ್ಟಿರುವುದು ಹೆಣ್ಣಿನ ಶೀಲದ ಸುತ್ತ. ಆಯಾ ಜಿಲ್ಲೆಗಳ ಕಲೆಗಳಿಗೆ ಪ್ರಾಮುಖ್ಯತೆ ಇರಲಿ. ಯಾವುದೂ ಕೇವಲ ಪ್ರಾದೇಶಿಕ (Regional) ಆಗಬಾರದು. ಎಲ್ಲರಲ್ಲೂ ಜಾಗೃತಿ (Awareness) ಮೂಡಬೇಕು.

ಎಲ್ಲ ಐದೂ ಪ್ರಾದೇಶಿಕ ವಲಯಗಳಲ್ಲಿ (Revenue Zone) ಕಲೆ-ಕ್ರೀಡೆ, ನಾಟಕ ಪ್ರದರ್ಶನಗಳಿಗೆ ಅವಕಾಶ ಒದಗಬೇಕು. ಶರಣರನ್ನು – ಅವರ ಬಹುರೂಪಿ ಪ್ರತಿಭೆಯನ್ನು ಗಮನಿಸಬೇಕು. ಬಹುಮುಖ ಪ್ರತಿಭೆಗೆ ಒತ್ತು ಇರಲಿ.

ಗುರು ಶಿಷ್ಯರ ಪರಂಪರೆ ಪುನಶ್ಚೇತನಗೊಳ್ಳಲಿ. ವಾದ್ಯ ಪರಿಕರಗಳಲ್ಲಿ ತರತಮ (Gradation) ಕ್ಕೆ ಎಡೆ ಕೊಡಬಾರದು.

ದಿನಾಂಕ:೨೯.೧೧.೨೦೧೦

ಕೀಳಾಗಿ ನೋಡುವ ಪ್ರವೃತ್ತಿಯನ್ನು ಇಲ್ಲಗೈಯಬೇಕು

– **ಗೋವಿಂದಯ್ಯ**

ಜಾನಪದ ವಿಶ್ವವಿದ್ಯಾನಿಲಯವು ಬಳ್ಳಿಗಾವೆ / ಬನವಾಸಿಯಲ್ಲಿ ಸ್ಥಾಪನೆಯಾಗಲಿ.

Non academicians ಭಾಗವಹಿಸುವಂತಾಗಬೇಕು. ಮುಕ್ತ ವಿಶ್ವವಿದ್ಯಾನಿಲಯದ ಪರಿಕಲ್ಪನೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯವನ್ನು ರೂಪಿಸುವುದು. ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದ ಹಾಗೂ ಬಾರದ ಚಟುವಟಿಕೆಗಳೂ ಜಾನಪದ ವಿಶ್ವವಿದ್ಯಾನಿಲಯದ್ದೇ ಎಂದು ಭಾವಿಸಬೇಕಾಗುತ್ತದೆ. ಕೆ. ರಾಮಯ್ಯನವರು ಕತೆ ಹೇಳುವವರದನ್ನೇ ಒಂದು ಶಿಬಿರ ನಡೆಸಿ ಕತೆಗಾರರನ್ನು Recognize ಮಾಡಿದ್ದಾರೆ. ಆಧುನಿಕ ಸಂದರ್ಭದಲ್ಲಿ ಜನಪದ ಕತೆಗಾರರಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ; ಗೌರವವೂ ಇಲ್ಲ. ಕತೆ ಹೇಳುವವರನ್ನು ಮೂಲ ಸಂಪನ್ಮೂಲ ವ್ಯಕ್ತಿಗಳನ್ನಾಗಿಟ್ಟುಕೊಂಡು ಗೌರವ ತೋರುವಂತಾಗಬೇಕು. ಮುಕ್ತವಾಗಿ ತೆರೆದುಕೊಳ್ಳುವ ವಿದ್ವಾಂಸರಿಗೆ ಅವಕಾಶ ಕಲ್ಪಿಸಿಕೊಡಬೇಕು.

ಮುಕ್ತ ವಿಶ್ವವಿದ್ಯಾನಿಲಯದವರು ಸೆರೆಮನೆಯ ಬಂಧಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಜಾನಪದ ವಿಶ್ವವಿದ್ಯಾನಿಲಯ ಸೆರೆಮನೆಯ ವಾಸಿಗಳನ್ನು ಶಿಕ್ಷಣಾರ್ಥಿಗಳನ್ನಾಗಿ ಮಾತ್ರ ನೋಡದೆ ಸಂಪನ್ಮೂಲ ವ್ಯಕ್ತಿಗಳಾಗಿಯೂ ಪರಿಗಣಿಸಬಹುದು.

ಜಾನಪದ ವಿಶ್ವವಿದ್ಯಾನಿಲಯದ ಚಟುವಟಿಕೆಗಳು ಎರಡು ಸ್ತರದಲ್ಲಿ ನಡೆಯಲಿ:

೧. ಸಂಸ್ಕೃತಿಯ ಅಧ್ಯಯನ – academicians ಮಾಡಬೇಕು.

೨. ಮೂಲ ಕಲಾವಿದರಿಂದ ಕಲಾ ಪ್ರದರ್ಶನ–ಕಲಿಕೆ–ಪ್ರಯೋಗ.

– ಇವು ಶ್ರದ್ಧಾ ಕೇಂದ್ರಗಳಲ್ಲಿ ನಡೆಯಬೇಕು.

ಮಾದೇಶ್ವರ ಬೆಟ್ಟ, ಬಿಳಿಗಿರಿರಂಗನಬೆಟ್ಟ, ಸಿದ್ಧರ ಬೆಟ್ಟ, ತಿಂತಿಣಿ, ಶೃಂಗೇರಿ, ಜಾತ್ರಾ ಕೇಂದ್ರಗಳು / ಶ್ರದ್ಧಾಕೇಂದ್ರಗಳಾಗಬೇಕು. ಈ ಕೇಂದ್ರಗಳ ಚಟುವಟಿಕೆಗಳನ್ನು ಸಂಯೋಜಿಸುವಂತಹ ಪುಟ್ಟ ತಂಡವನ್ನು ಕಟ್ಟಬೇಕು. ಜನರಿಗೆ ಸಂಪರ್ಕ ಸಾಧ್ಯವಾಗುವ ತಾಣದಲ್ಲಿ – ವಿಕೇಂದ್ರೀಕರಣಗೊಂಡ– ಶ್ರದ್ಧಾ ಕೇಂದ್ರಗಳಾಗಬೇಕು.

ಸಂಸ್ಕೃತಿ ಅಧ್ಯಯನ ಪ್ರಾಥಮಿಕವಾದುದು – ಮೂಲಭೂತವಾದದ್ದು. ಇಲ್ಲಿಗೆ ಬರುವವರು – ತೊಡಗಿಸಿಕೊಳ್ಳುವವರಿಗೆ ಸಂಸ್ಕೃತಿ ಅಧ್ಯಯನದ ಪ್ರವೇಶ ಇದ್ದೇ ತೀರಬೇಕು.

ಮುಕ್ತ ವಿಶ್ವವಿದ್ಯಾನಿಲಯದ ಸಾಮರ್ಥ್ಯ (Potentiality) ವನ್ನು, ದೇಸಿ ಸಂಗೀತ ಸಂಸ್ಥೆಯ ಮಾದರಿಯನ್ನು, ಇದರ ಅನುಕರಣೆ ಮಾಡದ ಕನ್ನಡ ವಿಶ್ವವಿದ್ಯಾಲಯ (ಹಂಪಿ) ಮಾದರಿಯನ್ನು ಮೈಗೂಡಿಸಿಕೊಂಡರೆ ವಿಶ್ವವಿದ್ಯಾನಿಲಯ ಭಿನ್ನವಾದ ರೀತಿಯಲ್ಲಿ ರೂಪುಗೊಳ್ಳುವುದು ಸಾಧ್ಯ. ಶ್ರದ್ಧಾ ಕೇಂದ್ರಗಳಲ್ಲಿ ಸಂಗ್ರಹಿತವಾದ ಸಾಮಗ್ರಿಯನ್ನು ವಿಶ್ಲೇಷಣೆ ಮಾಡಲು, ವಿದ್ವಾಂಸರು ಯತ್ನಿಸಬೇಕು. ೮೦% ಭಾಗದ ಜನರು ಬದುಕುವ ಕ್ರಮ ಅವರ ಜೀವನ ತತ್ವ ಗಾಂಧೀಜಿಯ ಅಪರಿಗ್ರಹ ಕಲ್ಪನೆ – ನಿಜವಾದ ಜಾನಪದ ಭಾರತ. ಜಾನಪದವನ್ನು distort ಮಾಡಿರುವ / ಕೀಳು ಮಾಡಿರುವ ಅಂಶವನ್ನು (element) ಗುರುತಿಸಿ ಅದನ್ನು subside ಮಾಡಲು ಜಾನಪದ ಅಧ್ಯಯನವನ್ನು ಕೈಗೆತ್ತಿಕೊಳ್ಳುವುದು ಜರೂರು ಎನಿಸಿದೆ.

ಜಾನಪದ ವಿಶ್ವವಿದ್ಯಾನಿಲಯದ ಚಟುವಟಿಕೆಗಳನ್ನು ನಿಭಾಯಿಸಲು ಒಂದು Core Group ರಚಿಸಿ ಅದರಲ್ಲಿ ೫೦% Formal ಇನ್ನು ೫೦% Informal ಇರಲಿ – ಕಾರ್ಯಗತಗೊಳಿಸುವುದು ಯುಕ್ತ.

ದಿನಾಂಕ : ೦೬.೧೧.೨೦೧೦

ವಿದೇಶಿ ಮ್ಯೂಸಿಯಂಗಳ ಮಾದರಿ ಅನುಕರಣೀಯ

- ವೈ.ಕೆ. ಮುದ್ದುಕೃಷ್ಣ

- ನದೀ ತೀರದಲ್ಲೇ ಆಗಲಿ ನದಿ ಮುಖಜ ಭೂಮಿಯಲ್ಲೇ ಆಗಲಿ – ಎಲ್ಲೇ ಮಾಡಿದರೂ ಅಲ್ಲಿ ಕೇಂದ್ರೀಕೃತವಾದ ಕಲೆಗಳಷ್ಟೇ ಸೀಮಿತವಾಗಿರಬಹುದು.
- Roerich Estate - ಸುಮಾರು ೨೦೦ ಎಕರೆ ಜಾಗ ಇದೆ.
- ಹೇಸರಘಟ್ಟದಲ್ಲಿ – Film City - ನೃತ್ಯಗ್ರಾಮ, ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್ – ೩೦೦ ಎಕರೆ ಜಾಗ ಇದೆ.
- ಅಹಮದಾಬಾದ್ನಲ್ಲಿ 'ವಿಶಾಲ್' ಗ್ರಾಮವಿದ್ದು ಆ ಮಾದರಿಯಲ್ಲಿ 'ಗ್ರಾಮ ಕರ್ನಾಟಕ' ನಿರ್ಮಾಣವಾಗಬೇಕಿದೆ.
- ದೇಸಿ ಸಂಸ್ಕೃತಿಯನ್ನು ಬೆಳೆಸಲು – ಸಾಂಸ್ಕೃತಿಕ ಪ್ರಶಿಕ್ಷಕರು ಹುದ್ದೆ ಸೃಷ್ಟಿಸಬೇಕು. ಶಿಕ್ಷಣದ ಜೊತೆಗೆ ತರಪೇತಿ ಮುಖ್ಯ.
- ಪದವೀಧರರಿಗೆ ಬೇಡಿಕೆ ಹೆಚ್ಚಾಗುವಂತೆ ಮಾಡಲು ಎಲ್ಲ ಶಾಲಾ ಕಾಲೇಜುಗಳಲ್ಲಿ ಜಾನಪದವನ್ನು ಕಡ್ಡಾಯವಾಗಿ ಕಲಿಸುವಂತಾಗಬೇಕು.
- ವಿಶ್ವವಿದ್ಯಾನಿಲಯಕ್ಕೆ ಆಸಕ್ತಿ ಇಟ್ಟುಕೊಂಡು ಬರುವವರಿದ್ದರೆ ಕ್ಯಾಂಪಸ್ ಆಯ್ಕೆ ಆಗುವಂತೆ ಮಾಡಬೇಕು.
- ಅಲ್ಲಿ ಬೋಧನಾಂಗ ಇರಲೇಬೇಕು. ಜಾನಪದದ ಸಂರಕ್ಷಣೆ ಮತ್ತು ಪೋಷಣೆ ಆಗಬೇಕು. ಪ್ರದರ್ಶನಗಳು (Performance) ಇರಬೇಕು. ಆ ಶಕ್ತಿಯನ್ನು ಬಲಪಡಿಸದಿದ್ದರೆ ಪೋಷಣೆ ಮಾಡುವುದು ಕಷ್ಟ.
- ಧ್ವನಿ ಮುದ್ರಿಕೆಗಳನ್ನು ಆರ್ಕೈವ್ಸ್‌ನಲ್ಲಿಟ್ಟು ಕಾಯ್ದುಕೊಳ್ಳಬೇಕು.

- ನೋಡಿ ಕಲಿಯಬೇಕಾದರೆ ತಾಂತ್ರಿಕವಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳುವಂತಾಗಬೇಕು. ತಾಂತ್ರಿಕವಾಗಿ ಹೇಗೆ ಸ್ಥಾಪಿಸಬೇಕು ಎಂಬ ಅರಿವು ಇರಬೇಕು. ಬುನಾದಿ ಗಟ್ಟಿಯಾಗಿರಬೇಕು.
- ಚೆನ್ನೈನಲ್ಲಿರುವ Institute of Asian Studies ನಲ್ಲಿ – ಜಪಾನಿ ಸಾಹಿತ್ಯವನ್ನು ತಮಿಳು ಮತ್ತು ಕನ್ನಡದಲ್ಲಿ ಭಾಷಾಂತರ ಮಾಡಲಾಗಿದೆ.
- ಆಫ್ರಿಕನ್ ಭಾಷೆ ಮತ್ತು ಜನಪದ ಕಲೆಗಳನ್ನು ವೀಕ್ಷಿಸುವುದು ಅಗತ್ಯ.
- ಅಮೆರಿಕೆಯ Floridaದಲ್ಲಿರುವ Ebeack Centre, ಜಪಾನ್ ಮತ್ತು ಆಫ್ರಿಕಾ ಕಲೆ ಮತ್ತು ಸಂಸ್ಕೃತಿಯ ಬಗೆಗೆ ಮಾಹಿತಿ ಮಾಡಿಕೊಳ್ಳಬೇಕು.
- ಚೈನಾ ಮತ್ತು ಅಮೆರಿಕೆಯ ವಸ್ತುಸಂಗ್ರಹಾಲಯ (Museum)ಗಳಿಗೆ ಭೇಟಿ ನೀಡುವುದು ಅಗತ್ಯ.
- ದುಬೈ ಮ್ಯೂಸಿಯಂಗಳನ್ನು ವೀಕ್ಷಿಸಿದರೆ ಅಲ್ಲಿ ೪೦ ವರ್ಷಗಳ ಹಿಂದೆ ಏನಿತ್ತು? ಈಗ ಏನಿದೆ? ಎಂಬುದನ್ನು ತಿಳಿಸಿಕೊಡುತ್ತವೆ.

ದಿನಾಂಕ: ೨೦.೧೦.೨೦೧೦

ಉನ್ನತ ಶಿಕ್ಷಣದ ವ್ಯಾಪ್ತಿಯಲ್ಲೇ ಅಸ್ತಿತ್ವ ಗುರುತಿಸಿಕೊಳ್ಳುವಂತಾಗಲಿ

- ಮಲ್ಲೇಪುರಂ ವೆಂಕಟೇಶ

ಕೊನೆಯವರೆಗೂ ರಾಜ್ಯ ವಿಶ್ವವಿದ್ಯಾನಿಲಯವಾಗಿಯೇ ಉಳಿಯುವುದಾದರೆ ರಾಜ್ಯದ ಮುಖ್ಯಮಂತ್ರಿಯವರನ್ನು ಕುಲಾಧಿಪತಿಯಾಗಿ ಹೊಂದಬಹುದು. 12B ಗೇ ಸೇರಿಸುವುದಾದರೆ ರಾಜ್ಯಪಾಲರನ್ನೇ ಕುಲಾಧಿಪತಿಯನ್ನಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ರಾಜ್ಯ ವಿಶ್ವವಿದ್ಯಾನಿಲಯವಾಗಿ ಉಳಿಯುವುದಾದರೆ ನಿಕಾಯ (Faculty)ಗಳನ್ನು ಕಡಿಮೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಬಹುತೇಕ ಎಲ್ಲ ಕೋರ್ಸ್‌ಗಳನ್ನು ಅತಿಥಿ/ ಸಂದರ್ಶಕ ಪ್ರಾಧ್ಯಾಪಕರಿಂದ ನಿರ್ವಹಿಸಬೇಕಾಗುತ್ತದೆ.

12B ಗೆ ಸೇರಿಸುವುದಾದರೆ ಯುಜಿಸಿ ನಿಯಮಾನುಸಾರ ಪೂರ್ಣ ಪ್ರಮಾಣದ ಅಧ್ಯಯನ ವಿಭಾಗಗಳನ್ನು ಹೊಂದುವುದು ಅಗತ್ಯವಾಗುತ್ತದೆ. ಯುಜಿಸಿ ಅನುದಾನ ದೊರಕಿಸಿಕೊಳ್ಳಲು, ಯೋಜನೆಗಳನ್ನು ತರಲು, ವಿಶೇಷ ಅನುದಾನ ಹೊಂದಲು, ವಿಸ್ತರಣ ಚಟುವಟಿಕೆಗಳನ್ನು ಕೈಗೊಳ್ಳಲು, ಕಟ್ಟಡಗಳನ್ನು ನಿರ್ಮಿಸಲು, ಕ್ರೀಡಾಂಗಣ–ಪ್ರಯೋಗಾಲಯಗಳನ್ನು ನಿರ್ಮಿಸಲು ಯುಜಿಸಿ ನಿಯಮಗಳನ್ನು ಪಾಲಿಸಲೇಬೇಕಾಗುತ್ತದೆ.

ಚರಾಸ್ತಿ (Movable Property) – ಕನಿಷ್ಠ ರೂ. ೫೦/– ಲಕ್ಷದ್ದು ಇರಬೇಕು.

ಸ್ಥಿರಾಸ್ತಿ (Immovable Property) – ಕನಿಷ್ಠ ರೂ. ೧ ಕೋಟಿ ಮೌಲ್ಯದ್ದು ಇರಬೇಕು.

ಮೂರು ಅಥವಾ ನಾಲ್ಕು ನಿರ್ದೇಶನಾಲಯಗಳನ್ನು ಹೊಂದುವುದು ಅಪೇಕ್ಷಣೀಯ. ಅದರಲ್ಲಿ ಪ್ರಸಾರಾಂಗವೂ ಸೇರಬೇಕು.

ಭಾಷಾಂತರ ನಿರ್ದೇಶನಾಲಯ ಸಂಶೋಧನಾಂಗದಲ್ಲೇ ಇರಲಿ.

ಸಿಬ್ಬಂದಿ ರೂಪಿಕೆ : ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಅಲ್ಪ ಕಾಲಾವಧಿ ಹಾಗೂ ದೀರ್ಘ ಕಾಲಾವಧಿ ಯೋಜನೆಗಳೆಂದು ವರ್ಗೀಕರಿಸಿಕೊಂಡು ರೂಪಿಸುವುದು ಸಮಂಜಸ.

ವಿಶ್ವವಿದ್ಯಾನಿಲಯಕ್ಕೆ ಒಂದು ಲಾಂಛನ (Logo) ನಿರ್ಧಾರವಾಗಬೇಕು.

ವಿಶ್ವವಿದ್ಯಾನಿಲಯದ ಅಧ್ಯಯನಾಂಗ, ಸಂಶೋಧನಾಂಗ – ಚಟುವಟಿಕೆಗಳಲ್ಲಿ ಬುಡಕಟ್ಟು ಜ್ಞಾನ ಪರಂಪರೆಯನ್ನು ಎಷ್ಟರಮಟ್ಟಿಗೆ ಅಳವಡಿಸಿಕೊಳ್ಳಬೇಕು? ಜಾನಪದ ಹಾಗೂ ಬುಡಕಟ್ಟು ಎರಡನ್ನೂ ಕೂಡಿಕೊಂಡು – ಬುಡಕಟ್ಟು > ಜಾತಿ > ಜನಪದಗಳಾಗಿ ಸ್ಥಿತ್ಯಂತರ ಹೊಂದಿರುವುದರಿಂದ ಎಲ್ಲ ಜನಪದಗಳ ಅಧ್ಯಯನಕ್ಕೆ ಅವಕಾಶ ಮಾಡಿಕೊಳ್ಳಬೇಕು.

ವಿಶ್ವವಿದ್ಯಾನಿಲಯದ ಚಟುವಟಿಕೆಗಳಲ್ಲಿ ಕಾರ್ಯಾಗಾರ ನಡೆಸುವುದು ಪ್ರಧಾನವಾದ ಕಾರ್ಯಕ್ರಮವಾಗಿದೆ. ನೃತ್ಯ, ಕ್ರೀಡೆ, ಸಂಗೀತ ಶಿಬಿರಗಳು ನಿರಂತರವಾಗಿ ನಡೆಯುವಂತಾಗಬೇಕು. ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ಮುಂದಿನ ಕೋರ್ಸ್ (Course) ಗಳಿಗೆ ಹೋಗಲು ಅವಕಾಶ ಮಾಡಿಕೊಡಬೇಕು.

ಸಿಂಡಿಕೇಟ್ / ಅಕೆಡೆಮಿಕ್ ಕೌನ್ಸಿಲ್‌ಗಳಿಗೆ Ex-officio ಆಗಿ ಈ ಕೆಳಗಿನವರನ್ನು ಹೊಂದಬಹುದು:

ಜಾನಪದ ಅಕಾಡೆಮಿ ಅಧ್ಯಕ್ಷರು

ಜಾನಪದ ಲೋಕದ ಅಧ್ಯಕ್ಷರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು

ಹೊನ್ನಾವರದ ಜಾನಪದ ಸಂಸ್ಥೆ, ರಾಮನಗರದ ಜಾನಪದ ಲೋಕ ಮತ್ತು ಉಡುಪಿಯ ಆರ್.ಆರ್.ಸಿ. ಗಳನ್ನು ವಿಸ್ತರಣ ಕೇಂದ್ರಗಳನ್ನಾಗಿ ಪರಿಗಣಿಸಬಹುದು.

ದಕ್ಷಿಣಭಾರತದ ವಿಶ್ವವಿದ್ಯಾನಿಲಯ ಹಾಗೂ ಸಂಶೋಧನ ಸಂಸ್ಥೆಗಳೊಡನೆ ಸಂಪರ್ಕ ಸಾಧಿಸಿ ಸಂಸ್ಥೆ ಹಾಗೂ ಅಕಾಡೆಮಿಗಳೊಡನೆ ಒಡಂಬಡಿಕೆ (Tie Up) ಮಾಡಿಕೊಂಡು ಸಂಶೋಧನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು.

ದಿನಾಂಕ:೧೨.೧೦.೨೦೧೦

ಜಾನಪದ ವಿಶ್ವಕೋಶ, ನಿಘಂಟುಗಳಾಗಲಿ

- ಹಾ. ತಿ. ಕೃಷ್ಣೇಗೌಡ

- ಇಡೀ ಕರ್ನಾಟಕದ ಸರ್ವೇಕ್ಷಣ ಕಾರ್ಯ ಆಗಬೇಕು.
- ಇದುವರೆಗೆ ಕರ್ನಾಟಕದಲ್ಲಿ ನಡೆದಿರುವ ಜಾನಪದ ಸಂಗ್ರಹವನ್ನು online ನಲ್ಲಿ ಪ್ರಕಟಿಸಬೇಕು.
- ನಿಘಂಟು ಮತ್ತು ವಿಶ್ವಕೋಶ ಸಂಪುಟಗಳ ರಚನಾ ಕಾರ್ಯ ಆಗಬೇಕು.
- ಭಾರತದ ಜಾನಪದ ಅಧ್ಯಯನ ವಿಧಾನಗಳಿಗೆ ಸಂಪರ್ಕಸೇತುವಾಗಿ ಆಸರೆಯಾಗುವ ರೀತಿಯಲ್ಲಿರಬೇಕು.
- ಬಯಲು ವಸ್ತು ಸಂಗ್ರಹಾಲಯುವನ್ನು – ಭೋಪಾಲದಲ್ಲಿರುವ ಇಂದಿರಾಗಾಂಧಿ ಮಾನವ ಸಂಗ್ರಹಾಲಯ ಮಾದರಿಯಲ್ಲಿ ನಿರ್ಮಿಸಬೇಕು.
- ಇಂಗ್ಲಿಷ್ ಮತ್ತು ಕನ್ನಡದಲ್ಲಿ ವರ್ಣನಾತ್ಮಕ ವರ್ಗಸೂಚಿ (Descriptive Catelogue) ತಯಾರಾಗಬೇಕು.
- ವಸ್ತು ಸಂಗ್ರಹಾಲಯದಲ್ಲಿ ಜನಪದ ವಸ್ತು ವಿಶೇಷಗಳನ್ನು ವರ್ಗೀಕರಿಸಿ ಇಡಬೇಕು.
- Archives ಒಂದನ್ನು ನಿರ್ಮಾಣ ಮಾಡುವಂತೆ ಜಾನಪದ ಮಾಹಿತಿ ಕೋಶವೊಂದನ್ನು ರಚಿಸಬೇಕು.
- ಜಾನಪದವನ್ನು ಒಂದು ಅಂತರ್ ಶಿಸ್ತೀಯ ಅಧ್ಯಯನ ವಿಷಯವಾಗಿ ಎಲ್ಲ ಶಾಲಾ ಕಾಲೇಜು ಶಿಕ್ಷಣದಲ್ಲಿ ಅಳವಡಿಸಬೇಕು.
- ಜನಪದ ಕಲೆ (Folk art) ಮತ್ತು ಜನಪದ ಸಂಸ್ಕೃತಿ (Folk Culture) ಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಕೇಂದ್ರವೊಂದು ನಿರ್ಮಾಣ ಆಗಬೇಕು.

- ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಪುನಶ್ಚೇತನಗೊಳಿಸುವುದು ಸಾಧ್ಯ.
- ಜನಪದ ಕಲೆಗಳ ಹಾಗೂ ಕಲಾವಿದರ ಸುಧಾರಣೆಯಾಗುವುದರೊಂದಿಗೆ ಜನಪದ ಬದುಕು, ಪುನಶ್ಚೇತನ ಹೊಂದಬೇಕು.
- ಪ್ರದರ್ಶನಾತ್ಮಕ ಜನಪದ ಕಲೆಗಳನ್ನು –ವ್ಯವಸ್ಥಿತವಾದ ಘಟಕವಾಗಿ ರೂಪಿಸಬೇಕು.

ದಿನಾಂಕ: ೦೧.೧೦.೨೦೧೦

ಕಲೆಗಳು ಉಳಿಯಲಿ, ಬೆಳೆಯಲಿ

– ಮದನ್‌ಗೋಪಾಲ್ ಭಾ.ಆ.ಸೇ.,

ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ವೀರಗಾಸೆ, ಕಂಸಾಳೆ ಹೊರತುಪಡಿಸಿದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಪ್ರಚಲಿತವಿರುವ ಸಣ್ಣಾಟ, ದೊಡ್ಡಾಟ, ಗೊಂಬೆಯಾಟ ಹಾಗೂ ಇತರ ಜನಪದ ಕಲೆಗಳಷ್ಟು ಅಂತಃಸತ್ವವುಳ್ಳ ಕಲೆಗಳಿಲ್ಲ. ಸಾಹಿತ್ಯ, ಸಂಸ್ಕೃತಿ ಸಮೃದ್ಧವಾಗಿದೆ. ಅದನ್ನು ಉಳಿಸಬೇಕು, ಬೆಳೆಸಬೇಕು. ಪರಂಪರಾ ಜ್ಞಾನದ ಸೆಲೆ ಇರುವುದು, ಉತ್ತರ ಕರ್ನಾಟಕ ಪ್ರದೇಶದಲ್ಲಿ. ಅಲ್ಲಿಯೇ ವಿಶ್ವವಿದ್ಯಾನಿಲಯ ರೂಪಿಸುವುದು ಯುಕ್ತ. ಪಿಚ್ಚಳ್ಳಿ, ಜನ್ನಿ, ಬಾನಂದೂರು ಇವರೇ ಮುಂತಾದ ಕಲಾವಿದರ ಅಭಿಪ್ರಾಯಗಳನ್ನು ಕೇಳುವುದು ಸರಿ.

ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯವನ್ನು ಉತ್ತರ ಕರ್ನಾಟಕ ಪ್ರದೇಶದಲ್ಲೇ ಸ್ಥಾಪಿಸುವುದು ಅಗತ್ಯ. ಅದರಲ್ಲೂ ಐತಿಹಾಸಿಕ ಮಹತ್ವವಿರುವ ಲಕ್ಕುಂಡಿ / ಲಕ್ಷ್ಮೇಶ್ವರಗಳಲ್ಲಿ ಸ್ಥಾಪಿಸಿದರೆ ಚೆನ್ನಾಗಿರುತ್ತದೆ. ರಸ್ತೆ, ರೈಲು, ವಾಯುಯಾನಕ್ಕೆ ಸೌಕರ್ಯವಿರುವುದರಿಂದ ಲಕ್ಕುಂಡಿ ಪ್ರಶಸ್ತವಾದ ಸ್ಥಳ. ಆರಂಭದಲ್ಲಿ ಕನಿಷ್ಠ ೩೦೦ ಎಕರೆ ಭೂಮಿ ಪಡೆದುಕೊಂಡರೆ ಸಾಕು.

ದಿನಾಂಕ:೧೨.೧೦.೨೦೧೦

ಕುಶಲಕರ್ಮಿಗಳಿಗೆ ಆದ್ಯತೆ ಇರಲಿ

- ಜಯರಾಮರಾಜೇ ಅರಸ್ ಭಾ.ಆ.ಸೇ.,

ಜಾನಪದ ವಿಶ್ವವಿದ್ಯಾನಿಲಯವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೇ ಸೇರುವುದು ಅದರ ಭವಿಷ್ಯದ ದೃಷ್ಟಿಯಿಂದ ಅಗತ್ಯ.

ವಿಶ್ವವಿದ್ಯಾನಿಲಯದ ರೂಪುರೇಷೆ ಸಿದ್ಧವಾದ ಮೇಲೆ ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಒಪ್ಪಿಗೆ ದೊರಕಿಸಿಕೊಳ್ಳಬೇಕು.

೧. ಅನೌಪಚಾರಿಕವಾಗಿ ತಜ್ಞರೊಡನೆ ಸಂವಾದ ನಡೆಸಬೇಕು. ಸಭೆ ನಡೆಸಿ brain drive ಮಾಡಬೇಕು.

೨. ಎಲ್ಲಾ ಶಾಲಾ ಕಾಲೇಜುಗಳಲ್ಲಿ ಜಾನಪದ ಒಂದು ವಿಷಯವಾಗಿ ಕಲಿಯುವಂತೆ ಮಾಡಬೇಕು.

೩. ಜಾನಪದ ವಿಶ್ವವಿದ್ಯಾನಿಲಯು ಆರಂಭದಲ್ಲೇ ಐದು ವರ್ಷದ ಕೋರ್ಸ್‌ಗಳನ್ನು ಆರಂಭಿಸಬೇಕು.

೪. ಸಿಂಡಿಕೇಟ್ /ಬಿಒಎಂ ರಚಿಸಿಕೊಳ್ಳಬೇಕು.

೫. ಸಂಶೋಧನೆಗೆ, ಮಾರಾಟಕ್ಕೆ, ಪ್ರಕಟಣೆಗೆ ಆದ್ಯತೆ ಇರಲಿ.

೬. ವಿಶ್ವವಿದ್ಯಾನಿಲಯದಲ್ಲಿ ಕಲಿಯಲು ಕಲಿಸಲು ವಿದ್ಯಾವಂತರೇ ಆಗಬೇಕೆ? ಪ್ರತಿಭಾವಂತ ಕುಶಲಕರ್ಮಿಗಳಾಗುವುದಿಲ್ಲವೆ?

ದಿನಾಂಕ: ೦೫.೧೦.೨೦೧೦

ಮೂಲ ಕಲಾವಿದರನ್ನು ಗೌರವಿಸುವಂತಾಗಬೇಕು

– ಡಿ.ಕೆ. ರಾಜೇಂದ್ರ

ಜನಪದ ಸಂಸ್ಕೃತಿ ಇನ್ನೂ ಸಜೀವವಾಗಿರುವೆಡೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಗೊಳ್ಳಲಿ. ಚಾಮರಾಜನಗರ / ಮಂಡ್ಯ ಸಮೃದ್ಧ ನೆಲೆಗಳು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಹು ಹಿಂದೆಯೇ ಸ್ಥಾಪನೆಗೊಂಡಿದ್ದ 'ಜನಪದ ಕಲಾಕೂಟ' ದ ಚಟುವಟಿಕೆಯನ್ನು ಬೀಜರೂಪವಾಗಿಟ್ಟುಕೊಂಡು ಕಲೆ ಕಲಾವಿದರು ಕಲಾ ಪ್ರಕಾರಗಳಿಗೆ ಒಂದು ಸ್ಥಾನಮಾನ (Status) ಪ್ರತಿಷ್ಠೆ, ಗೌರವ ತಂದುಕೊಡಲು ಯತ್ನಿಸಬೇಕು. ಕಲೆಗಳ ಮೂಲ ಸ್ವರೂಪ ಕೆಡದಂತೆ ಕಲೆ ಕಲಾವಿದರ ಆಶಯಕ್ಕೂ ಊನವಾಗದಂತೆ ಕಲೆಗಳನ್ನು ಪುನರುಜ್ಜೀವನಗೊಳಿಸಬೇಕು.

ಕಲಾ ಸಾಮಗ್ರಿಗಳನ್ನು ತಯಾರು ಮಾಡಲು ಸೂಕ್ತ ತರಪೇತಿ ಅಗತ್ಯ. ಮೂಲ ಕಲಾವಿದರನ್ನೇ ಅದರಲ್ಲಿ ತೊಡಗಿಸಬೇಕು. ಕರ್ನಾಟಕದ ಎಲ್ಲ ಕಲಾ ಪ್ರಕಾರಗಳ ವಿಷಯದಲ್ಲೂ ಹಾಗೇ ಆಗಬೇಕು. ಒಟ್ಟಾರೆ ಹೆಚ್ಚು ಜನ ಈ ಚಟುವಟಿಕೆಯಲ್ಲಿ ತೊಡಗಿ (Involve) ಕೊಳ್ಳುವಂತೆ ನೋಡಿಕೊಳ್ಳಬೇಕು.

ವಿಶ್ವವಿದ್ಯಾನಿಲಯದಲ್ಲಿ ಮೂಲ ಕಲಾವಿದರ ನೆರವಿನಿಂದ ಕಲಿಸುವ ಕಲೆಗಳ ಪ್ರದರ್ಶನ ಆಗಾಗ ನಡೆಯುವಂತಾಗಬೇಕು. ನಿರ್ಮಾಣ (Production) ಚೆನ್ನಾಗಿಯೇ ಇರುವುದರಿಂದ ಪ್ರದರ್ಶನ ಉತ್ತಮದ್ದಾಗೇ ಇರುತ್ತದೆ. ಮೂಲ ಕಲಾವಿದರನ್ನು ಸಂದರ್ಶಕ ಕಲಾವಿದರನ್ನಾಗಿ ಬರಮಾಡಿಕೊಂಡು ಕಲೆಗಳನ್ನು ಕಲಿಸುವ –ಪ್ರಯೋಗ–ಪ್ರದರ್ಶನ ನೀಡುವ ವ್ಯವಸ್ಥೆಯಾದರೆ ಕಲೆಗಳ ಪುನರುಜ್ಜೀವನ ಸಾಧ್ಯ ಆದೀತು. ಗೊಂಬೆ ಮಾಡುವವರು, ಪ್ರಸಾಧನಗಳನ್ನು ನಿರ್ಮಿಸುವವರು, ನೃತ್ಯಗಳಿಗೆ ಸಂಬಂಧಿಸಿದಂತೆ ವೇಷಭೂಷಣಗಳನ್ನು ಮಾಡುವವರು ವಿಶ್ವವಿದ್ಯಾನಿಲಯದಲ್ಲಿ ಇರುವಂತಾಗಬೇಕು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಲಲಿತ ಕಲೆಗಳ ಶಿಕ್ಷಣ ಆರಂಭಿಸುವಾಗ ಮೂಲಕಲಾವಿದರನ್ನೇ - ಮೃದಂಗ, ತಬಲ, ಪಿಟೀಲು ಕಲಾವಿದರನ್ನೇ ಅಧ್ಯಾಪಕರನ್ನಾಗಿ ನೇಮಿಸಿಕೊಳ್ಳಲಾಗಿತ್ತು. ಜಾನಪದ ವಿಶ್ವವಿದ್ಯಾನಿಲಯದಲ್ಲೂ ಹಾಗೇ ಆಗಬೇಕು. ಎಲ್ಲ ಕಾಲೇಜುಗಳಲ್ಲೂ ಜಾನಪದವನ್ನು ಕಲಿಕೆಯ ವಿಷಯವಾಗಿ ಅಳವಡಿಸಬೇಕು. ಕಲಿತವರಿಗೆ ಉತ್ತಮ ಭವಿಷ್ಯ ಇರುವಂತೆ ಪಠ್ಯಕ್ರಮ ರೂಪಿಸಬೇಕು. ತಾಲ್ಲೂಕು / ಜಿಲ್ಲೆ / ರಾಜ್ಯ ಮಟ್ಟದಲ್ಲಿ ಏರ್ಪಾಟಾಗುವ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ, ವೇದಿಕೆಗಳನ್ನು ಸೃಷ್ಟಿಸಿ ಅವಕಾಶ ಒದಗಿಸಬೇಕು. ಕಲಾವಿದರಿಗೆ ಹೆಚ್ಚಿನ ಪ್ರಾಧಾನ್ಯತೆ ದೊರಕಬೇಕು. ಮೂಲ ಕಲಾವಿದರನ್ನು ಗೌರವಿಸುವ ಪ್ರವೃತ್ತಿ ಕಾಣಬೇಕು. ಶಾಸ್ತ್ರೀಯ ಸಂಗೀತ, ನೃತ್ಯ ಕಲಾವಿದರಿಗೆ ದೊರಕುವ ಗೌರವವೇ ಜನಪದ ಕಲಾವಿದರಿಗೂ ದೊರಕುವಂತಾಗಬೇಕು. Treatment ನಲ್ಲಿ ಸುಧಾರಣೆ ಆಗಲೇಬೇಕು. ಗೌರವ ಸಂಭಾವನೆಯಲ್ಲಿ ತಾರತಮ್ಯ ತಪ್ಪಿದರೆ ಯಾರು ಬೇಕಾದರೂ ಯಾವ ಕಲೆಯನ್ನಾದರೂ ಕಲಿಯಬಹುದು. ಕಲಿಯಲು ಮುಂದೆ ಬರಬಹುದು.

ಕಲಾ ಪ್ರದರ್ಶನ ಪ್ರಯೋಗದಲ್ಲಿ ಕಂಡು ಬರುವ ಆಭಾಸಗಳನ್ನು ತಪ್ಪಿಸಲು ಯತ್ನಿಸಬೇಕು. ಯಾರದೊ ತಲೆಗೆ ಯಾವುದೋ ಕಿರೀಟ, ಭುಜಕೀರ್ತಿ, ವೇಷಭೂಷಣ ಬಳಸದಂತಾಗಬೇಕು. ಅಪಹಾಸ್ಯಕ್ಕೆ ಗುರಿಯಾಗುವುದು ತಪ್ಪಿಸಬೇಕು.

ಒಳ್ಳೆಯ Production ಒಳ್ಳೆಯ Result ತಂದುಕೊಡುವುದು ನಿಶ್ಚಿತ. ಒಟ್ಟಿನಲ್ಲಿ ಎರಡು ಹಂತದಲ್ಲಿ ಕೆಲಸ ಕಾರ್ಯಗಳು ನಡೆಯಬೇಕು.

- ಕಲೆ-ಕಲಾವಿದರ ಸಮೀಕ್ಷೆ ಹಾಗೂ ಅವನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ತರುವ ಕೆಲಸ ಆಗಬೇಕು.
- ಬೃಹತ್ ಯೋಜನೆಗಳನ್ನು ಹಾಕಿಕೊಳ್ಳುವುದರ ಮೂಲಕ ಶಾಶ್ವತಗೊಳಿಸುವ ಕೆಲಸ ಆಗಬೇಕು.

ದಿನಾಂಕ: ೦೫.೧೧.೨೦೧೦

ರಂಗ ಕಲೆಗಳ ಪುನಶ್ಚೇತನವಾಗಲಿ

– ಎಂ.ಪಿ. ಪ್ರಕಾಶ್

ಉದ್ದೇಶಿತ ಜಾನಪದ ವಿಶ್ವವಿದ್ಯಾನಿಲಯವನ್ನು ಜರ್ಮನಿ, ಅಮೆರಿಕೆಯ ಜಾನಪದ ಅಧ್ಯಯನ ಸಂಸ್ಥೆಗಳ ಮಾದರಿಯಲ್ಲಿ ನಿರ್ಮಿಸುವುದು ಯುಕ್ತ. ಈ ವಿಶ್ವವಿದ್ಯಾನಿಲಯದಲ್ಲಿ ತೆರೆಯಲಿರುವ ಎಲ್ಲ ಅಧ್ಯಯನ ವಿಭಾಗಗಳಲ್ಲಿ ಬೋಧನೆ – ಕಲಿಕೆ – ಪ್ರಯೋಗಕ್ಕೆ ಆದ್ಯತೆಯಿರಲಿ. ಬೋಧಿಸುವವರು ಶಿಕ್ಷಣಾರ್ಥಿಗಳಿಗೆ ಪ್ರಾತ್ಯಕ್ಷಿಕೆಯ ಪರಿಣಾಮ (Demonstrative Effect) ತರುವಂತೆ ಬೋಧಿಸಬೇಕು. ಸ್ವಯಂ ಕಲಾವಿದರೂ ಸಂಶೋಧಕರೂ ಆಗಿರುವವರಿಗೆ ಆದ್ಯತೆ ಇರಲಿ.

ಸಮಗ್ರ ಕರ್ನಾಟಕವನ್ನು ಕರ್ನಾಟಕ ಸಂಸ್ಕೃತಿಯನ್ನು ಬಿಂಬಿಸುವ ಒಂದು ಸಮಗ್ರ ಸ್ವರೂಪದ ಮ್ಯೂಸಿಯಂ ನಿರ್ಮಿಸುವುದು ಅಗತ್ಯ. ರಂಗಭೂಮಿ ಕಲೆಗಳ ಪುನಶ್ಚೇತನಕ್ಕೆ ಪ್ರಾಮಾಣಿಕ ಪ್ರಯತ್ನ ಇರಲಿ.

ದಿನಾಂಕ:೨೮.೧೦.೨೦೧೦

ಗ್ರಾಮಚರಿತ್ರಕೋಶ ಯೋಜನೆ ಕಾರ್ಯಗತವಾಗಲಿ

– ಎಂ. ಎಂ. ಕಲಬುರ್ಗಿ

- ಹರಿಹರದಲ್ಲಿ ಸ್ಥಾಪಿಸುವುದು ಸೂಕ್ತ. ನದಿ ನೀರು, ರೈಲು, ರಸ್ತೆ ಸಂಪರ್ಕ ಸೌಲಭ್ಯವಿದೆ. ಕನಿಷ್ಠ ೩೦೦ ಎಕರೆ ಭೂಮಿಯ ಅಗತ್ಯವಿದೆ.
- ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳನ್ನು ಅಲ್ಲೊಂದು ಇಲ್ಲೊಂದು ಹರಡಿದಂತೆ ನಿರ್ಮಿಸುವುದಕ್ಕಿಂತ ಒಂದು ಕಡೆ ನಿರ್ಮಾಣವಾಗಲಿ. ಸ್ವತಂತ್ರ ಕಟ್ಟಡಗಳಾಗಲಿ.
- ಚಿತ್ರದುರ್ಗದ ನೀರಿನ ಕೊರತೆ – ಹವೆ ಚೆನ್ನಾಗಿರುವುದಿಲ್ಲ. ಮದಕರಿನಾಯಕನ ಸ್ಥಳ ಅದು (ಮೆದೆಕೆರೆ ಎಂಬ ಪಾಳೇಗಾರ – ಏಳು ಸುತ್ತಿನ ಕೋಟೆ – ಅದಕ್ಕೆ ಹೇಳಿಕೊಳ್ಳುವಂಥ ಮಹತ್ವವಿಲ್ಲ).

ವಿಶ್ವವಿದ್ಯಾನಿಲಯದ ಸಿಬ್ಬಂದಿ: ಎರಡು ಭಾಷೆಗಳನ್ನು ಬಲ್ಲವರನ್ನು ಮಾತ್ರ ಆಯ್ದುಕೊಳ್ಳುವುದು. ಕನ್ನಡ–ಹಿಂದಿ; ಕನ್ನಡ–ಮರಾಠಿ; ಕನ್ನಡ–ಇಂಗ್ಲಿಷ್; ಕನ್ನಡ–ಉರ್ದು – ಹೀಗೆ. ಇದನ್ನು ಕಡ್ಡಾಯ ಮಾಡುವುದು. ಹೀಗೆ ಮಾಡದೆ ಹೋದರೆ ವಿಶ್ವವಿದ್ಯಾನಿಲಯದ ಅಸ್ತಿತ್ವಕ್ಕೆ ಕುತ್ತು ಬರುವುದು ನಿಶ್ಚಿತ.

- ಜಾನಪದ ವಿಶ್ವವಿದ್ಯಾನಿಲಯ ಮುಖ್ಯವಾಗಿ ಅಕ್ಷರ ಕ್ಷೇತ್ರವಲ್ಲ. ನಿರಕ್ಷರ ಕುಕ್ಷಿಗಳ ಕ್ಷೇತ್ರ. ಮೌಖಿಕ ಪರಂಪರೆ (Oral Tradition) ಮತ್ತು ಪ್ರದರ್ಶನ (Performance) ಇಲ್ಲಿ ಹೆಚ್ಚು ಪ್ರಾಶಸ್ತ್ಯ ಪಡೆಯಬೇಕು.
- ವಿಶ್ವವಿದ್ಯಾನಿಲಯುದ ಕೇಂದ್ರ ಕಛೇರಿ (ಆಡಳಿತ) ಒಂದೆಡೆ ಸ್ಥಾಪನೆಯಾದರೂ ಅದರ ಕಾರ್ಯವ್ಯಾಪ್ತಿಯನ್ನು ನಾಲ್ಕು ಪ್ರಾದೇಶಿಕ ವಲಯಗಳಲ್ಲಿ ಹಂಚಿಕೊಳ್ಳಬೇಕು. ವಿಶ್ವವಿದ್ಯಾನಿಲಯದ ಸಂಶೋಧನ (ವಲಯ) ಕೇಂದ್ರಗಳು ದೊಡ್ಡ ಪ್ರಮಾಣದಲ್ಲಿರಲಿ –

ಅ. ಕಲ್ಯಾಣ ಕರ್ನಾಟಕ

ಆ. ಕಿತ್ತೂರು ಕರ್ನಾಟಕ

ಇ. ಬನವಾಸಿ ಕರ್ನಾಟಕ

ಈ. ಕರಾವಳಿ ಕರ್ನಾಟಕ

ಹೀಗೆ ನಾಲ್ಕು ವಲಯಗಳಾಗಿ ವಿಂಗಡಿಸಿಕೊಂಡು ಸಾಂಪ್ರದಾಯಿಕ ಜ್ಞಾನ ಕಲಿಕೆಗಳಿಗೆ ಎಡೆ ಮಾಡಿಕೊಳ್ಳಬೇಕು.

- ಅಖಂಡ ಕರ್ನಾಟಕವನ್ನು ಬಿಂಬಿಸುವೋಪಾದಿಯಲ್ಲಿ ದೊಡ್ಡ ಮ್ಯೂಸಿಯಂ ನಿರ್ಮಿಸಬಹುದೇ ಹೊರತು ಭೌತಿಕ ಜೀವನ (ಗ್ರಾಮ ಕರ್ನಾಟಕ ?) ವನ್ನು ಜೀವಂತವಾಗಿ ಉಳಿಸಿಕೊಳ್ಳುವುದು ಕಷ್ಟ.
- ಯಕ್ಷಗಾನ, ತಾಳಮದ್ದಲೆಗಳಂತೆ ಪರಿಷ್ಕಾರ ಮಾಡದೆ, ವರ್ತಮಾನಕ್ಕೆ ಸಂಗತಗೊಳಿಸಿಕೊಳ್ಳದೆ ಇತರೆ ಯಾವ ರಂಗಭೂಮಿ ಕಲೆಗಳನ್ನು (ದೊಡ್ಡಾಟ, ಸಣ್ಣಾಟ, ಗೊಂಬೆಯಾಟ) ಪುನರುಜ್ಜೀವನಗೊಳಿಸವುದು ಕಷ್ಟ. ಸಾಂಪ್ರದಾಯಿಕತೆಯನ್ನು ಕೈ ಬಿಡದೆ ಆಧುನಿಕಗೊಳಿಸಿಕೊಟ್ಟರೆ ಕಲಾವಿದರು ಹೊಟ್ಟೆ ಹೊರೆಯಲು ದಾರಿಯಾಗುತ್ತದೆ. ಉದಾಹರಣೆಗೆ: ಲಾವಣಿ ಹಾಡುವವರಿಗೆ ಸ್ಟೇಜ್ ಬಳಸೋಕೆ ಬರೋಲ್ಲ.
- ಬಹು ಮಹತ್ವಾಕಾಂಕ್ಷೆ ಯೋಜನೆ, **"ಗ್ರಾಮ ಚರಿತ್ರ ಕೋಶ"**. ಒಂದೊಂದೂ ಜಿಲ್ಲೆಗೂ, ತಾಲ್ಲೂಕಿಗೂ ಸಂಬಂಧಿಸಿದಂತೆ ಮೂರು ವರ್ಷಗಳ ಅವಧಿಯ ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ೧೭೫ ತಾಲ್ಲೂಕುಗಳು, ೩೦ ಜಿಲ್ಲೆಗಳು – ಒಟ್ಟು ೩೦ ಸಂಪುಟಗಳು ಬರಲಿ. ಆಚರಣೆಗಳ ಪೈಕಿ, ವಿಶಿಷ್ಟ, ವಿಚಿತ್ರ, ಉಗ್ರ ಆಚರಣೆಗಳನ್ನು ಅಭ್ಯಸಿಸಬೇಕು. ಸ್ಮಾರಕಗಳು, ಕಲೆಗಳು, ಆಚರಣೆಗಳ ಬಗೆಗೆ ಮಾಹಿತಿ ಮಾಡಿಕೊಳ್ಳಬೇಕು –

೧. ಕೆಲವಡೆ ಗಂಡು ಮಕ್ಕಳು ಒಂದು ದಿನದ ಮಟ್ಟಿಗೆ ಸೀರೆ ಉಡುವ ಸಂಪ್ರದಾಯವಿದೆ.

೨. ಒಂದು ಅಮಾವಾಸ್ಯೆ ದಿನ ಬೆತ್ತಲೆ ನಿಂತು ದೇವರ ಪೂಜೆ ಮಾಡುವುದು ವಿಚಿತ್ರವಾದರೂ ಆಚರಣೆಯಲ್ಲಿ ಉಳಿದು ಬಂದವಾಗಿವೆ. ಹಾಳಾದ ಹಳ್ಳಿ ಇದ್ದರೂ ಅದರ ಬಗ್ಗೆ ಮಾಹಿತಿ ಸಂಗ್ರಹಿಸಿ ದಾಖಲೀಕರಣ (Record) ಮಾಡಬೇಕು. ಚರಿತ್ರಕಾರರು, ಸಂಸ್ಕೃತಿ ಅಧ್ಯಯನಕಾರರ ನೆರವು ಪಡೆದು ಪ್ರಶ್ನಾವಳಿ (Questionnaire) ತಯಾರು ಮಾಡಿಕೊಳ್ಳಬೇಕು.

ಸಂಶೋಧನಾ ಯೋಜನೆಗಳು:

- ವ್ಯಕ್ತಿಗತವಾದ ಹಾಗೂ ಸಾಂಸ್ಥಿಕವಾದ ಯೋಜನೆಗಳನ್ನು ರೂಪಿಸಿ ಎಲ್ಲರೂ ಕಾರ್ಯನಿರತರಾಗುವಂತೆ ಮಾಡಬೇಕು. ಯೋಜನ ಅವಧಿಯಲ್ಲಿ ಕೇಂದ್ರ ಸ್ಥಳದಲ್ಲೇ ಇರುವಂತೆ ನೋಡಿಕೊಳ್ಳಬೇಕು. ವಿಶ್ವವಿದ್ಯಾನಿಲಯ ಎಲ್ಲಿ ಇರುತ್ತೋ ಅಲ್ಲೇ ವಾಸ್ತವ್ಯ ಹೂಡುವಂತೆ ಮಾಡಬೇಕು.
- ಕಲೆಗಳೇನೋ ಉಳಿಯಬಹುದು, ಭೌತಿಕ ಸಂಸ್ಕೃತಿಯನ್ನು ಉಳಿಸೋಕೆ ಆಗುವುದಿಲ್ಲ.
- ಸಾಮಾಜಿಕ – ಸಾಂಸ್ಕೃತಿಕ ಅಧ್ಯಯನಕ್ಕೆ ಎಡೆ ಮಾಡಿಕೊಳ್ಳಬೇಕು.

ದಿನಾಂಕ: ೨೧.೧೦.೨೦೧೦

ಕಲೆಗಳಲ್ಲಿ ಪರಂಪರೆಯ ಘಮಲು ಇರಲಿ

– ಕೋಟಗಾನಹಳ್ಳಿ ರಾಮಯ್ಯ

ಯಾವುದೇ Perspectives ಇಲ್ಲದೆ ಜಾನಪದ ಸಾಮಗ್ರಿಯನ್ನು ಸಂಗ್ರಹ ಮಾಡಲಾಗುತ್ತಿದೆ. ಅಧ್ಯಯನಕ್ಕೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸುವುದಷ್ಟೇ ಅಲ್ಲ, ಇವತ್ತಿನ ಸಂದರ್ಭದಲ್ಲಿ ಜಾನಪದ ಎನ್ನುವುದು ಜಾಗತೀಕರಣಕ್ಕೆ ಒಂದು ದೊಡ್ಡ ಆಯುಧ'. ಸಮುದಾಯದ ಬದುಕೇ ಪಲ್ಲಟಗೊಳ್ಳುತ್ತಿರುವುದರಿಂದ ಅದನ್ನು Rejuvenate ಮಾಡಬೇಕಾಗಿದೆ. ಹಾಗೆ ನೋಡಿದರೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಒಂದು ದೃಷ್ಟಿಕೋನವೇ ಇಲ್ಲ. ಜಂಬೊಜೆಟ್ ತರಹ ಎಲ್ಲವನ್ನೂ ತುಂಬಿ Compartmentalize ಮಾಡಿ ಕಡೇ ಕೋಣೆಯಲ್ಲಿ ಜಾನಪದವನ್ನು ಬಂಧಿಸಿಟ್ಟಂತೆ ಕಾಣುತ್ತದೆ.

ಜನಪದ ಕಲೆಗಳ ಪಾವಿತ್ರ್ಯವನ್ನು ಕಡೆಗಣಿಸಲಾಗಿದೆ. ಕಲಾವಿದರನ್ನು ದಿನಗೂಲಿಗಳಿಗಿಂತಲೂ ಹೀನಾಯ ಸ್ಥಿತಿಗೆ ತಳ್ಳಿದ್ದೇವೆ. ಅದನ್ನು ಅವರು ಮಾರಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಜಾತಿ ಪದ್ಧತಿಯನ್ನು ಚಾಚೂ ತಪ್ಪದೆ ಅನುಸರಿಸಲಾಗುತ್ತಿದೆ. ಜಾತಿಯಲ್ಲಿ ಕೆಳಸ್ತರದಲ್ಲಿರುವವರೇ Treausure ಆದುದರಿಂದ ಅವಕ್ಕೆ ಯೋಗ್ಯ ಮನ್ನಣೆ (due respect) ಇಲ್ಲ. ರೋಚಕ (vibrant) ಎನಿಸಿದ ಕಲೆಗಳನ್ನು ಪ್ರದರ್ಶನ ವಸ್ತು (Show piece) ಮಾಡಿಡಲಾಗಿದೆ; ಮೆರವಣಿಗೆಗಷ್ಟೇ ಬಳಸಿಕೊಳ್ಳಲಾಗುತ್ತಿದೆ.

- ಉಪಯೋಗ / ಲಾಭದ (Utility) ಕಾರಣಕ್ಕಾಗಿಯಷ್ಟೇ ನೋಡುವುದು ತಪ್ಪು. ನಮ್ಮ Survival ಇರುವುದೇ ಜಾನಪದದಲ್ಲಿ ಎಂಬುದಕ್ಕೆ ಒತ್ತು ಸಿಕ್ಕುತ್ತಿಲ್ಲ. Rejuvenate ಮಾಡಲು, ಸಮಕಾಲೀನಗೊಳಿಸಲು ಯೋಚಿಸುತ್ತಿಲ್ಲ.
- ಜಾನಪದಕ್ಕೆ ಆಧುನಿಕತೆಯೇ (Modernity) ಸವಾಲು. ಸ್ಪಷ್ಟವಾದ Perspectives ಇಲ್ಲದೆ ಇರುವುದರಿಂದ ಜನಪದ ಕಲಾ ಪ್ರಕಾರಗಳನ್ನು

ಉನ್ನತೀಕರಿಸಲು ಆಗುತ್ತಿಲ್ಲ. ಕಲಾ ಪ್ರಕಾರಗಳನ್ನು Formwise elevate ಮಾಡಬೇಕಾಗಿದೆ.

- ಅಭಿವೃದ್ಧಿ ರಾಜಕೀಯ ಇರುವುದರಿಂದ ಸಮುದಾಯದ ಬದುಕನ್ನು ಬದಲಾಯಿಸಲು ಆಗುವುದಿಲ್ಲ. ಪ್ರಯೋಗಶೀಲತೆಯನ್ನು ಬೇರೊಂದು ನಿಟ್ಟಿನಲ್ಲಿ ನೋಡಬೇಕಾಗುತ್ತದೆ. ಜಾಗತೀಕರಣದ Hidden agenda - ಸಂಸ್ಕೃತಿಗಳ ಅನನ್ಯತೆಯನ್ನು ಒಡೆಯುವುದೇ ಆಗಿದೆ. ಮನೋರಂಜನೆಗಾಗಿ readymade ಚೌಕಟ್ಟು ರೂಪಿಸಲಾಗಿದೆ. ಇಂದು ಕಲೆ ಕೂಡ ಮಾರುಕಟ್ಟೆಯನ್ನು ಅವಲಂಬಿಸಿರುವುದರಿಂದ ಸಮುದಾಯದ ಒಳಗಿನ ಅನುಭವ ಅಸಂಗತ ಎನ್ನಿಸುತ್ತಿದೆ.

ಬದಲಾದ ಸಂದರ್ಭದಲ್ಲಿ ನಮ್ಮ Vision ಏನಾಗಬೇಕು? ಪರಂಪರೆಯೊಳಗೆ ಕಲೆಗಳನ್ನು Rejuvenate ಮಾಡುವುದು ಹೇಗೆ? ಮಕ್ಕಳ ನಾಟಕಗಳನ್ನು ಜಾನಪದ Vision ಇಟ್ಟುಕೊಂಡು ಮಕ್ಕಳ ಮನಸ್ಸಿನಲ್ಲಿ ನೆಲೆಗೊಳಿಸಲು ಸಾಧ್ಯವೆ? ವಿಚಾರ ಮಾಡಬೇಕು.

ಪ್ರದರ್ಶನಾತ್ಮಕ ಕಲಾ ಪ್ರಕಾರಗಳನ್ನು ಚಾಲನೆಗೊಳಿಸಬೇಕಾದರೆ ಅವನ್ನು ಉನ್ನತೀಕರಿಸಲೇಬೇಕು. ಬಿ.ವಿ. ಕಾರಂತರು ಯಕ್ಷಗಾನವನ್ನು Time frameಗೆ ಒಳಪಡಿಸಿದ್ದಾರೆ.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಜಾನಪದ ಕೃಷಿ ಶ್ರೀಮಂತವಾದುದು. ಷಹನಾಯ್‌ಗೆ ಬಿಸ್ಮಿಲ್ಲಾಖಾನ್ ಘನತೆ ತಂದುಕೊಟ್ಟರು. ತಮಟೆ ವಾದನಕ್ಕೂ ಘನತೆ ಗೌರವ ಪ್ರಾಪ್ತವಾಗಬೇಕಾಗಿದೆ. ನವೀನಗೊಳಿಸುವ ಮಾದರಿಗಳನ್ನು, ಪರಂಪರೆಯಲ್ಲಿರುವಂಥದ್ದನ್ನೇ ತೆಗೆದುಕೊಳ್ಳಬೇಕು. ನೀಲಗಾರರು ಇವತ್ತಿಗೂ ಮಕ್ಕಳನ್ನೇ ಗುಡ್ಡರನ್ನಾಗಿ ಬಿಡುವ ಸಂಪ್ರದಾಯ ಪಾಲಿಸುತ್ತಿದ್ದಾರೆ. ದುರ್ದೈವ ಭಿಕ್ಷೆ ಯಾಚಿಸುವ ಮಟ್ಟಕ್ಕೆ ಇಳಿಸಿದ್ದೀವಿ. ಭೀಮ್‌ಸೇನ್ ಜೋಷಿ ಮಟ್ಟಕ್ಕೆ ಆ ಕಲೆಯನ್ನು ಎತ್ತರಕ್ಕೆ ಏರಿಸಬೇಕು. ಈ ಕಲೆಗೆ ಅಂಟಿರುವ ದಾರುಣ ಸ್ಥಿತಿಯನ್ನು ಕಿತ್ತು ಹಾಕಿ ಗೌರವದ ಸ್ಥಾನ ಕಲ್ಪಿಸಬೇಕು. ಚಾಲ್ತಿ ಮಾರುಕಟ್ಟೆಯಲ್ಲಿ ಅದರ ಘಮಲು (fragrance) ಉಳಿಯಬೇಕು. ಅದೇ ಅವರ Strength.

- ಕಲಾವಿದರ ಅಸ್ತಿತ್ವ ಇರುವುದೇ ಕಲೆಯಲ್ಲಿ – ಈ ಭಾವನೆ ಹುಟ್ಟುವಂತೆ ಕಲೆಗಳಲ್ಲಿ ವೃತ್ತಿಪರತೆ ಬರಬೇಕು.

- Evergreen market – ಇಳಕಲ್ ಸೀರೆ – ಮಾರುಕಟ್ಟೆ ಇಂಗಿತಗಳನ್ನು ಇಟ್ಟುಕೊಂಡೇ ಸೀರೆ ಮಾಡಬಹುದು.

ವಿಶ್ವವಿದ್ಯಾನಿಲಯ ನಾಲ್ಕು ವಿಭಾಗ ಮಟ್ಟದಲ್ಲಿ ಆಗಲಿ. ಆಗ ಆ ವಿಶ್ವವಿದ್ಯಾನಿಲಯ ಜೀವಂತ ವಿಶ್ವವಿದ್ಯಾನಿಲಯ ಆಗುವುದರಲ್ಲಿ ಸಂದೇಹವಿಲ್ಲ. ಜಂಗಮ ಸ್ವರೂಪಿ ಆಗುವುದೇ ಹೊರತು ಸ್ಥಾವರ ಸ್ವರೂಪಿ ಆಗುವುದಿಲ್ಲ.

ಭರತನಾಟ್ಯ ಒಂದು Tradition ಆಗಿದೆ. ಮಕ್ಕಳಿಗೆ ಕಲಿಸಲಾಗುತ್ತಿದೆ. ಅದೇ ರೀತಿ ಡೊಳ್ಳು, ಕಂಸಾಳೆ, ವೀರಗಾಸೆ Traditions ಸ್ವರೂಪ ಪಡೆಯಬೇಕು. ಆಗ ಆ ಕಲೆಗಳು ಉಳಿಯುತ್ತವೆ. ಬೆಳೆಯುತ್ತವೆ. ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ರೀತಿಯಲ್ಲಿ ಪ್ರಾಯೋಗಿಕತೆಗೂ ಅವಕಾಶವಿದೆ. 'ಆದಿಮ' ಸಂಸ್ಥೆ ನಿರ್ಮಿಸಿರುವ – "ಕತೆ ಕತೆ ಕಾರಂಡ", "ಹುಯ್ಯೊ ಹುಯ್ಯೊ ಮಳೆರಾಯ" ಅದಕ್ಕೆ ಒಳ್ಳೆಯ ನಿದರ್ಶನಗಳು. Modernity ಜೊತೆ ಇಟ್ಟುಕೊಂಡೇ ಮಾಡಬಹುದು. ರೂಢಿಗತವಾದ ಆಲೋಚನೆಗೆ ಸಿಕ್ಕಿ ಹಾಕಿಕೊಂಡರೆ ಪರಿಮಿತಿಗಳಿಗೆ ಒಳಗಾದಂತೆ Heritage Village, ಬಲು ಅಪಾಯಕಾರಿಯಾದ ಪರಿಕಲ್ಪನೆ. ವಾಣಿಜ್ಯೀಕರಣಗೊಳಿಸುವ ಉದ್ದೇಶದಿಂದ ಆ ಪರಿಕಲ್ಪನೆಗೆ ಚಾಲನೆ ಕೊಡಲಾಗಿದೆ. ತಮಟೆಯಲ್ಲಿ ಪ್ರಾಯೋಗಿಕತೆ ತರಬಹುದು. ಸತ್ತಾಗ, ಮದುವೆಯಾಗುವಾಗ ಹೀಗೆ ನಿರ್ದಿಷ್ಟ ಸಂದರ್ಭಗಳಲ್ಲಿ ಬಡಿಯುವಾಗ ಪ್ರಾಯೋಗಿಕತೆಗೆ ಅವಕಾಶವಿದೆ. Identitiesಗಳನ್ನು ನಾವು ಕಟ್ಟಿಕೊಡುವಂತಾಗಬೇಕು.

ಆಫ್ರಿಕೆಯ ಪ್ರದರ್ಶನಗಳು ಅದ್ಭುತ. ಜೇರುಂಡೆ ತೆರನ ಸಂಗೀತೋಪಕರಣ ವಸಂತ ಋತುವಿನಲ್ಲಿ ಕಾಡು ಅರಳುತ್ತಿರುವಂತೆ, ಅಂಥ ಪರಿಣಾಮ ಉಂಟಾಗುತ್ತದೆ. ಒಳಗಿನ ಆತ್ಮವಿಶ್ವಾಸ ಮೂಡುವುದಾದರೆ ಕಲೆಗಳನ್ನು ವಿಸ್ತರಿಸಲು ಯತ್ನಿಸಬೇಕು.

- ಪ್ರಚಲಿತವಾಗಿರುವ ಪ್ರದರ್ಶನ ಕಲೆಗಳ Maping ಆಗಬೇಕು. ಸಾಂಸ್ಕೃತಿಕ ಸಂಪನ್ಮೂಲಗಳ Maping ರಚನೆಯಾದರೆ ಮಾತ್ರ ಅವನ್ನು merge ಗೊಳಿಸೋಕೆ ಸಾಧ್ಯ. ನಮ್ಮ ಲಯಗಳನ್ನು (rhythms) ಅಳವಡಿಸೋಕೆ ಆಗೋದಿಲ್ಲ ಎಂದಾಗ ವಿಫಲರಾಗುತ್ತೇವೆ; ಕಷ್ಟಕ್ಕೆ ಗುರಿಯಾಗುತ್ತೇವೆ.
- Perspective ವಿಶ್ಲೇಷಣೆ ಇರಬೇಕು. ಯಾರೇ ವೀಕ್ಷಿಸಿದರೂ ತಂಡಗಳನ್ನು ತೆಗೆದುಕೊಂಡು ಹೋಗುವ ಸಾಧ್ಯತೆಗಳನ್ನು ಹೇಳುವ ಸಾಮರ್ಥ್ಯ ಇರಬೇಕು.

- ಪ್ರಚಲಿತವಾಗಿರುವ ಎಲ್ಲ ಜನಪದ ಕಲೆಗಳೂ ಒಂದು Tradition ಸ್ಥಾಪಿಸಬೇಕು. ಆಗ ಮಾತ್ರ ಕಲೆಗಳು ಉಳಿಯುವುದು ಸಾಧ್ಯ. ಸಂತೆಗಳಲ್ಲಿ, ಜಾತ್ರೆಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಹಟ್ಟಿಗಳಲ್ಲಿ ಸತತವಾಗಿ ಐದು ವರ್ಷಗಳ ಕಾಲ ಪ್ರದರ್ಶಿಸುವಂತಾಗಬೇಕು.
- ಜಗತ್ತಿನ ಉಳಿದ ಕಲಾಪ್ರಕಾರಗಳೊಂದಿಗೆ ನಮ್ಮ ಕಲಾ ಪ್ರಕಾರಗಳನ್ನು ಸಂವಾದಗೊಳಿಸದ ಹೊರತು ಉಳಿಗಾಲವಿಲ್ಲ. ಆ ಕಾರಣಕ್ಕಾಗಿ ತೌಲನಿಕ ಅಧ್ಯಯನ ವಿಭಾಗವನ್ನು ತೆರೆಯಲೇಬೇಕು.
- ಸಮಕಾಲೀನಗೊಳಿಸಿ ನೋಡುವ ಪ್ರಾಯೋಗಿಕತೆ ಇದ್ದದ್ದಾದರೆ ಶಾಲೆಗಳಲ್ಲಿ ಇವತ್ತಿನ ಕಲಿಕೆಯ ವಿಷಯಗಳಾಗುತ್ತವೆ.

ದಿನಾಕ : ೦೮.೧೧.೨೦೧೦

ಗ್ರಾಮತತ್ವದ ಅನಾವರಣವಾಗಲಿ

– ಕಾ. ತ. ಚಿಕ್ಕಣ್ಣ

ಜಾನಪದ ಇಡೀ ಬದುಕನ್ನು ಒಳಗೊಳ್ಳುವುದರಿಂದ ಕ್ಷೇತ್ರಕಾರ್ಯ, ಅಧ್ಯಯನ–ಸಂಶೋಧನೆ–ಪ್ರದರ್ಶನ ಕಲೆಗಳ ಪ್ರಯೋಗ– ಪ್ರದರ್ಶನಕ್ಕೆ ಹೆಚ್ಚು ಅವಕಾಶ ಇರಲಿ. ಮಾಹಿತಿ ಮತ್ತು ಪ್ರಚಾರ ಕಾರ್ಯಕ್ಕೆ ಗಮನ ಹರಿಸುವುದು ಅಗತ್ಯ. ನಾಡಿನ ಒಂದು ಅನುಕೂಲಕರ ಬಯಲು ಭೂಮಿಯಲ್ಲಿ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರಲಿ. ಬೆಂಗಳೂರಿನಲ್ಲಿ ಒಂದು ಕಾರ್ಯಾಲಯ ಇರುವುದು ಅಗತ್ಯ. ಸುಗಮ ಆಡಳಿತ ಹಾಗೂ ಸಂಪರ್ಕಕ್ಕೆ ಅದು ಬೇಕು.

ಕರ್ನಾಟಕದ ನಾಲ್ಕು ಆಡಳಿತ ವಿಭಾಗದಲ್ಲಿ ತರಬೇತಿ ಮತ್ತು ಸಂಶೋಧನ ಕೇಂದ್ರ ಸ್ಥಾಪನೆಗೊಳ್ಳಲಿ. ಸ್ಥಳೀಯ ಕಲೆ ಮತ್ತು ಸಂಸ್ಕೃತಿಗೆ ಪ್ರಚಾರ ದೊರಕಿಸಿಕೊಡಲು ವಿಭಾಗೀಯ ಸಂಶೋಧನ ಕೇಂದ್ರಗಳಿರುವುದು ಸೂಕ್ತ. ಸ್ಥಳೀಯತನಕ್ಕೆ, ಸ್ಥಳೀಯತೆಗೆ ಮಹತ್ವ ಕಲ್ಪಿಸಿದರೆ ಪರಂಪರಾಜ್ಞಾನದ ಮಹತ್ವದ ಬಗೆಗೂ ಜನರು ಆಲೋಚನೆಗೆ ಇಳಿಯುತ್ತಾರೆ. ಅದರ ಉಳಿವು–ಅಳಿವುಗಳ ಬಗೆಗೂ ಚಿಂತನೆ, ಕಾಳಜಿ ತೋರುತ್ತಾರೆ. ಸ್ಥಳೀಯ ಸಹಕಾರ ಸಿಕ್ಕೇ ಸಿಗುತ್ತದೆ. ತರಬೇತಿ–ಪ್ರದರ್ಶನ–ಪ್ರೋತ್ಸಾಹ ಮಂತ್ರವಾಗಬೇಕು. ಎಲ್ಲ ವರ್ಗದವರಲ್ಲೂ ಜನಪದ ಮನೋಧರ್ಮ ಬೇರು ಬಿಡಬೇಕು. ನನ್ನ ನೆಲ, ನನ್ನ ಬದುಕು, ನನ್ನ ಸಂಸ್ಕೃತಿ – ಈ ಭಾವನೆ ಬೇರೂರಬೇಕಾಗಿದೆ. ಕುವೆಂಪು ಹೇಗೆ ಮಲೆನಾಡಿನ ಭಾಗವಾಗಿದ್ದಾರೊ ಹಾಗೆ ಜಾನಪದ ಎಲ್ಲರ ಉಸಿರಾಗಬೇಕು. ಸೃಜನಶೀಲ (creative) ಆದದ್ದೆಲ್ಲ ಜಾನಪದ ಎನಿಸಬೇಕು. ಒಳಗೆ ಬರೋದನ್ನು ಕಳೆದುಕೊಳ್ಳುತ್ತಿದ್ದೇನೆ ಎಂಬ ಆತಂಕ ಮೂಡಿ ಇದರಲ್ಲಿ ವಿಶೇಷ ಆಸಕ್ತಿ ಕೆರಳುವಂತಹ ವಾತಾವರಣ ನಿರ್ಮಿಸಬೇಕು. ಕಲಾವಿದರ ಸಮೀಕ್ಷೆ, ಕಲೆಗಳ ಸಮಗ್ರ ಸಮೀಕ್ಷೆ ಆಗಬೇಕು. ರಾಜ್ಯದ ಕಲಾವಿದರ ಜೀವನಮಟ್ಟ ಸುಧಾರಿಸಲು ಯೋಜನೆಗಳನ್ನು ರೂಪಿಸಬೇಕು.

ನಂಬಿಕೆಗಳಿಂದ ಹಿಡಿದು ಜೀವನದ ಸಮಸ್ತವನ್ನೂ ಅರಿವಿನ ವಿಸ್ತಾರದೆಡೆಗೆ ಕೊಂಡೊಯ್ಯಬೇಕು.

ವಾರಕ್ಕೊಮ್ಮೆ ಶಾಲಾ ಕಾಲೇಜುಗಳಲ್ಲಿ ಜಾನಪದ ಕಾರ್ಯಕ್ರಮ ಜರುಗಬೇಕು. 'ಹಾಡೀರೆ ರಾಗಗಳ ತೂಗೀರೆ ದೀಪಗಳ'- ಬಲು ಜನಪ್ರಿಯವಾದ ಕಾರ್ಯಕ್ರಮ. ವೃತ್ತಿಕೌಶಲಗಳು ಬೆಳೆಯಲು-ಕುಟೀರಗಳನ್ನು ನಿರ್ಮಿಸಬೇಕು. ಆ ಕೌಶಲಗಳ ಉತ್ಪನ್ನಗಳಿಗೆ ಮಾರುಕಟ್ಟೆ ನಿರ್ಮಿಸಬೇಕು. ಕಸುಬು ಹಾಗೂ ಸಂಸ್ಕೃತಿ ಇಲ್ಲದೆ ಬದುಕಿಲ್ಲ. ಕೌಶಲಗಳ ತರಬೇತಿ-ತಯಾರಿಕೆ-ಮಾರಾಟ- ಈ ಉದ್ಯಮದಲ್ಲಿ ಮುಖ್ಯವಾಗಬೇಕು. ಗ್ರಾಮ ಕರ್ನಾಟಕದಲ್ಲಿ-ಗ್ರಾಮ ಸಮಾಜದ ಸಕಲ ಅನುಕೂಲಗಳು ಲಭಿಸಬೇಕು. ಗ್ರಾಮ ತತ್ವದ ಅನಾವರಣ ಆಗಬೇಕು. ಮಣ್ಣಿನಗುಣದಿಂದ ಹಿಡಿದು ಬೆಳೆಯಬೇಕು. ತೇರು-ಜಾತ್ರೆ-ಸಂತೆ ನಡೆಯಬೇಕು.

ದಿನಾಂಕ:೧೦.೧೧.೨೦೧೦

ಅಲೆಮಾರಿ ವೃತ್ತಿಕಲಾವಿದರಿಗೆ ವಿಶೇಷ ಮನ್ನಣೆ ಇರಲಿ

- ಕುಪ್ಪೆ ನಾಗರಾಜ್

ಅಲೆಮಾರಿ ಸಮುದಾಯಗಳ ಕಲೆ ಮತ್ತು ಕಲಾವಿದರ ಸೂಚಿಗೆ ಆದ್ಯತೆ ಇರಲಿ. ವಿದ್ಯಾವಂತ ವರ್ಗದವರಿಗೆ ಈ ಅಲಕ್ಷಿತ ಹಾಗೂ ಅಸಂಘಟಿತ ಸಮುದಾಯಗಳ ಕಲೆ ಬಗೆಗೆ ದಿವ್ಯ ನಿರ್ಲಕ್ಷ್ಯ ಕಂಡುಬರುತ್ತಿದೆ. ಮತ್ತು ಈ ಜನರ ಕಲೆಗಳು ಕೇವಲ ಮನೋರಂಜನಾತ್ಮಕವಾದವು ಎಂದು ಕೀಳಾಗಿ ನೋಡುವ ಧೋರಣೆಯೂ ಇದೆ. ಈ ಮನೋಭಾವ ದೂರಾಗುವಂತಹ ವಾತಾವರಣ ನಿರ್ಮಾಣವಾಗಬೇಕು.

ಅಲೆಮಾರಿ ಸಮುದಾಯಗಳ ಕಲೆಗಳ ಶ್ರೇಷ್ಠತೆ, ಕಲಾವಿದರ ವೃತ್ತಿಪರತೆ-ಕಲೆಯನ್ನಷ್ಟೇ ಅವಲಂಬಿಸಿರುವ ಜನ ಇವರಾದ್ದರಿಂದ ಇತರ ಎಲ್ಲ ಕಲಾ ಸಮೂಹಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಆದ್ಯತೆಯ ಮೇರೆಗೆ ಇವರ ಕಲೆಗಳಿಗೆ ಮನ್ನಣೆ ಸಿಗುವಂತೆ ನೋಡಿಕೊಳ್ಳಬೇಕು.

ಈಗ ಎಲೆಕ್ಟ್ರಾನಿಕ್ ಮಾಧ್ಯಮಗಳು ಮುಂದಾದ ಮೇಲೆ ಬಣ್ಣದ ಪೆಟ್ಟಿಗೆಗಳು ಈ ಅಲೆಮಾರಿ ಸಮುದಾಯಗಳ ಬದುಕನ್ನು ಕಿತ್ತುಕೊಂಡಿವೆ. ಇವತ್ತಿನ ಶ್ರೋತೃವರ್ಗ ಬಯಸುವ ವಾದ್ಯ ಪರಿಕರಗಳಾಗಲಿ ಪಠ್ಯಗಳಾಗಲಿ ಇವರಲ್ಲಿಲ್ಲದಿರುವುದೇ ತಿರಸ್ಕಾರಕ್ಕೆ ಕಾರಣವಿರಬಹುದು. ನಾಳಿನ ಚಿಂತೆಯೇ ಇಲ್ಲದ ಈ ಜನರ ಬದುಕು ದಾರುಣ ಸ್ಥಿತಿ ತಲುಪಿದೆ. ತತಕ್ಷಣ ಇವರ ಕಲಾರೂಪಗಳಲ್ಲಿ ನಾವೀನ್ಯತೆಯನ್ನು ಅಳವಡಿಸಲು ಪ್ರೇರಣೆ ಒದಗಿಸಬೇಕು. ಏನೇ ಬದಲಾವಣೆ ತಂದುಕೊಳ್ಳುವುದಾದರೂ ಕಲಾವಿದರೇ ಸ್ವಯಂ ಪ್ರಯೋಗ ಮಾಡುವಂತೆ ಮಾಡಬೇಕು. ಮೂಲ ಆಶಯಕ್ಕೆ ಧಕ್ಕೆ ಆಗದ ರೀತಿ ಈ ಕಾಲಮಾನಕ್ಕೆ ಮೆಚ್ಚುಗೆಯಾಗುವ ರೀತಿಯಲ್ಲಿ ರೂಪಾಂತರ ಆಗಬೇಕು.

ಮೊದಲ ಹಂತದಲ್ಲಿ ಕಲಾವಿದರ ಮಕ್ಕಳಲ್ಲಿ ಆ ವಂಶವಾಹಿಗುಣ (genes) ಇರುವುದರಿಂದ – ಆ ಮಕ್ಕಳನ್ನೇ ಆಯ್ದು – ಜನರಿಗೆ ಮೆಚ್ಚುಗೆಯಾಗುವ

ರೀತಿಯಲ್ಲಿ ಕಲಾ ಪ್ರದರ್ಶನ ನೀಡುವಂತಹ ಸನ್ನಿವೇಶ ನಿರ್ಮಾಣವಾಗಬೇಕು. ಇತ್ತೀಚೆಗೆ ದೊಂಬಿದಾಸ ವರ್ಗದವರು ಆಡಿದ ಏಕಲವ್ಯ ನಾಟಕ ಅದಕ್ಕೆ ಒಂದು ಉತ್ತಮ ನಿದರ್ಶನ. ದೊಂಬಿದಾಸರಲ್ಲಿ ಸಾಕಷ್ಟು ವಸ್ತು (plot) ಗಳಿವೆ. ಗ್ರಾಮಾಂತರ ಪ್ರದೇಶದ ಕಲಾಸಕ್ತರಿಗೆ ಕಲಿಸಲು ಯೋಗ್ಯವಾದ ಪಠ್ಯಗಳಿವೆ. ಅವನ್ನು ಯೋಜಿತ ರೀತಿಯಲ್ಲಿ ಸಂಗ್ರಹಣೆ ಮಾಡುವ ಕೆಲಸ ಆಗಬೇಕು.

ಕಥಾನಕಗಳು ೨-೩ ರಾತ್ರಿಗಳ ವ್ಯಾಪ್ತಿಯವಾದರೆ ಅವನ್ನು ಬಿಡಿ ಕಥಾನಕಗಳನ್ನಾಗಿ ಒಡೆದು ಪ್ರಸ್ತುತಪಡಿಸಲು ಅನುವು ಮಾಡಿಕೊಡಬೇಕು. ದೊಂಬಿದಾಸರ ಬಾಲನಾಗಮ್ಮನ ಕತೆಯನ್ನು ಹೀಗೆ ೩-೪ ಕಥಾನಕಗಳಾಗಿ ಒಡೆದು ಪ್ರಸ್ತುತಪಡಿಸಲಾಗುತ್ತಿದೆ. ಎಂಥದೇ ಸನ್ನಿವೇಶದಲ್ಲಿ ಕೋಡಂಗಿ ಪಾತ್ರಧಾರಿ ವೀಕ್ಷಕರ (mob) ಜೊತೆಗೆ ನೇರ ಸಂವಾದಕ್ಕೆ ತೊಡಗುತ್ತಾರೆ. ಶ್ರೋತೃಗಳೊಡನೆ ನೇರ ಸಂವಾದಕ್ಕಿಳಿಯುವ ರೀತಿ ವಿಶಿಷ್ಟವಾದುದು. ದುರ್ಬಲರಾಗಿರುವ ಈ ಅಲೆಮಾರಿ ಸಮೂಹದ ಕಲಾವಿದರಿಗೆ ಯಾವ ಮಾನದಂಡಗಳ ಅಗತ್ಯವೂ ಇಲ್ಲ. ಅವರು ಹುಟ್ಟು ಕಲಾವಿದರಾದ್ದರಿಂದ ಕಲೆಯನ್ನೇ ಅವಲಂಬಿಸಿ ಬದುಕುವವರಾದ್ದರಿಂದ ಖಾಯಂ ನೆಲೆ, ಸ್ಥಿರಾಸ್ತಿ ಹೊಂದಿಲ್ಲದವರಾದ್ದರಿಂದ ವಯಸ್ಸನ್ನಷ್ಟೇ ಪರಿಗಣಿಸಿ ಗೌರವಿಸುವಂತಹ ಸನ್ನಿವೇಶ ನಿರ್ಮಾಣವಾಗಬೇಕು. ಮಾಶಾಸನಕ್ಕೆ ಹಲವು ಷರತ್ತು/ ನಿಬಂಧನೆಗಳನ್ನು ಒಡ್ಡುವುದರಿಂದ ಹಾವಾಡಿಗರು/ ಕೋಲೆಬಸವನವರು/ ದೊಂಬಿದಾಸರು ಮುಂತಾದವರು ಕಲಾ ಪರಂಪರೆಗೆ ಆತುಕೊಂಡು ಜೀವನ ಮಾಡುವುದು ದುಸ್ತರವಾಗುವುದು.

೨-೩ ದಶಕಗಳ ಹಿಂದಿನ ಪರಿಸ್ಥಿತಿಯೇ ಭಿನ್ನವಾಗಿತ್ತು. ಕಲಾವಿದರು ಏಕತಾರಿಯನ್ನು ಕೈಯಲ್ಲಿ ಹಿಡಿದಾಗ ಬರಿಗಾಲಲ್ಲೇ ಊರಿಂದೂರಿಗೆ ಸುತ್ತಾಡುವ ಪರಿಪಾಠವಿತ್ತು. ಊರ ಮೇಲೆ ಹೋದಾಗ ಎಲ್ಲಿಯೂ ಅವರು ಅಡುಗೆ ಮಾಡುತ್ತಿರಲಿಲ್ಲ. ಊರಿನ ಜನ ಪ್ರೀತಿಯಿಂದ ಕೊಟ್ಟ ತಿನಿಸೇ ಅವರ ಆಹಾರವಾಗಿರುತ್ತಿತ್ತು. ನಾಟಕ ಆಡಿಸುವುದೇ ಅವರ ವೃತ್ತಿಯಾಗಿದ್ದುದರಿಂದ ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯವೇ ಅವರ ಗುರಿಯಾಗಿದ್ದುದರಿಂದ ಶ್ರದ್ಧಾ ಭಕ್ತಿಗಳಿಂದ ಕಲೆಯನ್ನು ಆರಾಧಿಸುತ್ತಿದ್ದರು. ಅದನ್ನೇ ಜೀವನೋಪಾಯ ಮಾಡಿಕೊಂಡಿದ್ದರು. ಆತ್ಮರಕ್ಷಣೆಗಾಗಿ 'ಮರಗು' (coded language) ಭಾಷೆ ಬಳಸುವುದು ವಾಡಿಕೆಯಾಗಿತ್ತು.

ಅಲೆಮಾರಿ ಕಲಾವಿದರಲ್ಲಿ ಪ್ರಚಲಿತವಿರುವ ಭಾಷೆ ಮತ್ತು ಸಾಹಿತ್ಯದ ಅಧ್ಯಯನಕ್ಕೆ ಒತ್ತುಕೊಡುವ ಅಗತ್ಯವಿದೆ.

ಅಲೆಮಾರಿಗಳ ಕಥೆಗಳನ್ನು ಬಿಡಿ ಕಥಾನಕಗಳನ್ನಾಗಿ ರೂಪಿಸುವುದರೊಂದಿಗೆ ಒಂದೊಂದು ಕಥಾನಕವನ್ನು ಒಂದೊಂದು ಬ್ಯಾಲೆಯನ್ನಾಗಿ ರೂಪಿಸಬಹುದು. ಅವರ ಸಾಮಾಜಿಕ ಸ್ಥಾನಮಾನ ಉತ್ತಮವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ನಾಟಕ ಕಲಿಸುವುದರ ಮೂಲಕ ದೊಂಬಿದಾಸರು ಊರಿನ ಜನರನ್ನು ಒಟ್ಟು ಮಾಡುವ ಕೆಲಸ ಮಾಡುತ್ತಾರೆ. ಒಂದೊಂದು ಸಮಾಜದ/ ಜಾತಿಯ ಪ್ರತಿಭಾವಂತ ಆಸಕ್ತರಿಗೆ ಒಂದೊಂದು ಪಾತ್ರ ನೀಡಿ ನಾಟಕ ಕಲಿಸುವ ಇವರ ರೀತಿ–ಉದ್ದಕ್ಕೂ ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯವನ್ನು ಸಾಧಿಸುವುದೇ ಆಗಿದೆ. ನಕ್ಷತ್ರಿಕ (ಅಗಸ), ವಿಶ್ವಾಮಿತ್ರ (ಗೌಡ), ಚಂದ್ರಮತಿ (ಲಿಂಗಾಯಿತ) , ಋಷಿಮುನಿ (ನಾಯಕ) – ಹೀಗೆ ಒಂದೊಂದು ಪಾತ್ರವನ್ನು ಒಂದೊಂದು ಜಾತಿಗೆ ನೀಡಿ ನಾಟಕ ಕಲಿಸುವ ಜಾಣ್ಮೆ ದೊಂಬಿದಾಸರದ್ದು. ಕರಿಭಂಟನ ಕಾಳಗ, ಹರಿಶ್ಚಂದ್ರ, ಗಂಗೆ ಗೌರಿ, ಬಾಲನಾಗಮ್ಮ – ಇವು ದೊಂಬಿದಾಸರಲ್ಲಿ ತುಂಬ ಪ್ರಸಿದ್ಧವಾಗಿರುವ ಕಥೆಗಳು.

ದಿನಾಂಕ: ೧೪.೧೧.೨೦೧೦

ಕ್ಷೇತ್ರಕಾರ್ಯಾಧಾರಿತ ಅಧ್ಯಯನಕ್ಕೆ ಒತ್ತು ಇರಲಿ

– ಪದ್ಮಾಶೇಖರ್

ವಿಶ್ವವಿದ್ಯಾನಿಲಯ ಆಗುವುದಾದರೆ ಚಿತ್ರದುರ್ಗದಲ್ಲಾಗಲಿ. ಚಾರಿತ್ರಿಕವಾಗಿ ಮಹತ್ವದ ಪ್ರದೇಶ. ಅಲ್ಲಿಯ ಕೋಟೆಕೊತ್ತಲಗಳ ಇತಿಹಾಸವನ್ನು ತಿಳಿಯುವ ಸಲುವಾಗಿ ಪ್ರಸಾಧನಗಳು, ಉಡುಗೆತೊಡುಗೆ, ನಾನಾ ತೆರನ ಕತ್ತಿಗಳು, ಪಲ್ಲಕ್ಕಿಗಳು – ಸಮಸ್ತವನ್ನೂ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಬೇಕಾಗಿದೆ. ಗಂಡುಗಲಿ ಅವರು ನಿರ್ಮಿಸಿರುವ ವಸ್ತು ಸಂಗ್ರಹಾಲಯುವನ್ನು ವಿಶ್ವವಿದ್ಯಾನಿಲಯದ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಯುಕ್ತ. ಬುಡಕಟ್ಟು ಸಂಸ್ಕೃತಿಯನ್ನು ಯಥಾವತ್ತಾಗಿ ಹುಟ್ಟು ಹಾಕುವ ಯತ್ನ ಮಾಡಬೇಕು. ಎಷ್ಟು ಸಾಧ್ಯವಾಗುತ್ತದೊ ಅಷ್ಟು ಸಲಕರಣೆಗಳ ನೆರವಿನಿಂದ ಆ ಪ್ರಾಕೃತಿಕ ಆವರಣ (ambience) ಇರುವಂತೆ ನೋಡಿಕೊಳ್ಳಬೇಕು. ಬುಡಕಟ್ಟು ಜನರ ಕಳ್ಳಿ ಪಹರೆ, ಗುಡಿ ಗುಡಾರ, ಬಿದಿರು ಗುಡಿಸಲುಗಳು – ಮರು ಸೃಷ್ಟಿಯಾಗಬೇಕು.

ಕ್ಷೇತ್ರಕಾರ್ಯಾಧಾರಿತ ಅಧ್ಯಯನ ಸಂಶೋಧನೆಗಳಿಗೆ ಒತ್ತುಕೊಡಬೇಕು. ಅಂಕಗಳ ಆಧಾರಿತವಾದುದಾಗಿರಬಾರದು. ಶೈಕ್ಷಣಿಕ (academic) ಶಿಸ್ತಿಗೆ ಬಂಧಿಸಿಡುವುದು ಬೇಡ. ರಂಗಾಯಣದ ಮಾದರಿಯಲ್ಲಿ ವಿದ್ಯಾರ್ಥಿಗಳಿಗೆ ತಾಲೀಮು ನೀಡಬೇಕು. ಪ್ರಯೋಗ–ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬೇಕು. ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಬಯಸಿ ಬರುವ ಎಲ್ಲರಿಗೂ ಕಡ್ಡಾಯವಾಗಿ ಕ್ಷೇತ್ರಕ್ಕೆ ಹೋಗಿ ಬರುವಂತೆ ಮಾಡಬೇಕು.

- ಜನಪದ ಅಡುಗೆ–ಜಾಗತಿಕ ಸಂದರ್ಭದಲ್ಲಿ – ಸಕಾರಾತ್ಮಕ ಗುಣ–ಚಿಂತನೆ, ಆಚರಣೆಗಳ ಸಕಾರಾತ್ಮಕ ಅಂಶಗಳನ್ನು ಗುರುತಿಸಿ ಅಧ್ಯಯನ ಮಾಡಬೇಕು.
- ಜನಪದ ವೈದ್ಯ, ಜನಪದ ಕಲೆಗಳ ಮಾಹಿತಿ ಸಂಗ್ರಹ ಮತ್ತು ಅಧ್ಯಯನಕ್ಕೆ ವಿಶೇಷ ಗಮನವಹಿಸಬೇಕು.

- ಪಾರಂಪರಿಕ ಜೀವನ ವಿಧಾನ ಮತ್ತು ಜೀವನ ಮೌಲ್ಯಗಳನ್ನು ವಿಶೇಷವಾಗಿ ಲಕ್ಷಿಸಿ ಅಧ್ಯಯನ ಕೈಗೊಳ್ಳಬೇಕು.
- ಕಲಾವಿದರ ಅನುಭವಗಳನ್ನು ಪ್ರತ್ಯೇಕವಾಗಿ ಶ್ರವ್ಯ ಮತ್ತು ದೃಶ್ಯ ಮಾಧ್ಯಮದಲ್ಲಿ ದಾಖಲಿಸಿಕೊಳ್ಳಬೇಕು. ಚಲನಚಿತ್ರೀಕರಣಕ್ಕೆ ಅವಕಾಶ ಮಾಡಿಕೊಳ್ಳಬೇಕು.

ದಿನಾಂಕ: ೩೧.೧೦.೨೦೧೧

ಕಲೆಗಳನ್ನು ಕಲೆಗಳಾಗಿಯೇ ಪ್ರಸ್ತುತಪಡಿಸುವಂತಾಗಬೇಕು

– ಬಾನಂದೂರು ಕೆಂಪಯ್ಯ

ಜನಪದ ಹಾಡುಗಾರಿಕೆಗೇ ಮೀಸಲಾಗಿರುವಂತೆ ಒಂದು ಸ್ವತಂತ್ರ ಅಧ್ಯಯನದ ವಿಭಾಗವನ್ನು ತೆರೆಯಬೇಕು. ಜನಪದ ಸಂಗೀತವನ್ನು ಮೂಲ ಸ್ವರೂಪದಲ್ಲಿ ಉಳಿಸಲು ಮತ್ತು ಬೆಳೆಸಲು ಅಗತ್ಯವಾದ ವಾತಾವರಣ ನಿರ್ಮಿಸಬೇಕು. ಜಾನಪದ ನಿಂತ ನೀರಲ್ಲ. ಈಚಿನ ದಿನಗಳಲ್ಲಿ ಸುಗಮ ಸಂಗೀತದಲ್ಲಿ ಜನಪದ ಗೀತೆಗಳ ಲಯ, ರಾಗ ಮತ್ತು ಮಟ್ಟುಗಳನ್ನು ಬಳಸಿಕೊಳ್ಳುವ ಪರಿಕ್ರಮ ಚಾಲ್ತಿಗೆ ಬಂದಿದೆ. ವಾಣಿಜ್ಯೀಕರಣಕ್ಕೆ ಒಳಗಾಗಿರುವ ಜನಪದ ಸಂಗೀತದ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕು. ಕಲಿತು ಹಾಡುವವರು ಸಂಗೀತದ ಮೂಲ ಸ್ರೋತಗಳನ್ನು ಮರೆಮಾಚಿ ಕಲಾ ಪ್ರದರ್ಶನದಲ್ಲಿ ತೊಡಗಿರುವುದು ಶೋಚನೀಯ. ಎಲ್ಲ ಮೂಲವಾದ್ಯ ಮತ್ತು ಧಾಟಿ (Tune)ಗಳನ್ನು ನುಡಿಸುವ ಸಾಮರ್ಥ್ಯ ವಿರಳ. ಹಣವೇ ಬಹು ದೊಡ್ಡ ಆಕರ್ಷಣೆ. ಹೀಗಾಗಿ ಮೌಲ್ಯಗಳು ಮಾಯವಾಗುತ್ತಿವೆ.

ಮೂಲ ಕಲೆಗಳು ಸಮೃದ್ಧವಾಗಿರುವೆಡೆಯಲ್ಲಿ – ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ವಿಶ್ವವಿದ್ಯಾನಿಲಯ ರೂಪುಗೊಳ್ಳಲಿ. ಜನಪದ ಕಲೆಗಳನ್ನು ಜನಪದ ಕಲೆಗಳಾಗಿಯೇ ಪ್ರಸ್ತುತಪಡಿಸುವಂತಾಗಬೇಕು. ಕಲೆಗಳನ್ನು ಕಲಿಯುವ ಆಸಕ್ತಿ ಇದ್ದೆಡೆಗಳಲ್ಲಿ ಕಲಿಕಾ ಕೇಂದ್ರ / ಕಾಲೇಜುಗಳನ್ನು ಆರಂಭಿಸಬೇಕು. ಪ್ರದರ್ಶನ ಕಲೆಗಳನ್ನು ವೈವಿಧ್ಯಮಯವಾಗಿ ಪ್ರಸ್ತುತಪಡಿಸುವವರಿಗೆ ವಿಶೇಷ ಆದ್ಯತೆ ಇರಲಿ.

ಸಾಹಿತ್ಯ, ಕಲೆ, ರಂಗಭೂಮಿ ಕಲೆಗಳು, ಕುಣಿತ ಪ್ರಧಾನ ಕಲೆಗಳು (Non-theatrical), ಹೆಣ್ಣು ಮಕ್ಕಳ ಗಾಯನ, ಗಂಡಸರ ಹಾಡುಗಾರಿಕೆ, ಕೃಷಿ ಜಾನಪದ – ಹೀಗೆ ಒಂದೊಂದಕ್ಕೂ ಒಂದೊಂದು ಘಟಕವನ್ನು ಸ್ಥಾಪಿಸಿ ಹೆಚ್ಚಿನ ಕಲಾವಿದರು – ಸಂಶೋಧಕರಿಗೆ ನೆಲೆ ಒದಗಿಸಬೇಕು.

ಸುಸಂಬದ್ಧವಾಗಿ ಸಮರ್ಥವಾಗಿ ಕುಣಿತಗಳನ್ನು ಪ್ರಸ್ತುತಪಡಿಸುವವರಿಗೆ ವಿಶ್ವವಿದ್ಯಾನಿಲಯದ ಕಡೆಯಿಂದ ವೇದಿಕೆಗಳನ್ನು ಕಲ್ಪಿಸಿಕೊಡಬೇಕು. **ಡೊಳ್ಳು ಪ್ರದರ್ಶನ:** ಕುರುಬರ ಡೊಳ್ಳುವಾದನಕ್ಕೂ ದೀವರ ಡೊಳ್ಳು ವಾದನಕ್ಕೂ ವ್ಯತ್ಯಾಸ ಉಂಟು. ಗಾಯನ ಕಲೆ ಆಧುನಿಕ ಜಗತ್ತಿನಲ್ಲಿ ಬದಲಾಗುತ್ತಿರುವುದರಿಂದ ಕಲಿಕೆ – ಪ್ರಯೋಗ, ಪ್ರಸ್ತುತಿ ನಿರಂತರವಾಗಿ ಸಾಗುವಂತೆ ನೋಡಿಕೊಳ್ಳಬೇಕು.

ಧ್ವನಿ ಘಟಕ (Vocal Unit), ಚರ್ಮವಾದ್ಯಗಳ ಘಟಕ (Unit), ಸಂರಕ್ಷಣ ಘಟಕ (Preservation Unit)–ಹೀಗೆ ಬೇರೆ ಬೇರೆ ಘಟಕಗಳನ್ನು ಸ್ಥಾಪಿಸಿ ಕಲೆಗಳ ಸಂವರ್ಧನೆಗೆ ಯತ್ನಿಸಬೇಕು. ಆಧುನಿಕ ಕಾಲದ ಶ್ರೋತೃಗಳನ್ನು ರಂಜಿಸಲು ಆಧುನಿಕ ಪೀಳಿಗೆಯ ತುರುಬು ತರಹ ಮೂಲ ಸಂಗೀತದ ಮಟ್ಟುಗಳನ್ನು ಮಾರ್ಪಾಡು (twist) ಮಾಡಿ ಸರಳ ಲಯದೊಂದಿಗೆ ಹಾಡುಗಾರಿಕೆ ಮುಂದುವರೆಸಬೇಕು. ಆಯಾ ಕ್ಷೇತ್ರದಲ್ಲಿ ಪರಿಣತರಾದವರಿಗೆ ಕಲಾ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಿ ಕಲಿಸುವ–ಕಲಿಯುವ ಏರ್ಪಾಟು ಮಾಡಬೇಕು. ಸದ್ಯ ಲಭ್ಯವಿಲ್ಲದ ವಾದ್ಯ ಪರಿಕರಗಳನ್ನು ಹೊಸದಾಗಿ ನಿರ್ಮಿಸಿಕೊಡಬೇಕು.

ಕಲೆಗಳನ್ನು ಕಲಿಯಬಯಸುವವರಿಗೆ ಸರ್ಟಿಫಿಕೇಟ್, ಡಿಪ್ಲೊಮಾ ಶಿಕ್ಷಣ ಆರಂಭಿಸಬೇಕು. ಹಬ್ಬ ಹುಣ್ಣಿಮೆ ಸಭೆ ಸಮಾರಂಭಗಳಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಕಲಾತಂಡಗಳಿಗೆ ಅವಕಾಶ ಪ್ರಾಪ್ತವಾಗುವಂತೆ ನೋಡಿಕೊಳ್ಳಬೇಕು. ಆಧುನಿಕ ವಾದ್ಯ ಪರಿಕರಗಳನ್ನು ಬಳಸದಂತೆ (Discourage) ನೋಡಿಕೊಳ್ಳಬೇಕು.

ಪ್ರಕಟಣ ವಿಭಾಗ, ಕತೆ ಹೇಳುವ ವಿಭಾಗ, ಮ್ಯೂಸಿಯಂ, ಆಹಾರಜಾನಪದ, ಸಮುದ್ರ ಜಾನಪದ–ಅಧ್ಯಯನ ಯೋಗ್ಯವಾದುದು.

ದಿನಾಂಕ:೨೮.೧೦.೨೦೧೦

ಎಲ್ಲದಕ್ಕೂ ಜನಪದ ಸಂಗೀತವೇ ಪ್ರಮಾಣ

– ಹಂಸಲೇಖ

- ಉದ್ದೇಶಿತ ಜಾನಪದ ವಿಶ್ವವಿದ್ಯಾನಿಲಯಕ್ಕೆ ಎಲ್ಲ ವಿಶ್ವವಿದ್ಯಾನಿಲಯಗಳ ಸಂಪರ್ಕ ಇರಬೇಕು. ಸಂವಹನಕ್ಕಾಗಿ ಅದು ಅಗತ್ಯ.
- ಸದ್ಯ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳು ಸಾಕಷ್ಟು ವಿಷಯ ಸಂಗ್ರಹ ಮಾಡಿವೆ. ಆದರೆ ಅವನ್ನು ಹೇಗೆ ಅಧ್ಯಯನ ಮಾಡಬೇಕು ಎನ್ನುವುದನ್ನು ಜಾನಪದ ವಿಶ್ವವಿದ್ಯಾನಿಲಯವು ಸೂಕ್ತ ಮಾರ್ಗದರ್ಶನ ಮಾಡಬೇಕು.
- ಸಮಾಜಮುಖಿಯಾಗಿರುವಂತೆ ನೋಡಿಕೊಳ್ಳಬೇಕು: ಶುಶ್ರೂಷೆ, ವಿಸ್ತರಣೆ, ಪ್ರದರ್ಶನ, ಸಂರಕ್ಷಣೆ –
- ಪ್ರತಿಭಟನೆ ದನಿ ಮೂಲಸ್ರೋತವಾಗಿರುವುದನ್ನು ಲಕ್ಷಿಸಬೇಕು.
- 'ಗ್ರಾಮಕರ್ನಾಟಕ'ವನ್ನು ನಿರ್ಮಿಸಬೇಕು. ನಮ್ಮ ಜನರ ಬದುಕು ಬವಣೆ ಕಲೆಗಳು ಸುಧಾರಿಸಬೇಕಾದರೆ ಅವರ ಬದುಕೂ ಸುಧಾರಿಸಬೇಕು.
- ಎಲ್ಲ ಕಲೆಗಳಿಗೂ ಸಂಗೀತವೇ ಪ್ರಮಾಣ.

ಅ– ಶಬ್ದ ಆ – ಸಂಗೀತ

ಸಂಗೀತದ ಮುಖಾಂತರವೇ ಜೀವನ – ಜೀವ ಪರವಾಗಿರುವುದು. ಈ ದೇಶದಲ್ಲಿ ಎಲ್ಲ ಸಂಗೀತ ಪರಿಕರಗಳು ಸಿನಿಮಾದಲ್ಲಿ ಸೇರಿ ಹೋಗಿವೆ. ವಾದ್ಯ, ಮಟ್ಟುಗಳು, ದೇಸಿ ಜಾಣ್ಮೆ, ದೇಸಿ ವಿಜ್ಞಾನ ಎಲ್ಲವೂ ಇಲ್ಲಿ ಘೋಳೈಸಿವೆ. ಎಲ್ಲದಕ್ಕೂ ಸಾಂಸ್ಕೃತಿಕ ಸ್ವಾತಂತ್ರ್ಯ ನೀಡಿರುವುದು ದೇಸೀ ಸಂಗೀತವೇ. ಎಲ್ಲದಕ್ಕೂ ಸಂಗೀತವೇ ಪ್ರಮಾಣ. ದೇಸಿ ಸಂಗೀತದ ವಿಸ್ತಾರ ವೈವಿಧ್ಯವನ್ನು ಮುಂದೆ ತರಬೇಕು – ಮೂಲಧ್ವನಿ – ಈಗಿನ ಪ್ರವೃತ್ತಿ.

- ಭಾರತೀಯರು Horizontal Music ನಲ್ಲಿ ಪಾರಮ್ಯ ಸಾಧಿಸಿದ್ದರೆ, ವಿದೇಶೀಯರು Vertical Music ದಲ್ಲಿ ವಿಶ್ವಾಸ ಇಟ್ಟಿದ್ದಾರೆ.
- ನಮ್ಮ ದೇಸೀ ಸಂಗೀತದ ಮೂಲತತ್ವ – Surround Music ಧ್ವನಿಗೂ Harmonesಗೂ ಸಂಬಂಧ ಕಲ್ಪಿಸಿ ಧ್ವನಿಯ ಮುಖಾಂತರ ಎಲ್ಲ ಸಂಗೀತದಲ್ಲಿ ಮೇಳೈಸಬೇಕು.
- ನಿಸರ್ಗದತ್ತವಾದ ಧ್ವನಿತತ್ವವನ್ನು ದೇಸೀಯರು ಬಲ್ಲರು.
- ನೀರೆ ನಿರಂಕಾರದೊಳಗೆ ತೆರಿಗಳ್ ಮೊದಲೇನಲ್ಲವಲ್ಲ (ಹಾಲುಮತ ಪುರಾಣ)! ಕಥನಗಳನ್ನು (Narratives) ಪತ್ತೆ ಹಚ್ಚಬೇಕು.
- ಜನಪದ ಎಂದರೆ ವರ್ತಮಾನ – ಅದಕ್ಕೆ update ಮಾಡಿಕೊಳ್ಳಬೇಕು. ಶ್ರುತಿಲೇಪನ ಆಗಬೇಕು – ಒಂದು ಸ್ತರದ ಗುಣಮಟ್ಟವನ್ನು (one scale of standard) - ಪ್ರಪಂಚದ ಗುಣಮಟ್ಟಕ್ಕೆ (world standard) ಏರುವುದು.
- ದೇಸಿ ಸಂಗೀತಗಾರ ಜಗತ್ತಿನ ಎಲ್ಲ ಸಂಗೀತಗಳ ಬಗ್ಗೆ ಪರಿಜ್ಞಾನ ಹೊಂದಿರಬೇಕು. ಹುಟ್ಟಿಸುವ ಕಲಾವಿದರನ್ನು ಹೇಗೆ ರೂಪಿಸಬೇಕು ಎಂಬುವುದಕ್ಕೆ ಇಪ್ಪತ್ತು ವರ್ಷದ ಯೋಜನೆ ರೂಪಿಸಬೇಕು – Vision - 2030
- ಒಂದನೆಯ ತರಗತಿಯಿಂದ ೧೮ರವರೆಗೂ ಕಲಿಸುವ ಏರ್ಪಾಟು ಆಗಬೇಕು. ಹೊರಗುತ್ತಿಗೆ (Out source) ಮಾಡಬಹುದು.
- ರಷ್ಯನ್ ಬ್ಯಾಲೆ (Ballet) ತರಹ ವೇದಿಕೆಗೆ ಮಹಾಕಾವ್ಯಗಳು ಬರಬೇಕು.
- ನೃತ್ಯರೂಪ ಮಾಡಿ (ಥೈಲ್ಯಾಂಡ್‌ನಲ್ಲಿ) ಉಗಮ–ಉತ್ಥಾನ ನೋಡಬಹುದು.
- ದೇಸಿ – act ಹೊರತು not readable.
- ದೇಸಿ ಸಂಬೋಧನಾ ಧ್ವನಿಗಳು – ಕರಂಗೊಯ್ಲುಗಳು
- ದೇಸಿ ಪ್ರಥಮ ಧ್ವನಿಗಳು – ಇವನ್ನೆಲ್ಲಾ ಪಠ್ಯಕ್ರಮದಲ್ಲಿ ಅಳವಡಿಸಲಿ. ನಮ್ಮದು ಅತಿ ಪ್ರಾಚೀನ ನಿಸರ್ಗದತ್ತವಾದ ಸಂಗೀತ ನಿಯಮಗಳು. ಪ್ರಪಂಚಕ್ಕೆಲ್ಲಾ ಒಂದೇ Semi tones – Full tones ಇಲ್ಲದೆ Melodious tone (ಪ್ರಪಂಚದ ಇತರ ದೇಶಗಳಿಗೆ ೪೦೦೦ ವರ್ಷಗಳ ಅನಂತರ ಇದು ಗೊತ್ತಾಯಿತು).

- ಆರಂಭದಿಂದಲೇ Semi tone ನಮ್ಮವರಿಗೆ ಗೊತ್ತಿತ್ತು.
- ಕಲಾವಿದರನ್ನು ನಾವೇ ಹುಟ್ಟುಹಾಕಬೇಕು – ಒಂದನೆಯ ತರಗತಿಯಿಂದಲೇ ಕಲಿಸಬೇಕು.
- ಭವಿಷ್ಯದಲ್ಲಿ ಅನಿಮೆಷನ್ ಪರ್ವ(Future is animation).
- ಜನಪದ ಆಶಯಗಳೆಲ್ಲಾ ಕಲಾ ಪ್ರಕಾರಗಳಾಗುತ್ತವೆ.
- ದೇಸಿ ರೆಕಾರ್ಡಿಂಗ್ ಸ್ಟುಡಿಯೊ (Recording Studio) ಆಗಲೇಬೇಕು.

ದಿನಾಂಕ: ೧೯.೧೦.೨೦೧೦

ಉದ್ಯಮವಾಗಿ ರೂಪು ತಳೆಯುವಂತಾಗಲಿ

– ಸಿರಿಗಂಧ ಶ್ರೀನಿವಾಸಮೂರ್ತಿ

ಲಕ್ಷಾಂತರ ಛಾಯಾ ಚಿತ್ರಗಳಿವೆ. ಇ. ಥರ್ಸ್ಟನ್ ಗ್ರಂಥದಲ್ಲಿರುವಂಥ ಆ ತೆರನ feeling ಕೊಡುವಂಥ – ಈ ತಲೆಮಾರಿಗೆ ದಾರಿ ಮಾಡಿಕೊಡುವ ಚಿತ್ರಗಳು. ಹತ್ತು ವರ್ಷ ಅವಧಿಗೆ ಪ್ರಸಾರ ಮಾಡಬಹುದಾದಲ್ಲಿ ಹಾಡುಗಳು – ಚಿತ್ರಗಳನ್ನು – ಡಿ.ಡಿ.ಗಾಗಿ ಸಿದ್ಧಪಡಿಸಿಕೊಡಲಾಗಿದೆ. ಮೂಲ ಧಾಟಿಗಳನ್ನು ಇಟ್ಟುಕೊಂಡು ನವೀನಗೊಳಿಸಿ ವರ್ತಮಾನಕ್ಕೆ ಸಂಗತಗೊಳಿಸಿ ಪ್ರಸಾರ ಮಾಡುವುದು ಯುಕ್ತ.

ಇಲ್ಲಿಯು ಜನಪದ ಸಂಗೀತವನ್ನು Jaws Music ಶೈಲಿಯಲ್ಲಿ ಮಾಡಿಕೊಡಲು ಆಹ್ವಾನವಿದೆ.

ವಚನಗೀತೆಗಳನ್ನು ಪಾಶ್ಚಿಮಾತ್ಯ ಸಂಗೀತ – ಸಮ್ಮಿಶ್ರಗೊಳಿಸಿ ಪ್ರಸಾರ ಮಾಡಲಾಗಿದೆ. ಜನಪದ ಕಲೆ–ಕಲಾವಿದರು ಬದುಕಬೇಕಾದರೆ ಅದು ಉದ್ಯಮವಾಗಬೇಕು. ಅತ್ಯದ್ಭುತ ಪ್ರತಿಕ್ರಿಯೆ (tremendous response) ಸಿಗಬೇಕು ಎನ್ನುವುದಾದರೆ ಅದು ಉದ್ಯಮವಾಗಬೇಕು. ನಮ್ಮ ಕಲೆಗಳಿಗೆ ಏನು ಸಾಮರ್ಥ್ಯ (Potentiality) ಎಂಬುದನ್ನು ಪರೀಕ್ಷಿಸಲು 'ಜಾನಪದ ಜಾತ್ರೆ'ಗಳನ್ನು ವೀಕ್ಷಿಸಬೇಕು.

ಆಧುನಿಕತೆಯು ಬಣ್ಣ, ಸೊಗಸು, ಅಳವಡಿಸಿ ಪ್ರದರ್ಶನ ಆಕರ್ಷಕವಾಗಿರುವಂತೆ ನೋಡಿಕೊಳ್ಳಬೇಕು. ಆಗ ಮಾತ್ರ ಉದ್ಯಮವಾಗಿ ಬೆಳೆಸಲು ಉಳಿಸಲು ಸಾಧ್ಯ. ಒಟ್ಟು ೨೩೦ ಕಲೆಗಳ ಪೈಕಿ ೫೦ ಕಲೆಗಳನ್ನು ಆಯ್ದು ಉದ್ದಿಮೆಯಾಗಿ ಬೆಳೆಸಲು ಬಳಸಿಕೊಳ್ಳಬೇಕು. ಹಾಡು, ಕುಣಿತ, ಮೆರೆತಗಳಲ್ಲಿ Josh ಇರುವಂತೆ ನೋಡಿಕೊಳ್ಳಬೇಕು. ಬೊಳ್‌ಕಾಟ್, ಕೊಂಬಾಟ್ (ಕೊಡಗಿನ ನೃತ್ಯಗಳು) ರೋಮಾಂಚಕ (vibrant) ಪ್ರದರ್ಶಕ ಕಲೆಗಳಾಗುವ ಸಾಧ್ಯತೆಗಳನ್ನು ಹೊಂದಿವೆ.

ದಿನಾಂಕ:೦೮.೧೧.೨೦೧೦

ಹಾಡು ಮತ್ತು ಕುಣಿತಕ್ಕೆ ಸಮಾನ ಪ್ರಾಶಸ್ತ್ಯ ಇರಲಿ

– ಅಪ್ಪಗೆರೆ ತಿಮ್ಮರಾಜು

ಯಕ್ಷಗಾನಕ್ಕೆ ಕಾರಂತರು ಹೇಗೆ ಹೊಸ ಆಯಾಮ ಒದಗಿಸಿದರೊ ಅಂತೆಯೇ ಜನಪದ ಹಾಡುಗಾರಿಕೆಯಲ್ಲೂ ಹೊಸತನವನ್ನು ಮೆರೆಯಲು ಯತ್ನಿಸಲಾಗುತ್ತಿದೆ. ಏಕತಾನತೆಯನ್ನು ಮುರಿಯುವುದಕ್ಕಾಗಿ ಸಂಗತಿಗಳನ್ನು, ಪಲುಕುಗಳನ್ನು ವಿಶೇಷವಾಗಿ ಅಳವಡಿಸಿಕೊಳ್ಳಲಾಗುತ್ತಿದೆ. ಶ್ರೋತೃಗಳ ತಾಳ್ಮೆಯನ್ನು ಕಾಯ್ದುಕೊಳ್ಳುವುದು ಕಷ್ಟ ಎನ್ನುವ ಕಾರಣಕ್ಕಾಗಿ ಸುಧಾರಣೆ ಮಾಡಿಕೊಳ್ಳಲಾಗುತ್ತಿದೆ.

ಬದಲಾದ ಸಂದರ್ಭದಲ್ಲಿ ಹಾಡುಗಳು ಹಿಂದೆ ಸರಿದು ಕುಣಿತಗಳು ಮೆರೆಯುತ್ತಾ ಇವೆ. ಕಂಸಾಳೆ, ಡೊಳ್ಳು, ವೀರಗಾಸೆ – ಈ ಎಲ್ಲವೂ ಸಮರ ಕಲೆಗಳ ಗುಣಗಳನ್ನು ಹೊಂದಿರುವಂಥವು. ಹಾಡು ಮತ್ತು ಕುಣಿತ–ಎರಡಕ್ಕೂ ಸಮಾನ ಪ್ರಾಶಸ್ತ್ಯವಿರಬೇಕು.

ಪ್ರಾಥಮಿಕ ಶಾಲೆಗಳಲ್ಲಿ / ಕಾಲೇಜುಗಳಲ್ಲಿ – ಕಲೆಗಳಲ್ಲಿ ಅಭಿರುಚಿ ಹುಟ್ಟುವಂತೆ ಮಾಡಲು ಮೂಲ ಕಲಾವಿದರನ್ನು ನೇಮಿಸಿಕೊಳ್ಳುವಂತಾಗಬೇಕು. ಹೆಣ್ಣುಮಗಳು ತಾಯಿಯಿಂದ ಅಡುಗೆ ಕಲಿತಂತೆ ಮಕ್ಕಳು ಕಲೆಯನ್ನು ಕಲಿಯುವಂತಾಗಬೇಕು. ಜನಪದ ಕಲೆಯ ಅಭಿರುಚಿಯನ್ನು ಮಕ್ಕಳಲ್ಲಿ ಬಿತ್ತಬೇಕು.

ಹಳ್ಳಿ ಹಳ್ಳಿಯಲ್ಲೂ ಜಾನಪದ ವಿಶ್ವವಿದ್ಯಾನಿಲಯದ ತೇರು ಎಳೆಯಬೇಕು. ಊರು ಕೇರಿಗಳಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶವಾಗಬೇಕು. ಕಲಾ ಪ್ರದರ್ಶನಗಳು ಮರಳಿ ಹಳ್ಳಿಗೆ ಹೋಗಬೇಕು. ಕಲೆಗಳನ್ನು ವೀಕ್ಷಿಸಿದ ಮಕ್ಕಳು ಅದರಿಂದ ಸ್ಫೂರ್ತಿ ಪಡೆಯಬಹುದು. ಆಯಾ ಜಿಲ್ಲೆಯ ಕಲೆಗಳು ಆಯಾ ಪ್ರದೇಶದಲ್ಲೇ ಪ್ರದರ್ಶನಗೊಳ್ಳುವಂತಾಗಬೇಕು.

ಕೆಂಗಲ್ ಹನುಮಂತಯ್ಯ ಅವರು ('ಸುಧಾ' ದಲ್ಲಿ ಉಲ್ಲೇಖವಿದೆ) – "ಒಬ್ಬ ಲಾವಣಿಕಾರನನ್ನು ಇಟ್ಟುಕೊಂಡು ಚನ್ನಪ್ಪನ ವಿರುದ್ಧ ಗೆದ್ದೆ" ಎಂದು ಅಭಿಮಾನದಿಂದ ಹೇಳಿಕೊಂಡಿರುವುದುಂಟು.

ಮೊದಲಿಗೆ ನಶಿಸಿ ಹೋಗುತ್ತಿರುವ ಕಲೆಗಳ ಯಾದಿ ಆಗಬೇಕು. ಕಲಾವಿದರ ಪಟ್ಟಿಯೂ ಆಗಬೇಕು. ಅದನ್ನು ಸಿದ್ಧಪಡಿಸಲು ಹಂಗಾಮಿ ಸಮಿತಿ (Adhoc Committee) ರಚಿಸುವುದು ಯುಕ್ತ. 'ಗರ್ಭ ಗುಡಿಯಿಂದ ವಿಶ್ವವಿದ್ಯಾನಿಲಯ ಮರಳಿ ಹಳ್ಳಿಗೆ' ನೀತಿಯನ್ನು ಅನುಸರಿಸಬೇಕು. ಚೌಡಿಕೆ ಗೋವಿಂದಯ್ಯ, ಗೊಲ್ಲರ ಕೆಂಚಮಲ್ಲಯ್ಯ, ಕೋಲಾಟದ ಮಲ್ಲಯ್ಯ ಇಂಥವರು ನಮ್ಮ ಎಲ್ಲರಿಗೂ ಆದರ್ಶವಾಗಬೇಕು.

ದಿನಾಂಕ: ೩೦.೧೦.೨೦೧೦

ಕಲಿಕಾರ್ಥಿಗಳು ವೃತ್ತಿಕಲಾವಿದರಾಗಿ ಹೊರಹೊಮ್ಮಲಿ

– ಬಂಡ್ಲಳ್ಳಿ ವಿಜಯಕುಮಾರ್

ಹಾಡುಗಾರಿಕೆಯನ್ನು ಕಲಿಸುವಾಗ ಆರಂಭದಲ್ಲೇ ಮೂಲಮಟ್ಟುಗಳಲ್ಲಿ ಕಲಿಸಲು ಹೋಗಬಾರದು. ರಂಜನೀಯ ಶೈಲಿಯಲ್ಲಿಯೇ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವ ಮೂಲಕ ಕಲಿಕೆಯಲ್ಲಿ ಆಸಕ್ತಿ ತೋರುವವರಿಗೆ ಪ್ರೇರಣೆ ಒದಗಿಸಬೇಕಾಗುತ್ತದೆ.

ವಿಶ್ವವಿದ್ಯಾನಿಲಯಕ್ಕೆ ಕಲೆಗಳನ್ನು ಕಲಿಯ ಬರುವವರು ವೃತ್ತಿ ಕಲಾವಿದರಾಗಿ ಹೊರಬರುವ ಭರವಸೆ ಮೂಡುವಂತಾಗಬೇಕು.

ಜನಪದ ಸಾಹಿತ್ಯ ರೂಪಗಳ ಮೇಲೆ ರೂ. ೫/– ದರದ (ಸುಲಭ ಬೆಲೆಗೆ) ಚಿಕ್ಕ ಗಾತ್ರದ ಪುಸ್ತಕಗಳನ್ನು ಪ್ರಕಟಿಸಿ ಪ್ರಾಥಮಿಕ, ಪ್ರೌಢಶಾಲೆಗಳಿಗೆ ವಿತರಿಸಬೇಕು. ಕಲೆಗಳ ಬಗೆಗೆ ಪರಿಚಯವಾಗುವುದರೊಂದಿಗೆ ಸದಭಿರುಚಿ ಬೆಳೆಸುವುದು. ಶಿಕ್ಷಕರ ವಲಯದಲ್ಲಿ ತೊಡಕುಗಳಿರುವುದರಿಂದ ಪುಸ್ತಕ ಪ್ರಕಟಣೆ ಆಗಬೇಕು.

ಶಾಲಾ ವಾರ್ಷಿಕೋತ್ಸವ ಸಮಾರಂಭಗಳಿಗೆ ತಾಲೀಮು ನಡೆಸಲು ವೃತ್ತಿಪರತೆ ಮೆರೆಯುವ ಕಲಾವಿದರನ್ನು ಬಳಸಿಕೊಳ್ಳುವಂತಾಗಬೇಕು. ಕ್ರಿಯಾಶೀಲವಾದ ಸಾಂಸ್ಕೃತಿಕ ವಾತಾವರಣ ನಿರ್ಮಾಣವಾಗಬೇಕು.

ಬರವಣಿಗೆ, ಚಿಂತನೆಯಲ್ಲಿ ಚುರುಕಾಗಿರುವ ಪಿ.ಯು.ಸಿ. ಹಂತದ ವಿದ್ಯಾರ್ಥಿಗಳನ್ನು ಜನಪದ ಕಲೆಗಳ ಪ್ರಚಾರಕ್ಕೆ ಬಳಸಿಕೊಳ್ಳಬೇಕು. ಅಂಥ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಹುರಿದುಂಬಿಸಬೇಕು.

ದೂರದರ್ಶನದಲ್ಲಿ ಜನಪದ ಕಲೆ–ಸಂಸ್ಕೃತಿ ಸಂಬಂಧಿತ ವಿಚಾರಗಳು, ಸಂವಾದ ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳಬೇಕು.

ಕಲಾತಂಡಗಳು ವಿನಿಮಯಕ್ಕೆ ಒಳಪಡಬೇಕು.

ಯುವ ಮನಸ್ಸುಗಳು ಹಾಡು ಕುಣಿತಗಳಿಗೆ ಮನಸ್ಸು ಕೊಡುವಂತಾಗಲು, ಚಿಗುರೊಡೆಯುವಂತಾಗಲು ಜಾನಪದವನ್ನು ಕಡ್ಡಾಯವಾಗಿ ಕಲಿಕೆಯ ವಿಷಯವಾಗಿ ಪರಿಗಣಿಸಬೇಕು.

ಮೂಲ ಕಲಾವಿದರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಪರಿಗಣಿಸುವುದಲ್ಲದೆ ಮೂಲ ಕಲಾವಿದರ ಎಲ್ಲ ಹಾಡುಗಾರಿಕೆಯನ್ನು ಶ್ರವ್ಯ ಮತ್ತು ದೃಶ್ಯ ಮಾಧ್ಯಮದಲ್ಲಿ ದಾಖಲೀಕರಿಸಬೇಕು. ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಕಾರ್ಯಕ್ರಮದಲ್ಲಿ ಪೋಷಕ ವರ್ಗದವರು ಶ್ರೋತೃಗಳಾಗಿ ಸಿಗುತ್ತಾರೆ. ಪೋಷಕರಲ್ಲಿ ಜನಪದ ಕಲೆ ಸಂಸ್ಕೃತಿ ಬಗೆಗೆ ಆಸಕ್ತಿ ಮೂಡುವಂತೆ ಮಾಡಿದರೆ ಮಕ್ಕಳಲ್ಲೂ ತಾನೇ ತಾನಾಗಿ ಆ ಪ್ರವೃತ್ತಿ ಬೆಳೆಯುವುದು. ಗ್ರಾಮಲೆಕ್ಕಿಗನಾದವನಿಗೆ ತೋಟಿಗ, ತಳಾರಿ, ತಳವಾರ ಎಲ್ಲರ ಪರಿಚಯವಿರುತ್ತದೆ. ಸ್ವಯಂ ಉದ್ಯೋಗವನ್ನು ಹುಡುಕುವಂತೆ ಮಾಡುವ ಯತ್ನವಿರಬೇಕು.

ಉದ್ಯೋಗ ಸೃಷ್ಟಿಯಾದರೆ ವಿಶ್ವವಿದ್ಯಾನಿಲಯ ರೂಪಿಸುವ ಎಲ್ಲ ಶಿಕ್ಷಣಗಳಿಗೂ ಗೌರವ-ಮನ್ನಣೆ ಸಿಗುವುದು. ವಿಶ್ವವಿದ್ಯಾನಿಲಯ ಕೇವಲ ಒಂದು ಶೈಕ್ಷಣಿಕ ಕೇಂದ್ರವಾಗಿ ರೂಪುಗೊಳ್ಳದೆ ಒಂದು ಪ್ರವಾಸಿ ಕೇಂದ್ರವಾಗಿಯೂ ರೂಪುಗೊಳ್ಳಬೇಕು. ಅಲ್ಲಿ ಗ್ರಾಮೀಣ ಸಂತೆ, ಹಬ್ಬ, ಜಾತ್ರೆಗಳು, ಆಲೆಮನೆ ಇತ್ಯಾದಿ ಚಟುವಟಿಕೆಗಳು (Event) ಜರುಗುವಂತಾಗಬೇಕು. ಆ ರೀತಿಯಾಗಿ 'ಗ್ರಾಮ ಕರ್ನಾಟಕ' ಸೃಷ್ಟಿಯಾಗಬೇಕು.

ದಿನಾಂಕ: ೨೮.೧೦.೨೦೧೦

ಜನಪದ ಕಲೆಗಳಲ್ಲಿ ಬದುಕೂ ಉಂಟು; ಐಸಿರಿಯೂ ಉಂಟು

– ಎಂ. ಕೆ. ಸಿದ್ಧರಾಜು

- ಕಲಾವಿದ ಉಳಿದಾಗ ಕಲೆ ಉಳಿಯುತ್ತದೆ. ಕಲೆಯ ಮೂಲ ನೆಲೆ ಗ್ರಾಮೀಣ ಪ್ರದೇಶ. ಗ್ರಾಮದ ಬದುಕೇ ಕಲೆ. ಸಂಶೋಧಕನಾದವನು ಕಲೆ – ಕಲಾವಿದರ ನಡುವೆ ಕೂತು ವಿಚಾರ ವಿನಿಮಯ ಮಾಡುವುದಾದರೆ ಅದಕ್ಕೆ ಪ್ರೋತ್ಸಾಹ ಇರಲಿ.
- ಕಲೆಗಳನ್ನು ಕಲಿಯಲು ಬರುವ ಶಿಕ್ಷಣಾರ್ಥಿಗಳು ನೇರವಾಗಿ ಮೂಲ ಕಲಾವಿದರೊಂದಿಗೆ ಸಂಪರ್ಕ ಸಾಧಿಸುವಂತೆ ಮಾಡಬೇಕು. ಹಸಿರು ಚುಕ್ಕೆ, ರಾಗಿ ಪದ, ಸೋಬಾನೆ ಪದ, ಮುಮ್ಮೇಳ – ಹಿಮ್ಮೇಳಗಳ ಬಗೆಗೆ ಮಾಹಿತಿ ಕೊಡುವಂತಾಗಬೇಕು. ಗಾಳಿಪಟ ಎತ್ತರದಲ್ಲಿ ಹಾರಾಡಿದರೂ ಅದರ ಸೂತ್ರ ನೆಲದಲ್ಲೇ ಇರುತ್ತದೆ. ಅದೇ ರೀತಿ ಕಲೆ – ಕಲಾವಿದರು.
- ಕಲಾವಿದನಾಗುವ ಆಸೆ ಇಟ್ಟುಕೊಂಡವರು ಕಲೆಗಳನ್ನು ಕಲಿಯುವರು. ಕಲೆಗಳ ಬಗೆಗೆ ತಿಳಿಯಬಯಸುವವರು, ತಿಳಿಯಲು ಯತ್ನಿಸುವರು. ಕಲೆಯ ಆಳ, ಅಗಲ, ವಿಸ್ತಾರ, ವೈವಿಧ್ಯ ತಿಳಿಯುವವರು ಬೇರೆಯವರಿಗೂ ತಿಳಿಸುವರು. "ಜೇನು ಹ್ಯಾಂಗಿದ್ದಾದ ಅಂದ್ರ ತಿಂದೇ ನೋಡ್ಬೇಕಾ" ಅನ್ನುವ ಹಾಗೆ ಜನಪದ ಕಲೆಗಳನ್ನು ಕಲಿತೇ ಅನುಭವಿಸಬೇಕು.
- ಹುಟ್ಟಿದ್ದು – ಬೆಳೆದದ್ದು – ಬದುಕನ್ನು ಕೊಟ್ಟದ್ದು ಜನಪದ ಸಂಸ್ಕೃತಿಯೇ ಆದದ್ದರಿಂದ ಅದರ ಆಶ್ರಯದಲ್ಲಿಯೇ ಇರುವುದು ಯುಕ್ತ.
- ಮೂಲಭೂತ ಸಂಗತಿಗಳು ತಿಳಿದಿರಬೇಕು ಎಂಬ ಕಾರಣಕ್ಕಾಗಿ ಶಾಸ್ತ್ರೀಯ ಸಂಗೀತದ ಪರಿಜ್ಞಾನ ಅಗತ್ಯ. ಹಾಡುಗಾರಿಕೆಗೆ ಪ್ರೇರಣೆ ಬೇಕು. ಜನಪದ ಸಂಗೀತ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ – ಈ ನಾಲ್ಕೂ ಸಂಗತಿಗಳ ಪರಿಣತಿ ಇದ್ದವರಿಂದ ಕಲಿಸುವ ವ್ಯವಸ್ಥೆಯಾದರೆ ಚೆನ್ನ.

- ಜನಪದ ಗೀತೆಗಳನ್ನು ಜನಪದ ಗೀತೆಗಳಾಗಿಯೇ ಹಾಡುವುದು ಸಮಂಜಸ. ಪಲುಕು, ಸಂಗತಿ, ಗಮಕಗಳನ್ನು ಕೊಡುವುದು ಅನಗತ್ಯ. ಜನಪದ ಗಾಯನಕ್ಕೆ ಅದರದೇ ಆದ ಆಂಗಿಕ ಭಾಷೆ (Body Language) ಇದೆ. ಜನಪದ ಹಾಡುಗಳನ್ನು ಪ್ರಸ್ತುತ ಪಡಿಸುವಾಗ ಬ್ರೇಕ್ ಡಾನ್ಸ್ (Brake Dance) ಮಾಡುವುದು ಅನುಚಿತ.
- ಹಂಸಲೇಖ ಅಂಥವರು ದೇಸಿ ಹೆಸರಿನಲ್ಲಿ ಜನಪದ ಸಂಗೀತವನ್ನು ಬೆತ್ತಲೆಗೊಳಿಸುತ್ತಾ ಇದ್ದಾರೆ. ಜನಪದ ಸಂಗೀತ ನಿರಾಭರಣ ಸುಂದರಿ – ಪರಿಸರ ಸುಂದರಿ. ಜನಪದ ಕಲೆಗಳನ್ನು ತಿಳಿದ ಐದು ಜನ ಐವತ್ತು ಜನರಿಗೆ ಪ್ರೇರಣೆ ನೀಡುವಂತಾಗಬೇಕು. ಬದುಕೂ ಉಂಟು, ಐಸಿರಿಯೂ ಉಂಟು.
- ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯಿತಿ / ಜಿಲ್ಲಾ ಪಂಚಾಯಿತಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ಇರಲಿ. ಸ್ಥಳೀಯ ಪ್ರೋತ್ಸಾಹಧನ ನೀಡುವಂತಾಗಬೇಕು. ಸ್ಥಳೀಯ ಕಾರ್ಯಕ್ರಮಗಳಲ್ಲಿ ಜನಪ್ರತಿನಿಧಿಗಳಿಂದ ಸಹಕಾರ ಒದಗಬೇಕು. ದುರ್ದೈವದ ಸಂಗತಿ ಎಂದರೆ ಕಲಾ ಪ್ರದರ್ಶನಕ್ಕೆ ನ್ಯಾಯಯುತವಾಗಿ ಸಿಗಬೇಕಾದ ಮನ್ನಣೆ, ಸಂಭಾವನೆ ಇರುವುದಿಲ್ಲ. ಕೂಲಿ ಮಾಡಿದರೆ ಕೂಲಿಯೇ ಹೆಚ್ಚಾಗಿ ಸಿಗುತ್ತದೆ. ಹಾಡುಗಳು ಮೂಲ ಮಟ್ಟಿನಲ್ಲಿ ಸಂಗತಿ, ಪಲುಕು, ಗಮಕ, ಹಮ್ಮಿಂಗ್ – ಈ ಯಾವುದಕ್ಕೂ ಅವಕಾಶ ಕೊಡದೆ ಹಾಡುಗಾರಿಕೆ ಆಗಬೇಕು.
- ಜಾನಪದ ವಿಶ್ವವಿದ್ಯಾನಿಲಯ ಮೂಲಭೂತ ಸೌಕರ್ಯ ಇದ್ದೆಡೆಗಳಲ್ಲಿ ಆರಂಭವಾಗಲಿ. ಜನಪದರ ಪರಂಪರಾ ಜ್ಞಾನವನ್ನು ಅರ್ಥೈಸಿಕೊಂಡರೆ ಅಷ್ಟೇ ಸಾಕು. ಅವರನ್ನು ಅಕ್ಷರಸ್ಥರನ್ನಾಗಿ ಮಾಡ ಹೋದರೆ ಗಮನ ಬೇರೆಡೆಗೆ (Diversion) ಹೋಗಿ ಕಲೆಗಳು ಸೋಲು ಅನುಭವಿಸಬಹುದು, ಒಲವು ಕಡಿಮೆಯಾಗಬಹುದು. ಕಲಿಯುವ ಆಸಕ್ತಿ ಕಡಿಮೆಯಾಗಬಹುದು. ಸಾಕ್ಷರತಾ ಅಭಿಯಾನ ಕಾರ್ಯಕ್ರಮದಿಂದ ಕಲಾವಿದರನ್ನು ಸಾಕ್ಷರರಾಗಿಸುವ ಪ್ರಯತ್ನ ಮಾಡಬಹುದು.
- ಸಂಘಟನೆಗಳ ಪ್ರತಿರೋಧ ತಡೆಗಟ್ಟಲು ಸಂದರ್ಭ ಬಿದ್ದಾಗ ಸಲಹಾ ಸಮಿತಿಯ ಯುಕ್ತ ಸಲಹೆಗಳನ್ನು ಪಡೆದುಕೊಳ್ಳುವುದು. ಸಮಸ್ಯೆಗಳು ಎದುರಾದಾಗ ಆ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಲು ಯತ್ನಿಸುವುದು – ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದು.

ದಿನಾಂಕ: ೨೫.೧೦.೨೦೧೦

ಪ್ರವಾಸಿ ತಾಣವಾಗಿ ರೂಪುಗೊಳ್ಳಲಿ

– ಜನಾರ್ಧನ್

- 'ಜನಪದ ಗ್ರಾಮ' ದ ಸೃಷ್ಟಿ ಆದ್ಯತೆಯಾಗಿರಲಿ.
- ಸಮಾಜದ ಮುಖವಾಣಿಯಾಗಿರಲಿ.
- ಅಕ್ಷರ ರಾಕ್ಷಸರನ್ನು ಸೃಷ್ಟಿ ಮಾಡಿ ಅಲ್ಲಿ ಉತ್ಪನ್ನವಾಗುವ ಡಿಗ್ರಿಗಳಿಗೆ ಬೆಲೆ ಇರುವ ಕಾಲದಲ್ಲಿ ಸಮಾಜಕ್ಕೆ ತೆರೆದುಕೊಳ್ಳುವ ಶಿಕ್ಷಣಕ್ಕೆ ಬೆಲೆ ಸಿಗುವಂತಾಗಬೇಕು.
- ಮರಳಿ ಜನಪದಕ್ಕೆ – ಮನಸ್ಸಿನಿಂದ ಹೊಗುವಂತಾಗಲಿ (Gate ನಿಂದ out ಆಗಲಿ ಮನಸ್ಸು in ಆಗಲಿ).
- ಕರ್ನಾಟಕದಲ್ಲಿರುವ ಜಾನಪದ ರೂಪಗಳು (Forms) ವೈವಿಧ್ಯಮಯ–ವಾದವು – ಬೇರೆಡೆ ದುರ್ಲಭ.
- ವಲಯವಾರು / ಪ್ರದೇಶವಾರು Forms ಗಳನ್ನು ಗುರುತಿಸಿ ಅವಕ್ಕೆ ಮನ್ನಣೆ ಸಿಗುವಂತಾಗಬೇಕು.
- ಶಾಲಾ ಮಕ್ಕಳಿಗೆ – ಶ್ರವ್ಯ ಮತ್ತು ದೃಶ್ಯ ಮಾಧ್ಯಮದಲ್ಲಿ – ಜನಪದ ಗ್ರಾಮಕ್ಕೆ ಶಿಕ್ಷಣ ನೀಡುವಂತಾಗಬೇಕು. ನಿರಂತರವಾಗಿ ಭೇಟಿ (Visit) ಕಾರ್ಯಕ್ರಮ – ಪ್ರವಾಸ(Picnic) ದ ರೀತಿಯಲ್ಲಿ ವ್ಯವಸ್ಥೆಯಾಗಬೇಕು.
- ಶಾಲೆಗಳ ಪಠ್ಯಕ್ರಮದಲ್ಲಿ ಜಾನಪದ Forms ಗಳು ಅಳವಡಬೇಕು. ಕಲೆಗಳನ್ನು ಮಕ್ಕಳು ಅಭ್ಯಾಸ (Practice) ಮಾಡುವಂತಾಗಬೇಕು.
- ಮೂಲ ಕಲಾವಿದರು ಜನಪದ ಗ್ರಾಮದಲ್ಲಿ ೩ ತಿಂಗಳಾದರೂ ವಾಸ್ತವ್ಯ ಹೂಡುವಂತೆ ಮಾಡಬೇಕು. ಅವರಿಗೆ ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಗೌರವ ಸಲ್ಲುವಂತಾಗಬೇಕು.

- ಜನಪದರ ಮಾತುಗಾರಿಕೆಯ ಗಂಭೀರ ಅಧ್ಯಯನ ನಡೆಯಬೇಕು.
- ಜನಪದರ ಸ್ವಾಭಾವಿಕ ಮಾತುಕತೆಯೇ – ತತ್ವ ವಿಚಾರ ಪ್ರತಿಪಾದನೆಯಂತೆ ಜನಪದ ಆಹಾರ / ತಂತ್ರಜ್ಞಾನದ ಕೋರ್ಸ್(Course)ಗಳನ್ನು ನಡೆಸಬೇಕು.
- ಪ್ರತಿ ಮೂರು / ಆರು ತಿಂಗಳಿಗೊಮ್ಮೆ ಶಿಕ್ಷಣಾರ್ಥಿಗಳು ಕಲಾವಿದರೊಡನೆ ವಿಚಾರ ವಿನಿಮಯ ನಡೆಸುವಂತಾಗಬೇಕು. ಬೇರೆ ಬೇರೆ ಭಾಗದ ಕಲಾವಿದರ ನಡುವೆ ವಿನಿಮಯ ನಡೆದಂತೆ ಪರಿವರ್ತನೆ (Transformation) ಆಗಬೇಕು.
- ವಾದ್ಯೋಪಕರಣದ ಸಂಗ್ರಹ – ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಗುವಂತಾಗಬೇಕು.
- ನೇರ ಬದುಕಿಗೆ ಸಂಬಂಧಿಸಿದ ಜ್ಞಾನಕ್ಷೇತ್ರವಾದುದರಿಂದ ಜನಪದ ಗ್ರಾಮಕ್ಕೆ ಭೇಟಿ ನೀಡಿದವರು ಕನಸನ್ನು ಒಯ್ಯುವಂತಾಗಬೇಕು.
- ಕಾರಂತರಿದ್ದಾಗ ಭೂಪಾಲ್‌ನಲ್ಲಿ ಭಾರತ್‌ಭವನ ನಿರ್ಮಿಸಿ ಬಸ್ತಾರ್ ಸಂಸ್ಕೃತಿಯನ್ನು – ವೀಕ್ಷಕರೆಲ್ಲರೂ ನೆನೆಯುವಂತೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಜಾನಪದ ವಿಶ್ವವಿದ್ಯಾನಿಲಯದಲ್ಲೂ ಒಂದು ಶೈಕ್ಷಣಿಕ ವಾತಾವರಣ ನಿರ್ಮಾಣ ಆಗಬೇಕು. ಪ್ರವಾಸಿಗಳ ಬಹು ದೊಡ್ಡ ತಾಣವಾಗಬೇಕು.
- ನಿರ್ವಹಣೆಯ ದೃಷ್ಟಿ (Management aspect)ಯಿಂದ ಆಗಾಗ ಉಪನ್ಯಾಸಗಳನ್ನು ಏರ್ಪಡಿಸುವುದು ಅನಿವಾರ್ಯವಾಗಬೇಕು.
- ಭೂಪಾಲ್ ಮ್ಯೂಸಿಯಂನಲ್ಲಿ Tribal ಮತ್ತು Folk ಗೆ ಸಂಬಂಧಿಸಿದ – ವಿರಳವಾದ ಸಂಗ್ರಹಣೆ (Rare Collection) ಇದೆ. ಜಾನಪದ ವಿಶ್ವವಿದ್ಯಾನಿಲಯದಲ್ಲಿ ಎರಡೂ ಆಗಬೇಕು.

ದಿನಾಂಕ:೧೫.೧೦.೨೦೧೦

ಕಲಾವಿದರ ಪೋಷಣೆ ಆದ್ಯತೆಯಾಗಿರಲಿ

– ಜೋಗಿಲ ಸಿದ್ಧರಾಜು

ಜಾನಪದ ವಿಶ್ವವಿದ್ಯಾನಿಲಯ ಉತ್ತಮ ನೀರಿನ ಸೌಕರ್ಯ, ಸುಂದರ ಪರಿಸರದ ತಾಣವಾಗಿರಬೇಕು. ಜನಪದರ ಬದುಕು ಸಂಸ್ಕೃತಿ ಅಧ್ಯಯನ ನಡೆಸಲು ಅಲ್ಲಿ ಮುಕ್ತ ಅವಕಾಶವಿರಬೇಕು. ಉನ್ನತ ಶಿಕ್ಷಣದಲ್ಲಿ ಜಾನಪದದ ಮೇಲೆ ಮಹಾಪ್ರಬಂಧಗಳನ್ನು ರಚಿಸಿ ಉದ್ಯೋಗ ಗಿಟ್ಟಿಸುತ್ತಾರೆ. ಆದರೆ ಮಹಾಪ್ರಬಂಧಕ್ಕೆ ಆಕರ ಸಾಮಗ್ರಿ ಒದಗಿಸಿದ ಕಲಾವಿದರ ಕಲ್ಯಾಣದ ಬಗ್ಗೆ ಕನಿಷ್ಠ ಕಾಳಜಿಯನ್ನೂ ತೋರುವುದಿಲ್ಲ. ಶೈಕ್ಷಣಿಕ ಪರಿಜ್ಞಾನವಿಲ್ಲದೆ ಕಲಾವಿದರು ಅದ್ಭುತ ಜ್ಞಾನ ಸಂಪಾದಿಸಿರುತ್ತಾರೆ. ಅವರ ಕತೆ-ಕಾವ್ಯ ಪ್ರಸ್ತುತಿ – ಪ್ರದರ್ಶನ ಅಸಾಮಾನ್ಯ. ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯ ಆಧಾರಿತ ಸೀಮಿತ ಜ್ಞಾನ ಸಂಪಾದನೆ ಸಾಧ್ಯ. ಜನಪದ ಕಲೆಗಳ ಕ್ಷೇತ್ರದಲ್ಲಿ ಕಲಾವಿದ ಕಲೆಯ ಗತ್ತು ಗಮ್ಮತ್ತು, ಮಟ್ಟುಗಳನ್ನು ಅಭ್ಯಸಿಸಿ, ಕಲಾವಿದನಾಗಿ ಬೆಳೆಯುತ್ತಾನೆ. ಪ್ರದರ್ಶನಗಳನ್ನು ನೀಡುತ್ತಾನೆ. ಮೂಲ ಕಲಾವಿದರಿಗೆ ಸ್ಥಾನ ಸಿಗುವುದಾದರೆ ಕಲೆ ಉಳಿದು ಬಂದೀತು. ಕಲಾವಿದನ ಪೋಷಣೆಯಾಗಬೇಕು; ಬದುಕು ಸುಧಾರಿಸಬೇಕು.

ಕಲಾವಿದರನ್ನು ಎದುರಿಗೆ ಕೂರಿಸಿಕೊಂಡು ವಿದ್ವದ್ ಭಾಷಣ ಮಾಡಬಾರದು. ಅದು ಅತ್ಯಂತ ಕ್ರೂರ. ಕಲಾವಿದರ ಪರಿಭಾಷೆಯಲ್ಲಿ ವಿಚಾರಗಳನ್ನು ಹಂಚಿಕೊಳ್ಳಬೇಕು. ಕಲಾವಿದರ ಜ್ಞಾನ ಭಂಡಾರ ಸರಿಯಾದ ರೀತಿಯಲ್ಲಿ ಹಂಚಿಕೆ ಆಗಬೇಕು.

ಜಾನಪದದ ಸಂಗ್ರಹಣೆ ಆಗಿದೆ. ಆದರೆ ಅದರ ಮರುಬಳಕೆ ಆಗಬೇಕಾಗಿದೆ. ಹೆಮ್ಮಡಿ ಮಾದಯ್ಯ, ಗೊರವರ ಮಲ್ಲಯ್ಯರನ್ನು ಪುಸ್ತಕ ರೂಪದಲ್ಲಿ ನೋಡಬಹುದು. ಅದರಿಂದ ಹೆಚ್ಚಿನ ಪ್ರಯೋಜನ ಆಗದು. ಹೊಸ ತಂತ್ರಜ್ಞಾನ ಬಳಸಿ ಆಡಿಯೊ ವಿಡಿಯೋಕರಣಗೊಳಿಸಿ ಮೂಲ ಧಾಟಿ-ಮಟ್ಟು

ಬಿಟ್ಟುಕೊಡದಂತೆ ಸಂಗೀತ ಪರಿಜ್ಞಾನ ಇರುವವರಿಗೆ ತರಬೇತಿ ನೀಡುವಂತಾಗಬೇಕು. ಪ್ರದರ್ಶನಗಳು ಮೂಲ ಧಾಟಿ, ಮೂಲ ಸಂಗೀತ ಪರಿಕರಗಳ ಹಿನ್ನೆಲೆಯ ಸಂಗೀತದೊಂದಿಗೆ ಪ್ರಸ್ತುತಗೊಳ್ಳಬೇಕು. ಶಾಲಾ ಮಕ್ಕಳಿಗೆ Twinkle Twinkle little Star - Rhymes ಬಾಯಿಪಾಠ ಆಗುವಂತೆ ಪ್ರಾಥಮಿಕ ಶಾಲಾ ಮಕ್ಕಳಿಗೆ ಜನಪದ ಹಾಡು ಕತೆಗಳು feed ಆಗಬೇಕು. ಶಾಲಾ ಶಿಕ್ಷಕರಿಗೆ ಪಠ್ಯಗಳನ್ನು ಒದಗಿಸಿದರೆ ಸಾಲದು; ತರಬೇತಿಯ ಅಗತ್ಯವೂ ಇದೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ಹೊಂದಿದ ಎಲ್ಲರೂ ಎಂ.ಬಿ.ಎ., ಬಿ.ಬಿ.ಎಂ., ಡಿಗ್ರಿ ಪಡೆದು KAS, IAS ಮಾಡುವಂತೆ ನಮ್ಮಲ್ಲಿ ಪ್ರತಿಭಾವಂತ ಕಲಾವಿದರಿದ್ದಾರೆ. ಅವರ ಕಲೆಗಳನ್ನು ಪ್ರಾಥಮಿಕ ಹಂತದಲ್ಲೇ ಕಲಿಸುವ ಏರ್ಪಾಟು ಮಾಡಿದರೆ ಕಲಾವಿದರಿಗೆ ಜೀವನೋಪಾಯವೂ ಆಗುವುದು. ಉತ್ತಮ ಸಂಗೀತ ಪರಿಜ್ಞಾನದ ಹಿನ್ನೆಲೆಯಿಂದ ಹಾಡುಗಾರಿಕೆ ನಡೆಸುವವನು ಅಸಾಧಾರಣವಾದುದನ್ನು ಸಾಧಿಸಿದ ಸಾಧಕರಿಗೆ feed ಮಾಡುವಂತಾಗಬೇಕು. ತಮಿಳುನಾಡಿನ ಗಣೇಶ 'ಕರಗಾಟ್ಟಂ' ನಲ್ಲಿ ಗಿನ್ನಿಸ್ ದಾಖಲೆ ಮಾಡಿರುವಂತೆ ನಮ್ಮ ಜನಪದ ಕಲೆಗಳಿಗೆ ಪೇಟೆಂಟ್ ಸಿಗುವಂತಾಗಬೇಕು. ವಿಶ್ವ ಮಟ್ಟದಲ್ಲಿ ಜನ ಮನ್ನಣೆ ಗಳಿಸುವಂತಾಗಬೇಕು. ರಾಗಿ, ಜೋಳ, ಮುಸುಕಿನ ಜೋಳ ನಮ್ಮ ಧಾನ್ಯಗಳಾದರೂ ಅವುಗಳ ಪೇಟೆಂಟ್ ನಮ್ಮ ಬಳಿ ಇಲ್ಲ. ಅವುಗಳ ವಾರಸುದಾರರು ಇನ್ನಾರೊ ಆಗಿದ್ದಾರೆ. ಜನಪದ ಕಲೆಗಳ ಸ್ಥಿತಿ ಹಾಗಾಗಬಾರದು. ಜನಪದ ಕಲೆ, ಜನಪದ ಸಾಹಿತ್ಯ, ಜನಪದ ಕ್ರೀಡೆಗಳನ್ನು ಅಧ್ಯಯನ ಮಾಡುವಂತೆ ನಮ್ಮ ಜನಪದ ವೈದ್ಯದ ಅಧ್ಯಯನವೂ ಆಗಬೇಕು. ನಾಡಿನ ಗಿಡ ಮರ ಬಳ್ಳಿಗಳ ಸಂರಕ್ಷಣೆಯೂ ನಮ್ಮ ಜವಾಬ್ದಾರಿ ಆಗಬೇಕು.

ದಿನಾಂಕ: ೦೩.೧೨.೨೦೧೦

ಪ್ರಾದೇಶಿಕ ಕೇಂದ್ರಗಳಲ್ಲೂ ಜಾನಪದ ವಸ್ತುಸಂಗ್ರಹಾಲಯಗಳಿರಲಿ

– ಶ್ರೀರಾಮ ಇಟ್ಟಣ್ಣವರ

ಕರ್ನಾಟಕ ದೇಸಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯವು ಆರಂಭಗೊಳ್ಳುವ ಹಂತದಲ್ಲಿದೆ. ಸನ್ಮಾನ್ಯರಾದ ಗೊ.ರು. ಚನ್ನಬಸಪ್ಪ, ಜಿ. ನಾರಾಯಣ, ದೇಜಗೌ, ಚಂದ್ರಶೇಖರ ಕಂಬಾರ, ಮುಖ್ಯಮಂತ್ರಿ ಚಂದ್ರು ಮುಂತಾದವರು ಜಾನಪದ ವಿಶ್ವವಿದ್ಯಾನಿಲಯದ ಅಗತ್ಯತೆಯನ್ನು ಸರಕಾರಕ್ಕೆ ಬಿಂಬಿಸಿದ ಮೇಲೆ ಅವರ ಒತ್ತಾಸೆಯ ಮೇರೆಗೆ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಸರಕಾರ ಒಪ್ಪಿಕೊಂಡಿದೆ. ಆರಂಭದ ಹಂತದಲ್ಲಿರುವ ಜಾನಪದ ವಿಶ್ವವಿದ್ಯಾನಿಲಯದ ಸ್ವರೂಪದ ಬಗೆಗೆ ಪತ್ರಿಕೆ, ಸಭೆ-ಸಮಾರಂಭಗಳ ಮುಖಾಂತರ ಅನೇಕ ಜನ ತಮ್ಮ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದ್ದಾರೆ. ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳಾಗಿ ನೇಮಿಸಲ್ಪಟ್ಟಿರುವ ಡಾ. ಅಂಬಳಿಕೆ ಹಿರಿಯಣ್ಣನವರು ಅನೇಕ ಲೇಖಕರಿಗೆ ಬರೆದು ಅವರಿಂದ ಸಲಹೆ-ಸೂಚನೆಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯದ ಸ್ವರೂಪದ ಬಗೆಗೆ ನಾನು ನನ್ನವೇ ಆದ ಕೆಲವು ಯೋಚನೆಗಳನ್ನಿಲ್ಲಿ ಮಂಡಿಸುತ್ತಿದ್ದೇನೆ:

- ಕರ್ನಾಟಕ ಜಾನಪದಕ್ಕೆ ಸಂಬಂಧಪಡುವ ಅಧ್ಯಯನ, ಅಧ್ಯಾಪನ, ಸಂರಕ್ಷಣೆ, ಪ್ರದರ್ಶನ – ಈ ನಾಲ್ಕೂ ನೆಲೆಗಳನ್ನು ರೂಪಿಸುವ ಪ್ರಕ್ರಿಯೆಗೆ ಪ್ರಸ್ತುತ ಕರ್ನಾಟಕ ಥಾಜ್ಯ ಜಾನಪದ ವಿಶ್ವವಿದ್ಯಾನಿಲಯವು ಪ್ರಧಾನ ವೇದಿಕೆಯಾಗಬೇಕು.

- ಕರ್ನಾಟಕದ ಎಲ್ಲಾ ಪ್ರದೇಶಗಳ ಜನಪದ ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು ಜಾನಪದ ವಿಶ್ವವಿದ್ಯಾನಿಲಯದ ಮೂಲ

ಆಶಯವಾಗಿರುವುದರಿಂದ ಜಾನಪದ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಐದು ಅಥವಾ ಆರು ಪ್ರಾದೇಶಿಕ ಕೇಂದ್ರಗಳನ್ನು ತೆರೆಯುವುದು ಸೂಕ್ತವೆನಿಸುತ್ತದೆ. ಈ ಕೇಂದ್ರಗಳಿಗೆ ಆಯಾ ಪ್ರದೇಶದ ನಿರ್ದೇಶಕರು ನೇಮಿಸಲ್ಪಡುತ್ತಾರೆ. ವಿಶ್ವವಿದ್ಯಾನಿಲಯಕ್ಕೆ ಈ ಪ್ರಾದೇಶಿಕ ಕೇಂದ್ರಗಳೇ ಆಧಾರ ಸ್ತಂಭಗಳು. ಪ್ರಾದೇಶಿಕ ಕೇಂದ್ರಗಳು ನಗರಗಳಿಂದ ದೂರವಿರಬೇಕು.

- ಜಾನಪದ ವಿಶ್ವವಿದ್ಯಾನಿಲಯವೆನಿಸುವ ಮುಖ್ಯ ಕಟ್ಟಡ ಆಡಳಿತ ಕೇಂದ್ರವಾಗಿದ್ದು ಇದು ನಿರಂತರ ಈ ಎಲ್ಲ ಪ್ರಾದೇಶಿಕ ಕೇಂದ್ರಗಳನ್ನು ನಿಯಂತ್ರಿಸುತ್ತದೆ. ಜಾನಪದ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳು ಪ್ರದೇಶಾನುಸಾರ ವಿಕೇಂದ್ರಿಕರಣಗೊಂಡಿರುತ್ತವೆ.

- ಜಾನಪದವನ್ನು ಪ್ರಾಯೋಗಿಕವಾಗಿ ಅರಿತ ವಿದ್ವಾಂಸರು ಇಲ್ಲಿ ನೇಮಿಸಲ್ಪಡಬೇಕು. ಇವರ ಸಂಗಡ ಜನಪದ ಸಾಹಿತ್ಯ-ಕಲೆಗಳಲ್ಲಿ ನಿಷ್ಣಾತರಾದ ಕಲಾವಿದರು ನೇಮಿಸಲ್ಪಡಬೇಕು. ಜಾನಪದ ವಿದ್ವಾಂಸರಷ್ಟೇ ಪ್ರಮುಖ ಸ್ಥಾನಮಾನಗಳು ಗ್ರಾಮೀಣ ಪ್ರದೇಶಗಳಿಂದ ಬರುವ ಈ ಕಲಾವಿದರಿಗಿರುತ್ತವೆ.

- ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ತರಗತಿಗಳನ್ನು ನಡೆಯಿಸುವುದು ಬೇಡ ಅನ್ನಿಸುತ್ತದೆ. ಇದಕ್ಕೆ ಸದ್ಯಕ್ಕೆ ತಾಂತ್ರಿಕ ತೊಂದರೆಗಳು ಬಹಳಷ್ಟಿವೆ. ಜಾನಪದ ವಿಶ್ವವಿದ್ಯಾನಿಲಯದ ಮುಖಾಂತರ ಎಂ.ಫಿಲ್, ಪಿಎಚ್.ಡಿ. ಪಡೆಯುವ ಅವಕಾಶ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಅಥವಾ ಸಾರ್ವಜನಿಕರಿಗೆ ಇರಬೇಕು.

- ವಿವಿಧ ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಕೋರ್ಸ್‌ಗಳನ್ನು ಪ್ರಾದೇಶಿಕ ಕೇಂದ್ರಗಳಲ್ಲಿ ತೆರೆಯಬಹುದು. ಇಲ್ಲಿಯ ಕೋರ್ಸ್‌ಗಳು ದೀರ್ಘಾವಧಿಯವಾಗಿರುತ್ತವೆ.

- ಜಾಗತೀಕರಣದಿಂದಾಗಿ ಜನಪದ ಸಂಸ್ಕೃತಿಯೆಂಬುದು ತೀವ್ರವಾಗಿ ಬದಲಾವಣೆಗೊಳ್ಳುತ್ತಿರುವುದರಿಂದ / ಆಂಶಿಕವಾಗಿ ಮರೆಯಾಗುತ್ತಿರುವುದರಿಂದ ವಿಶ್ವವಿದ್ಯಾನಿಲಯವು ಆರಂಭದ ದಿನಗಳಲ್ಲಿ ಸಂಗ್ರಹ, ಸಂಪಾದನೆ, ವಿಡಿಯೋ ಚಿತ್ರೀಕರಣಗಳಿಗೆ ಆದ್ಯ ಗಮನಕೊಡಬೇಕು.

- ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿಯೂ ನಮ್ಮ ಜಾನಪದ ಕುರಿತಾಗಿ ಗ್ರಂಥ ರಚನೆಗೊಳ್ಳುವಂತೆ ನೋಡಿಕೊಳ್ಳಬೇಕು. ಇದರಿಂದ ಅನ್ಯ ಭಾಷಿಕರಿಗೆ ನಮ್ಮ ಜಾನಪದವನ್ನು ಅರಿಯಲು, ಅಧ್ಯಯನ ಮಾಡಲು, ತೌಲನಿಕವಾಗಿ ನೋಡಲು ಅನುಕೂಲವಾಗುತ್ತದೆ.

- ನಮ್ಮ ಜಾನಪದವನ್ನು ಬೇರೆ ಬೇರೆ ಶಾಸ್ತ್ರಗಳ ಹಿನ್ನೆಲೆಯಲ್ಲಿ ನೋಡುವ ವಿಧಾನವೂ ದಟ್ಟವಾಗಬೇಕಿದೆ. ಅಂತರ್‌ಶಿಸ್ತೀಯ ಅಧ್ಯಯನದ ನೆಲೆಯಲ್ಲಿ ಜಾನಪದ ಅಧ್ಯಯನಕ್ಕೆ ಹೊಸ ಪರಿಭಾಷೆಯೊಂದು ಕಟ್ಟಿಕೊಳ್ಳುವುದು, ತನ್ಮೂಲಕ ಜಾನಪದ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಈ ದಿಸೆಯಲ್ಲಿ ಯೋಜನೆಗಳನ್ನು ವಿಶ್ವವಿದ್ಯಾನಿಲಯ ರೂಪಿಸಿಕೊಳ್ಳಬೇಕು.

- ನಮ್ಮ ಪರಂಪರಾಗತ ಬದುಕನ್ನು ಸಂಗತವೆನಿಸುವ ರೀತಿಯಲ್ಲಿ ಹೊರ ಜಗತ್ತಿಗೆ ಪರಿಚಯಿಸುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕು.

- ಕ್ರಮೇಣ ಆನ್ವಯಿಕ ಜಾನಪದ ಪ್ರಕ್ರಿಯೆಗಳನ್ನು ಜಾನಪದ ವಿಶ್ವವಿದ್ಯಾನಿಲಯ ರೂಢಿಸಿಕೊಳ್ಳುತ್ತದೆ. ಆನ್ವಯಿಕ ವಿಭಾಗದಲ್ಲಿರುವವರು ಕಲಾವಿದರಲ್ಲಿಗೆ ಹೋಗಬೇಕು. ಅವರೊಂದಿಗೆ ಸಮಾಲೋಚಿಸಬೇಕು. ಆಧುನಿಕ ವಿದ್ಯಮಾನಗಳನ್ನು ಜಾನಪದಕ್ಕೆ ಹೇಗೆ ಅಳವಡಿಸಿಕೊಳ್ಳಬೇಕು ಎಂಬುದರ ಕುರಿತು ಜನಪದರೊಂದಿಗೆ ಮಾಡುವ ಚಿಂತನೆ ಜಾನಪದದ ಭವಿಷ್ಯವನ್ನು ರೂಪಿಸುತ್ತದೆ.

- ಯುವ ಪೀಳಿಗೆಯಲ್ಲಿ ಜನಪದ ಸಂಸ್ಕೃತಿಯ ಆಸಕ್ತಿ ಹುಟ್ಟುವ ರೀತಿಯಲ್ಲಿ ಕಾರ್ಯಯೋಜನೆಯೊಂದು ಸಿದ್ಧಗೊಳ್ಳಬೇಕು. ಇದಕ್ಕಾಗಿ ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ಒಂದು ವಿಭಾಗವೇ ತೆರೆಯಲ್ಪಟ್ಟಿರುತ್ತದೆ. ಇಲ್ಲಿರುವ ಸಂಯೋಜನಾಧಿಕಾರಿ–ಜಾನಪದ ಜ್ಞಾನ, ಕಲೆಗಳನ್ನು ಬಲ್ಲವನು– ತನ್ನ ಪ್ರದೇಶದಲ್ಲಿ ಬರುವ ಎಲ್ಲಾ ಕಾಲೇಜು, ವಿಶ್ವವಿದ್ಯಾನಿಲಯಗಳಿಗೆ ಹೋಗಿ ಜಾನಪದ ವಿಷಯಗಳನ್ನು ಕುರಿತು ಉಪನ್ಯಾಸ ನೀಡುತ್ತಾನೆ. ಆಯಾ ಕಲೆಗೆ ಸಂಬಂಧಿಸಿದಂತೆ ಜನಪದ ಕಲಾವಿದರ ಒಂದು ತಂಡವನ್ನು ಪ್ರಾತ್ಯಕ್ಷಿಕೆಗಾಗಿ ತನ್ನೊಂದಿಗೆ ಒಯ್ದಿರುತ್ತಾನೆ. ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳಿಸಲು, ಮನನ ಮಾಡಿಸಲು ರಜಾದಿನಗಳಲ್ಲಿ ವಿವಿಧ ಬಗೆಯ ಶಿಬಿರಗಳನ್ನೂ ಆಯೋಜಿಸಬಹುದು.

- ವಿಶ್ವವಿದ್ಯಾನಿಲಯದ ಆವರಣದಲ್ಲಿ (ಕೇಂದ್ರಸ್ಥಾನ) ಬಹು ದೊಡ್ಡ ಜಾನಪದ ವಸ್ತು ಸಂಗ್ರಹಾಲಯ ನಿರ್ಮಾಣಗೊಳ್ಳಬೇಕು. ಪ್ರಪಂಚದಲ್ಲೇ ಮೊದಲನೆಯ ಜಾನಪದ ವಿಶ್ವವಿದ್ಯಾನಿಲಯವೆಂದು ಇತಿಹಾಸ ನಿರ್ಮಿಸಲಿರುವ ಪ್ರಸ್ತುತ ವಿಶ್ವವಿದ್ಯಾನಿಲಯದ ಘನತೆಗೆ ತಕ್ಕ ರೀತಿಯಲ್ಲೇ ಫೋಕ್‌ಲೋರ್ ಮ್ಯೂಸಿಯಂ ಇರಬೇಕಾಗುತ್ತದೆ. ಇದರ ವಸ್ತು ಸಂಗ್ರಹಣೆಗೆ ಪ್ರಾದೇಶಿಕ ಕೇಂದ್ರಗಳು ಸಹಕರಿಸುತ್ತವೆ. ಪ್ರಾದೇಶಿಕ ಕೇಂದ್ರಗಳಲ್ಲೂ ಆಯಾ ಪ್ರದೇಶಗಳ ಸಂಸ್ಕೃತಿಯನ್ನು ಪ್ರತಿನಿಧಿಸುವ ಜಾನಪದ ವಸ್ತು ಸಂಗ್ರಹಾಲಯಗಳಿರಬೇಕು.

●●

ಲೇಖಕರ ವಿಳಾಸ

ಭಾಗ – ೧

ಪ್ರೊ. ಎಂ.ಐ. ಸವದತ್ತಿ
ವಿಶ್ರಾಂತ ಕುಲಪತಿಯವರು
ನವೋದಯ ನಗರ
ಧಾರವಾಡ–೫೮೦ ೦೦೩.

ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ
ಸಂಕೇತ, ಮಾಡಲ್ ಕಪ್, ಬಿ.ಸಿ. ರಸ್ತೆ,
ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

ಡಾ. ಎಂ.ಜಿ. ಬಿರಾದಾರ
'ಚಿತ್ಕಳಾ', ಸೇಡಂ ರಸ್ತೆ
ಗುಬ್ಬೀ ಕಾಲನಿ, ಗುಲಬರ್ಗಾ–೫

ಡಾ. ಎನ್. ಆರ್. ನಾಯಕ
ಜಾನಪದ ಪ್ರಕಾಶನ
ಎಸ್. ಡಿ. ಎಂ. ಕಾಲೇಜು ಹತ್ತಿರ, ಪ್ರಭಾತನಗರ,
ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.

ಡಾ. ಮಳಲಿ ವಸಂತಕುಮಾರ್
"ಭೂಮಿತಾಯಿ ತೋಟ", ಕಳಲವಾಡಿ,
ಉದ್ಬೂರು ಅಂಚೆ,
ಮೈಸೂರು ದಕ್ಷಿಣ– ೫೭೦ ೦೦೮

ಪ್ರೊ. ಎ. ವಿ. ನಾವಡ
ಪ್ರಾಧ್ಯಾಪಕರು,
ಕರ್ನಾಟಕ ಥಿಯೊಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು – ೦೧

ಡಾ. ವೀರಣ್ಣ ದಂಡೆ
ಸರಸ್ವತಿಪುರಂ,
ಗುಲ್ಬರ್ಗಾ ವಿಶ್ವವಿದ್ಯಾಲಯ ಅಂಚೆ,
ಗುಲ್ಬರ್ಗಾ – ೫೮೫ ೧೦೬

ಡಾ. ಶಾಲಿನಿ ರಘುನಾಥ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦೦೦೩.

ಶ್ರೀ ಹಾಸನ ರಘು
ನಂ.೫೬, ೧ನೇ ಮಹಡಿ,
ಸುಬ್ಬರಾಮ ಚೆಟ್ಟಿ ರಸ್ತೆ
ನೆಟ್ಟಕಲ್ಲಪ್ಪ ವೃತ್ತ,
ಬಸವನಗುಡಿ, ಬೆಂಗಳೂರು – ೫೬೦ ೦೦೪

ಶ್ರೀಮತಿ ಶಾಂತಿ ನಾಯಕ
ಜಾನಪದ ಪ್ರಕಾಶನ
ಎಸ್. ಡಿ. ಎಂ. ಕಾಲೇಜು ಹತ್ತಿರ, ಪ್ರಭಾತನಗರ,
ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.

ಶ್ರೀ ಯು.ಎಸ್. ರಾಮಣ್ಣ
C/o. ಡಾ. ವೈ. ಸಿ. ಭಾನುಮತಿ
ನಂ. ೧೧೨೩, 'ಕೇಶವದೀಪಾ', ಲಲಿತಾದ್ರಿ
೧ನೇ ಕ್ರಾಸ್, ಕುವೆಂಪುನಗರ,
ಮೈಸೂರು – ೫೭೦೦೨೩

ಡಾ. ಎಸ್.ಎಸ್. ಅಂಗಡಿ
ಸಹ ಪ್ರಾಧ್ಯಾಪಕ
ಭಾಷಾಶಾಸ್ತ್ರ ವಿಭಾಗ
ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ

ಡಾ. ಎಲ್.ಜಿ. ಸುಮಿತ್ರ
೧೧೫೭, ೩ನೇ ಮುಖ್ಯ ರಸ್ತೆ, ೨ನೇ ಹಂತ,
ಗಿರಿನಗರ, ಬೆಂಗಳೂರು– ೫೬೦ ೦೮೫

ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ–೫೮೩ ೨೭೬

ಡಾ. ರಾಜೇಗೌಡ ಹೊಸಹಳ್ಳಿ
೪೧೩, ೧ನೇ ತಿರುವು, ಐಸೆಕ್ ರಸ್ತೆ,
ಟೀಚರ್ಸ್ ಲೇಔಟ್, ನಾಗರಬಾವಿ, ಬೆಂಗಳೂರು–೭೨

ಡಾ. ವೀರೇಶ ಬಡಿಗೇರ
ನಿರ್ದೇಶಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬,
ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಡಾ. ಎಂ. ಶಂಕರ
ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯು ಸ್ನಾತಕೋತ್ತರ ಕೇಂದ್ರ
ಹೇಮಗಂಗೋತ್ರಿ, ಹಾಸನ– ೫೭೩ ೨೨೦

ಶ್ರೀ ಜೇನಹಳ್ಳಿ ಸಿದ್ಧಲಿಂಗಪ್ಪ
೨೨, 'ಸತ್ಯಶ್ರೀ', ೫ ನೇ ಮುಖ್ಯ ರಸ್ತೆ
೩ನೇ ಅಡ್ಡರಸ್ತೆ, ಸರಸ್ವತಿಪುರಂ,
ಮೈಸೂರು-೫೭೦ ೦೦೯

ಡಾ. ಸ.ಚಿ. ರಮೇಶ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಡಾ. ವೆಂಕಟೇಶ ಇಂದ್ವಾಡಿ
ನಂ. ೪೪೬, ೬ನೇ ಮುಖ್ಯ ರಸ್ತೆ
೧ನೇ ಕ್ರಾಸ್, 'ಎಚ್' ಬ್ಲಾಕ್
ರಾಮಕೃಷ್ಣನಗರ, ಮೈಸೂರು

ಶ್ರೀ ಮೇಟಿಕೆರೆ ಹಿರಿಯಣ್ಣ
ವಿಶ್ರಾಂತ ಪ್ರಾಚಾರ್ಯರು, ಬಂಡಿಮನೆ
ರಾಮಕೃಷ್ಣ ಬಡಾವಣೆ
ಚನ್ನರಾಯಪಟ್ಟಣ, ಹಾಸನ ಜಿಲ್ಲೆ

ಡಾ. ಶ್ರೀಪಾದ ಭಟ್ಟ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಶ್ರೀ ಮಹಾದೇವ ಶಂಕನಪುರ
ಮುಖ್ಯಸ್ಥರು, ಇತಿಹಾಸ ವಿಭಾಗ
ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ

ಡಾ. ಕೆ. ಸೌಭಾಗ್ಯವತಿ
ಕನ್ನಡ ಉಪನ್ಯಾಸಕರು
ಮಹಾರಾಜ ಕಾಲೇಜು
ಮೈಸೂರು – ೦೫

ಶ್ರೀ ಎಂ. ಎಂ. ಪುರದನಗೌಡರ
೩೧೭ ಸೊಪ್ಪಿಮಠ ಓಣಿ
ಕಲಘಟಗಿ–೫೮೧ ೨೦೪
ಧಾರವಾಡ ಜಿಲ್ಲೆ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
ಪ್ರಾಧ್ಯಾಪಕ, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಸಿರಾ – ೫೭೨೧೩೭
ತುಮಕೂರು ಜಿಲ್ಲೆ

ಶ್ರೀ ಅಪ್ಪಗೆರೆ ತಿಮ್ಮರಾಜು
ಜಾನಪದ ಗಾಯಕರು,
ನಂ, ೧೬೨೯, ೬ನೇ ಎ ಮುಖ್ಯರಸ್ತೆ, ೫ನೇ ಕ್ರಾಸ್
ಹಂಪಿನಗರ, ವಿಜಯನಗರ,
ಬೆಂಗಳೂರು – ೫೬೦ ೦೪೦

ಶ್ರೀ ನೀ.ಗೂ. ರಮೇಶ
ನಂ. ೨೯, ೬ನೇ ಅಡ್ಡರಸ್ತೆ, ವಿನಾಯಕ ನಗರ
ಮೈಸೂರು

ಶ್ರೀ ಸಿ. ಎಂ. ನರಸಿಂಹಮೂರ್ತಿ
ಬಣ್ಣದ ಮನೆ, ಬಿ.ಎಸ್.ಎನ್.ಎಲ್. ಕಛೇರಿ ಎದುರು
ರಾಮಸಮುದ್ರ, ಚಾಮರಾಜನಗರ–೫೭೧ ೩೪೨

ಪ್ರೊ. ತೀ. ನಂ. ಶಂಕರನಾರಾಯಣ
ಅಧ್ಯಕ್ಷರು, ಫೋಕ್ಲೋರ್ ಸೊಸೈಟಿ ಆಫ್ ಸೌತ್
ಇಂಡಿಯನ್ ಲ್ಯಾಂಗ್ವೇಜಸ್
'ಪ್ರತಿಭಾ' ೧ನೇ ಕ್ರಾಸ್, ಎ.ಆರ್.ಬಿ. ಕಾಲೋನಿ, ಅಶೋಕನಗರ
ಶಿವಮೊಗ್ಗ – ೫೭೭ ೨೦೫

ಶ್ರೀ ವ.ನಂ. ಶಿವರಾಮು
'ಹಟ್ಟಿ', ತಾರಸವಾಡಿ ರಸ್ತೆ
ವಿನಾಯಕ ಬಡಾವಣೆ – ಪೂರ್ವ
ಮಂಡ್ಯ – ೫೭೧ ೪೦೧

ಡಾ. ಟಿ. ಗೋವಿಂದರಾಜು
ನಂ–೭೬೫, ೪ನೇ ಮೇನ್
ಹೇಸರಘಟ್ಟ ಮುಖ್ಯರಸ್ತೆ
ಕಿರ್ಲೋಸ್ಕರ್ ಬಡಾವಣೆ
ಬೆಂಗಳೂರು – ೫೬೦ ೦೭೩

ಶ್ರೀ ಸಿರಿಗಂಧ ಶ್ರೀನಿವಾಸಮೂರ್ತಿ
ಚಲನ ವಿಶುಯಲ್ಸ್
೧೦೭೮/ಎ, ಪಟೇಲ್ ಕಾಂಪ್ಲೆಕ್ಸ್,
ಡಾ. ರಾಜಕುಮಾರ್ ರಸ್ತೆ, ಪ್ರಕಾಶನಗರ,
ಬೆಂಗಳೂರು – ೫೬೦ ೦೨೧.

ಭಾಗ – ೨

ಶ್ರೀ ಗೊ.ರು. ಚನ್ನಬಸಪ್ಪ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಕನ್ನಡ ಭವನ, ೩ನೇ ಮಹಡಿ,
ಜೆ.ಸಿ. ರಸ್ತೆ, ಬೆಂಗಳೂರು ೫೬೦ ೦೦೨

ಶ್ರೀ ಜಿ. ನಾರಾಯಣ
ನಂ.೩, ವಿನೋದ ನಿಲಯ,
೧೧ನೇ ಕ್ರಾಸ್, ಹನುಮಂತನಗರ,
ಬೆಂಗಳೂರು –೧೮.

ಡಾ. ಚಂದ್ರಶೇಖರ ಕಂಬಾರ
ನಂ. ೪೪, ಸಿರಿಸಂಪಿಗೆ, ೧ನೇ ಮುಖ್ಯ ರಸ್ತೆ
ಬನಶಂಕರಿ ೩ನೇ ಹಂತ, ೪ನೇ ಬ್ಲಾಕ್
ಬೆಂಗಳೂರು – ೫೬೦ ೦೮೫

ಪ್ರೊ. ಎಚ್.ಜೆ. ಲಕ್ಕಪ್ಪಗೌಡ
ಹಂಪಾಪುರ ಗ್ರಾಮ, ಗಂಗೂರು ಅಂಚೆ
ರಾಮನಾಥಪುರ ಹೋಬಳಿ,
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ

ಡಾ. ಎಂ. ಚಿದಾನಂದ ಮೂರ್ತಿ
'ಮಿಂಚು', ನಂ.೬ಎ, ೪ನೇ ಕ್ರಾಸ್
೧೧ನೇ ಮುಖ್ಯ ರಸ್ತೆ,
ವಿಜಯನಗರ ೨ನೇ ಹಂತ, ಬೆಂಗಳೂರು – ೫೬೦ ೦೪೦

ಪ್ರೊ. ಬಿ.ಎ. ವಿವೇಕ ರೈ
ವಿಶ್ರಾಂತ ಕುಲಪತಿಯವರು
ಜಪ್ಪು, ಕುಡ್ಪಾಡಿ ರೋಡ್
ಮಂಗಳೂರು – ೫೭೫೦೦೨

ಶ್ರೀ ಎನ್. ಬಸವಾರಾಧ್ಯ
ಮಾಜಿ ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮

ಪ್ರೊ. ಜಿ.ಎಚ್. ನಾಯಕ
ವಿಶ್ರಾಂತ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

ಡಾ. ಹಂ. ಪ. ನಾಗರಾಜಯ್ಯ
ಸ್ವನಿಮಾ, ನಂ. ೧೦೭೯
೧೪ನೇ ಮೇನ್, ೫ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು–೧೦

ಪ್ರೊ. ಡಿ. ಲಿಂಗಯ್ಯ
ನಂ. ೬೯೦, ೧ನೇ ಬಿ ಮುಖ್ಯರಸ್ತೆ
೭ನೇ ಬ್ಲಾಕ್, ಬನಶಂಕರಿ ೩ನೇ ಘಟ್ಟ
ಬೆಂಗಳೂರು – ೫೬೦ ೦೮೫.

ಡಾ. ಕೆ. ಮರುಳಸಿದ್ಧಪ್ಪ
ನಂ. ೧೩೭, ೧೨ನೇ ಕ್ರಾಸ್, ಜೆ.ಪಿ. ನಗರ, ೨ನೇ ಹಂತ
ಬೆಂಗಳೂರು– ೫೬೦ ೦೭೮

ಡಾ. ಕೆ.ವಿ. ನಾರಾಯಣ
ನಂ. ೩೨೯, ಡಿ.ಯು.ಒ. ಮಾರ್ವೆಲ್ ಲೇಔಟ್
ಅನಂತಪುರ ರೋಡ್, ಯಲಹಂಕ
ಬೆಂಗಳೂರು – ೫೬೦ ೦೬೪

ಪ್ರೊ. ರಾಮೇಗೌಡ
ಚಿತ್ರಕೂಟ, ನಂ. ೧೪೪,
ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ
ಮೈಸೂರು – ೫೭೦೦೧೨

ಡಾ. ಆರ್.ವಿ.ಎಸ್. ಸುಂದರಂ
ನಂ. ೪೯೮, ಚಿತ್ರಭಾನು ರಸ್ತೆ,
ಕುವೆಂಪುನಗರ, ಮೈಸೂರು – ೫೭೦೦೨೩

ಡಾ. ಲಕ್ಷ್ಮೀನಾರಾಯಣ ಅರೋರಾ
ವಿಶ್ರಾಂತ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

ಡಾ. ಕಾಳೇಗೌಡ ನಾಗವಾರ
ನಂ. ೧೦೭೩, ೬ನೇ ಮುಖ್ಯರಸ್ತೆ,
ಇ ಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ,
ಮೈಸೂರು – ೫೭೦೦೨೩

ಡಾ. ಪಿ.ಕೆ. ರಾಜಶೇಖರ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ನಂ. ೨೩೯, ೩ನೇ ಮುಖ್ಯರಸ್ತೆ, ೩ನೇ ಹಂತ, ಡಿ ಬ್ಲಾಕ್
ವಿಜಯನಗರ, ಮೈಸೂರು – ೫೭೦೦೧೭

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ನಂ. ಎಸ್. ೧೨೩, ದೀಪ್ತಿ ಅಪಾರ್ಟ್‌ಮೆಂಟ್ ೧ನೇ ಕ್ರಾಸ್,
ಕಿರ್ಲೋಸ್ಕರ್ ಕಾಲೋನಿ, ಬಸವೇಶ್ವರ ನಗರ,
ಬೆಂಗಳೂರು – ೫೬೦೦೭೯

ಶ್ರೀ ಲಿಂಗದೇವರು ಹಳೇಮನೆ
ನಿರ್ದೇಶಕರು, ರಂಗಾಯಣ
ಕಲಾಮಂದಿರ, ಹುಣಸೂರು ರಸ್ತೆ, ಮೈಸೂರು

ಡಾ. ನಲ್ಲೂರು ಪ್ರಸಾದ್
ನಂ. ೩೯/೨, ಆಸರೆ, ೧೮ನೇ ಮುಖ್ಯರಸ್ತೆ,
ಏಜೀಸ್ ಲೇಔಟ್, ಸುಬ್ರಹ್ಮಣ್ಯಪುರ ಅಂಚೆ,
ಬೆಂಗಳೂರು – ೫೬೦ ೦೬೧

ಶ್ರೀ ದೇವನೂರು ಮಹಾದೇವ
ಸುಪ್ರಸಿದ್ಧ ಸಾಹಿತಿಗಳು, ಕುವೆಂಪುನಗರ
ಮೈಸೂರು– ೫೭೦ ೦೨೩

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು, ಕನ್ನಡ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦೦೦೨

ಶ್ರೀ ಬಸವಲಿಂಗಯ್ಯ
ನಿಕಟಪೂರ್ವ ನಿರ್ದೇಶಕರು
ರಂಗಾಯಣ, ಕಲಾಮಂದಿರ, ಕರ್ನಾಟಕ ಸರ್ಕಾರ
ಮೈಸೂರು

ಪ್ರೊ. ಎಚ್. ಗೋವಿಂದಯ್ಯ
ನಂ. ೧೨೨೫, ೪ನೇ ಕ್ರಾಸ್,
ಪಡುವಣ ರಸ್ತೆ, ಟಿ. ಕೆ. ಲೇಔಟ್, ೪ನೇ ಹಂತ,
ಕುವೆಂಪುನಗರ, ಮೈಸೂರು – ೨೩

ಶ್ರೀ ವೈ.ಕೆ. ಮುದ್ದುಕೃಷ್ಣ
ವಿಶ್ರಾಂತ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

ಪ್ರೊ. ಮಲ್ಲೇಪುರಂ ವೆಂಕಟೇಶ
ಮಾನ್ಯ ಕುಲಪತಿಯವರು
ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – ೫೬೦ ೦೧೮

ಡಾ. ಹಾ.ತಿ. ಕೃಷ್ಣೇಗೌಡ
ಕಾರ್ಯ ನಿರ್ವಾಹಕ ಸಂಪಾದಕರು
ಕನ್ನಡ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦೦೦೬.

ಶ್ರೀ ಮದನ್ ಗೋಪಾಲ್ ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬಹುಮಹಡಿ ಕಟ್ಟಡ
ಅಂಬೇಡ್ಕರ್ ವೀದಿ,
ಬೆಂಗಳೂರು – ೫೬೦ ೦೦೧

ಶ್ರೀ ಜಯರಾಮರಾಜೇ ಅರಸ್ ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು–೫೬೦ ೦೦೧

ಡಾ. ಡಿ. ಕೆ. ರಾಜೇಂದ್ರ
ವಿಶ್ರಾಂತ ನಿರ್ದೇಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ , ಮೈಸೂರು – ೫೭೦ ೦೦೬

ದಿ. ಎಂ.ಪಿ. ಪ್ರಕಾಶ್
ಮಾಜಿ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ಬೆಂಗಳೂರು

ಡಾ. ಎಂ.ಎಂ. ಕಲಬುರ್ಗಿ
ವಿಶ್ರಾಂತ ಕುಲಪತಿಯವರು
೯ನೇ ಅಡ್ಡರಸ್ತೆ, ಕಲ್ಯಾಣನಗರ,
ಧಾರವಾಡ – ೦೭

ಶ್ರೀ ಕೋಟಗಾನಹಳ್ಳಿ ರಾಮಯ್ಯ
ಆದಿಮ, ಶಿವಗಂಗೆ ಗ್ರಾಮ, ಮಡೇರಹಳ್ಳಿ ಅಂಚೆ,
ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ – ೫೬೩೧೦೧

ಶ್ರೀ ಕಾ.ತ. ಚಿಕ್ಕಣ್ಣ
ಜಂಟಿ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ
ಬೆಂಗಳೂರು– ೫೬೦ ೦೦೨

ಶ್ರೀ ಕುಪ್ಪೆ ನಾಗರಾಜ್
C/o ಡಾ. ಮೈಲಹಳ್ಳಿ ರೇವಣ್ಣ
ಬಾಬು ಜಗಜೀವನರಾಂ ಅಧ್ಯಯನ ಪೀಠ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೫೭೦ ೦೦೬

ಡಾ. ಪದ್ಮಾಶೇಖರ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಜೈನ ಶಾಸ್ತ್ರ ಮತ್ತು ಪ್ರಾಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬.

ಡಾ. ಬಾನಂದೂರು ಕೆಂಪಯ್ಯ
ಸ್ನೇಹ, ಪಿ – ೧೦೮, ೭ನೇ ಮುಖ್ಯರಸ್ತೆ
೧೦ನೇ ಸೆಕ್ಟರ್, ಎಲ್.ಐ.ಸಿ. ಕಾಲೋನಿ
ಜೀವನಭಿಮಾನಗರ, ಬೆಂಗಳೂರು – ೭೫

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಜನಾಭಿಪ್ರಾಯಕ್ಕೆ ಮಹತ್ವದ ಮನ್ನಣೆ ಇರುತ್ತದೆ ಎನ್ನುವುದಕ್ಕೆ ಕರ್ನಾಟಕ ಸರ್ಕಾರ ರಾಜ್ಯದಲ್ಲಿ 'ಜಾನಪದ ವಿಶ್ವವಿದ್ಯಾನಿಲಯ'ವನ್ನು ಸ್ಥಾಪಿಸಲು ಕೈಗೊಂಡಿರುವ ನಿರ್ಧಾರ ಒಂದು ನಿದರ್ಶನ. ಈ ಸಂಬಂಧ ಕರ್ನಾಟಕ ಜಾನಪದ ಅಕಾಡೆಮಿ ಸಲ್ಲಿಸಿದ ಪ್ರಸ್ತಾವನೆಯನ್ನು ಅಂಗೀಕರಿಸಿ ಅಗತ್ಯ ಪ್ರಕ್ರಿಯೆಗಾಗಿ ನೇಮಿಸಿರುವ ವಿಶೇಷಾಧಿಕಾರಿ ಡಾ. ಅಂಬಳಿಕೆ ಹಿರಿಯಣ್ಣ ಅವರು, ಯೋಜಿತ ವಿಶ್ವವಿದ್ಯಾನಿಲಯದ ಅಗತ್ಯ, ಆಶಯ, ಸ್ವರೂಪ, ವಿಕಾಸ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಜಾನಪದ ಕ್ಷೇತ್ರಾನುಭವಿಗಳಿಂದ ಬಂದಿರುವ ಅಭಿಪ್ರಾಯಗಳನ್ನು ಒಂದೆಡೆ ಸಂಕಲಿಸಿರುವುದು ಸೂಕ್ತವಾಗಿದೆ. ಇದೊಂದು ದಾಖಲೆಯೂ ಆಗಿ ಜಾನಪದ ಸಂಬಂಧಿ ಅಭಿವೃದ್ಧಿ ಕ್ರಮಗಳಿಗೆ ಕೈದೀವಿಗೆಯಾಗಲಿದೆ.

ಅಸ್ತಿತ್ವಕ್ಕೆ ಬರುತ್ತಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ರೂಪು-ರೇಖೆಗಳನ್ನು ಸಿದ್ಧಪಡಿಸಲು, ನೀತಿ-ಧೋರಣೆಗಳನ್ನು ರೂಪಿಸಲು, ವ್ಯಾಪ್ತಿ-ವಿಸ್ತಾರಗಳನ್ನು ನಿರ್ಧರಿಸಲು ಇಲ್ಲಿರುವ ಅಭಿಪ್ರಾಯಗಳು ನೆರವಾಗುವಲ್ಲಿ ಸಂಶಯವಿಲ್ಲ. ಇದರ ಶೀರ್ಷಿಕೆ 'ಇಂದಿನ ಕನಸು ನಾಳಿನ ನನಸು' ಎಂದಿದ್ದರೂ ವಾಸ್ತವವಾಗಿ ನಿನ್ನಿನ ಕನಸು ಇಂದಿನ ನನಸಾಗುತ್ತಿದೆ.

– ಗೊ. ರು. ಚನ್ನಬಸಪ್ಪ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು